ಸಂಚಿಕೆ ೧೧೪

ಕರ್ನಾಟಕ ಸಾಹಿತ್ಯ ಅಕಾಡೆಮಿ

ಅನಿಕೇತನ



ಪ್ರಧಾನ ಸಂಪಾದಕರು

ಡಾ. ಬಿ.ವಿ. ವಸಂತಕುಮಾರ್

ಸಂಪಾದಕರು

ಡಾ. ಎ. ರಘುರಾಂ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಏಪ್ರಿಲ್-ಜೂನ್ ೨೦೨೦
ಸಂಚಿಕೆ ೧೧೪

ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್

ಸಂಪಾದಕರು
ಡಾ. ಎ. ರಘುರಾಂ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು-೫೬೦ ೦೦೨
ದೂರವಾಣಿ : ೦೮೦-೨೨೨೧೧೭೩೦

ANIKETHANA (a quarterly journal of Kannada Language and Literature) April 2020 – June 2020. Edited by : Dr. A. Raghuram, Published by : Kariyappa N., Registrar, Karnataka Sahithya Academy, Kannada Bhavana, J.C. Road, Bengaluru - 560 002

ಪುಟಗಳು : viii+160=168

ಬೆಲೆ : ರೂ. 50/-

ಸಂಚಿಕೆ : ೧೧೪

ಪ್ರತಿಗಳು : ೨೦೦೦

ಪ್ರಧಾನ ಸಂಪಾದಕರು
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ಕರಿಯಪ್ಪ ಎನ್.
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು–೫೬೦ ೦೦೨

ಚಂದಾ ವಿವರ
ಬಿಡಿ ಪ್ರತಿ : ರೂ. ೫೦/–
ವಾರ್ಷಿಕ ಚಂದಾ : ರೂ. ೨೦೦/–
ಆಜೀವ ಚಂದಾ : ರೂ. ೧,೦೦೦/–

ಮುಖಪುಟ ವಿನ್ಯಾಸ : ಮಂಜು (ಕೋ ಪ್ರಕಾಶನ)

ಮುದ್ರಕರು :
ಏಕಾಕ್ಷರ ಪ್ರಿಂಟರ್ಸ್
ನಂ. 2, 5ನೇ 'ಬಿ' ಮುಖ್ಯರಸ್ತೆ
ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079.
ಮೊಬೈಲ್ : 9844365538

ಪ್ರಧಾನ ಸಂಪಾದಕರ ಮಾತು

ಕರ್ನಾಟಕ ಸಾಹಿತ್ಯ ಅಕಾಡೆಮಿಯು ೧೯೬೧ರಿಂದಲೂ ಕನ್ನಡ ಸಾಹಿತ್ಯದ ಮೂಲಕ ಕರ್ನಾಟಕದ ಭಾಷೆ-ಸಂಸ್ಕೃತಿ-ಪರಂಪರೆಗಳನ್ನು ಉಳಿಸಿ ಬೆಳೆಸಿ ವಿಸ್ತರಿಸುವ ಕೆಲಸ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಆರಂಭದಲ್ಲಿದ್ದ ಏಕೈಕ ಅಕಾಡೆಮಿ ಎಂದರೆ ಕರ್ನಾಟಕ ಸಾಹಿತ್ಯ ಅಕಾಡೆಮಿ. ಹಾಗಾಗಿ ಇದರ ಕಾರ್ಯವ್ಯಾಪ್ತಿ ಕನ್ನಡೇತರ ಭಾಷೆ ಸಾಹಿತ್ಯಗಳನ್ನೂ ಒಳಗೊಂಡಂತೆ ಅನುವಾದವನ್ನೂ ಹೊಂದಿತ್ತು. ಆದರೆ ಪ್ರಸ್ತುತ ಕರ್ನಾಟಕದಲ್ಲಿ ಹಲವು ಅಕಾಡೆಮಿಗಳು, ಪ್ರಾಧಿಕಾರಗಳು ಸ್ಥಾಪನೆಯಾಗಿ ಅವುಗಳದೇ ಆದ ಕಾರ್ಯವ್ಯಾಪ್ತಿಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವುದು ನಮ್ಮ ಒಟ್ಟಾರೆಯ ಕರ್ನಾಟಕದ ಸಾಹಿತ್ಯ-ಭಾಷೆ-ಸಂಸ್ಕೃತಿ-ಪರಂಪರೆಯ ಚಟುವಟಿಕೆಗಳಿಗೆ ಬಲ ಬಂದಿದೆ. ಆದಾಗ್ಯೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಕರ್ನಾಟಕದ ಉದ್ದಗಲಕ್ಕೂ ಗಡಿನಾಡು ಹಾಗೂ ಹೊರನಾಡಿಗೂ ನಮ್ಮ ಕರ್ನಾಟಕತ್ವವನ್ನು ಜಾಗೃತಗೊಳಿಸುವ ಕಾರ್ಯವನ್ನು ಮತ್ತಷ್ಟು ಆಳವಾಗಿಯೂ ವ್ಯಾಪಕವಾಗಿಯೂ ನಡೆಸುತ್ತಾ ಬಂದಿದೆ.

ನಮ್ಮ ತಂಡ ದಿನಾಂಕ : ೧೮.೧೦.೨೦೧೯ರಂದು ಅಕಾಡೆಮಿಯ ಜವಾಬ್ದಾರಿಯನ್ನು ವಹಿಸಿಕೊಂಡಿತು. ನವೆಂಬರ್ ೨೦೧೯ರಿಂದ ಮಾರ್ಚ್ ೨೦೨೦ರ ಐದು ತಿಂಗಳ ಅವಧಿಯಲ್ಲಿ ಐದು ದಿನಗಳ ಮೂರು ರಾಜ್ಯ ಮಟ್ಟದ ಕಮ್ಮಟಗಳು, ಮೂರು ದಿನಗಳ ಎರಡು ರಾಜ್ಯ ಮಟ್ಟದ ಕಮ್ಮಟಗಳು, ಎಂ. ಗೋಪಾಲಕೃಷ್ಣ ಅಡಿಗರ ಜನ್ಮಶತಮಾನೋತ್ಸವದ ಅಂಗವಾಗಿ ರಾಯಚೂರು, ಧಾರವಾಡ, ಮೈಸೂರು, ಶಿಕಾರಿಪುರ ಮತ್ತು ಪುತ್ತೂರುಗಳಲ್ಲಿ ಐದು ವಿಚಾರಸಂಕಿರಣಗಳನ್ನು ನಡೆಸಲಾಯಿತು. ಸನ್ನತ್ತಿಯಲ್ಲಿ ಪ್ರಾಗಿತಿಹಾಸ ಮತ್ತು ಕನ್ನಡ ಸಾಹಿತ್ಯದ ಬಗ್ಗೆ, ತಾಳಗುಂದದಲ್ಲಿ ಕನ್ನಡ ಶಾಸನ ಸಾಹಿತ್ಯದ ಬಗ್ಗೆ ನಡೆಸಿದ ಮೂರು ದಿನಗಳ ಕಮ್ಮಟ ವಿಶೇಷ ಅನುಭವಗಳನ್ನು ನೀಡಿದೆ. ಸಾಣೇಹಳ್ಳಿಯಲ್ಲಿ ನಡೆಸಿದ ಹಳಗನ್ನಡ ರಸಾಭಿವ್ಯಕ್ತಿ ಕಮ್ಮಟದ ಪ್ರಯೋಗಶೀಲತೆ ರಂಗಭೂಮಿ ಮೂಲಕ ಹಳಗನ್ನಡವನ್ನು ಅಭಿವ್ಯಕ್ತಿಸುವ ಉತ್ತಮ ಅನುಭವಕ್ಕೆ ಸಾಕ್ಷಿಯಾಯಿತು. ಮೈಸೂರಿನಲ್ಲಿ ವಿಶೇಷ ಘಟಕ ಯೋಜನೆಯಡಿ ನಡೆಸಿದ ದಲಿತ ಕಲ್ಯಾಣ: ಸವಾಲು ಮತ್ತು ಅವಕಾಶಗಳು ಐದು ದಿನಗಳ ಕಮ್ಮಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳ ಸಾಹಿತ್ಯ-ಸಂಸ್ಕೃತಿ-ಉದ್ಯೋಗ-ಕಲ್ಯಾಣ

ಕುರಿತಂತೆ ಹೊಸ ಹೊಸ ಕ್ಷೇತ್ರಗಳ ಅವಕಾಶಗಳ ಬಗ್ಗೆ ಮಾಹಿತಿ–ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು. ಅದೇ ರೀತಿ ಗಿರಿಜನ ಉಪಯೋಜನೆಯಡಿಯಲ್ಲಿ ಬರಹ ಮತ್ತು ಮುದ್ರಣ ಕೌಶಲ್ಯಾಭಿವೃದ್ಧಿ ಶಿಬಿರವನ್ನು ಹಿರಿಯೂರಿನಲ್ಲಿ ಐದು ದಿನಗಳ ಕಾಲ ನಡೆಸಲಾಯಿತು. ಸಾಹಿತ್ಯ–ಸಂಸ್ಕೃತಿಯ ಜೊತೆಗೆ ಬುಡಕಟ್ಟು ಸಮುದಾಯದ ಅಸ್ಮಿತೆಗಳೊಂದಿಗೆ ಹೊಸ ಕಾಲಘಟ್ಟದ ಗಣಕಯಂತ್ರ, ಅಂತರ್ಜಾಲಗಳ ಮೂಲಕ ಜಾಗತೀಕರಣ ಸೃಷ್ಟಿಸಿರುವ ಹೊಸ ಹೊಸ ಅವಕಾಶಗಳನ್ನು ಉದ್ಯೋಗವನ್ನಾಗಿಸಿಕೊಳ್ಳಲು ಅಗತ್ಯ ಕೌಶಲ್ಯಗಳನ್ನು ಪ್ರಾಯೋಗಿಕ ತರಗತಿಗಳ ಮೂಲಕ ನೀಡಲಾಯಿತು.

ಬಸವನಬಾಗೇವಾಡಿಯಲ್ಲಿ ಎರಡು ದಿನಗಳ ಕಾಲ ವಚನ ಸಾಹಿತ್ಯ ಕುರಿತ ವಿಚಾರಸಂಕಿರಣ ನಡೆದರೆ, ತುಮಕೂರಿನಲ್ಲಿ ಕೆ.ಬಿ. ಸಿದ್ದಯ್ಯನವರ ಬದುಕು–ಬರಹಗಳನ್ನು ಕುರಿತ ವಿಚಾರಸಂಕಿರಣವನ್ನು ಮತ್ತು ಮೈಸೂರಿನ ರಂಗಾಯಣದಲ್ಲಿ ಗಾಂಧೀಪಥ ವಿಚಾರಸಂಕಿರಣವನ್ನು ಏರ್ಪಡಿಸಲಾಗಿತ್ತು. ಬೆಳಗಾವಿ ಹಾಗೂ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ವಿಚಾರಸಂಕಿರಣಗಳು, ಕಾಸರಗೋಡಿನಲ್ಲಿ ನಡೆಯಬೇಕಿದ್ದ ಕಾವ್ಯ ಕಮ್ಮಟ, ಬೆಂಗಳೂರಿನಲ್ಲಿ ನಡೆಯಬೇಕಾಗಿದ್ದ ಪ್ರಶಸ್ತಿ ಪ್ರಧಾನ ಸಮಾರಂಭಗಳು ಕೊರೋನಾ ಕಾರಣದಿಂದ ರದ್ದಾದವು. ಇಲ್ಲದಿದ್ದಲ್ಲಿ ಮಾರ್ಚ್ ೨೦೨೦ರಲ್ಲೇ ಈ ಎಲ್ಲಾ ಕಾರ್ಯಕ್ರಮಗಳು ನಡೆಯಬೇಕಾಗಿತ್ತು.

ನಮ್ಮ ಸಮಿತಿಯ ಮೊದಲ ಸಭೆಯಲ್ಲೇ ಕೆಲವು ಮಹತ್ವದ, ಲಭ್ಯವಿಲ್ಲದಿರುವ ಅಕಾಡೆಮಿಯ ಪ್ರಕಟಣೆಗಳನ್ನು ಮರುಮುದ್ರಣ ಮಾಡಲು ನಿರ್ಣಯಿಸಲಾಯಿತು. ಇದರ ಕಾರ್ಯ ಪ್ರಗತಿಯಲ್ಲಿದೆ. ಹೊಸದಾಗಿ ಮೂರು ಪ್ರಕಟಣಾ ಮಾಲಿಕೆಗಳನ್ನು ಪ್ರಾರಂಭಿಸಿದ್ದು ಅವುಗಳಲ್ಲಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಸಂಪಾದಕತ್ವದಲ್ಲಿ 'ದೇಸೀ ದರ್ಶನ ಮಾಲೆ', ಪ್ರೊ. ಎ.ವಿ. ನಾವಡ ಅವರ ಸಂಪಾದಕತ್ವದಲ್ಲಿ 'ಲೌಕಿಕ ಶಾಸ್ತ್ರಗಳ ಪದವಿವರಣ ಪದಕೋಶ ಮಾಲೆ'ಯ ಕೆಲಸ ಸಾಕಷ್ಟು ತ್ವರಿತಗತಿಯಲ್ಲಿ ನಡೆಯುತ್ತಿದೆ. ಅದೇ ಸಂದರ್ಭದಲ್ಲಿ ಈ ಹಿಂದಿನ ಅನೇಕ ಪ್ರಕಟಣಾ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಯತಿಸಲಾಗುತ್ತಿದೆ. ಹದಿಹರೆಯಕ್ಕೆ ಸಾಹಿತ್ಯ ಸುಧೆ ಕಾರ್ಯಕ್ರಮದಡಿಯಲ್ಲಿ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ರಾಣೆಬೆನ್ನೂರು, ಬಾಗಲಕೋಟೆ, ಕನಕಗಿರಿ, ಬೆಳಗಾವಿ, ಬೇಡಕಿಹಾಳ, ಶಮನೇವಾಡಿ, ಬೆಂಗಳೂರುಗಳಲ್ಲಿ ವಿಶೇಷ ಉಪನ್ಯಾಸಗಳನ್ನು ನಡೆಸಲಾಗಿದೆ.

ನಮ್ಮ ಅಕಾಡೆಮಿಯ ತ್ರೈಮಾಸಿಕ 'ಅನಿಕೇತನ' ಪತ್ರಿಕೆಯ ೨೦೨೦–೨೧ರ ಸಂಪಾದಕರನ್ನಾಗಿ ಬೆಂಗಳೂರಿನ ಮಹಾರಾಣಿ ಮಹಿಳಾ ಕಾಲೇಜಿನ ಕನ್ನಡ ಸಹಪ್ರಾಧ್ಯಾಪಕರಾದ ಡಾ. ಎ. ರಘುರಾಂ ಅವರನ್ನು ನಿಯೋಜಿಸಲಾಗಿದೆ. ಅವರ ಪರಿಶ್ರಮದಿಂದ 'ಅನಿಕೇತನ'ದ ಈ ಸಂಚಿಕೆ ನಿಮ್ಮ ಕೈ ತಲುಪಿದೆ. ೧೯ ವಿಶಿಷ್ಟ ಲೇಖನಗಳಿಂದ ಕೂಡಿರುವ ಈ ಸಂಚಿಕೆ ಸಂಗ್ರಹಯೋಗ್ಯ ಸಂಚಿಕೆಯಾಗಿದೆ.

ಅನಿಕೇತನದ ಪ್ರತಿಯೊಂದು ಸಂಚಿಕೆಯೂ ಸಂಗ್ರಹಯೋಗ್ಯವಾದ ಸಂಚಿಕೆಯಾಗಬೇಕು. ನಮ್ಮ ಅರಿವನ್ನು ವಿಸ್ತರಿಸುವ, ವಿಮರ್ಶಾತ್ಮಕ ಒಳನೋಟಗಳನ್ನು ಮೂಡಿಸುವ, ಕನ್ನಡ ಸಾಹಿತ್ಯ ಸಂಸ್ಕೃತಿಯ ವಿಭಿನ್ನ ನೆಲೆಗಳ ಮೇಲೆ ಬೆಳಕು ಚೆಲ್ಲುವ ಲೇಖನಗಳಿಲ್ಲಿವೆ. ಎಲ್ಲಾ ಲೇಖಕರಿಗೂ, ಸಂಪಾದಕ ಸನ್ಮಿತ್ರ ವಿಮರ್ಶಕರಾದ ಡಾ. ಎ. ರಘುರಾಂ ಅವರಿಗೂ ವಂದಿಸುತ್ತೇನೆ. ಕೃತಿ ಹೊರಬರಲು ಸಹಕರಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಕರಿಯಪ್ಪ ಎನ್. ಅವರಿಗೂ ಮುದ್ರಣಾಲಯದ ಸಿಬ್ಬಂದಿಗೂ, ಅಕಾಡೆಮಿಯ ಸಿಬ್ಬಂದಿಗೂ ವಂದನೆಗಳು. ಅನಿಕೇತನದ ಎಲ್ಲಾ ಚಂದಾದಾರರಿಗೂ, ಓದುಗರಿಗೂ ತುಂಬು ಹೃದಯದಿಂದ ವಂದಿಸುತ್ತೇನೆ. ನಿಮ್ಮ ಸಲಹೆ, ಸಹಕಾರ, ಮಾರ್ಗದರ್ಶನಗಳಿಗೆ ಸದಾ ಸ್ವಾಗತ.

ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಪಾದಕೀಯ

'ಅನಿಕೇತನ' ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿರುವ ತ್ರೈಮಾಸಿಕ. ಇದು ೧೧೪ನೆಯ ಸಂಚಿಕೆಯಾಗಿದೆ (ಏಪ್ರಿಲ್-ಜೂನ್ ೨೦೨೦) ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಅನೇಕ ಲೇಖನಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕನ್ನಡ ಸಾಹಿತ್ಯದ ವಿಸ್ತಾರವಾದ ಓದಿಗೆ ಲೇಖನಗಳನ್ನು ಅಣಿಗೊಳಿಸಬೇಕೆಂಬುದು ನಮ್ಮ ಬಯಕೆಯಾಗಿದೆ. ಅನೇಕ ವಿದ್ವಾಂಸರು ಕನ್ನಡದ ಶ್ರೀಮಂತಿಕೆಗೆ ಕಾರಣರಾಗಿರುವುದಲ್ಲದೆ ತಮ್ಮ ಓದಿನ ಸಂದರ್ಭದಲ್ಲಿ ಅನೇಕ ಹೊಸ ಹೊಳಹುಗಳನ್ನು ನೀಡುತ್ತ ಕನ್ನಡ ಒಂದು ಸತ್ತ್ವಶೀಲ ಭಾಷೆ ಎನ್ನುವುದನ್ನು ಋಜುವಾತುಪಡಿಸಿದ್ದಾರೆ. ಭಾಷೆ ಮತ್ತು ಸಾಹಿತ್ಯದಲ್ಲಿ ಪ್ರಭುತ್ವ ಪಡೆದ ವಿದ್ವಾಂಸರು, ಸಂಶೋಧಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ತಾವು ಕಂಡುಕೊಂಡ ಹೊಸ ಸಂಗತಿಗಳನ್ನು ದಾಖಲಿಸುತ್ತ ಮುಂದಿನ ಪೀಳಿಗೆಗೆ ಹೊಸ ಓದನ್ನು ನೀಡುವುದಲ್ಲದೆ, ಹೊಸ ಪೀಳಿಗೆಗೆ ಮುಂದಿನ ದಾರಿ ತೋರಬಲ್ಲ ಮಾರ್ಗ ನಿರ್ಮಾಣಕ್ಕೆ ಕಾರಣರಾಗಬೇಕೆಂಬುದು ನಮ್ಮ ನಿರೀಕ್ಷೆಯಾಗಿದೆ. ಈ ಸಂಚಿಕೆ ತುಂಬ ತಡವಾಗಿ ಬರುತ್ತಿದೆ. ಕೋವಿಡ್-೧೯ ಎಲ್ಲ ವಲಯದಲ್ಲೂ ಅನೇಕ ತೊಂದರೆಗಳನ್ನು ನಿರ್ಮಾಣಮಾಡಿ ನಾವು ನಿಗದಿತ ಸಮಯದಲ್ಲಿ ಏನನ್ನೂ ಮಾಡಲು ಸಾಧ್ಯವಾಗದಂತಹ ಒಂದು ವಿಚಿತ್ರ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರುವುದು ನಮ್ಮ ದುರಂತ. ಒಂದಂತೂ ಸತ್ಯ ಪ್ರಕೃತಿಯ ಮುಂದೆ ನಾವು ಏನೂ ಅಲ್ಲ ಎನ್ನುವ ಬಹು ದೊಡ್ಡ ಸತ್ಯವನ್ನು ಅದು ನಮ್ಮೆದುರು ಸಾಬೀತುಮಾಡಿದೆ. ನಾವು ಏನೂ ಮಾಡಲು ಸಾಧ್ಯವಿಲ್ಲ ಎಂದು ಕೈಚೆಲ್ಲಲು ಸಾಧ್ಯವಿಲ್ಲ. ಇರುವ ಸೀಮಿತ ಅವಧಿಯಲ್ಲಿಯೇ ಒಂದು ಸಂಚಿಕೆಯನ್ನು ರೂಪಿಸಲು ಪ್ರಯತ್ನಿಸಲಾಗಿದೆ.

ಸಂಪಾದಕನಾಗಿ ಕಾರ್ಯನಿರ್ವಹಿಸಲು ಜವಾಬ್ದಾರಿವಹಿಸಿ ಉತ್ತಮ ಸಂಚಿಕೆಯನ್ನು ರೂಪಿಸು ಎಂದು ವಿಶ್ವಾಸ ತುಂಬಿದ ಆತ್ಮೀಯ ಗೆಳೆಯರು ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆದ ಡಾ.ಬಿ.ವಿ.ವಸಂತಕುಮಾರ್ ಅವರಿಗೆ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಕರಿಯಪ್ಪ .ಎನ್ ಅವರಿಗೆ, ಈ ಸುಂದರ ಸಂಚಿಕೆ ಕೈಸೇರಲು ಸಹಕಾರ ನೀಡಿದ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗಕ್ಕೆ, 'ಅನಿಕೇತನ' ಸಂಚಿಕೆಗೆ ತಮ್ಮ ಅಮೂಲ್ಯವಾದ ಲೇಖನಗಳನ್ನು ನೀಡಿ ಸಹಕರಿಸಿದ ಲೇಖಕರಿಗೆ, ಅಕ್ಷರ ಜೋಡಣೆ ಮಾಡಿದ ಪ್ರಭಾ .ಜಿ ಅವರಿಗೆ ಹಾಗೂ 'ಅನಿಕೇತನ' ಸಂಚಿಕೆಯನ್ನು ಪ್ರೋತ್ಸಾಹಿಸುತ್ತ ಬಂದ ಓದುಗ ವರ್ಗಕ್ಕೆ ಧನ್ಯವಾದಗಳು.

– ಡಾ. ಎ. ರಘುರಾಂ
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ, ಮಹಾರಾಣಿ ಮಹಿಳಾ ಕಲಾ,
ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು
ಬೆಂಗಳೂರು – ೫೬೦ ೦೦೧

ಪರಿವಿಡಿ

ವಾರಕರಿ ಪಂಥ ಮತ್ತು ದಾಸಪಂಥ

– ಡಾ. ವಿಠಲರಾವ್ ಟಿ. ಗಾಯಕ್ವಾಡ್

ಭಾರತದ ಮಧ್ಯಕಾಲೀನ ಯುಗದಲ್ಲಿ ನಡೆದ ಭಕ್ತಿ ಚಳವಳಿಗಳು ಬಹಳ ವಿಶಿಷ್ಟವಾದುವು. ವರ್ಣಾಶ್ರಮ ವ್ಯವಸ್ಥೆಯು ಜಾತಿ ವ್ಯವಸ್ಥೆಯಾಗಿ ಪರಿವರ್ತನೆಗೊಂಡುದರಿಂದ ಜನಸಾಮಾನ್ಯರ ನಿತ್ಯ ಜೀವನ ವ್ಯವಸ್ಥೆಯು ಬಹಳ ಅಯೋಮಯವಾಯಿತು. 'ಚಾತುರ್ವರ್ಣ್ಯಂ ಮಯಾಸೃಷ್ಟ್ಯಂ ಗುಣಕರ್ಮ ವಿಭಾಗಶಃ' ಎಂಬ ಭಗವದ್ಗೀತೆಯಲ್ಲಿ ಶ್ರೀಕೃಷ್ಣನ ಉವಾಚವಿದೆ. ಅಂದರೆ 'ನಾಲ್ಕು ವರ್ಣಗಳನ್ನು ನಾನು ಸೃಷ್ಟಿಸಿದ್ದೇನೆ. ಅದು ಅವರವರ ಗುಣ ಮತ್ತು ಕರ್ಮಗಳ ನೆಲೆಯಿಂದ' ಎಂಬುದು ಇದರ ಅರ್ಥ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬುವೇ ಆ ನಾಲ್ಕು ವರ್ಣಗಳು. ಕಾಲಕ್ರಮೇಣ ಈ ತತ್ತ್ವದಲ್ಲಿನ ನಿಜವಾದ ಆಶಯವು ಇಲ್ಲವಾಗಿ ಕೇವಲ ಕರ್ಮಪ್ರಧಾನ ನೆಲೆಯಲ್ಲಿಯಷ್ಟೇ ವ್ಯಾಖ್ಯಾನಗೊಳ್ಳಲಾರಂಭಿಸಿತು. ಗುಣ ಮತ್ತು ಕರ್ಮಗಳ ಸಾಮರ್ಥ್ಯದಿಂದ ಯಾರು ಬೇಕಾದರೂ ಯಾವುದೇ ವರ್ಣಕ್ಕಾದರೂ ಹೋಗಬಹುದಾದ ಒಂದು ಸ್ವತಂತ್ರ 'ಸಮಾಜೋ-ಸಾಂಸ್ಕೃತಿಕ' ವ್ಯವಸ್ಥೆಯು ಪ್ರಾಚೀನ ಭಾರತದಲ್ಲಿ ಇದ್ದಿತು ಎಂಬುದು ಇದರಿಂದ ನಮಗೆ ವೇದ್ಯವಾಗುತ್ತದೆ. ಅಂತಹ ಒಂದು ಗಂಭೀರ ವ್ಯವಸ್ಥೆಯು ಕ್ರಮೇಣ ಸಂಪ್ರದಾಯವಾಗಿಯೂ ತದನಂತರದಲ್ಲಿ ಸಂಸ್ಥೆಯಾಗಿಯೂ ರೂಪುಗೊಂಡಿತು. ಪುರೋಹಿತಶಾಹಿಗಳು (Priest class) ಸಾಮಾಜಿಕವಾಗಿ ಹೀಗೆ ವ್ಯಾಖ್ಯಾನಿಸಿ, ಪ್ರರೂಪಿಸಿದಂತಹ ಗಂಭೀರ ವ್ಯವಸ್ಥೆ ಇದು. ಇದರ ಪರಿಣಾಮವಾಗಿ ಜನರು ತಮ್ಮ ಹುಟ್ಟಿದ ಜಾತಿಯು ತಮ್ಮ ಪೂರ್ವ ಕರ್ಮದಿಂದಾದ ವಿಧಿ ನಿಯಾಮಕ ಎಂಬುದಾಗಿ ಭಾವಿಸಿದ ಜನತೆ ತಾರತಮ್ಯಾನುಸಾರ ವ್ಯವಸ್ಥೆಯನ್ನು ಒಪ್ಪಿಕೊಂಡರಲ್ಲದೆ ಅದರಂತೆಯೇ ಜೀವಿಸಲಾರಂಭಿಸಿದರು. ಈ ಪರಿಸ್ಥಿತಿಯು ಸಾಮಾಜಿಕ ವ್ಯವಸ್ಥೆಯನ್ನು ಸ್ವತಂತ್ರರಹಿತ ನೆಲೆಯಲ್ಲಿ ಸಂಕೀರ್ಣವಾಗಿರುವಂತೆ ರೂಪುಗೊಳಿಸಿತು ಎಂಬುದು ಗಮನಾರ್ಹವಾದ ಸಂಗತಿಯಾಗಿದೆ.

'ಧ್ರೀಯತೇ ಅನೇನ ಇತಿ ಧರ್ಮಃ' ಅಂದರೆ ಮನುಷ್ಯ ಬದುಕನ್ನು ಉಜ್ವಲಗೊಳಿಸುವಂತಹ ಧಾರಣ ಸ್ವರೂಪವೆ ಧರ್ಮವೆನಿಸುತ್ತದೆ. ಮಾತ್ರವಲ್ಲ,

'ಧಾರಣಾದ್ಧರ್ಮಮಿತ್ಯಾಹುಃ' ನಾವು ಬದುಕಿನಲ್ಲಿ ಯಾವುದನ್ನು ಧರಿಸಿರುತ್ತೇವೆಯೋ ಅಥವಾ ಯಾವುದು ನಮ್ಮನ್ನು ಧರಿಸಿರುತ್ತದೆಯೋ ಅದೇ ಧರ್ಮ ಎಂಬುದು ಇದರ ನಿಜವಾದ ಅರ್ಥ. ಜನವಿರೋಧಿ ಸ್ವಾರ್ಥಿಗಳಿಂದ ನಿಜವಾದ ಸಾಮಾಜಿಕ ಸಮಾನತೆಯ ಧರ್ಮವು ಹಾಳಾಗಿ ಅಸಮಾನತೆಯ ವ್ಯವಸ್ಥೆಯೊಂದು ನಿರ್ಮಾಣವಾಯಿತು. ಜನಸಾಮಾನ್ಯರ ಈ ಸಂಕೀರ್ಣ ಅವಸ್ಥೆಗೆ ನಿಜವಾದ ಕಾರಣ ಮತ್ತು ಅದಕ್ಕೆ ಪರಿಹಾರಮಾರ್ಗವನ್ನು ಆಯಾಯ ಸಮಾಜದಲ್ಲಿ ಹುಟ್ಟಿಕೊಂಡ ಮಹಾನ್ ಪುರುಷರೇ ಹುಡುಕಲು ಪ್ರಯತ್ನಿಸಿದರು ಎಂಬುದು ಗಮನಾರ್ಹ ಸಂಗತಿ. ಅಂದರೆ ಧರ್ಮದ ಮೂಲ ನೆಲೆಯಾದ ಭಕ್ತಿ ಭಾವದ ಮೂಲಕವೇ ಧಾರ್ಮಿಕ ಸಂಕೀರ್ಣತೆಗೆ ಒಂದು ಪರಿಹಾರ ಮಾರ್ಗವನ್ನು ತೋರಿಸುವ ಕಾರಣದಿಂದಾಗಿ ಅನೇಕ ಮತಪಂಥ ಇಲ್ಲವೇ ಮತಧರ್ಮಗಳು ಹುಟ್ಟಿಕೊಂಡವು. ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಮಹಾನುಭಾವ, ವಾರಕರಿ, ರಾಮದಾಸಿ ಮೊದಲಾದ ಮತಪಂಥಗಳು ಹುಟ್ಟಿಕೊಂಡುದು ಈ ಹಿನ್ನೆಲೆಯಲ್ಲಿಯೇ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಮಧ್ಯಕಾಲೀನ ಯುಗದಲ್ಲಿ ಹುಟ್ಟಿಕೊಂಡ ಸಂತರು, ವಿಭೂತಿ ಪುರುಷರು, ಅವಧೂತರು, ಚೈತನ್ಯ ಪುರುಷರು, ವಿಶ್ವಮಾನ್ಯರು ಮೊದಲಾದವರು ತಮ್ಮ ದೃಷ್ಟಿಧೋರಣೆ ಮತ್ತು ದರ್ಶನಗಳ ಮೂಲಕವಾಗಿ ಜನಸಾಮಾನ್ಯರ ಜೀವನಕ್ಕೆ ಸಂಪುಷ್ಟ ಆಯಾಮವನ್ನು ತರುವುದಕ್ಕೆ ಪ್ರಯತ್ನ ಮಾಡಿದರು ಎಂಬುದು ಮುಖ್ಯ ಸಂಗತಿ. ಈ ಕಾರಣವಾಗಿಯೇ ಅಂತಹವರು ನಮ್ಮ 'ಸಮಾಜೋ-ಧಾರ್ಮಿಕ' ಇತಿಹಾಸದಲ್ಲಿ ತಮ್ಮ ವಿಶಿಷ್ಟ ಕೈಂಕರ್ಯದಿಂದ ಅವಿಸ್ಮರಣೀಯವಾಗಿ ಉಳಿದಿದ್ದಾರೆ.

ಈ ಮಹಾಪುರುಷರಲ್ಲಿ ಎರಡು ವಿಧದ ನೆಲೆಯಲ್ಲಿ ಸಾಧನೆಗೆಯ್ದ ಮಹಾನ್ ವ್ಯಕ್ತಿತ್ವದವರು ಕಾಣಿಸುತ್ತಾರೆ. ಆ ಎರಡು ವಿಧಗಳವರು ಎಂದರೆ ಒಂದು ವ್ಯಕ್ತಿಗತ ನೆಲೆಯವರು ಮತ್ತೊಂದು ಸಾಮಾಜಿಕವಾಗಿ ಜನಸಮೂಹದಲ್ಲಿ ಕಾಣಿಸಿಕೊಂಡವರು. ಅಂತರ್ಮುಖತೆ, ಬಿರುಕಿಲ್ಲದ ವ್ಯಕ್ತಿತ್ವ, ಅಂತರಂಗ ಶುದ್ಧತೆ, ಆತ್ಮಾನುಸಂಧಾನ ಮತ್ತು ಬ್ರಹ್ಮಾನಂದ ಸುಖ ಇವುಗಳು ವೈಯಕ್ತಿಕ ನೆಲೆಯಲ್ಲಿ ಆವಿರ್ಭವಿಸಿಕೊಂಡಿರುವಂತಹ ಪ್ರಮುಖ ಅಂಶಗಳು. ಸಾಮಾಜಿಕ ಸ್ತರದವರು ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಮಾಜದ ಎಲ್ಲರನ್ನೂ ತಮ್ಮ ಚಿಂತನೆಯಲ್ಲಿ ಸೇರಿಸಿಕೊಂಡು ಅವರ ಜೀವನದ ಎಲ್ಲಾ ಆಗುಹೋಗುಗಳಿಗೂ ಸ್ಪಂದಿಸುವ ವಿಶಿಷ್ಟ ಪ್ರಕ್ರಿಯೆಯನ್ನು ಹೊಂದಿರುವಂತಹವರಾಗಿರುತ್ತಾರೆ. ಈ ಎರಡೂ ನೆಲೆಗಳವರು ತಮ್ಮ ಭಕ್ತಿಭಾವನೆಯ ಚಿಂತನೆ, ಬೋಧನೆಗಳ ಮೂಲಕ ಮಾಡ ಹೊರಟಿದುದೆಂದರೆ, ಸರ್ವಕಾರುಣ್ಯ ಮಹಾತ್ಮ್ಯವನ್ನು ಎಲ್ಲರಿಗೂ ತಿಳಿಸಿಕೊಟ್ಟು ಅವರನ್ನೆಲ್ಲ ದೈವೀ ಸಂಕಲ್ಪನದ ಪರಿಧಿಯಲ್ಲಿ ತಮ್ಮ ಬದುಕಿನ ಸ್ವರೂಪವನ್ನು ದರ್ಶಿಸುವುದಕ್ಕೆ ಅಣಿಗೊಳಿಸುವುದು. ಅದಕ್ಕಾಗಿ ಪರಮಾತ್ಮನ ನಾಮಸಂಕೀರ್ತನೆಗಳ ಮೂಲಕ ಆತ್ಮ-ಪರಮಾತ್ಮರ ಅನುಸಂಧಾನ, ಕಪಟಾಚರಣೆಗಳ ವರ್ಜ್ಯ ಮತ್ತು ಕಟುನಿಂದನೆ, ಜೀವನದ ಬಗೆಗೆ ದಾರ್ಶನಿಕ ದೃಷ್ಟಿಕೋನ

ಮತ್ತು ವಿಮರ್ಶೆಯ ಮೂಲಕ ಆತ್ಮ ಮತ್ತು ಸಾಮಾಜಿಕ ಶುದ್ಧೀಕರಣಕ್ಕೆ ಪ್ರಯತ್ನಿಸಿರುವುದು ಈ ಸಂತಶ್ರೇಷ್ಠರ ಮುಖ್ಯ ಕೈಂಕರ್ಯವಾಗಿತ್ತು. ಈ ಬಾಳಿನ ಎಲ್ಲಾ ಪ್ರಶ್ನೆ ಮತ್ತು ಸಂಕೀರ್ಣತೆಗಳಿಗೆ ಉತ್ತರ ಹುಡುಕಿಕೊಡುವ ದಿಶೆಯಲ್ಲಿ ಅನೇಕರು ವಿವಿಧ ನೆಲೆಗಳಿಂದ ಜನ ಬದುಕಿನ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟು ದಾರ್ಶನಿಕ ಮಾರ್ಗವನ್ನು ಚಿರಸ್ಥಾಯಿಗೊಳಿಸಿರುವುದು ಗಮನಾರ್ಹ. ಶಂಕರಾಚಾರ್ಯ (ಕೇರಳ, ಕ್ರಿ.ಶ. ೭೮೮-೮೨೦), ರಾಮಾನುಜಾಚಾರ್ಯ (ತಮಿಳುನಾಡು, ಕ್ರಿ.ಶ. ೧೦೧೭-೧೧೩೭), ಮಧ್ವಾಚಾರ್ಯ (ಕರ್ನಾಟಕ, ಕ್ರಿ.ಶ. ೧೨೩೮-೧೩೧೭), ವಲ್ಲಭಾಚಾರ್ಯ (ಆಂಧ್ರಪ್ರದೇಶ, ಕ್ರಿ.ಶ. ೧೪೭೯-೧೫೩೧), ಸಂತ ಸೂರದಾಸ (ಹರಿಯಾಣ, ಕ್ರಿ.ಶ.ಸು. ೧೪೭೯-೧೫೪೦), ಸಂತ ಮೀರಾಬಾಯಿ (ಪಶ್ಚಿಮ ಬಂಗಾಳ, ಕ್ರಿ.ಶ.೧೫೪೭-೧೬೧೪), ಸಂತ ಜ್ಞಾನೇಶ್ವರ (ಮಹಾರಾಷ್ಟ್ರ, ಕ್ರಿ.ಶ.೧೨೭೫-೧೨೯೬), ಸಂತ ನಾಮದೇವ (ಮಹಾರಾಷ್ಟ್ರ, ಕ್ರಿ.ಶ. ೧೨೭೦), ಸಂತ ಏಕನಾಥ (ಮಹಾರಾಷ್ಟ್ರ, ಕ್ರಿ.ಶ. ೧೫೩೩-೧೫೯೯), ಸಂತ ರಾಮದಾಸ (ಮಹಾರಾಷ್ಟ್ರ, ಕ್ರಿ.ಶ. ಸು. ೧೬೦೮), ಸಂತ ತುಕಾರಾಮ (ಮಹಾರಾಷ್ಟ್ರ, ಕ್ರಿ.ಶ. ೧೬೦೮-೧೬೪೯) ವ್ಯಾಸರಾಜತೀರ್ಥ (ಕರ್ನಾಟಕ, ಕ್ರಿ.ಶ. ೧೪೬೦-೧೫೩೯), ಭಕ್ತ ಪುರಂದರದಾಸ (ಕರ್ನಾಟಕ, ಕ್ರಿ.ಶ.೧೪೮೪-೧೫೬೪), ಗುರುನಾನಕ್ (ಪಂಜಾಬ್, ಕ್ರಿ.ಶ. ೧೪೬೯-೧೫೨೪), ಶ್ರೀಕೃಷ್ಣಚೈತನ್ಯ (ಪ.ಬಂಗಾಳ, ಕ್ರಿ.ಶ. ೧೪೪೮-೧೫೩೨), ಸಂತ ತುಳಸೀದಾಸ (ಉತ್ತರ ಪ್ರದೇಶ, ಕ್ರಿ.ಶ. ೧೪೯೭-೧೫೩೨) ಈ ಮೊದಲಾದ ಸಂತ-ಮಹಾಂತರು ಮಧ್ಯಕಾಲೀನ ಯುಗದಲ್ಲಿ ಭಕ್ತಿ ಪರಂಪರೆಯನ್ನು ಜೀವನದ ಶ್ರೇಷ್ಠ ಮೌಲ್ಯಗಳ ಮೂಲಕವಾಗಿ ಸ್ಥಾಪಿಸಿ ಪ್ರರೂಪಿಸಿದವರು.

ಸಂತ ಜ್ಞಾನೇಶ್ವರ ಮತ್ತು ಭಕ್ತ ಪುರಂದರದಾಸರು ಹುಟ್ಟುಹಾಕಿದ ಸಮಾಜೋ ಧಾರ್ಮಿಕ ಚಿಂತನೆಗಳು ತಂತಮ್ಮ ಕಾಲದ ಸಾಮಾಜಿಕ ಸಂಕೀರ್ಣತೆಗಳನ್ನು ವಿಶೇಷವಾಗಿ ಗಮನಿಸಿ ಅದಕ್ಕೆ ಭಕ್ತಿ ಮತ್ತು ಆಧ್ಯಾತ್ಮಿಕ ಧೋರಣೆಗಳಿಂದ ಅಪಾರ ಜನಸಮುದಾಯಕ್ಕೆ ಹೊಸ ದಾರಿಯನ್ನು ತೋರಿಸಿ ಕೊಡುವುದರ ಮೂಲಕ ಅವರ ಬದುಕಿನ ಪ್ರಶ್ನೆಗಳಿಗೆ ವಿಶೇಷವಾಗಿ ಸ್ಪಂದಿಸಿದವರು. ನಾಥಪಂಥದ ದೀಕ್ಷೆ ಪಡೆದಿದ್ದ ಸಂತ ಜ್ಞಾನೇಶ್ವರರು ಅದರಲ್ಲಿಯೇ ಉಳಿಯದೆ ತಮ್ಮದೇ ಆದ ಚಿಂತನೆಗಳ ಚೌಕಟ್ಟಿನಲ್ಲಿ 'ವಾರಕರಿ ಪಂಥ'ವನ್ನು ಹುಟ್ಟು ಹಾಕಿದರು. ಹಾಗೆಯೇ ಭಕ್ತ ಪುರಂದರದಾಸರು ವ್ಯಾಸರಾಜತೀರ್ಥರ ಶಿಷ್ಯರಾಗಿದ್ದು, ಮಧ್ವಾಚಾರ್ಯರ ದ್ವೈತ ತತ್ತ್ವವನ್ನು ಒಪ್ಪಿಕೊಂಡಿದ್ದರೂ ಅಲ್ಲಿಯೇ ನಿಲ್ಲದೆ, 'ವ್ಯಾಸಕೂಟ'ವನ್ನು ಬಿಟ್ಟು 'ದಾಸಕೂಟ'ದ ಮೂಲಕ ಸರ್ವಜನರ ಜೀವನದ ಸಂಕೀರ್ಣತೆಗಳಿಗೆ ತಮ್ಮ ಕೀರ್ತನೆಗಳ ಮೂಲಕ ಭಕ್ತಿಯುತ ಪರಿಹಾರಗಳನ್ನು ತೋರಿಸಿ ಜನರ ಮನಸ್ಸಿಗೆ ಸಮಾಧಾನ ಮತ್ತು ಆನಂದವನ್ನು ಉಂಟುಮಾಡಿದವರಾಗಿದ್ದಾರೆ. ಇಬ್ಬರೂ ಸಂತರು ಮುಖ್ಯವಾಗಿ ಜನಸಮುದಾಯದ ನಡುವೆಯೇ ಬದುಕಿದವರು ಮತ್ತು ಜನ ಸಮುದಾಯದ

ಆಶೋತ್ತರಗಳನ್ನು ಅರಿತು ಆ ದಿಶೆಯಲ್ಲಿಯೇ ಬಹಳ ಗಂಭೀರವಾಗಿ ಚಿಂತಿಸಿದವರು ಎಂಬುದನ್ನು ಅವಶ್ಯವಾಗಿ ಗಮನಿಸಬೇಕು.

ಸಂತ ಜ್ಞಾನೇಶ್ವರ ಮಹಾರಾಜರು ಬ್ರಾಹ್ಮಣರಾಗಿದ್ದರೂ ಬಹಳ ಸಂಕಷ್ಟಮಯವಾದ ಜೀವನವನ್ನು ನಡೆಸಬೇಕಾಯಿತು. ತಂದೆ ವಿಠ್ಠಲಪಂತರು ತಾವು ಸಂನ್ಯಾಸತ್ವವನ್ನು ಸ್ವೀಕರಿಸಿ ಮತ್ತೆ ಸಂಸಾರಕ್ಕೆ ಬಂದವರು. ವಿಠ್ಠಲಪಂಥ ಮತ್ತು ರುಕ್ಮಿಣಿಬಾಯಿ ದಂಪತಿಗಳಿಗೆ ನಿವೃತ್ತಿನಾಥ, ಜ್ಞಾನೇಶ್ವರ, ಸೋಪಾನದೇವ ಮತ್ತು ಮುಕ್ತಾಬಾಯಿ ಎಂಬ ನಾಲ್ವರು ಮಕ್ಕಳು ಜನಿಸಿದರು. ಸಂನ್ಯಾಸ ಸ್ವೀಕರಿಸಿದ ನಂತರದಲ್ಲಿ ಜನಿಸಿದ ಈ ಮಕ್ಕಳು ಬ್ರಾಹ್ಮಣ ವರ್ಣಕ್ಕೆ ಸ್ವೀಕಾರಾರ್ಹವಲ್ಲ ಎಂಬ ಕಾರಣದಿಂದ ಅವರ ಮುಂಜಿಯ ಕಾಲಕ್ಕೆ ಕರ್ಮನಿಷ್ಠ ಬ್ರಾಹ್ಮಣ ವರ್ಗವು ತೀವ್ರವಾಗಿ ವಿರೋಧಿಸಿತು. ಅವರ ಪ್ರಕಾರ ಸಂನ್ಯಾಸಿಗಳಿಗೆ ಜಾತಿ, ಕುಲ, ವರ್ಣ ಮತ್ತು ಅಧಿಕಾರಗಳಾವುವೂ ಇಲ್ಲ. ಹಾಗಾಗಿ ಈ ಮಕ್ಕಳು ಬ್ರಾಹ್ಮಣರಲ್ಲ. ಹಾಗೆಯೇ ಕ್ಷತ್ರಿಯ, ವೈಶ್ಯ, ಶೂದ್ರ ವರ್ಗಕ್ಕೂ ಸೇರುವುದಿಲ್ಲ ಎಂಬುದಾಗಿ ವಾದಿಸಿದರು. ಇದಕ್ಕೆ ಪರಿಹಾರವಾಗಿ ಪೈಠಣ ಕ್ಷೇತ್ರಕ್ಕೆ ಹೋಗಿ ಪ್ರಾಯಶ್ಚಿತ್ತ ಪಡೆದು ಅಲ್ಲಿಂದ ಶುದ್ಧಿ ಪತ್ರವನ್ನು ತೆಗೆದುಕೊಂಡು ಬಂದರಷ್ಟೇ ಇದು ಸಾಧ್ಯವಾಗಬಹುದು ಎಂಬುದಾಗಿ ಸೂಚಿಸಿದರು. ಅದರಂತೆ ನಿವೃತ್ತಿನಾಥ, ಜ್ಞಾನದೇವಾದಿ ಸೋದರರು ಪೈಠಣಕ್ಕೆ ಬಂದು ಅಲ್ಲಿ ಹಲವಾರು ಚಮತ್ಕಾರಗಳನ್ನು ತೋರಿಸಿ. ಕೋಣನ ಬಾಯಲ್ಲಿ ಮಂತ್ರವನ್ನು ಹೇಳಿಸಿ ತಮ್ಮ ಅಸೀಮ ಸಾಮರ್ಥ್ಯವನ್ನು ಆ ಜನಕ್ಕೆ ತೋರಿಸಿದರು. ಕೊನೆಗೆ ಹೇಮಾಡಪಂತ ಮತ್ತು ಬೋಪದೇವರು ಈ ಸೋದರರಿಗೆ 'ಶುದ್ಧಿಪತ್ರ'ವನ್ನು ನೀಡಿದರಾದರೂ ಆಳಂದಿಯ ಬ್ರಾಹ್ಮಣವರ್ಗ ಅದನ್ನು ಒಪ್ಪಲಿಲ್ಲ. ಪ್ರಾಯಶ್ಚಿತ್ತವೆಂದರೆ ಜೀವ ಬಿಡುವುದು ಎಂಬುದಾಗಿ ಹೇಳಿದರು. ಅದನ್ನು ಒಪ್ಪಿಕೊಂಡ ವಿಠ್ಠಲಪಂತ, ರುಕ್ಮಿಣಿಬಾಯಿ ದಂಪತಿಗಳು ತಮ್ಮ ಮಕ್ಕಳ ಭವಿಷ್ಯಕ್ಕಾಗಿ ಇಂದ್ರಯಾಣಿ ನದಿಗೆ ಹಾರಿ ಪ್ರಾಣತ್ಯಾಗ ಮಾಡಿದರು. ತಮ್ಮ ತಂದೆ ತಾಯಿಯರ ಪ್ರಾಣತ್ಯಾಗ ಪ್ರಸಂಗವನ್ನು ಕಣ್ಣಾರೆ ಕಂಡಿದ್ದ ಜ್ಞಾನೋಬಾದಿ ಸೋದರರು ಈ ಕರ್ಮಠ ಬ್ರಾಹ್ಮಣರ ಉಪಟಳಕ್ಕೆ ಬೇಸತ್ತು ಅನ್ಯಮಾರ್ಗದ ಬಗೆಗೆ ಯೋಚಿಸುತ್ತಿದ್ದರು. ಆ ಹೊತ್ತಿಗಾಗಲೆ ಹಿರಿಯ ಸೋದರ ನಿವೃತ್ತಿನಾಥನು ನಾಥಪಂಥದ ಗುರು ಗಹಿನಿನಾಥರಿಂದ ಸಂನ್ಯಾಸವನ್ನು ಸ್ವೀಕರಿಸಿದ್ದನು. ಈ ಗಹಿನಿನಾಥರು ಕನಿಫ್‌ನಾಥ ಅಥ ಕಾನ್ಹೋಬಾರ ಶಿಷ್ಯರಾಗಿದ್ದರು. ನಾಥಪಂಥದ ಸಂಸ್ಥಾಪಕ ಆದಿನಾಥನನ್ನು 'ತ್ರಿಪುರಾರಿ' ಎಂಬ ವಿಶೇಷಣದಿಂದ ಕರೆಯಲಾಗಿದೆ. 'ನಾಥ' ಎಂದರೆ 'ಒಡೆಯ' ಅಥವಾ 'ಸ್ವಯಂಸಿದ್ಧ' ಎಂಬ ಅರ್ಥವಿದೆ. ನಾಥಪಂಥದಲ್ಲಿ 'ನವನಾಥ ಪರಂಪರೆ'ಯು ಬಹಳ ಗಂಭೀರವಾದುದು. ಮಚ್ಛೀಂದ್ರ ಅಥವಾ ಮತ್ಸ್ಯನಾಥ. ಗೋರಕ್ಷನಾಥ ಅಥವಾ ಗೋರಖನಾಥ. ಜಲಂಧರನಾಥ ಅಥವಾ ಜಾನಪೀರ. ಕನೀಫನಾಥ ಅಥವಾ ಕಾನ್ಹೋಬಾ. ಗಹಿನೀನಾಥ ಅಥವಾ ಗೈಬಿಪೀರ. ಭಾರತೀನಾಥ ಅಥವಾ ರಾಜ ಭರತಾರಿ. ರೇವಣನಾಥ ಅಥವಾ ರೇವಣಸಿದ್ಧ ಅಥವಾ ಕಾಡಸಿದ್ಧ, ಚರಪತಿನಾಥ.

ನಾಗನಾಥ ಅಥವಾ ನಾಗೇಶನಾಥ ಎಂಬ ಒಂಬತ್ತು ಜನರು ಈ ನವನಾಥ ಪರಂಪರೆಯಲ್ಲಿ ಹೆಸರಿಸಲ್ಪಟ್ಟಿದ್ದಾರೆ. ಹೀಗೆ ನಾಥಪಂಥದ ದೀಕ್ಷೆಯನ್ನು ಪಡೆದುಕೊಂಡಿದ್ದ ನಿವೃತ್ತಿನಾಥನೇ ಮುಂದೆ ತನ್ನ ಎಲ್ಲಾ ಸೋದರರಿಗೂ ಗುರುವಾಗಿ ನಾಥಪಂಥದ ದೀಕ್ಷೆಯನ್ನು ನೀಡಿದನು. ನಾಥಪಂಥ ಬಹುಶ್ರುತ ಧಾರೆಯನ್ನು ಹೊಂದಿರುವ ನೆಲೆಯದ್ದಾಗಿದೆ. ಅದರ ಒಂದು ಧಾರೆ ಸಂತ ಜ್ಞಾನೇಶ್ವರರ ನೇತೃತ್ವದಲ್ಲಿ 'ವಿಷ್ಣುಸಹಿತ ಶಿವ' ಎಂಬ ಅದ್ವೈತ ಪ್ರಣೀತ ವೈದಿಕ ಧಾರೆಯನ್ನು ಹುಟ್ಟುಹಾಕಿ ಜನಪ್ರಿಯಗೊಳಿಸಿತು. ಮತ್ತೊಂದು ಧಾರೆ ಅಲ್ಲಮಪ್ರಭುದೇವರ ನೇತೃತ್ವದಲ್ಲಿ ಶಕ್ತಿವಿಶಿಷ್ಟಾದ್ವೈತ ಪ್ರಣೀತ ಶೈವಧಾರೆಯನ್ನು ಜನಪ್ರಿಯಗೊಳಿಸಿತು. ಈ ಅಲ್ಲಮರು ನಾಥಪಂಥದ ಗುರುಗಳಲ್ಲಿ ಶಿಷ್ಯರಾಗಿದ್ದರು ಎಂಬುದು ಗಮನಾರ್ಹ.

ಜ್ಞಾನೇಶ್ವರಾದಿ ಸೋದರರ ಕುಟುಂಬದವರಿಗೆ ನಾಥಪಂಥ ಹೊಸದಾದುದೇನು ಆಗಿರಲಿಲ್ಲ. ಈ ಪಂಥದಲ್ಲಿಯೇ ಹೆಸರಿಸಲಾಗಿರುವ ತ್ರಯಂಬಕ ಎಂಬುವವರು ಜ್ಞಾನೇಶ್ವರಾದಿ ಸೋದರರಿಗೆ ಮುತ್ತಜ್ಜ. ತ್ರಯಂಬಕರ ಮಗ ಗೋವಿಂದ ಪಂತ, ಇವರ ಮಗ ವಿಠ್ಠಲಪಂತ ಎಂಬುದಾಗಿ ಹೇಳಲಾಗಿದೆ. ಈ ವಿಠ್ಠಲಪಂತರು ವೈದಿಕ ಪರಂಪರೆಯ ಅನುಸಾರ ಸಂನ್ಯಾಸ ದೀಕ್ಷೆಯನ್ನು ಶ್ರೀಪಾದಸ್ವಾಮಿ ಎಂಬುವವರಿಂದ ಪಡೆದಿದ್ದರು. ಆಗ ವಿಠ್ಠಲಪಂತರ ಪೂರ್ವಾಶ್ರಮದ ಹೆಸರನ್ನು ಬಿಟ್ಟು 'ಚೈತನ್ಯಾಶ್ರಮ' ಎಂಬ ಹೆಸರನ್ನು ನೀಡಲಾಗಿತ್ತು. ಅನಂತರ ಅವರು 'ಎಲ್ಲಿ ಹೋದರೂ ಮುತ್ತುಗಕ್ಕೆ ಮೂರೇ ಎಲೆ' ಎಂಬಂತೆ ಅಲ್ಲಿಯೂ ಶಾಂತ ಮನಃಸ್ಥಿತಿಯನ್ನು ಕಾಣಲಾಗದೆ ವಾಪಸ್ಸು ಸಂಸಾರಕ್ಕೆ ಬಂದರು. ಇದು ಕೂಡಾ ಸಾಧ್ಯವಾದುದು ಗುರು ಶ್ರೀಪಾದಸ್ವಾಮಿಗಳ ಕಾರಣದಿಂದಲೇ. ಹೀಗೆ ಹಿಂದೆ ತಮ್ಮ ಕುಟುಂಬದವರು ಸಂಬಂಧ ಹೊಂದಿದ್ದಂತಹ ನಾಥಪಂಥದ ಮೂಲಕ ಜ್ಞಾನೇಶ್ವರಾದಿ ಸೋದರರು ಕೆಲವಾರು ವಿಶಿಷ್ಟ ತಾತ್ತ್ವಿಕ ವಿಚಾರಗಳ ಮೂಲಕ 'ವಾರಕರಿ' ಎಂಬ ಹೊಸ ಪಂಥವನ್ನು ಸ್ಥಾಪಿಸಿದರು. ಇದರಲ್ಲಿ ನಾಥಪಂಥದ ತತ್ತ್ವಗಳೊಂದಿಗೆ ಬ್ರಹ್ಮಸೂತ್ರದ ಆಧಾರದ ಮೇಲೆ ಹುಟ್ಟುಹಾಕಿದ್ದ ಶ್ರೀಶಂಕರಾಚಾರ್ಯರ ಅದ್ವೈತ ಮತ್ತು ಶ್ರೀರಾಮಾನುಜಾಚಾರ್ಯರ ವಿಶಿಷ್ಟಾದ್ವೈತ ಮತಗಳ ಅನೇಕ ಅಂಶಗಳೂ ಸೇರಿಕೊಂಡಿವೆ. ಆದರೆ ಜ್ಞಾನೇಶ್ವರರು ಅದ್ವೈತ ಮತ್ತು ವಿಶಿಷ್ಟಾದ್ವೈತ ಪಂಥದ ಎಲ್ಲಾ ತತ್ತ್ವಗಳನ್ನು ಹಾಗೆಯೇ ಸ್ವೀಕರಿಸಲಿಲ್ಲ. ಶಂಕರರ ಅದ್ವೈತದಲ್ಲಿ ಸ್ತ್ರೀ-ಶೂದ್ರರಿಗೆ ಮೋಕ್ಷದ ನೆಲೆಯನ್ನು ಎಲ್ಲಿಯೂ ಹೇಳಿಲ್ಲ. ಹಾಗೆಯೇ ರಾಮಾನುಜರ ವಿಶಿಷ್ಟಾದ್ವೈತದಲ್ಲಿನ ಸವ್ಯೂಹ, ನಿರ್ವ್ಯೂಹ ಚಿಂತನೆಗಳನ್ನು ಒಪ್ಪಿಕೊಂಡರೂ ಅಲ್ಲಿನ ಚಾತುರ್ವರ್ಣ್ಯ ಪದ್ಧತಿಯಲ್ಲಿನ ದೋಷಗಳನ್ನು ಒಪ್ಪಿಕೊಳ್ಳುವುದಿಲ್ಲ. ಜ್ಞಾನೇಶ್ವರ ಮಹಾರಾಜರು ಸಾಂಪ್ರದಾಯಿಕ ವ್ಯವಸ್ಥೆಗಳಲ್ಲಿನ ಕಠಿಣ ವಿಚಾರಗಳನ್ನು ಒಪ್ಪದೆ ಎಲ್ಲರಿಗೂ ಮೋಕ್ಷ ಮಾರ್ಗವನ್ನು ಸಾಧ್ಯವಾಗಿಸುವ ದಿಶೆಯಲ್ಲಿ ತಮ್ಮದೇ ಆದ ಹಲವಾರು ಚಿಂತನೆಗಳನ್ನು ಇಟ್ಟುಕೊಂಡು ವಾರಕರಿ ಪಂಥವನ್ನು ಹುಟ್ಟುಹಾಕಿದರು. ವಾರಕರಿ ಎಂದರೆ ಯಾವ ಕರ್ಮಠ ನಿಷ್ಠೆಯ ಆಚರಣೆಯೂ

ಇಲ್ಲದೆ ಸರಳ ಶುದ್ಧವಾದ ಭಕ್ತಿಯಿದು. ತಮ್ಮ ಆರಾಧ್ಯ ದೈವ ಶ್ರೀವಿಠ್ಠಲನನ್ನು ಪೂಜಿಸುವುದು. ಇದರಲ್ಲಿ ಯಾವುದೇ ಲಿಂಗಭೇದವಾಗಲಿ, ಜಾತಿ ಭೇದವಾಗಲಿ ಇಲ್ಲ. 'ಜ್ಞಾನದೇವ ರಚಿಲಾ ಪಾಯಾ' ಎಂಬ ಧ್ವನಿಯು ಎಲ್ಲೆಡೆಯೂ ಸರ್ವಮಾನ್ಯವಾಗಿದೆ. ಹಾಗೆಯೇ ಸಂತ ಏಕನಾಥನು ದೇಗುಲವಾದರೆ, ಸಂತ ತುಕಾರಾಮನು ಕಳಸವೆನಿಸಿ ಕೊಂಡಿದ್ದಾನೆ. ಈ ವಾರಕರಿ ಪಂಥದ ಆರಾಧ್ಯ ದೇವರು ಪಂಢರಪುರದ 'ಶ್ರೀವಿಠ್ಠಲ'. ಆದರೆ ಈ ದೇವರ ವರ್ಣನೆಯು ಮಾತ್ರ ದಶಾವತಾರಗಳಲ್ಲಿ ಇಲ್ಲ, ಪುರಾಣಗಳಲ್ಲಿ ಉಲ್ಲೇಖಗಳಿಲ್ಲ, ವಿಷ್ಣುಪುರಾಣದಲ್ಲಿಯೂ ಇಲ್ಲ. ಹಾಗೆಯೇ ವೇದ, ಶಾಸ್ತ್ರ, ಪುರಾಣ ಶ್ರುತಿ, ಸ್ಮೃತಿಗಳಲ್ಲಿಯೂ ಇಲ್ಲ. ಆದರೂ ಇಷ್ಟೊಂದು ಜನಪ್ರಿಯನಾಗಿ ಮಹಾರಾಷ್ಟ್ರದ ಭಕ್ತಜನರ ಮಾನಸಲೋಕದಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದುಕೊಂಡಿರುವ ದೇವರೆನಿಸಿದ್ದಾನೆ. ಹಾಗಾದರೆ ಈ ದೇವರು ಯಾರು ಎಂಬುದಕ್ಕೆ ಒಂದು ಕಥನವಿದೆ. ಭಕ್ತ ಶಿರೋಮಣಿ ಪುಂಡಲೀಕನನ್ನು ಭೇಟಿಮಾಡುವುದಕ್ಕಾಗಿ ದ್ವಾರಕೆಯಿಂದ ಬಂದ ದೈವ ಶೀಕೃಷ್ಣ. ಆಗ ತನ್ನ ತಂದೆ-ತಾಯಿಯರ ಸೇವೆಯಲ್ಲಿ ಇದ್ದಂತಹ ಭಕ್ತ ಪುಂಡಲೀಕನು ತನ್ನ ಸೇವೆ ಮುಗಿಯುವವರೆಗೂ ಇಟ್ಟಿಗೆಯ ಮೇಲೆ ನಿಲ್ಲುವಂತೆ ಸೂಚಿಸಿ ಇಟ್ಟಿಗೆಗಳನ್ನು ಎಸೆದ. ಆ ನಿಜಭಕ್ತನ ಸೂಚನೆಯ ಅನುಸಾರ ಅವುಗಳ ಮೇಲೆ ನಿಂತ ಶ್ರೀಕೃಷ್ಣನೇ ವಿಠ್ಠಲ ಎನಿಸಿಕೊಂಡು ಕಳೆದ ಇಪ್ಪತ್ತೆಂಟು ಯುಗಗಳಿಂದಲೂ ಇಲ್ಲಿಯೇ ಇದ್ದಾನೆ ಎಂಬ ಕಥನವೊಂದು ಮಾತ್ರ ನಮಗೆ ಸಿಕ್ಕಿರುವುದಾಗಿದೆ.

> 'ಪುಂಡಲಿಕೇ ಭಕ್ತೇ ತಾರಿಲೇ ವಿಶ್ವಜನ।
> ವೈಕುಂಠೀಚೀ ಮೂರ್ತೀ ಆಣಿಲೀ ಪಂಢರಪುರಪಾಟಣಾ॥
> ಕಾಯಾ ವಾಚಾ ಮನೇ ಜೀವೇ ಸರ್ವಸ್ವೇ ಉದಾರ।
> ಬಾಪರಖುಮಾದೇವೀವರ ವಿಠ್ಠಲಾಚಾ ವಾರೀಕರ॥'

(ಭಕ್ತ ಪುಂಡಲಿಕನು ತನ್ನ ಕಾರ್ಯದಿ ವಿಶ್ವಜನರ ದರುಶನಕೆ ನಿಲಿಸಿಹನಿಂತು ವೈಕುಂಠದ ಮೂರ್ತಿಯನು ಪಂಢರಪುರದೊಳು, ಕಾಯಾ, ವಾಚಾ, ಮನಸೊಳಗೆ ಜೀವಿಸಿರಲೆಂದು ಉದ್ಧಾರದಿ, ಬಾಪರಖುಮಾದೇವೀವರ ವಿಠ್ಠಲನ ವಾರಕರಿ.) ವಿಠ್ಠಲ, ವಿಠೋಬಾ, ವಿಠೂಮಾವುಲಿ ಎಂದು ಮುಂತಾಗಿ ಭಕ್ತಜನರಿಂದ ಸ್ತುತಿಸಲ್ಪಡುವ ಈ ದೇವರು ದಕ್ಷಿಣ ಭಾರತಾದ್ಯಂತ ಬಹಳ ದೊಡ್ಡ ಭಕ್ತ ಸಮುದಾಯವನ್ನು ಹೊಂದಿದೆ. 'ವಿಟ್+ಠ+ಲ'= ವಿಠ್ಠಲ ಎಂದರೆ 'ವಿತ್ತ ವೇದನಂ ಜ್ಞಾನಂ, ತೇನ ಠಾಃ ಶೂನ್ಯಃ ತಾನಲಾತಿ ಸ್ವೀಕರೋತಿ' (ಶ್ರೀಕಾಶಿನಾಥ ಉಪಾಧ್ಯೆ: ವಿಠ್ಠಲ ಋಗ್ಮಂತ್ರ ಸಾರಭಾಷ್ಯ). 'ವಿ+ಠೋಬಾ' ವಿಠೋಬಾ ಎಂದರೆ 'ಜ್ಞಾನ+ಆಕಾರ'. 'ಗರುಡ+ಆಸನ' (ಸಂತ ತುಕಾರಾಮ). ಹೀಗೆ ವಿಷ್ಣುವೇ ವಿಠ್ಠಲ ಎಂಬುದು ಎಲ್ಲಾ ಸಂತರ ಅಭಿಮತ. ವಿಷ್ಣು>ವಿಟ್ಟು>ವಿಟ್ಠಲ>ವಿಠ್ಠಲ ಎಂಬುದಾಗಿ ಶಬ್ದ ಸ್ವರೂಪವನ್ನು ಗುರುತಿಸಲಾಗಿದೆ. ವಿಷ್ಣುವಿನ ಅಷ್ಟಾವತಾರ ಮತ್ತು ಪೂರ್ಣಾವತಾರವಾದ ಶ್ರೀಕೃಷ್ಣ ದೇವರು ಮತ್ತು ಶ್ರೀವಿಠ್ಠಲ ದೇವರು ಒಂದೇ ಎಂಬ ನಂಬಿಕೆ ಸಂತ, ಭಕ್ತರದ್ದು. ಶ್ರೀಕೃಷ್ಣನ ಜನನ

ಶ್ರಾವಣವದ್ಯ ಅಷ್ಟಮಿ ಬುಧವಾರ, ಶ್ರೀವಿಠ್ಠಲನ ಆರಾಧನ ವಾರವೂ ಬುಧವಾರ. ವಿಠ್ಠಲ ದೇವರಿಗೂ ರುಕ್ಮಿಣಿ, ರಾಧೆಯರ ಕಥನಗಳಿವೆ. ವಿಠ್ಠಲ ಭಕ್ತಿ ಭಜನ ಸಂಪ್ರದಾಯವು ಜ್ಞಾನೇಶ್ವರಾದಿಗಳ ಕಾಲಕ್ಕೆ ಆಗಲೇ ಬಹಳ ಜನಪ್ರಿಯವಾಗಿತ್ತು. ನೇವಾಸೆ ಬಹಳ ಪ್ರಮುಖ ಸ್ಥಳ. ಅದನ್ನು ವಾರಕರಿ ಸಂಪ್ರದಾಯದ ಪ್ರಮುಖ ಅಂಶವಾಗಿ ಮಾಡಿಕೊಂಡ ಜ್ಞಾನೇಶ್ವರಾದಿ ಸಂತರು ಪಂಢರಪುರವನ್ನು ವಿಠ್ಠಲ ತಮ್ಮ ಅಭಂಗಗಳ ಭಜನೆಗಳ ಮೂಲಕ ಭಕ್ತಿಮಯಗೊಳಿಸಿದರು. ಆವರೆಗೆ ಪ್ರಮುಖ ಸ್ಥಳವಾಗಿದ್ದ ಪೈಠಣದಿಂದ ಪಂಢರಪುರಕ್ಕೆ ಧಾರ್ಮಿಕ ಸ್ಥಳವನ್ನು ವರ್ಗಾಯಿಸಲಾಯಿತು. ಇದರಿಂದಾಗಿ ಪೈಠಣದ ಕರ್ಮಠ ಬ್ರಾಹ್ಮಣ ವರ್ಗದವರ ಕಪಿಮುಷ್ಟಿಯಿಂದ ಮಹಾರಾಷ್ಟ್ರದ ಬ್ರಾಹ್ಮಣ ಮತ್ತು ಬಹುಸಂಖ್ಯಾತ ಬ್ರಾಹ್ಮಣೇತರ ವರ್ಗಕ್ಕೆ ಬಿಡುಗಡೆ ದೊರೆಯಿತು ಎಂಬುದಾಗಿಯೂ ಹೇಳಬಹುದು. ಆ ಹೊತ್ತಿಗಾಗಲೇ ನೇವಾಸೆಯಲ್ಲಿ ವಿಠ್ಠಲ ಭಜನಾ ಮಂಡಳಿಯು ಇತ್ತು. ಅದರ ಸ್ವರೂಪದಲ್ಲಿ ತಮ್ಮ ಆರಾಧ್ಯ ದೈವ ಶ್ರೀವಿಠ್ಠಲನನ್ನು ಕುರಿತು ಅಭಂಗಗಳನ್ನು ರಚಿಸಿ ಹಾಡುತ್ತಾ ಪಂಢರಪುರದತ್ತ ನಡೆದರು. ಏಕಶಿಲೆಯಲ್ಲಿ ರೂಪುಗೊಂಡು ಸಮಪಾದಚರಣಗಳನ್ನು ಹೊಂದಿರುವ ಅಭಂಗ ಸ್ವರೂಪಿ ದೈವವೇ ಶ್ರೀವಿಠ್ಠಲ.

ಪಂಢರಪುರಕ್ಕೆ ಆಷಾಢ, ಕಾರ್ತಿಕ ಮತ್ತು ಮಾಘ ಮತ್ತು ಚೈತ್ರ ಏಕಾದಶಿಗಳಂದು ವಾರಿ ಹೋಗುವ ಪದ್ಧತಿಯು ಜ್ಞಾನೇಶ್ವರರಿಗೂ ಪೂರ್ವದಿಂದಲೇ ಇತ್ತು ಎಂಬುದಾಗಿ ಕೆಲವರು ಹೇಳುತ್ತಾರೆ.

'ಮಹಾಯೋಗಪೀಠೇ ತಟೇ ಭೀಮ್ಮರಥ್ಯಾಂ।
ವರಂಪುಂಡರೀಕಾಯ ದಾತುಂ ಮುನೀದ್ರೈಃ।
ಸಮಾಗತ್ಯ ನಿಷ್ಟಂತಮನಾನಂದಕಂದಂ।
ಪರಬ್ರಹ್ಮಲಿಂಗಂ ಭಜೇ ಪಾಂಡುರಂಗಂ॥'

ಎಂಬ 'ಪಾಂಡುರಂಗಾಷ್ಟಕಂ' ಕೃತಿಯ ಉಲ್ಲೇಖವನ್ನು ಗಮನಿಸಿದಾಗ ವಾರಕರಿ ಸಂಪ್ರದಾಯವು ಸುಮಾರು ಆರು, ಏಳನೆಯ ಶತಮಾನದ ಹೊತ್ತಿಗಾಗಲೇ ಚಾಲ್ತಿಯಲ್ಲಿತ್ತು. ಬಹಳ ದೂರದ ಸ್ಥಳಗಳಿಂದ ಜನರು ವಾರಿಗಳಾಗಿ ಪಂಢರಪುರದ ಶ್ರೀವಿಠ್ಠಲನ ದರ್ಶನಕ್ಕೆ ಬರುತ್ತಿದ್ದರು ಎಂಬುದಾಗಿ ಹೇಳಬಹುದು. ಇನ್ನು ಪಂಢರಪುರದ ಶ್ರೀವಿಠ್ಠಲ ದೇವಾಲಯದ ಪ್ರಾಚೀನ ಉಲ್ಲೇಖವು ನಮಗೆ ಕ್ರಿ.ಶ. ಸು.೫೧೬ರ ತಾಮ್ರಪಟದಲ್ಲಿ ಇದ್ದು, ಅದನ್ನು ಮೈಸೂರು ಸರ್ಕಾರದ ೧೯೨೯ರಲ್ಲಿ ಪುರಾತತ್ತ್ವ ಇಲಾಖೆಯ ವತಿಯಿಂದ ಪ್ರಕಟಿಸಲಾಗಿದೆ. ಈ ತಾಮ್ರಪಟದ ಪ್ರಕಾರ ಅಂದು ದೇವದತ್ತ ಎಂಬಾತನು ಪಂಢರಪುರದ ದೇವಾಲಯದ ಪ್ರಮುಖ ಅಧಿಕಾರಿಯಾಗಿದ್ದನು. ಆತನು ಅಂದು ವಾರಕರಿಗಳಾಗಿ ಬಂದು ಹೋಗುವವರ ಬಗೆಗೆ ಉಲ್ಲೇಖಿಸಿದ್ದಾನೆ. ಈ ಪ್ರಕಾರ ಈ ದೇವಾಲಯದಲ್ಲಿನ ವಿಠ್ಠಲ ಮೂರ್ತಿಯು ಸುಮಾರು ನಾಲ್ಕು, ಐದನೆಯ ಶತಮಾನದಷ್ಟು ಹಳೆಯದಾಗಿರಬಹುದು ಎಂಬುದಾಗಿ ಊಹಿಸುವುದಕ್ಕೆ ಸಾಧ್ಯವಿದೆ. ಆದರೆ ವಾರಕರಿ ಪಂಥವು ಸಮಾಜೋ-ಧಾರ್ಮಿಕ ಚಳವಳಿಯಾಗಿ ಭಕ್ತಿಪೂರ್ಣ

ನೆಲೆಯಿಂದ ರೂಪುಗೊಂಡುದು ಮಾತ್ರ ಸಂತ ಜ್ಞಾನೇಶ್ವರರಿಂದಲೇ ಎಂಬುದು ಗಮನಾರ್ಹ.

'ಕಾಶಿಯೇ ಕನೌಜು, ದ್ವಾರಕೆ ಗುಜರೂ, ಕಾನಡಾ ವಿಠ್ಠಲೂ ಪಂಢರಿಯೇ', 'ತೀರ್ಥ ವಿಠ್ಠಲ, ಕ್ಷೇತ್ರ ವಿಠ್ಠಲ', 'ಐಸೇ ತೀರ್ಥ ಉತ್ತಮೋತ್ತಮ। ಆಣಿಕ ನಾಹೀ ಯಾ ಸಮ। ಶಿವಪೀಠ ಹೇ ಮನೋರಮ। ಅಲಂಕಾಪುರೀ ಹೇ ದೇಖ' ಎಂಬ ಉಲ್ಲೇಖಗಳು ಕಾಶಿ, ದ್ವಾರಕೆಗಳ ಹಾಗೆಯೇ ಅಸೀಮ ಮತ್ತು ಅಮೇಯ ಶ್ರೀವಿಠ್ಠಲನು ನೆಲೆಸಿರುವ ಪಂಢರಪುರವೂ ವಿಶಿಷ್ಟ ಧಾರ್ಮಿಕ ಸ್ಥಳ ಎಂಬುದು ಇದರಿಂದ ವಿದಿತವಾಗುವುದು. 'ತ್ರಿಭುವ ನಾಮೇ ತೀನ ಅಕ್ಷರೇ ವಿಠ್ಠಲ ನಾಮಾಚೇ, ಖ್ಯಾತಿ ತಯಾಚೀ ಪಾತಕ ಜಳತಿಲ ಜನ್ಮೋಜನ್ಮೀಚೇ' (ವಿಠ್ಠಲ ಎಂಬ ಮೂರು ಅಕ್ಷರಗಳ ಉಚ್ಚಾರಣೆಯು ಮೂರು ಲೋಕಕೆ ಸಮ, ಅದನು ಪಠಿಸಲು ಸುಡುವುದು ಜನ್ಮಜನ್ಮಗಳ ಪಾತಕಗಳೆಲ್ಲ) ಎಂಬ ಸಾರ್ಥಕ ಭಾವವು ಸಂತರಲ್ಲಿ ವ್ಯಕ್ತವಾಗಿದೆ. ಇನ್ನು ಸಂತ ಜ್ಞಾನೇಶ್ವರರೇ ತಮ್ಮ ಒಂದು ಅಭಂಗದಲ್ಲಿ ಹೇಳಿರುವಂತೆ 'ಕಾನಡಾ ವಿಠ್ಠಲೂ ಕರುನಾಟಕೂ, ತ್ಯಾನೇ ಮಲಾ ಲಾವಿಲಾ ವೇಧೂ', 'ಬಾಪ ರಖುಮಾದೇವಿವರಾ ವಿಠ್ಠಲಾಸೀ ಭೇಟೀ। ಸಂಸಾರಾಸೀ ತುಟೀ ಜಾಲೀ ಗೇ ಮಾಯೇ।', 'ಸೌಭಾಗ್ಯ ಸುಂದರ ಗುಣಲಾವಣ್ಯ ಸಾಗರೂ', 'ನಾಚತಾ ಪಂಢರೀಸೀ ಜಾವೂ ರೇ ಖೇಳೀಯಾ। ವಿಠ್ಠಲ ರಖುಮಾಈ ಪಾಹೂರೇ', 'ಕಾಯಾ ವಾಚಾ ಮನೇ ಜೀವೇ ಸರ್ವಸ್ವೇ ಉದಾರ। ಬಾಪರಖುಮಾದೇವೀವರೂ ವಿಠ್ಠಲಾಚಾ ವಾರೀಕರ॥' 'ತೇ ಮಾರ್ಗೀ ಸೋಯರೇ ಸಜ್ಜನ ಸಾಂಗಾತೀ।, ಜೇ ಕಾ ಆಠವಿತೀ ಪಾಯ ವಿಠೋಬಾಚೇ'. 'ಚಂದ್ರಭಾಗೇ ಸ್ನಾನ ವಿಧೀ ತೋ ಹರಿಕಥಾ। ಸಮಾಧಾನ ಚಿತ್ತಾ ಸರ್ವ ಕಾಳ॥', 'ಸಂಪತ್ತೀ ಸೋಹಳಾ ನಾವಡೇ ಮನಾಲಾ। ಲಾಗಲಾ ಟಕಳಾ ಪಂಢರೀಚಾ।'. ಎಂಬುವು ಆತ್ಮಸಮರ್ಪಣದ ಆತ್ಯಂತಿಕ ಅಭಿವ್ಯಕ್ತಿಯಾಗಿವೆ. ವಾರಕರಿಗಳು ಪಾಲಿಸಬೇಕಾದ ಕೆಲವು ಅಂಶಗಳನ್ನು ಅವರು ಆತ್ಮಿಕವಾಗಿ ಅನುಸರಿಸುವಂತೆ ಪ್ರಬೋಧಿಸಿದರು: 'ಸತ್ಯವನ್ನು ಹೇಳುವುದು, ಪರಸ್ತ್ರೀಯನ್ನು ತಾಯಿಯ ಸಮಾನವಾಗಿ ನೋಡುವುದು, ಏನಾದರೂ ತಪ್ಪುಗಳು ತಿಳಿಯದೆ ಉಂಟಾದರೆ ಅದನ್ನು ವಿಠ್ಠಲ ಮಾತೆಯಲ್ಲಿ ನಿವೇದಿಸಿಕೊಂಡು ಕ್ಷಮೆ ಕೋರುವುದು, ನಿತ್ಯವೂ ಶುದ್ಧ ಮತ್ತು ಸಾತ್ವಿಕವಾದ ಆಹಾರವನ್ನು ಸೇವನೆ ಮಾಡುವುದು, ವರ್ಷದಲ್ಲಿ ಒಮ್ಮೆಯಾದರೂ ಪಂಢರಿಗೆ ಮತ್ತು ಆಳಂದಿಗೆ ವಾರಿ ಹೋಗುವುದು, ಏಕಾದಶಿ ವ್ರತವನ್ನು ತಪ್ಪದೆ ಪಾಲಿಸುವುದು, ಪ್ರತಿದಿನವೂ 'ಜೈ ಜೈ ರಾಮಕೃಷ್ಣಹರಿ' ಎಂಬ ಮಂತ್ರವನ್ನು ೧೦೮ ಬಾರಿ ಪಠಿಸುವುದು, ಹರಿಪಾಠವನ್ನು ಉಚ್ಚರಿಸದೆ ಭೋಜನ ಮಾಡಬಾರದು. ಜ್ಞಾನೇಶ್ವರಿ–ಏಕನಾಥಿ ಭಾಗವತ–ಶ್ರೀತುಕಾರಾಮ ಗಾಥಾ ಗ್ರಂಥಗಳನ್ನು ನಿಯಮಿತವಾಗಿ ವಾಚನ ಮಾಡುವುದು. ಜ್ಞಾನದೇವರ ಪಸಾಯದಾನವನ್ನು ಹೇಳದೆಯೆ ನಿದ್ರೆ ಮಾಡದಿರುವುದು. ನಿಯಮದಂತೆ ಸ್ನಾನ ಮಾಡಿದ ಮೇಲೆ ಗೋಪಿಚಂದನ ಧರಿಸುವುದು. ಹಣೆಗೆ ಗಂಧವನ್ನು ಹಚ್ಚಿಕೊಂಡ

ಮೇಲೆಯೇ ವ್ಯವಹಾರ ವನ್ನು ಆರಂಭ ಮಾಡುವುದು, ಪ್ರಪಂಚದಲ್ಲಿ ತನ್ನ ಪಾಲಿಗೆ ಬಂದ ಕಾರ್ಯವನ್ನು ಶ್ರೀವಿಠ್ಠಲನ ಸಾಕ್ಷಿಯಾಗಿ ಪ್ರಾಮಾಣಿಕವಾಗಿ ಮಾಡಿರುವೆನೋ ಇಲ್ಲವೋ ಎಂಬುದನ್ನು ನಿವೇದನೆ ಮಾಡುವುದಕ್ಕಾಗಿ ಪ್ರತಿವರ್ಷವೂ ವಾರಿ ಯಾತ್ರೆಗೆ ಹೋಗುವುದು' ಈ ಮೊದಲಾದ ಅಂಶಗಳು ಪ್ರತಿಯೊಬ್ಬ ವಾರಿಯಲ್ಲಿಯೂ ಆತ್ಮಸಂಯೋಗಗೊಂಡಿದ್ದವು. ಹಿಂದೆ ಒಂದು ಮಾತು ಪ್ರಚಲಿತದಲ್ಲಿತ್ತು, 'ವಾರಕರೀ ವಾರೀತ ಪಾಹಾವಾ; ವಾರೀತ ನ ದಿಸಲಾ ತರ ವಿಠ್ಠಲ ಚರಣೀ ರುಜೂ ಝಾಲ ಸಮಜಾವಾ. (ವಾರಕರಿಯನ್ನು ವಾರಿಯಲ್ಲಿ ನೋಡಬೇಕು; ವಾರಿಯಲ್ಲಿ ಕಾಣದೆ ಇದ್ದರೆ ವಿಠ್ಠಲನ ಚರಣದಲ್ಲಿ ಲೀನಗೊಂಡಿಹನು ಎಂಬುದಾಗಿ ಭಾವಿಸಬೇಕು.) ಸಂತರುಗಳಾದ ಗೋರಾ ಕುಂಭಾರ, ಜನೀ ದಾಸಿ, ಚೋಖಾಮೇಳ, ಸಾವತಾ ಮಾಳಿ, ನರಹರಿ ಸೋನಾರ, ಕಾನ್ಹೋಪಾತ್ರರಂತಹ ಸಾಮಾನ್ಯ ಜನವರ್ಗದ ಪ್ರತಿನಿಧಿತ್ವದಲ್ಲಿ ಮಹತ್ವದ ವಿಠ್ಠಲ ಭಕ್ತಿ ಮಾರ್ಗವೊಂದನ್ನು ರೂಪಿಸಿದರು.

ಭಕ್ತಿ ಮತ್ತು ಕರ್ಮ ಯೋಗವನ್ನು ಸಂಲಗ್ನಗೊಳಿಸುವ ನಿಟ್ಟಿನಲ್ಲಿ ಸಂತ ಜ್ಞಾನೇಶ್ವರರು 'ಭಗವದ್ಗೀತೆ'ಯನ್ನು 'ಜ್ಞಾನೇಶ್ವರಿ'ಯಾಗಿ ರೂಪಿಸಿದರು. 'ಭಗವದ್ಗೀತೆ'ಯು ಮರಾಠಿಯಂತಹ ಪ್ರಾದೇಶಿಕ ಭಾಷೆಯಲ್ಲಿ ಮೊತ್ತಮೊದಲಿಗೆ ವಿಸ್ತಾರಾನುವಾದದ ಮೂಲಕ ರೂಪಿಸಿದ ಮಹಾನ್ ಶ್ರೇಯಸ್ಸು ಸಂತ ಜ್ಞಾನೇಶ್ವರರಿಗೆ ಸಲ್ಲುವುದು. 'ಉಭಾರಿಲಾ ಧ್ವಜ ತಿಹೀ ಲೋಕಾವರೀ। ಐಸೀ ಚರಾಚರಿ ಕೀರ್ತಿ ಜ್ಯಾಚೀ॥' ಎಂಬುದಾಗಿ ಸಂತ ಸಮೂಹವು ಅವರನ್ನು ಶ್ಲಾಘಿಸಿದೆ. ಕರ್ಮ, ಜ್ಞಾನ, ಭೋಗ ಮತ್ತು ಭಕ್ತಿಗಳ ನೆಲೆಯಿಂದ ಸಂತ ಜ್ಞಾನೇಶ್ವರರು ತಮ್ಮ ಕರ್ಮಯೋಗ ತತ್ತ್ವವನ್ನು ಬೋಧಿಸಿದ್ದಾರೆ. ಮೂಲತಃ ಕರ್ಮಯೋಗಿ, ಜ್ಞಾನಯೋಗಿ, ಭಕ್ತಿಯೋಗಿ, ವಿರಕ್ತಿಯೋಗಿ ಮತ್ತು ಅನುಭಾವಿ ಅದ್ವೈತಿಯಾದ ಜ್ಞಾನೇಶ್ವರರು ವಿಠ್ಠಲ-ರುಕ್ಮಿಣಿಯರನ್ನು ಶಿವ ಮತ್ತು ಶಕ್ತಿಯರ ಅಪರೂಪದ ದಾಂಪತ್ಯವಾಗಿ ತಮ್ಮ ಕೃತಿ 'ಜ್ಞಾನೇಶ್ವರಿ'ಯಲ್ಲಿ ಚಿತ್ರಿಸಿದ್ದಾರೆ. 'ಕಣ್ಣುಗಳು ಎರಡಿದ್ದರೂ ನೋಡುವ ನೋಟವು ಎರಡಲ್ಲ, ಒಂದೇ; ದಡಗಳು ಎರಡಿದ್ದರೂ ನದಿಯು ಮಾತ್ರ ಒಂದೇ; ತುಟಿಗಳು ಎರಡಿದ್ದರೂ ಹೊರಡುವ ಮಾತು ಮಾತ್ರ ಒಂದೇ' ಎಂಬಂತಹ ಅದ್ವೈತ ಪೂರ್ಣ ದೃಷ್ಟಿಯು ಜ್ಞಾನೇಶ್ವರರದು.

'ವೇದು ಸಂಪನ್ನ ಹೋಯೇ ಠಾಈ। ಪರೀ ಕೃಪಣು ಆನ ನಾಹೀ।
ಜೇ ಕಾನೀ ಲಾಗಲಾ ತಿಹೀ। ವರ್ಣಾಚಾಂಚೀ॥
ಏರಾ ಭವವ್ಯಥಾ ಠೇಲೇಯಾ। ಸ್ತ್ರೀ ಶೂದ್ರಾದಿಕಾ ಪ್ರಾಣಿಯಾ।
ಅನವಸರೂ ಸಾಂಡೂನಿಯಾ। ಅಸೇ ನವ್ಹೇ॥'

(ವೇದವು ಸಂಪನ್ನವಾದುದು, ಅಂತೆ ಕೃಪಣವೂ ಅಹುದು. ಕೇಳುತಿಹುದು ಕಿವಿಗಳಿಗೆ, ಮೂರು ವರ್ಣಗಳವರಿಗಷ್ಟೆ. ಉಳಿದವರಿಗೆಲ್ಲ ತಂದಿದೆ ಭವವ್ಯಥೆ, ಸ್ತ್ರೀಶೂದ್ರಾದಿಗಳನು ಪ್ರಾಣಿಗಳಂದದಿ. ನೀಡಿಲ್ಲ ಅವರಿಗೆ ಅವಕಾಶ, ಅಂತಲ್ಲವು ಈ ಪರಿವೇಶ) ಹೀಗೆ ಅಭಂಗ ಕೀರ್ತನೆಗಳನ್ನು ಅವರು ಸಮಾಜ ಪರಿವರ್ತನ ಮಾಧ್ಯಮವಾಗಿ ಮಾಡಿಕೊಂಡು ಸಮಸ್ತ ಸಂತರ ಒಡಗೂಡಿ ಸರ್ವರಲ್ಲಿಯೂ ಅಹಂಕಾರ ನಿರಸನಕ್ಕೆ ಮತ್ತು ಕರ್ಮಪ್ರಧಾನ

ಭಕ್ತಿಭಾವವನ್ನು ಪ್ರೋಜ್ವಲಗೊಳಿಸಿದರು. ಈ ಹಿನ್ನೆಲೆಯಿಂದಾಗಿಯೇ ಸಂತ ಜ್ಞಾನೇಶ್ವರರು ಶ್ರೀಶಂಕರಾಚಾರ್ಯರ ಅದ್ವೈತದಲ್ಲಿನ ಈ ಲೋಪವನ್ನು ಅರಿತು ತಮ್ಮ ಪಂಥದಲ್ಲಿ ಭಿನ್ನವಾದ ನಿಲವೊಂದನ್ನು ರೂಪಿಸಿ, ಸ್ತ್ರೀ ಶೂದ್ರಾದಿಗಳೆಲ್ಲರೂ ವಾರಕರಿ ಪಂಥದಲ್ಲಿ ಭಾಗವಹಿಸುವುದಕ್ಕೆ ಅವಕಾಶ ಸಾಧ್ಯತೆಯನ್ನು ರೂಪಿಸಿದರು. ಈ ಪಂಥದಲ್ಲಿ ನಾಥಪಂಥದ ಸಾಮಾಜಿಕ ವ್ಯವಸ್ಥೆ ಮತ್ತು ಕಾಶ್ಮೀರ ಶೈವದ ಅನುಭಾವಿಕ ನೆಲೆ ಸಮಾವೇಶಗೊಂಡಿವೆ. 'ಭಕ್ತ–ದೇವರು–ಮೋಕ್ಷ' ಎಂಬ ಸರಳವಾದ ಭಕ್ತಿಯ ನೆಲೆಯಲ್ಲಿ ಸಂತ ಜ್ಞಾನೇಶ್ವರರ 'ಜ್ಞಾನೇಶ್ವರಿ' ಕಾವ್ಯವು ರಚನೆಗೊಂಡಿದೆ. ಸಂತ ಜ್ಞಾನೇಶ್ವರರಿಗೆ ವಿಶ್ವಸೌಂದರ್ಯದ ಪ್ರತೀಕ, ಸಂತ ನಾಮದೇವರಿಗೆ ಪ್ರೇಮ ಸ್ವರೂಪಿ, ಸಂತ ಏಕನಾಥರಿಗೆ ಲೀಲಾವತಾರಿ, ಸಂತ ತುಕಾರಾಮರಿಗೆ ಪತಿತರ ಪಾಲಕ ದೇವರಾಗಿ ಶ್ರೀವಿಠ್ಠಲ ಕಾಣಿಸಿದ್ದಾನೆ.

'ಅಮೃತಾಹುನೀ ಗೋಡ ನಾಮ ತುಝೀ ದೇವಾ ನಾಮ ತುಝೀ ದೇವಾ।
ಮನ ಮಾಝೆ ಕೇಶವ ಕಾ ಬಾ ನೇಘೇ।' – ಸಂತ ಜ್ಞಾನೇಶ್ವರ
(ಅಮೃತಕಿಂತಲೂ ಸಿಹಿಯು ನಿನ್ನ ನಾಮವು ದೇವಾ, ನಿನ್ನ ನಾಮವದು ದೇವ.
ಅಂತಿರಲು ನನ್ನ ಮನವದೇಕೆ ಪಠಿಸದು ಕೇಶವ)
'ನಾಮ ಗಾಊ ನಾಮ ಘ್ಯಾಊ। ನಾಮೇ ವಿಠೋಬಾಸೀ ಪಾಹೂ'
– ಸಂತ ನಾಮದೇವ
(ನಾಮದೇವನು ಹಾಡಿಹನು, ನಾಮದೇವನು ಹಿಡಿದಿಹನು, ನಾಮದೇವನಿಂತು
ವಿಠ್ಠಲನ ನೋಡಿಹನು)
'ಆನಂದಾಚೇ ಡೋಹೇ ಆನಂದ ತರಂಗ।
ಆನಂದಾಚೇ ಅಂಗ, ಆನಂದಾಚೇ ಅಂಗ...

ಸಂತ ತುಕಾರಾಮ (ಆನಂದದಿ ಹರಿದಿಹುದು ಆನಂದ ತರಂಗವು, ಆನಂದದಿ ಅಂಗವು, ಆನಂದದಿ ಅಂಗವು) ಸಂತ ಜ್ಞಾನೇಶ್ವರರ ಈ ವಿಶಿಷ್ಟ ಭಕ್ತಿ ಚಳವಳಿಯಿಂದಾಗಿ ಸಕಲ ಮಹಾರಾಷ್ಟ್ರವು ವಿಶಿಷ್ಟ ಭಕ್ತಿಭೂಮಿಯಾಗಿ ಮಾರ್ಪಾಟಾಯಿತು. ಆ ಹೊತ್ತಿಗಾಗಲೇ ಅದ್ವೈತ ಪಂಥದ ಶ್ರೀಶಂಕರಾಚಾರ್ಯರ ಅನುಯಾಯಿಗಳಾದ ಶ್ರೀಅಚಲಾನಂದಸ್ವಾಮಿ ಎಂಬುವವರು ಕರ್ನಾಟಕ ಮತ್ತು ತಮಿಳುನಾಡಿನ ಹಲವು ಪ್ರದೇಶಗಳಲ್ಲಿ ವಿಠ್ಠಲನ ಆರಾಧನ ಸಂಪ್ರದಾಯವನ್ನು ಆರಂಭಿಸಿದ್ದರು. ಅವರು ಸ್ಥಾಪಿಸಿದ ಮಠಗಳ ಉಲ್ಲೇಖವು ಇಂತಿದೆ: ೧. ಪಂಡರಿಗೆ (ಪಂಢರಪುರ), ೨. ಕಳಸಾ (ಚಿಕ್ಕಮಗಳೂರು), ೩. ವಿದ್ಯಾನಗರ ಅಥವಾ ವಿಜಯನಗರ (ಬಳ್ಳಾರಿ), ೪. ಕೆಳದಿ (ಶಿವಮೊಗ್ಗ), ೫. ರಾಮೇಶ್ವರ (ತಮಿಳುನಾಡು) ೬. ಕಾಶಿ (ಉತ್ತರಪ್ರದೇಶ). ಹಾಗೆಯೇ ವಿಶಿಷ್ಟಾದ್ವೈತ ಪಂಥದ ಅನುಯಾಯಿಗಳು ವೆಂಕಟೇಶ್ವರ>ವಿಠ್ಠಲ ಒಂದೇ ಎಂಬ ನೆಲೆಯಿಂದಲೂ ವಿಠ್ಠಲನ ಆರಾಧನೆಯನ್ನು ಮಾಡುತ್ತಿದ್ದರು. ಜ್ಞಾನೇಶ್ವರಾದಿಗಳ ನಂತರ ಮುಂದೆ ದ್ವೈತ ಪಂಥದ ಸ್ಥಾಪಕರಾದ ಶ್ರೀ ಮಧ್ವಾಚಾರ್ಯರು ಕೂಡಾ ಉಡುಪಿಯ ಅಷ್ಟ ಮಠಗಳಲ್ಲಿ ಬರುವ ಪಲಮಾರು, ಪುತ್ತಿಗೆ ಮತ್ತು ಶಿರೂರ ಎಂಬ ಮೂರರಲ್ಲಿ ಶ್ರೀವಿಠ್ಠಲನ ಮೂರ್ತಿಗಳನ್ನು ಮಾಡಿಸಿ ಆರಾಧನೆಗೆ ಚಾಲನೆ ನೀಡಿದರು. ಅಲ್ಲದೆ

ತಮ್ಮ ಶಿಷ್ಯರಿಗೆ 'ವಿಠ್ಠಲ' ಎಂಬ ಅಂಕಿತದ ಮೂಲಕ ಭಕ್ತಿ ಭಜನಾ ಸಾಹಿತ್ಯವನ್ನು ರಚಿಸುವಂತೆ ಆದೇಶ ನೀಡಿದ್ದರು ಎನ್ನಲಾಗಿದೆ. ಮುಂದೆ ಮಧ್ವಾಚಾರ್ಯರ ಆದೇಶದಂತೆ ಮೂವತ್ತೇಳು ಜನ ದಾಸರು ವಿಠ್ಠಲನ ಅಂಕಿತ ನಾಮವನ್ನು ಇಟ್ಟುಕೊಂಡು ಕೀರ್ತನೆಗಳನ್ನು ರಚಿಸಿದರು. ಅವರಲ್ಲಿ ಶ್ರೀಪುರಂದರದಾಸರು ಬಹಳ ಪ್ರಮುಖರಾದವರು.

ಕರ್ನಾಟಕದ ಹರಿದಾಸ ಪಂಥ

ಕರ್ನಾಟಕದಲ್ಲಿ ಹರಿದಾಸ ಸಂಪ್ರದಾಯವು ಕ್ರಿ.ಶ.ಸು. ೯ನೆಯ ಶತಮಾನದಿಂದಲೇ ಅದ್ವೈತಿ ಅಚಲಾನಂದರ ಕಾಲದಿಂದಲೇ ಆರಂಭಗೊಂಡಿತೆಂದು ಜಿ.ವರದರಾಜರಾವ್ ಅವರು ತುಕೇಕೇರಿ ಹಸ್ತಪ್ರತಿಯ ಆಧಾರದಿಂದ ದಾಖಲಿಸಿದ್ದಾರೆ. ಮುಂದೆ ಶ್ರೀನರಹರಿತೀರ್ಥರ ಮೂಲಕವಾಗಿ ಈ ಹರಿದಾಸ ಪಂಥಕ್ಕೆ ಹೊಸ ತೀವ್ರತೆಯು ದೊರೆಯಿತು. ಹರಿದಾಸ ಪರಂಪರೆಯಲ್ಲಿ ನಾಲ್ಕು ಘಟ್ಟಗಳನ್ನು ಗುರುತಿಸಲಾಗಿದೆ:

೧. ಶ್ರೀಪಾದರಾಜ ಪೂರ್ವ ಯುಗ (ಕ್ರಿ.ಶ. ೮೭೭–೧೪೫೦)

೨. ಶ್ರೀಪಾದರಾಜ ಯುಗ (ಕ್ರಿ.ಶ. ೧೪೫೧ ರಿಂದ ೧೫೬೫)

೩. ಶ್ರೀವ್ಯಾಸರಾಜ ತೀರ್ಥ, ಶ್ರೀ ಪುರಂದರದಾಸ, ಶ್ರೀಕನಕದಾಸ

೪. ಶ್ರೀವಿಜಯದಾಸರ ಯುಗ (ಕ್ರಿ.ಶ. ೧೫೬೬ ರಿಂದ ೧೮೮೯)

೫. ಶಿಷ್ಯ-ಪ್ರಶಿಷ್ಯ ಯುಗ (ಕ್ರಿ.ಶ. ೧೮೧೦ರಿಂದ ಮುಂದೆ)

ಹರಿದಾಸ ಪಂಥದವರು ತಮ್ಮ ಈ ನೆಲೆಗೆ ರಾಮಾಯಣದ ಶ್ರೀಹನುಮಾನ್ ದೈವವನ್ನು ಅನುಕರಿಸಿದ್ದಾರೆ. 'ದಾಸೋಹಂ ಕೋಸಲೇಂದ್ರಸ್ಯ' ಎಂಬ ಶ್ರೀಹನುಮಾನ್ ದೇವರ ಉವಾಚವನ್ನು ಆಧರಿಸಿ ತಾವು ಶ್ರೀಹರಿಯ ದಾಸರು ಎಂಬುದಾಗಿ ಗುರುತಿಸಿಕೊಂಡಿದ್ದಾರೆ.

ದಾಸಪಂಥದಲ್ಲಿ ಪುರಂದರದಾಸ ಮತ್ತು ಕನಕದಾಸರ ಹೆಸರುಗಳು ಬಹಳ ಪ್ರಮುಖವಾದವು. 'ದಾಸರೆಂದರೆ ಪುರಂದರದಾಸರಯ್ಯಾ' (ವ್ಯಾಸರಾಜ ತೀರ್ಥ) ಮತ್ತು 'ನಾಡಾಡಿಯಂತೆಯೇ ಮಾಡಿಬಿಟ್ಟ ಇವಗೆ ನಾಡೆಲ್ಲ ಹುಡುಕಿದರು ಈಡಾರ ಕಾಣೆ' (ಪುರಂದರದಾಸ) ಎಂಬ ಉಲ್ಲೇಖಗಳು ಇವರಿಬ್ಬರೂ ದಾಸರ ಹಿರಿಮೆ ಮತ್ತು ಗರಿಮೆಯ ದ್ಯೋತಕಗಳಾಗಿವೆ. ಪುರಂದರದಾಸ ಮತ್ತು ಕನಕದಾಸರು ಮುಖ್ಯವಾಗಿ ದಾಸಪೀಠದ ಅಧ್ವರ್ಯುಗಳು. ಇಬ್ಬರೂ ವೈಚಾರಿಕ ಆಯಾಮದಲ್ಲಿಯೇ ಮನುಷ್ಯ ಬದುಕಿಗೆ ಅತ್ಯಗತ್ಯವಾದ ಶುದ್ಧ ಭಕ್ತಿ ಮತ್ತು ಅಧ್ಯಾತ್ಮಿಕ ದರ್ಶನದ ಮೂಲಕ ಇಡೀ ನಾಡಿಗೆ ಹೊಸ ಬಗೆಯಲ್ಲಿ ಚೇತನ ನೀಡಿದವರಾಗಿದ್ದಾರೆ. ಪುರಂದರದಾಸರು ವ್ಯಾಸರಾಯ ತೀರ್ಥರಿಗೆ ಬಲಗೈ ಇದ್ದಂತೆ ಇದ್ದರು. ಶುದ್ಧ ಮಧ್ವ ಪಂಥದ ಅನುಯಾಯಿಗಳಾಗಿದ್ದ ಪುರಂದರದಾಸರು ತಮ್ಮ ಅಂಕಿತ ನಾಮವಾಗಿ 'ಪುರಂದರ ವಿಠಲ' ಎಂದು ಇಟ್ಟುಕೊಳ್ಳುವ ಮೂಲಕ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ಭಕ್ತಿ ಪರಂಪರೆಯಲ್ಲಿ ವಿಶೇಷವಾಗಿ ಉಲ್ಲೇಖಿತರಾಗಿದ್ದಾರೆ.

ಪುರಂದರದಾಸರು ಕ್ರಿ.ಶ. ಸು. ೧೪೪೮೦ರಿಂದ ೧೫೬೪ರವರೆಗೆ ಜೀವಿಸಿದ್ದ ಒಬ್ಬ ಮಹಾನ್ ದಾರ್ಶನಿಕ ದಾಸವರೇಣ್ಯರು. ಅವರ ಹುಟ್ಟೂರು ಪುಣೆಯ ಹತ್ತಿರದ ಪುರಂದರಗಡ ಎಂಬ ಊರು ಎಂದು ಹೇಳಲಾಗಿದೆ. ಇದು ಪುಣೆಗೆ ಹದಿನೆಂಟು ಮೈಲುಗಳಷ್ಟು ದೂರದಲ್ಲಿದ್ದು ಅವರ ಆರಾಧ್ಯ ದೈವ ಶ್ರೀವಿಠ್ಠಲನು ನೆಲೆಸಿರುವ ಪಂಢರಪುರಕ್ಕೆ ಹತ್ತಿರದಲ್ಲಿದೆ. ಕನ್ನಡದ ಆದಿಕವಿ ಪಂಪನಂತೆಯೇ ಪುರಂದರದಾಸರೂ ಕೂಡ ಈಗ ಬೇರೆ ರಾಜ್ಯದಲ್ಲಿರುವ ಪ್ರದೇಶದಲ್ಲಿ ಹುಟ್ಟಿದವರು ಎಂಬುದನ್ನು ನಿರಾಕರಿಸುವುದಕ್ಕೆ ಸಾಧ್ಯವಿಲ್ಲ. ಕೆಲವರ ಪ್ರಕಾರ ಇವರು ಕರ್ನಾಟಕದವರೇ ಇರಬೇಕು ಎಂಬ ಅಭಿಪ್ರಾಯವೂ ಇದೆ. "ಪುರಂದರದಾಸರ ಜನ್ಮಸ್ಥಳ ಪುರಂದರಪುರ, ಪಾಕಶಾಸನಪುರ, ಪುರಂದರಾಲಯ ಘಟ್ಟ ಮುಂತಾಗಿ ಹೇಳಿದ್ದಾರೆ. ಶ್ರೀಆದ್ಯ ರಾಮಾಚಾರ್ಯರು ಹಲವು ದುರ್ಬಲ ಆಧಾರಗಳಿಂದ 'ಪುರಂದರದಾಸರ ಜನ್ಮಸ್ಥಳವು ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನಲ್ಲಿ ಇರುವ ಕ್ಷೇಮಪುರ ಎಂದು ಅಭಿಪ್ರಾಯ ಪಟ್ಟಿದ್ದಾರೆ." "ಮಹಾರಾಷ್ಟ್ರದಲ್ಲಿ ಹುಟ್ಟಿದ ಪುರಂದರದಾಸರು ಅಚ್ಚಗನ್ನಡ ಕೀರ್ತನೆಗಳನ್ನು ರಚಿಸಲು ಮತ್ತು ಕರ್ನಾಟಕದ ಹಲವಾರು ದೇವಸ್ಥಾನಗಳನ್ನು ನೆನೆಯಲು ಹೇಗೆ ಸಾಧ್ಯ? ಎಂದು ಕೇಳುವ ಆದ್ಯರು ಪಂಪ ಮಹಾಕವಿಯು ಆಂಧ್ರಪ್ರದೇಶದ ಕರೀಮನಗರ ಜಿಲ್ಲೆಯ ಬೋಧನದಲ್ಲಿದ್ದು ಅಚ್ಚಗನ್ನಡದಲ್ಲಿ ಹಾಗೂ ನೂರಾರು ಮೈಲು ದೂರದಲ್ಲಿರುವ ಬನವಾಸಿಯನ್ನು ವರ್ಣಿಸುತ್ತ ಮಹಾಕಾವ್ಯ ಬರೆದ ಮಾತು ಗಮನಿಸಿದರೆ ಉತ್ತರ ದೊರೆಯದಿರದು. ಹುಟ್ಟೂರು ಯಾವುದಾದರೂ ಕವಿ ತನ್ನ ಮಾತೃಭಾಷೆಯ ಮೇಲಿನ ಪ್ರಭುತ್ವವನ್ನು ಕಳೆದುಕೊಳ್ಳಲಾರ." (ವಾಸುದೇವ ಅಗ್ನಿಹೋತ್ರಿ: ಪುರಂದರದಾಸರು ಮತ್ತು ಶ್ರೀಮದ್ಭಾಗವತ: ಒಂದು ತೌಲನಿಕ ಅಧ್ಯಯನ. ಪು. ೩೦) ಈ ಮೇಲಿನ ಎರಡು ಉಲ್ಲೇಖಗಳನ್ನು ಗಮನಿಸಿದರೆ ಬಹಳಷ್ಟು ಜನ ವಿದ್ವಾಂಸರು ಪುರಂದರದಾಸರು ಈಗಿನ ಮಹಾರಾಷ್ಟ್ರ ರಾಜ್ಯದವರು ಎಂಬುದಾಗಿಯೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆ ಹೊತ್ತಿಗೆ ಮಹಾರಾಷ್ಟ್ರದಲ್ಲಿ ಸಂತ ಜ್ಞಾನೇಶ್ವರಾದಿಗಳು ಪಂಢರಪುರದ ವಿಠ್ಠಲನ ಆರಾಧನೆಯ ಅಂಗವಾಗಿ ರೂಪಿಸಿದ ವಾರಕರಿ ಚಳವಳಿಯ ಮೂಲಕ ಮರಾಠಿ ಭಾಷೆಯು ವಿಶಿಷ್ಟ ಅಸ್ಮಿತೆಯ ಮೂಲಕ ಜನರ ಮನೆಮಾತಾಗಿ ಹೋಗಿತ್ತು. ಆದರೂ ಒಂದು ದೃಷ್ಟಿಕೋನದಿಂದ ನೋಡಬಹುದಾದರೆ, ಈಗಿನ ಮಹಾರಾಷ್ಟ್ರದ ಬಹಳಷ್ಟು ಪ್ರದೇಶಗಳು ಕನ್ನಡಿಗ ಆಳರಸರ ಆಳ್ವಿಕೆಗೆ ಒಳಪಟ್ಟಿದ್ದುದರಿಂದ ಅಲ್ಲಿ ಕನ್ನಡ ಭಾಷೆಯು ಇನ್ನೂ ಇತ್ತು ಎಂಬುದಾಗಿ ಊಹಿಸುವುದಕ್ಕೂ ಸಾಧ್ಯವಿದೆ. ಏನೇ ಇರಲಿ ಪುರಂದರದಾಸರಂತಹ ಮಹಾನ್ ದಾರ್ಶನಿಕ ಕೀರ್ತನಕಾರರು ಕನ್ನಡದಲ್ಲಿ ಕೀರ್ತನಾದಿ ಸಾಹಿತ್ಯವನ್ನು ಬರೆಯುವ ಮೂಲಕ ಕರ್ನಾಟಕ ಸಂಸ್ಕೃತಿಗೆ ವಿಶೇಷವಾದ ಕೊಡುಗೆಯನ್ನು ಕೊಟ್ಟಿದ್ದಾರೆ.

ರತ್ನಪಡಿ ವ್ಯಾಪಾರ ವ್ಯವಹಾರದಿಂದ ಅಗರ್ಭ ಶ್ರೀಮಂತರಾಗಿದ್ದ ವರದಪ್ಪನಾಯಕ ಮತ್ತು ಶ್ರೀಮತಿ ಲಕ್ಷ್ಮೀಬಾಯಿಯವರ ಮಗನಾದ ಶ್ರೀನಿವಾಸನಾಯಕ ಅಥವಾ

ಸೀನಪ್ಪನಾಯಕರೇ (ಕೆಲವರು ಕೃಷ್ಣಪ್ಪ ನಾಯಕ ಎಂದು ಹೇಳಿದ್ದಾರೆ.) ತಿರುಪತಿಯ ಶ್ರೀನಿವಾಸನ ಕೃಪೆಯಿಂದ ಜನಿಸಿದ ಕಾರಣವೇ ಅವರಿಗೆ ಶ್ರೀನಿವಾಸನಾಯಕ ಎಂಬುದಾಗಿ ಹೆಸರನ್ನಿಟ್ಟರು. ಮುಂದೆ ಪುರಂದರದಾಸ ಎಂದು ಹೆಸರಾಂಕಿತರಾದವರು. ದೇಶಸ್ಥ ಅಥವಾ ಸ್ಮಾರ್ತ ಬ್ರಾಹ್ಮಣರಾದ ಇವರು ಶೈವ ಭಾಗವತ ಪರಂಪರೆಯವರಾಗಿದ್ದರು. ಆ ಹೊತ್ತಿಗೆ ಮಹಾರಾಷ್ಟ್ರದಲ್ಲಿ ಭಾಗವತ ಪರಂಪರೆಯು ಬಹಳ ಉತ್ತುಂಗ ಧಾರ್ಮಿಕ ಮಾರ್ಗವಾಗಿತ್ತು. ಶ್ರೀವ್ಯಾಸರಾಜತೀರ್ಥರ ಮೂಲಕ ದೀಕ್ಷೆಯನ್ನು ಪಡೆಯುವ ಮೂಲಕ ಆಚಾರ್ಯ ತ್ರಯರಲ್ಲಿ ಒಬ್ಬರಾದ ಉಡುಪಿಯ ಶ್ರೀಮಧ್ವಾಚಾರ್ಯರ ಅನುಯಾಯಿಗಳಾಗಿ ಮಾಧ್ವರೆನಿಸಿಕೊಂಡರು. ಇವರ ವಂಶದ ವೃತ್ತಿ ಚಿನಿವಾರಿಕೆ. ಬಾಲಕರಾಗಿದ್ದ ಶ್ರೀನಿವಾಸನಾಯಕರು ತಮ್ಮ ತಂದೆಯವರ ಅಪೇಕ್ಷೆಗೆ ಅನುಗುಣವಾಗಿ ಕನ್ನಡ-ಸಂಸ್ಕೃತ ಭಾಷೆಗಳಲ್ಲಿ ವಿದ್ಯಾಭ್ಯಾಸ ಹಾಗೂ ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿ ಅಸೀಮತೆಯನ್ನು ಸಾಧಿಸಿದರು. ಹಾಗೆಯೇ ಪಂಡಿತರಿಂದ ವೈದಿಕ ಪರಂಪರೆಯನ್ನು ಅಭ್ಯಸಿಸಿ ಅದನ್ನು ತಮ್ಮದನ್ನಾಗಿ ಮಾಡಿಕೊಂಡರು. ಇನ್ನು ವಂಶಪಾರಂಪರ್ಯವಾಗಿ ಬಂದಂತಹ ವಾಣಿಜ್ಯ ವೃತ್ತಿಯಂತು ಜನ್ಮಜಾತವಾಗಿತ್ತು. ಅವರಿಗೆ ಹದಿನೆಂಟು ವರ್ಷಗಳಾದಾಗ ಸರಸ್ವತಿಬಾಯಿ ಎಂಬ ಕನ್ಯೆಯೊಂದಿಗೆ ವಿವಾಹ ಮಾಡಲಾಯಿತು. ತಂದೆಯ ಮರಣಾನಂತರ ಶ್ರೀನಿವಾಸನಾಯಕರು ದಕ್ಷತೆಯಿಂದ ವ್ಯಾಪಾರ ವ್ಯವಹಾರವನ್ನು ಮುನ್ನಡೆಸಿಕೊಂಡು ಹೋಗಿ ತಮ್ಮ ಮೂವತ್ತೈದನೆಯ ವಯಸ್ಸಿಗೆ ವಿಜಯನಗರ ಸಾಮ್ರಾಟ ಶ್ರೀಕೃಷ್ಣದೇವರಾಯನಿಂದ 'ನವಕೋಟಿ ನಾರಾಯಣ' ಎಂಬ ಬಿರುದಿಗೆ ಪಾತ್ರರಾಗಿ ಅವರ ಗಣ ವ್ಯಾಪಾರಸ್ಥರಲ್ಲಿ ಒಬ್ಬರಾಗಿದ್ದವರು. ಅವರಲ್ಲಿ ಬಹಳಾತಿಬಹಳ ಗರ್ವವು ಮತ್ತು ಕೃಪಣತೆಯೂ ಸೇರಿಕೊಂಡಿತ್ತು. ಆದರೆ ಅವರ ಪತ್ನಿ ಸರಸ್ವತಿಬಾಯಿ ಮಾತ್ರ ಅದಕ್ಕೆ ತದ್ವಿರುದ್ಧವಾದ ವ್ಯಕ್ತಿತ್ವ ಉಳ್ಳವರಾಗಿದ್ದರು. ತನ್ನ ವರಪ್ರಸಾದದಿಂದ ಜನಿಸಿದ್ದ ಶ್ರೀನಿವಾಸನಾಯಕನನ್ನು ತನ್ನ ದಾರಿಗೆ ಕರೆದುಕೊಳ್ಳುವುದಕ್ಕೆ ತಿರುಪತಿಯ ಶ್ರೀನಿವಾಸ ದೈವ ಕಾಲಸಂದರ್ಭಕ್ಕಾಗಿ ಕಾಯುತ್ತಿದ್ದನು ಎಂಬ ಕಥೆ ಇದೆ. ಒಬ್ಬ ವಯೋವೃದ್ಧನ ವೇಷ ಧರಿಸಿದ ಶ್ರೀನಿವಾಸನು ಒಬ್ಬ ಬಾಲಕನೊಂದಿಗೆ ಬಂದು ತನ್ನ ವರಪ್ರಸಾದ ಪುತ್ರ ಶ್ರೀನಿವಾಸನಾಯಕನಲ್ಲಿ ಈ ಮಗುವಿನ ಉಪನಯನ ಮಾಡುವುದಕ್ಕೆ ಧನಸಹಾಯ ಮಾಡಬೇಕೆಂದು ಮತ್ತೆ ಮತ್ತೆ ಕೇಳಿಕೊಳ್ಳುತ್ತಿದ್ದನು ಹೀಗೆ ಆರು ತಿಂಗಳು ಕಳೆದರು ಕೃಪಾಣು ಶ್ರೀನಿವಾಸನಾಯಕರು ಒಂದು ದಮ್ಮಡಿಯನ್ನೂ ಬಿಚ್ಚಲಿಲ್ಲ. ಹಾಗಾಗಿ ಇವನ ಈ ಕೃಪಣತ್ವವನ್ನು ಇಲ್ಲವಾಗಿಸೆ ಆಧ್ಯಾತ್ಮ ಮಾರ್ಗಕ್ಕೆ ಕರೆತರಬೇಕೆಂದು ಆಲೋಚಿಸಿದ ಶ್ರೀನಿವಾಸ ದೇವರು ಆತನ ಈ ಕೃತ್ಯವನ್ನು ಅವನ ಪತ್ನಿ ಶ್ರೀಮತಿ ಸರಸ್ವತಿಬಾಯಿಯವರಲ್ಲಿ ಎಲ್ಲಾ ವಿಚಾರಗಳನ್ನು ಬಿಡದೆ ಹೇಳಿಕೊಂಡನು. ಅಸಹಾಯಕಳಾದ ಆಕೆ ಆ ವೃದ್ಧರಿಗೆ ಕೊಡುವುದಕ್ಕೆ ತನ್ನ ಕೈಯಲ್ಲಿ ಏನು ಇಲ್ಲದೆ ಇದ್ದುದರಿಂದ ತನ್ನ ಮೂಗಿನಲ್ಲಿದ್ದ ಮೂಗುತಿಯನ್ನೇ ತೆಗೆದುಕೊಟ್ಟಳು. ಆ ದಾನವೇ 'ಮೂಗುತಿಯ ಸಂದರ್ಭ'. ಅದರಿಂದ

ಶ್ರೀನಿವಾಸನಾಯಕನ ಜೀವನ ಗತಿಯನ್ನೇ ಬದಲಾಯಿಸಿತು. ಶ್ರೀಮತಿ ಸರಸ್ವತಿಬಾಯಿ ಅವರು ನೀಡಿದ್ದ ಮೂಗುತಿಯನ್ನು ಹಿಡಿದು ಆ ವಯೋವೃದ್ಧರು ಶ್ರೀನಿವಾಸನಾಯಕರ ಚಿನ್ನದ ಅಂಗಡಿಯಲ್ಲಿಯೆ ಮಾರಾಟ ಮಾಡಲು ಹೋದನು. ತನ್ನ ಹೆಂಡತಿಯ ಮೂಗಿನಲ್ಲಿ ಇದ್ದಂತಹ ಈ ಆಭರಣವು ಈ ವಯೋವೃದ್ಧನ ಕೈಯಲ್ಲಿದ್ದುದನ್ನು ಕಂಡ ಶ್ರೀನಿವಾಸನಾಯಕನು ಅನುಮಾನದಿಂದ ವಿಚಾರಿಸಲು ನೇರವಾಗಿ ಮನೆಗೆ ಬಂದು ಹೆಂಡತಿಯಲ್ಲಿ ಮೂಗುತಿಯನ್ನು ತೋರಿಸುವಂತೆ ಕೇಳಿದನು. ಅದನ್ನು ದಾನ ಕೊಟ್ಟಿರುವುದಾಗಿ ಹೇಳಲೊಲ್ಲದೆ ಆಕೆ ವಿಷ ಕುಡಿಯಲು ಬಟ್ಟಲನ್ನು ಎತ್ತಿಕೊಂಡಾಗ ಅದರಲ್ಲಿ ಅವಳ ಆ ಮೂಗುತಿಯು ಕಾಣಲು ಅದನ್ನು ತಂದು ಪತಿಗೆ ನೀಡಿದರು. ಅದನ್ನು ನೋಡಿದ ಶ್ರೀನಿವಾಸನಾಯಕ ತನ್ನ ಅಂಗಡಿಗೆ ಬಂದು ತಾನು ಭದ್ರವಾಗಿ ಬೀಗ ಹಾಕಿಟ್ಟಿದ್ದ ಮೂಗುತಿಯೊಂದಿಗೆ ಹೋಲಿಸಬೇಕೆಂದು ಬೀಗ ತೆಗೆದು ನೋಡಿದರೆ ಅಲ್ಲಿ ಮೂಗುತಿಯೇ ಇರಲಿಲ್ಲ, ಆಶ್ಚರ್ಯವಾಯಿತು. ತನ್ನ ಜೀವನದಲ್ಲಿ ಇದು ಎಂಥ ಚಮತ್ಕಾರವೆಂದು ಅದರ ಬಗೆಗೆ ವಿಚಾರಿಸಲೆಂದು ನೋಡಿದರೆ ಆ ವಯೋವೃದ್ಧರು ಅಲ್ಲಿ ಇರಲೇ ಇಲ್ಲ. ಆಗ ಅವರಿಗೆ ಜೀವನದ ಒಟ್ಟು ಗತಿಯೂ ಎಷ್ಟು ಸೂಕ್ಷ್ಮ ಮತ್ತು ಗಂಭೀರವಾಗಿರುತ್ತದೆ ಎಂಬುದರ ಅರಿವಾಯಿತು. ಇದೆಲ್ಲ ತನ್ನ ದೈವ ಶ್ರೀನಿವಾಸನ ಚಮತ್ಕಾರವಲ್ಲದೆ ಮತ್ತೇನು ಅಲ್ಲ ಎಂಬುದು ಅವರಿಗೆ ಸಾಕ್ಷಾತ್ ಅರಿವಿಗೆ ಬಂದಿತು. ಕೊನೆಗೆ ಶ್ರೀನಿವಾಸನಾಯಕ ತನ್ನ ಬಳಿಯಲ್ಲಿದ್ದ ನವಕೋಟಿಗೂ ಅಧಿಕವಾಗಿದ್ದ ಸಂಪತ್ತನ್ನೆಲ್ಲ ಸತ್ಪಾತ್ರರಾದವರಿಗೆ ದಾನ ನೀಡಿ ತಮ್ಮ ಹೆಂಡತಿ ಮಕ್ಕಳೊಂದಿಗೆ ಹಂಪೆಗೆ ಬಂದು ಶ್ರೀವ್ಯಾಸರಾಜತೀರ್ಥರಿಂದ ಮಾಧ್ವ ದೀಕ್ಷೆಯನ್ನು ಸ್ವೀಕರಿಸಿದರು. ಆಗ ಅವರಿಗೆ ಪುರಂದರದಾಸ ಎಂಬುದಾಗಿ ಪುನರ್ನಾಮಕರಣವಾಯಿತು. ಅವರು 'ಪುರಂದರ ವಿಠ್ಠಲ' ನೆಂಬ ಅಂಕಿತನಾಮ ಧರಿಸಿ ಕೀರ್ತನೆಗಳನ್ನು ಹಾಡುತ್ತಾ ದಾಸ ಬದುಕನ್ನು ನಡೆಸುವುದಕ್ಕೆ ಆರಂಭಿಸಿದರು. ಜೋಳಿಗೆ ಹಾಕಿಕೊಂಡು, ತಾಳ ಹಿಡಿದು ಭಿಕ್ಷೆ ಬೇಡಿ ಬದುಕುವಂತಹ ನೆಲೆಯನ್ನು ಅವರು ಒಪ್ಪಿಕೊಂಡು ಆಧ್ಯಾತ್ಮ ಮಾರ್ಗಕ್ಕೆ ಬಂದರು ಎನ್ನಲಾಗಿದೆ. ಅವರು ಮುಂದಿನ ಆಧ್ಯಾತ್ಮಿಕ ಮಾರ್ಗವನ್ನು ಒಪ್ಪಿಕೊಂಡು ಅದರಲ್ಲಿ ಸಹಜವಾಗಿಯೇ ನಡೆದರು. ಈ ದಾಸತ್ವ ಭಾವವು ಭಾರತೀಯ ಆಧ್ಯಾತ್ಮಿಕ ಬದುಕಿನಲ್ಲಿ ಹಾಸುಹೊಕ್ಕಾದ ಸಂಗತಿಯಾಗಿದೆ. ರಾಮಾಯಣದಲ್ಲಿ ಹನುಮಂತನು 'ದಾಸೋಹಂ ಕೋಸಲೇಂದ್ರಸ್ಯ' ಎಂಬುದಾಗಿ ಉದ್ಗರಿಸಿದ್ದಾನೆ. ಅಂದರೆ ರಾಮಾಯಣದ ಕಾಲದಿಂದಲೂ ತಂತಮ್ಮ ಆರಾಧ್ಯ ದೇವರಲ್ಲಿ ದಾಸತ್ವವನ್ನು ಸ್ವೀಕರಿಸಿ ಆಧ್ಯಾತ್ಮಿಕ ಮಾರ್ಗದಲ್ಲಿ ನಡೆಯುವುದು ಸರ್ವಸಾಮಾನ್ಯವಾದ ಸಂಗತಿಯೇ ಆಗಿತ್ತು ಎಂಬುದು ಈ ಮೂಲಕ ತಿಳಿದು ಬರುತ್ತದೆ. ಆಧ್ಯಾತ್ಮ ಮತ್ತು ಭಕ್ತಿ ಮಾರ್ಗವು ಭಾರತೀಯ ಸಂತ ಪರಂಪರೆಯಲ್ಲಿ ಬಹಳ ವಿಶಿಷ್ಟವಾದ ಜೀವನ ಧರ್ಮವೆನಿಸಿದೆ. ಆಧ್ಯಾತ್ಮಿಕ ಮತ್ತು ಭಕ್ತಿಯು ವೈಚಾರಿಕ ಮನೋಧರ್ಮವೇ ಆಗಿದೆ. ವೈಚಾರಿಕತೆ ಎಂಬುದು ಕ್ರಿಯೆಯೂ ಅಲ್ಲ ಅಥವಾ ಪ್ರತಿಕ್ರಿಯೆಯೂ ಅಲ್ಲ; ಅಂದರೆ

ಅದೊಂದು ಪ್ರಕ್ರಿಯೆ. ವೈಚಾರಿಕತೆ ಯು ದೇವತಾಶಾಸ್ತ್ರದೊಂದಿಗೆ ಬೆಳೆದುಬಂದು ಮುಂದೆ ಸಮಾಜೋ ರಾಜಕೀಯವಾಗಿ ಬೌದ್ಧಿಕ ವಿಮರ್ಶೆಯ ಸ್ವರೂಪವನ್ನು ಪಡೆದುಕೊಂಡಿತು. ಅಂದರೆ ವೈಚಾರಿಕತೆಯು ಭಾವನೆ ಮತ್ತು ಬುದ್ಧಿಗಳ ವಿದ್ಯುತ್ ಆಲಿಂಗನವಾಗಿದೆ. ಈ ವೈಚಾರಿಕತೆಯು ವೈಯಕ್ತಿಕ ಮತ್ತು ಸಾಮಾಜಿಕ ಎರಡೂ ಆಯಾಮಗಳಲ್ಲಿ ಇದೆ. ವೈಯಕ್ತಿಕವಾಗಿ ಸ್ವೀಕರಿಸಿದವರು ತಾವು ತಪೋನಿರತರಾಗಿಯೋ ಅಥವಾ ಸಾಧಕರಾಗಿಯೋ ತಮ್ಮ ಮೋಕ್ಷ ಮಾರ್ಗದ ಕಡೆಗೆ ನಡೆಯುತ್ತಿರುತ್ತಾರೆ. ಯಾರು ತಮ್ಮ ವೈಯಕ್ತಿಕ ಪರಿಧಿಯನ್ನು ದಾಟಿ ಸಾಮಾಜಿಕ ಅಥವಾ ಸಾರ್ವತ್ರಿಕ ನೆಲೆಯಲ್ಲಿ ವ್ಯವಹರಿಸುತ್ತಾರೋ ಅವರು ಸಮಾಜೋ ಚಿಂತಕರಾಗಿ ಅಥವಾ ಆಧ್ಯಾತ್ಮೋ ಧರ್ಮ ಚಿಂತಕರಾಗಿ ಕಾಣಿಸುತ್ತಾರೆ. ಅಂಥವರು ತಮ್ಮ ಚಿಂತನೆಯ ಮೂಲಕ ಕಂಡುಕೊಂಡ ಫಲಿತಗಳನ್ನು ಸಮಾಜದ ಎಲ್ಲರ ಬದುಕಿನ ದಾರ್ಶನಿಕ ಮಾರ್ಗವಾಗಿ ಹೇಳುತ್ತಾ ಮನಗಾಣಿಸುವ ದಿಶೆಯಲ್ಲಿ ದುಡಿಯುತ್ತಾರೆ. ಚಾರ್ವಾಕ, ಸಾಕ್ರಟೀಸ್, ಗೌತಮ ಬುದ್ಧ, ಶಂಕರಾಚಾರ್ಯ, ರಾಮಾನುಜಾಚಾರ್ಯ, ಮಧ್ವಾಚಾರ್ಯ, ಬಸವೇಶ್ವರ, ಅಲ್ಲಮಪ್ರಭು ಮುಂತಾದವರು ಈ ಮಾರ್ಗದಲ್ಲಿ ನಡೆದ ಮಹಾನ್ ದಾರ್ಶನಿಕರು ಎಂಬುದನ್ನು ಅವರ ಜೀವನ ಮತ್ತು ಸಾಧನೆಯ ಮೂಲಕ ಮನಗಾಣಬಹುದಾಗಿದೆ. ಆಲ್ಬರ್ಟ್ ಐನ್‌ಸ್ಟೀನ್ ಒಂದೆಡೆಯಲ್ಲಿ ಹೇಳಿದ ಒಂದು ಉಲ್ಲೇಖ ಗಮನಾರ್ಹವೆನಿಸುತ್ತದೆ. 'ಧರ್ಮವಿಲ್ಲದ ವಿಜ್ಞಾನ ಕುರುಡು; ವಿಜ್ಞಾನವಿಲ್ಲದ ಧರ್ಮ ಕುಂಟು' ಅಂದರೆ ವಿಜ್ಞಾನ 'ಹೇಗೆ' ಎಂಬುದರ ಮೂಲಕ ಅನ್ವೇಷಿಸ ಹೊರಟರೆ, ಧರ್ಮ 'ಏಕೆ' ಎಂಬುದರ ಮೂಲಕ ದರ್ಶಿಸುತ್ತದೆ. ಹಾಗಾಗಿ ಇವೆರಡರ ಸಮನ್ವಯವುಳ್ಳ 'ವೈಚಾರಿಕತೆ' ಮನುಷ್ಯ ಬದುಕಿಗೆ ಹೊಸ ಜೀವನ ದೃಷ್ಟಿಯನ್ನು ನೀಡುತ್ತದೆ. ಎಂತಲೇ 'ಧ್ರಿಯತೇ ಅನೇನ ಇತಿ ಧರ್ಮಃ', ಮತ್ತು 'ಧಾರಣಾದ್ಧರ್ಮಮಿತ್ಯಾಹುಃ' ಎಂಬ ಚಿಂತನೆಯು ವ್ಯಕ್ತಿಯ 'ಭಾವಶ್ರೀ, ಬುದ್ಧಿಶ್ರೀ ಮತ್ತು ಆತ್ಮಶ್ರೀ'ಯನ್ನು ವಿಶಿಷ್ಟವಾಗಿ ರೂಪಿಸಿ ವೈಚಾರಿಕವಾಗಿ ಜೀವನದ ಬೃಹದ್ದರ್ಶನವಾಗಿ ರೂಪಿಸುತ್ತವೆ ಎಂಬುದು ಗಮನಾರ್ಹ. ಅಂತಹವರಲ್ಲಿ ಶ್ರೀಪುರಂದರದಾಸರೂ ಒಬ್ಬರು. ಮುಂದೆ ಅವರು ತಮ್ಮ ಜೀವನವನ್ನು ಭಕ್ತಿ, ಜ್ಞಾನ ಮತ್ತು ವೈರಾಗ್ಯಗಳ ಮೂಲಕ ವಿಶಿಷ್ಟವಾಗಿ ತಮ್ಮ ಜೀವನವನ್ನು ನಡೆಸಿ ಈ ಮೇಲೆ ಹೇಳಿದಂತೆ 'ದಾಸರೆಂದರೆ ಪುರಂದರದಾಸ'ರಯ್ಯಾ ಎಂಬ ಭಾಜನಕ್ಕೆ ಪಾತ್ರರಾದರು.

ದಾಸತ್ವದ ದೀಕ್ಷೆಯನ್ನು ಗುರುಗಳಾದ ಶ್ರೀವ್ಯಾಸರಾಜರಿಂದ ಸ್ವೀಕರಿಸಿದ ಪುರಂದರದಾಸರು ಪೂರ್ಣಬದುಕಿನ ದಾರಿಯಲ್ಲಿ ಒಂದು ಅನನ್ಯ ವಿಶಿಷ್ಟ ವ್ಯಕ್ತಿತ್ವವಾಗಿ ಬದುಕಿ ಮಾದರಿಯಾಗಿದ್ದಾರೆ. ಪುರಂದರದಾಸರ ಜೀವನದಂತೆ ಅವರ ಕೀರ್ತನೆಗಳೂ ಸಮಾಜೋ-ಸಾಂಸ್ಕೃತಿಕ ಆಯಾಮದಿಂದ ವೈಚಾರಿಕವಾಗಿದ್ದು ಗಂಭೀರವಾಗಿವೆ. ಅವರು ಬಾಲ್ಯದಲ್ಲಿಯೇ ಕರಗತ ಮಾಡಿಕೊಂಡಿದ್ದ ಸಂಗೀತವು ಅವರ ಕೀರ್ತನಾದಿ ಸಾಹಿತ್ಯದ ಮೂಲಭೂತ ತಳಹದಿಯಾಗಿ ಅವರನ್ನು 'ಕರ್ನಾಟಕ ಸಂಗೀತ ಪಿತಾಮಹ'

ಎಂಬ ಗೌರವಕ್ಕೆ ಭಾಜನಗೊಳಿಸಿದೆ. ಶ್ರೀನಿವಾಸ ನಾಯಕ ತನಗೆ ನವಕೋಟಿ ನಾರಾಯಣ ಎಂಬ ಬಿರುದು ನೀಡುವಂತೆ ಶ್ರೀಕೃಷ್ಣದೇವರಾಯನ ಮನೆಯ ಬಾಗಿಲು ಕಾಯುತ್ತಾ ಬೇಡಿದ ಕಾಲವು ಹೋಗಿ ಎಲ್ಲವನ್ನು ಬಿಟ್ಟು ಭಗವತಿ ಬುಟ್ಟಿ (ಜೋಳಿಗೆ) ಹಿಡಿದು ಬಂದ ಪುರಂದರದಾಸರ ಪಾದಗಳನ್ನು ಸ್ವತಃ ಅರಸನೇ ತೊಳೆದು ಗೌರವಿಸುವ ಕಾಲ ಪ್ರಾಪ್ತವಾಯಿತು. ಅಂದರೆ ಜೀವನ ಆಧ್ಯಾತ್ಮ ಮಯವಾಗಿರಬೇಕು ಎಂಬುದರ ಸಂಕಥನವೇ ಪುರಂದರದಾಸರ ಬದುಕು ಒಂದು ನಿದರ್ಶನ ಸ್ವರೂಪದಲ್ಲಿ ನಮಗೆ ಮನದಟ್ಟಾಗುತ್ತದೆ.

'ಆದದ್ದೆಲ್ಲ ಒಳಿತೇ ಆಯಿತು ನಮ್ಮ
ಶ್ರೀಧರನ ಸೇವೆ ಮಾಡಲು ಸಾಧನ ಸಂಪತ್ತಾಯಿತು ಅ.ಪ.
ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯಾ'

ಎಂಬ ಈ ಕೀರ್ತನೆಯು ಜೀವನವು ಸುಖಮಯವಾಗಿರಬೇಕೋ ಸಂತೃಪ್ತಮಯವಾಗಿರಬೇಕೋ ಎಂಬ ವೈಚಾರಿಕ ಪ್ರಶ್ನೆಯನ್ನು ನಮ್ಮ ಮುಂದೆ ಇಡುತ್ತದೆ. ಸಂಪತ್ತನ್ನು ಕಳೆದುಕೊಂಡು ಎಷ್ಟೋ ಜನ ಪ್ರಪಂಚದಲ್ಲಿ ನೋವು, ಸಂತಾಪದಲ್ಲಿ ನಿತ್ಯ ಪರಿತಪಿಸುತ್ತಾ ಸಾಯುವವರೇ ಹೆಚ್ಚು. ಆದರೆ ಪುರಂದರದಾಸರು ಹಾಗಲ್ಲ, ತಮ್ಮ ಈ ಪರಿವರ್ತಿತ ಸ್ಥಿತಿಯನ್ನು ಸಾರ್ಥಕವಾದುದೆಂದು ಸಂತೃಪ್ತ ಭಾವದಿಂದ ಉದ್ಗರಿಸಿದ್ದಾರೆ. ಜೀವನದಲ್ಲಿ ಸುಖಕ್ಕಿಂತ ಸಂತೃಪ್ತಿಯೇ ಮುಖ್ಯ ಎಂಬ ವಿಚಾರವನ್ನು ಈ ಮೂಲಕ ನಮಗೆ ಸುಸ್ಪಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಪುರಂದರದಾಸರ ಕೀರ್ತನೆಗಳನ್ನು ವೈಚಾರಿಕ ಆಯಾಮದಿಂದ ಅಧ್ಯಯನ ಮಾಡಿದರೆ ಅವರ ಆಧ್ಯಾತ್ಮಿಕ ನೆಲೆಯ ದರ್ಶನವಾಗುತ್ತದೆ. ಆವತ್ತಿನ ಸುಖಕ್ಕಿಂತ ಇವತ್ತಿನ ಸಂತೃಪ್ತ ಬದುಕು ಅವರ ಕೀರ್ತನೆಗಳ ಮೂಲಕ ನಮ್ಮ ಎದುರು ಗಂಭೀರವಾಗಿ ಅನಾವರಣಗೊಂಡಿದೆ. ಅವರ ಕೀರ್ತನೆಗಳನ್ನು ಭಕ್ತಿ ಮತ್ತು ನಾಮ ಸಂಕೀರ್ತನೆ, ಆಧ್ಯಾತ್ಮಿಕ ಜ್ಞಾನ, ಸಾಮಾಜಿಕ ಮತ್ತು ಧಾರ್ಮಿಕ ಎಂಬುದಾಗಿ ಅನೇಕ ಬಗೆಗಳಲ್ಲಿ ವಿಂಗಡಿಸಿ ಅಧ್ಯಯನ ಮಾಡಬಹುದಾಗಿದೆ. ಇವು ಪರಿಶುದ್ಧ ಜೀವನದ ವೈಚಾರಿಕ ಆಯಾಮಗಳಾಗಿವೆ ಎಂಬುದು ಗಮನಾರ್ಹ.

'ಆಚಾರವಿಲ್ಲದ ನಾಲಗೆ ನಿನ್ನ
ನೀಚ ಬುದ್ಧಿಯ ಬಿಡು ನಾಲಿಗೆ'
'ಹೊಲೆಯ ಹೊರಗಿಹನೆ ಒಳಗಿಲ್ಲವೆ
ಶ್ರೀಹರಿಯ ಭಕುತರು ಪೇಳಿರಿದನು'
'ಉದರ ವೈರಾಗ್ಯವಿದು ನಮ್ಮ
ಪದುಮನಾಭನಲಿ ಲೇಶ ಭಕುತಿಯಿಲ್ಲ'

'ನೀನ್ಯಾಕೊ ನಿನ್ನ ಹಂಗ್ಯಾಕೊ ನಿನ್ನ
ನಾಮದ ಬಲವೊಂದಿದ್ದರೆ ಸಾಕೊ'
'ನಿನಗೂ ಆಣೆ ರಂಗ ಎನಗೂ ಆಣೆ
ನಿನಗೂ ನನಗೂ ಇಬ್ಬರಿಗೂ ಭಕ್ತರಾಣೆ'
'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ
ಸುಜ್ಞಾನಿಗಳ ಕೂಡೆ ಜಗಳವೇ ಲೇಸು'
'ಏಕೆ ದೇಹವನು ದಂಡಿಸುವೆ ವೃಥಾ ಬಿಡ-
ದೇಕಚಿತ್ತದೆ ಲಕ್ಷ್ಮಿಕಾಂತ ಹರಿ ಎನ್ನದೆ
'ಮಡಿ ಮಡಿ ಮಡಿಯೆಂದು ಮಾರ್ಮಾರು ಹಾರುತಿ
ಮಡಿಯೆಲ್ಲಿ ಬಂತೊ ಬಿಕನಾಶಿ'
'ಮಲವ ತೊಳೆಯ ಬಲ್ಲರಲ್ಲದೆ
ಮನವ ತೊಳೆಯಬಲ್ಲರೆ'

ಒಟ್ಟಾರೆ ಮರಾಠಾ ಸಂತರಾದ ಜ್ಞಾನೇಶ್ವರಾದಿಗಳಾಗಲಿ, ಕರ್ನಾಟಕದ ಹರಿದಾಸರಾದ ಭಕ್ತ ಪುರಂದರದಾಸಾದಿಗಳಾಗಲಿ ಭಕ್ತ ಜನರ ಹೃದಯವನ್ನು ಭೋಗಮಯ ಜೀವನದ ಕಡೆಯಿಂದ ತ್ಯಾಗಮಯ ಜೀವನದ ಕಡೆಗೆ ಹೊರಳಿಸಿದರು. ಬಹುಶಃ ಇದು ವಿ.ಎಸ್. ನೈಪಾಲ್ ಅವರು ಹೇಳಿದ್ದ 'ಗಾಯಗೊಂಡ ಸಂಸ್ಕೃತಿ' (ಊಂಡೆಡ್ ಕಲ್ಚರ್) ಎಂಬುದಕ್ಕೆ ಪರ್ಯಾಯ ಮಾರ್ಗವಾಗಿತ್ತು ಎಂಬುದನ್ನು ಅವಶ್ಯವಾಗಿ ಗಮನಿಸಬೇಕು.

ಮರಾಠಾ ಸಂತರು ಹುಟ್ಟುಹಾಕಿದ ಈ ಸಮಾಜೋ-ಧಾರ್ಮಿಕ ಚಳವಳಿಯಿಂದ ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರಿಂದ ಹಿಂದವಿ ಸಾಮ್ರಾಜ್ಯವೊಂದರ ಸಂಸ್ಥಾಪನೆಗೆ ಭದ್ರವಾದ ಧಾರ್ಮಿಕ ಬುನಾದಿಯೊಂದನ್ನು ನಿರ್ಮಿಸಿತ್ತು. ಸಾತ್ವಿಕ ಆಶಯದ ಈ ಚಳವಳಿ ಇಂದಿಗೂ ತನ್ನ ನೆಲೆಯನ್ನು ಅಪಾರ ಭಕ್ತ ಸಮುದಾಯದ ಹೃದಯ ಸಾಮ್ರಾಜ್ಯದಲ್ಲಿ ಜಾತ್ಯಾತೀತ ನೆಲೆಯಿಂದ ಉಳಿಸಿಕೊಂಡಿದೆ. ಎಲ್ಲಾ ಮತಧರ್ಮದವರೂ ಮರಾಠಾ ಸಂತರ ಆರಾಧ್ಯ ದೈವ ಶ್ರೀವಿಠ್ಠಲನನ್ನು ತಮ್ಮ ಅಧಿದೈವವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ್ದರೆಂಬ ದಿ. ಡಾ. ರಾಮಚಂದ್ರ ಚಿಂತಾಮಣ ಢೇರೆಯವರ ವಿಚಾರದ ಹಿನ್ನೆಲೆಯಲ್ಲಿ ಗಂಭೀರವಾಗಿ ಆಲೋಚಿಸಬೇಕಾಗಿದೆ. ಕಾರಣ ಈ ಸಂತ ಚಳವಳಿಯಲ್ಲಿ ಸಂತ ಜ್ಞಾನೇಶ್ವರರೊಂದಿಗೆ ಎಲ್ಲಾ ಜಾತಿ ಪಂಗಡಗಳ ಸಮುದಾಯದವರೂ ಸಮಾವೇಶಗೊಂಡಿದ್ದರು. ಹಾಗೆಯೇ ಕರ್ನಾಟಕದಲ್ಲಿಯೂ ಕನ್ನಡ ಸಂಸ್ಕೃತಿಯ ಒಂದು ಪ್ರಮುಖ ಕಣ್ಣು ಎಂಬುದಾಗಿ ಪರಿಗಣಿಸಿರುವ ಹರಿದಾಸ ಪಂಥದವರು ಮಾಡಿದ ವಿಶಿಷ್ಟ ಗಂಭೀರ ಚಳವಳಿಯಿಂದ ವೈಚಾರಿಕ ದೃಷ್ಟಿಕೋನವೊಂದು ಪ್ರಾಪ್ತವಾಯಿತು. ಸಮಕಾಲೀನವಾಗಿ ರಾಜ್ಯಭಾರ ಮಾಡುತ್ತಿದ್ದಂತಹ ವಿಜಯನಗರದ ರಾಜ ಶ್ರೀಕೃಷ್ಣದೇವರಾಯ ಅವರಿಗೆ ಸಮಾಜೋ-ಧಾರ್ಮಿಕ ಚಿಂತನೆಯ ಮೂಲಕ ಆದರ್ಶಪರ ಆಡಳಿತಕ್ಕೆ ಇವರ ವಿಚಾರಗಳು ಸ್ಫೂರ್ತಿಯಾದವು ಎಂಬುದನ್ನು ಮರೆಯುವಂತಿಲ್ಲ. ಹರಿದಾಸರು ಕೂಡಾ ಹೊಸ ಮತಧರ್ಮವನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಇದರಿಂದಾಗಿ

ಮತಧರ್ಮಗಳ ನಡುವಣ ಸಂಘರ್ಷ ಮತ್ತು ಹೋರಾಟಗಳಿಗೆ ಸಮಾಲೋಚನೆ ಮತ್ತು ಸಹಬಾಳ್ವೆಯ 'ಮಾನವೀಯ ಧರ್ಮ'ದ ನಿಜಪಥವೊಂದನ್ನು ಕಾಣುವುದಕ್ಕೆ ಸಾಧ್ಯವಾಯಿತು.

ವಾರಕರಿ ಪಂಥದ ಸಂತ ಜ್ಞಾನೇಶ್ವರಾದಿಗಳು ಮತ್ತು ಹರಿದಾಸ ಪಂಥದ ಭಕ್ತ ಪುರಂದರದಾಸಾದಿಗಳು ತಮ್ಮ ಆಧ್ಯಾತ್ಮಿಕ ಚಿಂತನೆಗಳನ್ನೆಲ್ಲ ಜೀವನ ದರ್ಶನಗಳಾಗಿಸಿಕೊಂಡು ತಮ್ಮ ಅಭಂಗ ಮತ್ತು ಕೀರ್ತನೆಗಳ ಮೂಲಕ ಅನಾವರಣಗೊಳಿಸಿದ್ದಾರೆ. ಅವರ ಈ ಬೋಧನೆ ಮತ್ತು ಹಾಡುಗಳು ಸಮಾಜದಲ್ಲಿ 'ಜನ ಸಂವೇದನೆ'ಗೆ ಕಾರಣವಾಯಿತು. ಇಂದಿಗೂ ಅಪಾರ ಜನಸಮುದಾಯ ಅಭಂಗ ಮತ್ತು ಕೀರ್ತನೆಗಳನ್ನು ತಮ್ಮ ಜೀವನದ ಪ್ರಮುಖ ಅಂಶವಾಗಿ ಪರಿಗಣಿಸಿಕೊಂಡು ಹಾಡುತ್ತಾ, ಬೋಧಿಸುತ್ತ ಮತ್ತು ಕೇಳುತ್ತಾ ನೆಮ್ಮದಿಯ ಜೀವನವನ್ನು ನಡೆಸುತ್ತಿದ್ದಾರೆ.

ಸಾಂದರ್ಭಿಕ ಗ್ರಂಥಗಳು :

೧. ಪುರುಷೋತ್ತಮ ಗಣೇಶ ಸಹಸ್ರಬುದ್ಧೆ: ಮಹಾರಾಷ್ಟ್ರ ಸಂಸ್ಕೃತಿ (ಮರಾಠಿಕೃತಿ). ಕಾಂಟಿನೆಂಟಲ್ ಪ್ರಕಾಶನ, ಪುಣೆ, ೧೯೭೯

೨. ಭಾವೆ.ವಿ.ಲ : ಮಹಾರಾಷ್ಟ್ರ ಸಾರಸ್ವತ ಖಂಡ ೧-೨(ಮರಾಠಿ ಕೃತಿ), ಪಾಪ್ಯುಲರ್ ಪ್ರಕಾಶನ ಮುಂಬಯಿ, ೧೯೮೨, ೧೯೮೩

೩. ಸಾವಿತ್ರಿ ಖಾನೋಲಕರ: ಮಹಾರಾಷ್ಟ್ರ ಸಂತರು, ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು

೪. ರಾಜವಾಡೆ ವಿ.ಕಾ.(ಸಂಪಾದನೆ): ಜ್ಞಾನೇಶ್ವರಿ (ಮರಾಠಿ ಕೃತಿ), ಧುಳೆ, ೨೦೦೯

೫. ಕುಲಕರ್ಣಿ ಗೋ.ಮ. (ಸಂಪಾದನೆ): ಮಹಾರಾಷ್ಟ್ರಾಚೀ ಸತ್ವಧಾರಾ(ಮರಾಠಿ ಕೃತಿ). ವಿ.ತ್ರ್ಯಂ. ಶೇಟೆ, ಪುಣೆ, ೧೯೮೧

೬. ಬಹಿರಟ ಭಾ. ಪ.: ವಾರಕರಿ ಸಂಪ್ರದಾಯ- ಉದಯ ವ ವಿಕಾಸ (ಮರಾಠಿ ಕೃತಿ). ಪ್ರಜ್ಞಾ, ಭಾಲೇರಾವ್, ಪುಣೆ, ೧೯೭೨

೭. ಲೋಕಾಪುರ ರಂ.ಶಾ.(ಅನುವಾದ): ಕನ್ನಡ ಜ್ಞಾನೇಶ್ವರಿ, ನಿಶಾಂತ ಪ್ರಕಾಶನ, ಬೆಳಗಾವಿ. ೨೦೦೩

೮. ದತ್ತಾವಧೂತರು (ಅನುವಾದ): ಶ್ರೀ ಜ್ಞಾನೇಶ್ವರಿ, ಚೈತನ್ಯಾಶ್ರಮ, ಶ್ರೀ ಕ್ಷೇತ್ರ, ಹೆಬ್ಬಳ್ಳಿ, ೨೦೦೭

೯. ಶ್ರೀನಿವಾಸ ಹಾವನೂರ ಮತ್ತು ಸತ್ಯನಾರಾಯಣರಾವ್ ಹೊ.ರಾ. (ಸಂಪಾದನೆ): ಪುರಂದರದಾಸರ ಜನಪ್ರಿಯ ಕೀರ್ತನೆಗಳು,
ಅಂಕಿತ ಪುಸ್ತಕ, ಬೆಂಗಳೂರು, ೨೦೦೨.

೧೦. ನಾವಡ ಎ.ವಿ.: ದಾಸಮಾರ್ಗ, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ, ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ, ೨೦೦೪

೧೧. ನಾಯ್ಕ ಟಿ.ಪಿ.: ಪುರಂದರದಾಸ ಮತ್ತು ಸಂತ ತುಕಾರಾಮ, ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೯೪

೧೨. ಕೃಷ್ಣಾಜೀ ಜ್ಞಾನಮೋಠೆ (ಸಂಪಾದಕ): ಪಂಢರೀ ವಾರಕರೀ ಸಾರ್ಥ ಭಜನೀ ಮಾಲಿಕಾ, ಶ್ರೀ ಸಂತ ವಾಙ್ಮಯ ಸೇವಾ ಸಮಿತಿ, ಕೊಪ್ಪಳ, ೨೦೦೬

ರಾಜಪ್ರಭುತ್ವಕ್ಕಿಂತ ಕುಟುಂಬ ದೊಡ್ಡದು : ಪಂಪ

– ಡಾ. ಎ. ರಘುರಾಂ

ಕನ್ನಡದ ಮಹತ್ವದ ಕವಿ ನಾಡೋಜ, ಆದಿಕವಿ ಎಂದು ಕರೆಸಿಕೊಂಡ ಪಂಪ ತನ್ನ ಕಾವ್ಯ 'ವಿಕ್ರಮಾರ್ಜುನ ವಿಜಯ'ದ ಪದ್ಯವೊಂದರಲ್ಲಿ ಸಾಮಾಜಿಕ ಮೌಲ್ಯದ ದೃಷ್ಟಿಯಿಂದ ನಿರ್ವಚಿಸುತ್ತಾನೆ. ಅದು ವಿಶೇಷವೆನ್ನಿಸುವ ಕಾರಣ ಆ ಪದ್ಯವನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿವೇಚಿಸುವುದು ಈ ಲೇಖನದ ಉದ್ದೇಶವಾಗಿದೆ.

ಆ ಪದ್ಯ ಹೀಗಿದೆ :

ಮೃಗಯಾವ್ಯಾಜದಿನೊರ್ಮೆಶಂತನು ತೊಳಲ್ತರ್ಪಂಪಳಂಚಲ್ಕೆ
ತನ್ಮೃಗಶಾಬಾಕ್ಷಿಯ ಕಂಪುತಟ್ಟೆ ಮಧುಪಂಬೋಲ್ ಸೋಲ್ತು ಕಂಡೊಲ್ದು
ನಲ್ಮೆಗೆ ದಿಬ್ಯಂ ಬಿಡಿವಂತೆವೊಲ್ ಪಿಡಿದು ನೀಂಬಾ ಪೋಪಮೆಂದಂಗೆ
ಮೆಲ್ಲನೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ

ಮೇಲಿನ ಪದ್ಯದಲ್ಲಿ ಮಹಾರಾಜನಾದ ಶಂತನು ಬೇಟೆಗಾಗಿ ಕಾಡಿಗೆ ಹೋಗಿ ಅನಿರೀಕ್ಷಿತವಾಗಿ ಸತ್ಯವತಿಯನ್ನು ಕಂಡು ಆಕೆಯ ಸೌಂದರ್ಯಕ್ಕೆ ಮರುಳಾಗುತ್ತಾನೆ. ಆಕೆಯ ಕೈಯನ್ನು 'ದಿಬ್ಯ' ಹಿಡಿಯುವಂತೆ ಹಿಡಿದು 'ನೀಂ ಬಾ ಪೋಪಂ' ಎಂದು ಕರೆಯುತ್ತಾನೆ. ಶಂತನು ಹೀಗೆ ಕೈಹಿಡಿದು ಕರೆದುದಕ್ಕೆ ಸತ್ಯವತಿ 'ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ' ಎಂದು ಹೆಣ್ಣಿಗಿರಬಹುದಾದ ಸಹಜವಾದ ನಾಚಿಕೆಯಿಂದ ಅಷ್ಟೇ ಮೃದುವಾಗಿ ಹೇಳುತ್ತಾಳೆ. ಇಲ್ಲಿ ಬಹಳ ಮುಖ್ಯವಾಗಿ ನಾವು ಗಮನಿಸಬೇಕಾದುದು ಪಂಪ ಕವಿ ಕಟ್ಟಲ್ಪಟ್ಟ ಆವರಣ. ಪಂಪ ಒಂದೊಂದು ಪದ್ಯಕ್ಕೂ ಈ ರೀತಿಯ ಹಿನ್ನಲೆಯನ್ನು ಕಟ್ಟಿಕೊಂಡೇ ಇಡೀ ಕಾವ್ಯದ ವ್ಯಾಪ್ತಿಯನ್ನು ಹಿಗ್ಗಿಸಿ ಮಹೋನ್ನತ ಕಾವ್ಯವನ್ನಾಗಿಸುತ್ತಾನೆ. ಹೀಗೆ ಆವರಣವೊಂದನ್ನು ಕಟ್ಟಿಕೊಡುವಲ್ಲೇ ಪಂಪನ ಸಾಮರ್ಥ್ಯ ಹಾಗೂ ಕಾಳಜಿ ಗೊತ್ತಾಗಿಬಿಡುತ್ತದೆ. ಹೀಗಾಗಿಯೇ ಪಂಪ ಮತ್ತೆ ಮತ್ತೆ ಕಾಡುತ್ತಾನೆ. ಒಂದು ಆವರಣವನ್ನು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿಯೂ ಬೆಸೆಯುವ ಆತನ ಜಾಣ್ಮೆ ಯಾರನ್ನೂ ಮೆಚ್ಚಿಸಬಲ್ಲದು. ಎಂದೋ ಇದ್ದ ಪಂಪ ಇಂದೂ ಕೂಡ ನಮ್ಮೊಡನಿರುವಂತೆ ಕಾಣುವುದು ಆತನು ಬಳಸುವ ಭಾಷೆಯ ಸಮರ್ಥ ಸಂವಾದದಿಂದ. ಈ ಪದ್ಯ ಓದಿದವರಿಗೆ ನಲ್ಲ ಮತ್ತು ನಲ್ಲೆ ನಡೆಸುವ ಒಂದು ಪ್ರೇಮ ಸಂವಾದದಂತೆ

ಕಾಣುತ್ತದೆ. ಹಾಗೆ ಕಾಣಿಸುವವಂತೆ ಮಾಡುವ ಇರಾದೆಯೂ ಪಂಪನಿಗಿದೆ. ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಬರೀ ಕಾಣಿಸುವ ಉದ್ದೇಶ ಪಂಪನಿಗಿಲ್ಲ. ನೋಡುವಂತೆ ಮಾಡುವ ಸಾಮರ್ಥ್ಯವೂ ಪಂಪನಿಗಿದೆ. ನೋಡುವಂತೆ ಎಂದು ಹೇಳಿದ್ದೇಕೆಂದರೆ ಸನ್ನಿವೇಶವೊಂದು ನಮ್ಮೆದುರೇ ನಡೆಯುತ್ತಿದೆ ಎಂದು ಬರೀ ಶಬ್ದಗಳ ಮೂಲಕ ಕಟ್ಟುವ ಕ್ರಮ ಅನನ್ಯವಾದುದು. ನಾಲ್ಕು ಸಾಲಿನಲ್ಲಿ ಘನವಾದುದನ್ನು ಕಟ್ಟಬಲ್ಲ ಸಾಮರ್ಥ್ಯ ಪಂಪನಿಗಿದೆ. ಹೀಗೆ ಹೇಳುವ ಕ್ರಮಕ್ಕೆ ಚಿತ್ರಕಪಿತ್ವ ಎಂದು ಕರೆಯುತ್ತಾರೆ. ಪಂಪನ ಶಕ್ತಿ ಸಾಮರ್ಥ್ಯಗಳು ನಮಗೆ ಗೋಚರಿಸುವುದು ಇಲ್ಲಿಯೇ. ಈ ಶತಮಾನದ ಯಾವುದೋ ಒಂದು ಪ್ರೇಮ ಸಿನೆಮಾದ ದೃಶ್ಯವೊಂದನ್ನು ನೋಡಿದ ಅನುಭವವಾಗುತ್ತದೆ. ಸಾಮಾನ್ಯ ಹೆಣ್ಣಾದ ಸತ್ಯವತಿಗೆ ಮರುಳಾಗಿ ಅವಳನ್ನು ರಾಜನೋರ್ವ 'ಬೇಡು'ತ್ತಿದ್ದಾನೆ. ಬೇಡುವುದು ಯಾವಾಗ ಎಂದರೆ ಬಿಟ್ಟಿರಲಾರದ ತಹತಹಿಕೆಗೆ ಒಳಗಾದಾಗ ಮಾತ್ರ. ಅಂತಹ ತಹತಹ 'ತೊಳಲ್ತರ್ಪಂಪಳಂಚಲ್ಕೆ' ಎಂಬ ಪದಗಳನ್ನು ಬಳಸುವುದರ ಮೂಲಕ ಕಟ್ಟಿದ್ದಾನೆ. ಆಕೆಯ ಅನುಪಮ ಚೆಲುವಿಗೆ ರಾಜ ಮನಸೋತಿದ್ದಾನೆ. ತನ್ನ ಮನಸ್ಸಿನಲ್ಲಾದ ಪ್ರೀತಿಯನ್ನೋ, ಮೋಹವನ್ನು ಹೆಣ್ಣಿನ ಎದುರು ಅರುಹುತ್ತಿದ್ದಾನೆ. ಪ್ರೀತಿಯ ಎದುರು ರಾಜಪ್ರಭುತ್ವವೂ ಶರಣಾಗಿದೆ. ಪ್ರೀತಿಯ ಮುಂದೆ ಎಲ್ಲವೂ ನಶ್ವರ ಎನ್ನುವುದನ್ನು ಪಂಪ ಒತ್ತಿ ಒತ್ತಿ ಹೇಳುತ್ತಿದ್ದಾನೆ. ರಾಜನೋರ್ವ ಬೇಡುವ ಕ್ರಿಯೆ ಇಲ್ಲಿ ಅತ್ಯಂತ ಮಾನವೀಯವಾದದ್ದು. ಆದೇಶಿಸುವ, ಪಡೆಯುವ ಎಲ್ಲ ಶಕ್ತಿಗಳಿದ್ದರೂ ಅದು ಅಮಾನವೀಯ ಎಂಬುದೇ ಇಲ್ಲಿ ಮುಖ್ಯ. ನನಗೆ ನೀನು ಇಷ್ಟವಾಗಿದ್ದೀಯ. ನೀನು ನನ್ನನ್ನು ಪ್ರೀತಿಸು ಎಂಬ ಆಗ್ರಹ, ಅಧಿಕಾರ ದರ್ಪದ ನಡೆ ಇಲ್ಲಿಲ್ಲ. ಪದ್ಯದ ಆಚೆಗೆ ಹೋದರೂ ಕೂಡ ದೇವವ್ರತ (ಭೀಷ್ಮ) ಸತ್ಯವತಿಯ ತಂದೆಯ ಬಳಿ ಬಂದು, ನನ್ನ ತಂದೆ ಸತ್ಯವತಿಗೆ ಒಲಿದಿದ್ದಾನೆ ಅವರ ಒಲುಮೆಗೆ ನೀವು ಒಪ್ಪಬೇಕು ಎಂದು ಗೌರವ ಹಾಗೂ ಪ್ರೀತಿಯಿಂದ ಕೇಳುತ್ತಿದ್ದಾನೆ. ಈ ಸಂಗತಿಯನ್ನು ಕೂಡ ಇಲ್ಲಿ ಅನುಲಕ್ಷಸಿದರೆ ಪಂಪನು ಕಟ್ಟುವ ಪದಗಳ ನಿಶ್ಚಿತ ಅರ್ಥ ಗೊತ್ತಾಗುತ್ತದೆ. ರಾಜಪ್ರಭುತ್ವದ ಅಡಿಯಲ್ಲಿದ್ದುಕೊಂಡೇ ರಾಜಪ್ರಭುತ್ವವನ್ನು ವಿಮರ್ಶಿಸುವ ಬಗೆಯಲ್ಲಿಯೇ ಪಂಪನ ವ್ಯಕ್ತಿತ್ವ ಗೊತ್ತಾಗುತ್ತದೆ. ಈ ಪದ್ಯದಲ್ಲಿ ಕಾಣುವ ಸತ್ಯವತಿ ತಾನು ಒಲಿದಿದ್ದೇನೆ ಎಂಬುದನ್ನು ಪರೋಕ್ಷವಾಗಿ ಹೇಳುತ್ತ 'ಬೇಡುವೊಡೆ ಎಮ್ಮಯ್ಯನಂ ಬೇಡಿರೇ' ಎಂದು ಹೇಳುತ್ತಿದ್ದಾಳೆ. ಅಂದಿನ ಸ್ತ್ರೀಯ ಸಾಮಾಜಿಕ ಸ್ಥಾನಮಾನವನ್ನು ಇಟ್ಟುಕೊಂಡು ಈ ಸಾಲುಗಳನ್ನು ಪರಿಶೀಲಿಸಬೇಕಾಗುತ್ತದೆ. ಇಂದು ಮೇಜರ್ ಆದ ಸ್ತ್ರೀ ಯಾರನ್ನೂ ಕೇಳದೆ ಒಪ್ಪಿಗೆಕೊಟ್ಟುಬರಬಲ್ಲಳು. ಏಕೆಂದರೆ ಭಾರತದ ಸಂವಿಧಾನ ಅವರ ಎದುರಿಗಿದೆ. ಅಂದು ಸ್ತ್ರೀಗೆ ಅಂತಹ ಸ್ವಾತಂತ್ರ್ಯ ಇರಲಿಲ್ಲ ಎಂಬ ಅಂಶದ ಜೊತೆಗೇ, ತಂದೆಯ ಅಧೀನದಲ್ಲಿ ಹೆಣ್ಣು ಇದ್ದುದನ್ನೂ ಕೂಡ ಹೇಳುತ್ತಿದೆ. ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವ, ಸ್ವತಂತ್ರವಾಗಿ ಹೊರನಡೆಯುವ ಸಂದರ್ಭಗಳು ಇಲ್ಲಿ ನಿಯಂತ್ರಿಸಲ್ಪಟ್ಟಿವೆ.

ತಂದೆ ಹೇಳಿದಂತೆ ಕೇಳುವ, ತಂದೆಯೇ ಎಲ್ಲವನ್ನೂ ನಿರ್ಧರಿಸಬಲ್ಲ ಯಜಮಾನ ಕೇಂದ್ರಿತ ನೆಲೆಗಳಿವೆ. ಪ್ರಧಾನ ಸಂಸ್ಕೃತಿಯೊಂದು ಎಲ್ಲವನ್ನೂ ಹೇಗೆ ನಿಯಂತ್ರಿಸುತ್ತಿರುತ್ತದೆ ಎನ್ನುವುದನ್ನೂ ಕೂಡ ಈ ಪದ್ಯದ ಹಿನ್ನೆಲೆಯಲ್ಲಿ ನೋಡಬೇಕಾಗುತ್ತದೆ. ನನ್ನನ್ನು 'ಬೇಡು'ವುದಕ್ಕಿಂತ ನನ್ನ 'ಅಯ್ಯ'ನನ್ನು ಬೇಡುವುದು ಉಚಿತ ಎಂಬ ಮನೋಭಾವವೇ ಇಲ್ಲಿ ಮುಖ್ಯ. ಇದು ಸ್ಪಷ್ಟವಾಗಿ ಪುರುಷ ಕೇಂದ್ರಿತ ನೆಲೆಗಳನ್ನು ಪ್ರತಿಪಾದಿಸುತ್ತಿದ್ದರೂ, ಅಂದಿನ ಸಾಮಾಜಿಕ ಸಂದರ್ಭವನ್ನೂ ಕೂಡ ಹೇಳುತ್ತಿದೆ ಎಂಬುದನ್ನು ಗಮನಿಸಬೇಕು.

ಸಾಮಾಜಿಕ ಸಂಸ್ಥೆಗಳಲ್ಲಿ ಕುಟುಂಬ ಅತ್ಯಂತ ಮುಖ್ಯವಾದುದು. ಕುಟುಂಬವೊಂದನ್ನು ಕಟ್ಟಿದರೆ ನಾವು ಎಲ್ಲವನ್ನೂ ಕಟ್ಟಿದ ಹಾಗೆ ಎಂದು ಪಂಪ ಆಲೋಚಿಸುವುದು ಸಾಮಾಜಿಕ ಸಂದರ್ಭದ ಗಮನಾರ್ಹ ಸಂಗತಿ. ಕುಟುಂಬದ ನಿಯಂತ್ರಣದ ಮುಖ್ಯ ವ್ಯಕ್ತಿ ತಂದೆ. ತಂದೆಯು ಮಾನ್ಯಮಾಡದಿದ್ದರೆ ಅದಕ್ಕೆ ಮಾನ್ಯತೆ ಇಲ್ಲ. ನಾನು ಒಲಿದಿರಬಹದು, ನೀವೂ ಇಷ್ಟಪಟ್ಟಿರಬಹುದು ಆದರೆ ತಂದೆಯ ಮಾನ್ಯತೆ ಮುಖ್ಯ. ರಾಜನೋರ್ವ ಎದುರಿಗಿದ್ದರೂ ಹೆಣ್ಣಿನ ಸಹಜ ಲಜ್ಜೆಗಳಿಂದ ಅಷ್ಟೇ ನಯವಾಗಿ ನೀವು ನನ್ನ ತಂದೆಯನ್ನು 'ಬೇಡಿ' ಎಂದು ಹೇಳುವ ಧೈರ್ಯವನ್ನೂ ತೋರುತ್ತಿದಾಳೆ ಸತ್ಯವತಿ. ಇದು ಸಾಮಾನ್ಯ ಹೆಣ್ಣಾದ ಸತ್ಯವತಿ ತನ್ನ ಕುಟುಂಬದ ಘನತೆಯಿಂದ ಹೇಳಿದ್ದಾಳೋ, ತಂದೆಯೇ ನನಗೆ ಮುಖ್ಯ ಎಂಬ ನಂಬಿಕೆಯಿಂದ ಹೇಳಿದ್ದಾಳೋ. ರಾಜಪ್ರಭುತ್ವ ಇಷ್ಟಪಟ್ಟ ತಕ್ಷಣ ನಾನು ಬಂದುಬಿಟ್ಟರೆ ನನಗೇನು ಬೆಲೆ? ಎಂಬ ಅನೇಕ ಪ್ರಶ್ನೆಗಳು ಸತ್ಯವತಿಯ ಉತ್ತರದಲ್ಲಿವೆ. ಅವುಗಳನ್ನು ಪಂಪ ಸತ್ಯವತಿಯ ಉತ್ತರದೊಳಗೆ ಅಟಡಗಿಸಿಟ್ಟು ರಾಜಪ್ರಭುತ್ವದ ಹುನ್ನಾರಗಳನ್ನು ಸಾಮಾನ್ಯ ಹೊಣ್ಣೊಬ್ಬಳ ಮೂಲಕ ಧ್ವನಿಸುವ ಪರಿ ಅನನ್ಯವಾದುದು. ಹೀಗೆ ಹೇಳಲು ಕಾರಣ ಕುಟುಂಬದ ಘಟಕದಲ್ಲಿ ತಂದೆಗೆ ಇರಬಹುದಾದ ಮಾನ್ಯತೆ. ಹೀಗೆ ಕುಟುಂಬವನ್ನು ನಿಯಂತ್ರಿಸದೇ ಹೋದರೆ ಕುಟುಂಬದ 'ಘನತೆ' ಕಳೆದುಹೋಗಬಹುದು ಎಂಬ ಭಾವನೆ ಮುಖ್ಯವಾಗಿರಬಹುದು. 'ಕೇಳಿ' ಎನ್ನುವ ಪದಕ್ಕೂ 'ಬೇಡಿ' ಎನ್ನುವ ಪದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ರಾಜನೋರ್ವನಿಗೆ ಹೆಣ್ಣೊಂದು 'ಬೇಡು' ಎಂದು ಹೇಳುವ ಸಂದರ್ಭದಲ್ಲಿಯೂ ಕೂಡ ನಿನ್ನ ರಾಜಪ್ರಭುತ್ವಕ್ಕಿಂತ ನನ್ನ ತಂದೆಯೇ ಮುಖ್ಯ ಎನ್ನುವ ಆಶಯ ವ್ಯಕ್ತವಾಗಿದೆ. ಪಂಪ ಇಲ್ಲಿ 'ಬೇಡು' ಎಂಬ ಪದವನ್ನು ಎರಡು ಸಾರಿ ಬಳಸಿದ್ದಾನೆ. ಒಲಿದುದನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲೇಬೇಕು ಎಂಬ ಇರಾದೆ ಇದ್ದರೆ ನೀನು 'ಬೇಡು' ಎಂದು ಹೇಳುವ ಒತ್ತಾಯವೂ ಇಲ್ಲಿದೆ. ಒಲುಮೆಯನ್ನು ವ್ಯಕ್ತಮಾಡಲು ಅಂತಹುದೇ ಶಬ್ದಗಳನ್ನು ಬಳಸಿ ತುಂಬ ಘನಿಷ್ಟ ಪರಿಣಾಮವನ್ನು ಮೂಡಿಸಿದ್ದಾನೆ. ರಾಜಪ್ರಭುತ್ವವೊಂದು ಪ್ರೀತಿಯನ್ನು ಆಗ್ರಹ, ಆದೇಶಗಳಿಂದ ಪಡೆಯುವುದು ಅಮಾನವೀಯ ಎಂಬ ಸಂದೇಶವೊಂದನ್ನು ರಾಜಶಾಹೀ ಮನಸ್ಸುಗಳಿಗೆ ರವಾನಿಸುವ ಅಗತ್ಯವೂ ಪಂಪನಿಗಿದೆ. ಏಕೆಂದರೆ ಅಂತಹ ಅನೇಕ ಉದಾಹರಣೆಗಳು ನಮ್ಮಲ್ಲಿವೆ. ಉದಾಹರಣೆಗೆ ಅಕ್ಕಮಹಾದೇವಿಯನ್ನು ಪಡೆದ 'ಕೌಶಿಕ'ನನ್ನೇ

ನೋಡಬಹುದು. ಉಪ್ಪರಿಗೆಯಲ್ಲಿ ನಿಂತು ರಾಜ ಮೆರವಣಿಗೆಯನ್ನು ನೋಡುತ್ತಿದ್ದ ಮಹದೇವಿಯನ್ನು ಕೆಳಗಿನಿಂದ ನೋಡಿ ಈ ಚೆಲುವೆಯನ್ನು ಅರಮನೆಗೆ ತಂದುಕೊಳ್ಳಬೇಕು ಎಂದುಕೊಳ್ಳುತ್ತಾನೆ. ಅದರಂತೆ ರಾಜಭಟರನ್ನು ಕಳುಹಿಸಿ ಒತ್ತಾಯಪೂರ್ವಕವಾಗಿ ರಾಜ ಅರಮನೆಗೆ ಕರೆಸಿಕೊಳ್ಳುತ್ತಾನೆ. ಮಹದೇವಿಯ ತಂದೆ, ತಾಯಿಯರಿಗೆ ಮದುವೆಮಾಡಿಕೊಡಿ ಎಂದು ಕ್ರೂರ ಆದೇಶಗಳಿಂದ ಒತ್ತಾಯಿಸುತ್ತಾನೆ. ಇಂತಹ ಉದಾಹರಣೆಗಳು ಪಂಪನ ಮುಂದೆ ಇದ್ದ ಕಾರಣವೋ ಏನೋ, ಪ್ರೇಮದ ಎದುರು ರಾಜಪ್ರಭುತ್ವವೂ ಸೋಲಬೇಕು ಎಂಬ ಆಶಯ ವ್ಯಕ್ತಮಾಡುವ ಸಾಲುಗಳನ್ನು ಕಟ್ಟಿದ್ದಾನೆ. ರಾಜನಾದರೂ ಬೇಡುವುದು ಇಲ್ಲಿ ಅನಿವಾರ್ಯ.

ಹೆಣ್ಣು 'ಕುಟುಂಬ' ಘಟಕವೊಂದರ ಸದಸ್ಯೆ. ಪ್ರಾಯ ಬಂದಿದೆ ಎಂದು ಯಾರು ಯಾರನ್ನೋ ಆಶ್ರಯಿಸಿಬಿಟ್ಟರೆ ಕುಟುಂಬದ ಮರ್ಯಾದೆಗೆ ಕುಂದು ಬರಬಹುದು. ಒಂದೊಮ್ಮೆ ತಾನೇ ನಿರ್ಧರಿಸಿದರೆ ಮುಂದಿನ ಎಲ್ಲ ಅನಾಹುತಗಳಿಗೆ ತಾನೇ ಕಾರಣಳಾಗಬಹುದು ಎಂದು ಕೂಡ ತಂದೆಯತ್ತ ತಾನು ತಿರುಗಿಸಿರಬಹುದು. ಇಲ್ಲಿ ಪುರುಷ ನಿಯಂತ್ರಿತ ಎಂದು ಕಾಣಿಸಿದರೂ, ಸಾಮಾಜಿಕ ಸಂಸ್ಥೆಗಳಲ್ಲಿ 'ಕುಟುಂಬ'ದ ಪಾತ್ರ ಬಹುಮುಖ್ಯವಾದುದು. ಸಾಮಾಜಿಕ ಘಟಕವನ್ನು ಒಡೆಯುವುದೂ ಕೂಡ ಅಪರಾಧವಾಗುತ್ತದೆ. ಸಾಮಾಜಿಕ ಘಟಕವಾದ 'ಕುಟುಂಬ'ದ ಮಹತ್ವ ಮುಖ್ಯವೇ ಹೊರತು 'ರಾಜಪ್ರಭುತ್ವ'ವಲ್ಲ. ಒಲಿದ ಪ್ರೇಮದ ಮುಂದೆ ರಾಜತ್ವವೂ ಗೌಣ. 'ಮಧುಪ', 'ದಿಬ್ಯ' ಎಂಬ ಪದಗಳನ್ನು ಬಳಸುವ ಮೂಲಕ ಆವರಣದ ತೀವ್ರತೆಯನ್ನು ಗಂಭೀರಗೊಳಿಸುತ್ತಾನೆ. ಸಾಮಾಜಿಕ ಘಟಕವೊಂದಾದ ಕುಟುಂಬವನ್ನು ಶಿಥಿಲಗೊಳಿಸದಂತೆ ನೋಡಿಕೊಳ್ಳುವ ಎಚ್ಚರಿಕೆಯ ಜೊತೆಗೆ ರಾಜಪ್ರಭುತ್ವವನ್ನು ಹಿಡಿದ ಅಧಿಕಾರಶಾಹಿಗಳು ನಿರ್ಲಜ್ಜಿತರಂತೆ ವರ್ತಿಸಿ ಇಂತಹ ಎಷ್ಟೋ ಕುಟುಂಬಗಳನ್ನು ನಾಶಪಡಿಸಿದ ಬಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಪಂಪ ಪ್ರತಿಕ್ರಿಯಿಸಿದಂತೆ ಕಾಣುತ್ತದೆ. ಕುಟುಂಬ ಪ್ರೇಮ ದೊಡ್ಡದೇ ವಿನ: ರಾಜಪ್ರಭುತ್ವ ದೊಡ್ಡದಲ್ಲ. ಪ್ರೇಮದ ಮುಂದೆ ರಾಜಪ್ರಭುತ್ವ ಕ್ಷುಲ್ಲಕ ಎಂದೂ ಹೇಳುತ್ತಿದ್ದಾನೆ. ಕುಟುಂಬ ಘಟಕದ ಸದಸ್ಯೆಯಾದ ಹೆಣ್ಣನ್ನು ರಾಜಪ್ರಭುತ್ವಗಳು ದುರುಪಯೋಗಮಾಡಿಕೊಂಡ ಬಗ್ಗೆ ಪಂಪನಿಗೆ ತೀವ್ರ ಅಸಹನೆಯಿದೆ. ಹೀಗಾಗಿಯೇ ಇಲ್ಲಿ 'ಬೇಡು' ಎಂಬ ಶಬ್ದವನ್ನು ಬಳಸಿದ್ದಾನೆ. ಕೈಹಿಡಿಯುವ ಸಾಮಾನ್ಯ ಹೆಣ್ಣಿನ ಕೈ ಕೂಡ ಇಲ್ಲಿ 'ದಿಬ್ಯ'ವಾಗುತ್ತದೆ. ದಿಬ್ಯ ಎಂಬ ಶಬ್ದವನ್ನು ಪ್ರಜ್ಞಾಪೂರ್ವಕವಾಗಿಯೇ ಬಳಸಿದ್ದಾನೆ. ಈ ಬಗ್ಗೆ ಈಗಾಗಲೇ ಕನ್ನಡ ಸಾಹಿತ್ಯದಲ್ಲಿ ವಿಪುಲ ಚರ್ಚೆ ಇರುವ ಕಾರಣ ಅದನ್ನು ವಿಸ್ತರಿಸುವ ಗೋಜಿಗೆ ಹೋಗುವುದಿಲ್ಲ. ರಾಜನಾದರೂ ಆ ಹೆಣ್ಣಿನ ಜೊತೆಗೆ ಪ್ರತಿಜ್ಞೆ ಮಾಡು ಎಂಬ ಆಗ್ರಹವೂ ಇದೆ. ಏಕೆಂದರೆ ಸಾಮಾನ್ಯ ಕುಟುಂಬಗಳ ಜೊತೆ ರಾಜಪ್ರಭುತ್ವಗಳು ನಡೆದುಕೊಂಡ ವಿಕೃತಗಳು ಕಣ್ಣೆದುರು ಇದ್ದ ಕಾರಣ ಸಾಮಾನ್ಯ ಕುಟುಂಬಗಳು ನಾಶವಾಗದ ಹಾಗೆ ಇರಲಿ ಎನ್ನುವ ಕಾರಣಕ್ಕಾಗಿಯೇ 'ದಿಬ್ಯ'ವಾಗಬೇಕಿದೆ ಎನ್ನುವುದು

ಪಂಪನ ಆಶಯವೂ ಆಗಿದೆ. ಜಾತಿಯ ಸಂದರ್ಭದಲ್ಲಿ ಅಂಚಿನಲ್ಲಿದ್ದ ಹೆಣ್ಣುಗಳ ಜೊತೆ ರಾಜಪ್ರಭುತ್ವಗಳು ಅಮಾನವೀಯವಾಗಿ ವರ್ತಿಸಿ ನಾಶ ಮಾಡುವ ದುಷ್ಟ ಆಲೋಚನೆಗಳಿಗೆ ಪಂಪನ ವಿರೋಧವಿದೆ ಎನ್ನುವುದೂ ಕೂಡ ಕಾವ್ಯದ ಪ್ರಧಾನ ಆಶಯಗಳಲ್ಲೊಂದಾಗಿದೆ. ಹೆಣ್ಣಿನ ಜೊತೆ ನಡೆದುಕೊಂಡ ರಾಜಪ್ರಭುತ್ವಗಳು ಪ್ರತಿಜ್ಞೆಗಳನ್ನು ಮಾನ್ಯ ಮಾಡದೇ ಎಷ್ಟೋ ಅವಾಂತರಗಳನ್ನು ಸೃಷ್ಟಿಸಿದ ರಾಜರ ಚರಿತ್ರೆ ನಮ್ಮೆದುರಿಗಿದೆ. ಕುಟುಂಬದ ಸೌಖ್ಯ ದೊಡ್ಡದೇ ವಿನ: ರಾಜಪ್ರಭುತ್ವ ದೊಡ್ಡದಲ್ಲ ಎಂದು ಈ ಪದ್ಯದ ಮೂಲಕ ದಿಟ್ಟವಾಗಿ ಹೇಳಿದ್ದಾನೆ, ಈ ಕಾರಣಕ್ಕಾಗಿಯೇ ಪಂಪನ ಕಾವ್ಯಗಳು ಸತ್ತ್ವಶೀಲವಾಗಿವೆ.

ಕಲ್ಯಾಣ ಸೀಮೆಯ ಕಾಲುದಾರಿ ಹೆಜ್ಜೆ ಹುಡುಕುತ - ಕಾಲು ದಾರಿ ಪರಂಪರೆಗೆ ಅನಂತದ ನೆನವು

- ಡಾ. ಸಿ.ಬಿ. ಚಿಲ್ಕರಾಗಿ

ನಮ್ಮ ದೇಶದ ರಾಜಕೀಯ ನೆಲೆಯ ಇತಿಹಾಸಕ್ಕೆ ಧಾರ್ಮಿಕತೆಯ ಎಳೆಗಳು ಸೇರಿಕೊಂಡಿವೆ. ಸಾಂಸ್ಕೃತಿಕ ಹುಡುಕಾಟದಲ್ಲಿ ಕಾವ್ಯ-ಸಾಹಿತ್ಯವಾಗಿ, ಸಂಗೀತವಾಗಿ, ಕಲೆಯಾಗಿ, ಶಿಲ್ಪ-ನೃತ್ಯಗಳಾಗಿ ದೇಶಾದ್ಯಂತ ಹಬ್ಬಿವೆ. ಭಾರತೀಯ ಜನ ಸಮುದಾಯದ ಚಿಂತನೆಗಳ ಜೊತೆ ಜೊತೆಗೆ ಆರೂಢ, ಅವಧೂತ, ನಾಥ, ಸಿದ್ಧ ಮತ್ತು ಸೂಫಿ ಪರಂಪರೆಗಳೂ ಪಾತ್ರ ವಹಿಸಿವೆ. ಇವೆಲ್ಲವುಗಳನ್ನು ಶ್ರಮಣಧಾರೆಗಳು, ಕಾಲುದಾರಿಯ ಪರಂಪರೆಗಳು, ಅನುಭಾವಿ ಪರಂಪರೆಗಳು, ಅವೈದಿಕ ಚಿಂತನೆಗಳು ಎಂದು ಗುರುತಿಸಿಲಾಗಿದೆ, ಈ ಬರಹದಲ್ಲಿ ಹೀಗೆಯೇ ಬಳಸಲಾಗಿದೆ. ಇವು ನಾಡಿನ ಸಂಸ್ಕೃತಿಯ ಜನಮಾನಸದಲ್ಲಿ ಹಾಸುಹೊಕ್ಕಾಗಿ, ಮಹತ್ವದ ಕೊಡುಗೆಯನ್ನು ನೀಡಿದ್ದರೂ ಇತಿಹಾಸಕಾರರಿಂದ ನಿರ್ಲಕ್ಷ್ಯಕ್ಕೊಳಗಾದ ಪರಿಣಾಮ, ನಮ್ಮ ಜನತೆ ಇತಿಹಾಸವೆಂದರೆ ಮೂಗು ಮುರಿಯುತ್ತಾರೆ. ಅರಮನೆ, ಗುರುಮನೆ, ಸೂಳೆಮನೆ, ಸವಣ ಮನೆಯ ಚರಿತ್ರೆಯನ್ನು ವಿಜೃಂಭಿಸಿ ಬರೆದ ಚರಿತ್ರೆಯನ್ನು ಜನರ ಬದುಕಿನ ಚಿತ್ರಣವನ್ನು ನಿರ್ಲಕ್ಷಿಸಿದ್ದರಿಂದ ಜನಸಾಮಾನ್ಯರು ನಿರ್ಲಕ್ಷಿಸಿರಬೇಕು. ಈ ಅನುಭಾವಿಕ ಇತಿಹಾಸವು ದೇಶಾತೀತ ಮತ್ತು ಕಾಲಾತೀತ. ಇವು ನಮ್ಮ ದೇಶದಲ್ಲಿ ಮಾತ್ರವಲ್ಲದೆ ಅಫಘಾನಿಸ್ತಾನ, ಮಧ್ಯಪ್ರಾಚ್ಯ ಏಶಿಯಾ, ಪಾಕಿಸ್ತಾನ, ಬಾಂಗ್ಲಾ, ನೇಪಾಳ, ಚೀನಾ, ಭೂತಾನ ಮತ್ತು ಶ್ರೀಲಂಕಾದಲ್ಲಿಯೂ ಈ ಚಿಂತನೆಗಳಿವೆ. ತನ್ನ ಮೇಲರಿಮೆಯನ್ನು ಕಾಪಾಡಿಕೊಳ್ಳಲು ಮತ್ತು ಮುಗ್ಧ ಜೀವಿಗಳ ಮೇಲೆ ಹೇರಲು ಪ್ರಯತ್ನಿಸುತ್ತಿರುವ ಚಾತುವರ್ಣ ವ್ಯವಸ್ಥೆಯು, ಬಹುಪಾಲು ಜನತೆಯನ್ನು ಕೀಳರಿಮೆಯಲ್ಲಿ ಇರಿಸುತ್ತಾ ಬಂದಿದೆ. ಇದನ್ನು ತೊಡೆದು ಹಾಕಲು ಆಯಾ ಕಾಲದ ಅನುಭಾವಿಗಳ ಪ್ರಯತ್ನ ಸ್ತುತ್ಯಾರ್ಹ. ಬುದ್ಧ ಮತ್ತು ಬುದ್ಧನಿಗಿಂತ ಪೂರ್ವದ ಇಂತಹ ಚಿಂತನೆಗಳಿಗೆ ದೊಡ್ಡ ಇತಿಹಾಸವಿದೆ. ಮಕ್ಕಲಿ ಗೋಶಾಲ, ಪೂರ್ಣಕಶ್ಯಪ, ಪ್ರಕೃತ ಕಾತ್ಯಾಯನ, ನಿಗಂಠನಾಥ ಪುತ್ತ, ಅಸಿಜಿತ ಕೇಶಕಂಬಳಿ ಮುಂತಾದವರು ಪ್ರಮುಖರಾಗಿದ್ದಾರೆ. ಇವರೆಲ್ಲರ ಚಿಂತನೆಗಳು ತಳಸ್ಥ

ಜನರಲ್ಲಿ ಉಳಿದುಕೊಂಡು ಬಂದಿವೆ. ಬುದ್ಧನ ನಂತರ ಆತನ ಜಾಡನ್ನು ಅರಸಿ ಬಂದ ಪರಂಪರೆಗಳಲಿ; ನಾಥ, ಜೈನ, ಸಿದ್ಧ, ಶರಣ, ಸೂಫಿ, ಕಾಪಾಲಿಕ, ಆಜೀವಿಕ ಮುಖ್ಯರು. ಸ್ಥಾಪಿತ ಹಿತಾಸಕ್ತಿಗಳ ಸೃಷ್ಟಿಯನ್ನು ತೊಡೆದುಹಾಕಿ ಜನಸಮುದಾಯದಲ್ಲಿ ಆತ್ಮಸ್ಥೈರ್ಯವನ್ನು ತುಂಬಿ ಎದುರಿಸಿದವರು ಇವರು. ಹಲವು ಕಾಲಘಟ್ಟಗಳಲ್ಲಿ ಈ ದರ್ಶನಗಳನ್ನು ಹತ್ತಿಕ್ಕುವ ಕೆಲಸಗಳು ನಡೆದಂತೆ; ಅವುಗಳನ್ನು ಉಳಿಸಿಕೊಳ್ಳುವ ಹೋರಾಟಗಳೂ ನಡೆದಿವೆ. ಇಂತಹ ನಿಜವಾದ ಮತ್ತು ಜನಸಮುದಾಯದ ತಾತ್ವಿಕತೆ ಮತ್ತು ಜನರ ಸಾಂಸ್ಕೃತಿಕ ನಾಡಿ ಮಿಡಿತವನ್ನು ಅರಿಯಲು ಈ ಅನುಭಾವಿಕ ನೆಲೆಯ ಹುಡುಕಾಟ ಮುಖ್ಯವಾಗಿದೆ.

ಎಲ್ಲಾ ಪ್ರಾದೇಶಿಕ ಭಾಷೆಗಳ ಭಕ್ತಿ ಚಳುವಳಿಯ ಹಿಂದಣ ಅನಂತಗಳಿವೆ ಅನುಭವ ಸಂಪತ್ತುಗಳಿವೆ. ಅವುಗಳನ್ನು ಅನುಭವದಿಂದ ತಿಳಿದುಕೊಂಡು ಬದುಕಿಗೆ ಬೇಕಾಗುವ ತಿಳಿವನ್ನು ಕಟ್ಟಿಕೊಂಡ ಭವ್ಯತೆಯಿದೆ. ಅನುಭಾವಿಗಳ ವಿಚಾರಗಳು ಸರಳವಾಗಿ ಅರ್ಥವಾದ ಪರಿಣಾಮ ತಮ್ಮ ತಮ್ಮ ಪ್ರಾದೇಶಿಕ ಭಾಷೆಯ ಆಪ್ತತೆಯಿಂದ ಜನತೆ ಅಪ್ಪಿಕೊಂಡ ಇತಿಹಾಸವಿದೆ. ಶಾಕ್ತ ಆರಾಧನೆಯನ್ನು ಒಳಗೊಂಡ, ಮಂತ್ರ, ತಂತ್ರಗಳನ್ನು ಒಪ್ಪಿಕೊಳ್ಳುವ ಒಂದು ವಿಲಕ್ಷಣ ಪದ್ಧತಿಯನ್ನು ನಾಥರಿಂದ, ತಮಿಳುನಾಡಿನ ೬೩ಜನ ಪುರಾತನರಿಂದ ಪಡೆದುಕೊಂಡರು. ಬುದ್ಧನ ಕಾಲಕ್ಕೆ ಮತ್ತು ನಂತರದಲ್ಲಿಯೂ ತಾಂತ್ರಿಕರು ಎನ್ನುವವರು ಗುಹ್ಯಸಾಧನೆಗಳನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ. ಅವರ ಜೊತೆಗೂ ಬುದ್ಧ ಮುಖಾಮುಖಿಯಾದ ಬಗ್ಗೆ ಡಾ.ಬಿ.ಆರ್.ಅಂಬೇಡ್ಕರರು ದಾಖಲಿಸಿದ್ದಾರೆ. ಪಂಚ 'ಮ' ಕಾರಗಳ ಆರಾಧನೆಯ ತಾಂತ್ರಿಕ ಪಂಗಡಗಳೂ ಇದ್ದವು. ಇವರನ್ನು ಆಯಾ ಕಾಲದಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಿದ್ದು, ಹತ್ತು ಹಲವು ಬಗೆಯ ಆರಾಧನೆಗಳ ಜಾಡನ್ನು ಹಿಡಿದು ಹೊರಟರೆ ಅವರ ಬೇರುಗಳು ಬಹು ಆಳಕ್ಕೆ ಹೋಗುತ್ತವೆ.

ಇಷ್ಟೆಲ್ಲಾ ತತ್ವಗಳ ಜೊತೆಗೆ ಜನಸಮುದಾಯ ಜೀವನಪ್ರೀತಿಯ ಭಕ್ತಿ ಚಳುವಳಿ ಅಥವಾ ಭಕ್ತಿ ಪರಂಪರೆಯು ಪ್ರಪಂಚದ ಎಲ್ಲ ಕಡೆಗಳಲ್ಲಿ ನಡೆದಿವೆ. ಏಸುಕ್ರಿಸ್ತನ ತರುವಾಯ ಆತನ ೧೨ ಜನ ಶಿಷ್ಯರು ಕ್ರೈಸ್ತ ಧರ್ಮದ ಹಳೆಯ ಒಡಂಬಡಿಕೆಗಳನ್ನು ಕಿತ್ತೊಗೆದರು ಅದು ಮುಂದೆ ಪ್ರೊಟೆಸ್ಟೆಂಟ್ ನವಮತದ ಉದಯಕ್ಕೆ ಕಾರಣವಾಯಿತು. ಸೇಂಟ್ ಅಗಸ್ಟೀನ್, ಜಾನ್ ಸ್ಕಾಟಸ್, ಒರಿಝುನ್, ಸೇಂಟ್ ಅಕ್ವಿನಾಸ್ ಮುಂತಾದವರು ಕ್ರೈಸ್ತಧರ್ಮದ ಸುಧಾರಣೆಗಾಗಿ ಮುಖ್ಯವಾದ ಕೊಡುಗೆಯನ್ನು ನೀಡಿದರು. ಮಾರ್ಟಿನ್ ಲೂಥರ್‌ಕಿಂಗ್ ವ್ಯಾಟಿಕನ್ ನಗರದ ಪಾದ್ರಿಗಳ ಕಪಿಮುಷ್ಟಿಯಿಂದ ಏಸುವಿನ ತತ್ವಗಳನ್ನು ಬಿಡಿಸಿ ಜನಸಾಮಾನ್ಯರಿಗೆ ಹಂಚಿದ. ೧೫-೧೬ನೇ ಶತಮಾನದಲ್ಲಿ ಬಂದ ಸೇಂಟ್ ಕ್ಷೇವಿಯರ್ ಬಹಳ ಮುಖ್ಯ ಚಿಂತಕ, ಸಮಾಜ ಸುಧಾರಕ. ಏಸುವಿನ ಸಿದ್ಧಾಂತಗಳನ್ನು ಜಗತ್ತಿನ ತುಂಬಾ ತಲುಪಿಸಲು ಪ್ರಯತ್ನಿಸಿದ. ಅಷ್ಟೆ ಅಲ್ಲದೆ ರೋಗಿಗಳ ಸೂಶ್ರೂಷೆ, ಹಸಿದವರ ಬಗೆಗಿನ ಕಾಳಜಿಗಳಿಂದಾಗಿ ಬಹುಜನಪ್ರಿಯ ವ್ಯಕ್ತಿಯಾದ. ಭಗವಂತನು

ಬಡವರ ಹೃದಯದಲ್ಲಿದ್ದಾನೆ. ಅವರ ಕಂಬನಿ ಒರೆಸಿದರೆ ಅವನು ತೃಪ್ತನಾಗುತ್ತಾನೆ ಎಂದು ಸಾರಿದ. 'What shall it profit a man, if he gave the whole world and loses his soul' (ಇಡೀ ಪ್ರಪಂಚವನ್ನು ಗೆದ್ದು ಫಲವೇನು? ತನ್ನತಾ ಕಳಕೊಂಡ ಮೇಲೆ?) ಎಂದು ತನ್ನನ್ನು ತಾನು ಗೆಲ್ಲಬೇಕು ಎನ್ನುವ ತತ್ವದ ಬಗ್ಗೆ ಮಾತಾಡಿದ! ಆಶ್ಚರ್ಯ ನಮ್ಮ ದೇಶದ ಚಿಂತನೆಯಲ್ಲಿ ಇಂತಹ ತತ್ವಗಳು ಇವೆ. ನಮ್ಮ ದೇಶಕ್ಕೆ ಇಸ್ಲಾಂ ಆಡಳಿತದ ಕಾಲಕ್ಕೆ ಸೂಫಿಗಳಿಗೆ ಮಾನ್ಯತೆ ದೊರಕಿದ ಫಲವಾಗಿ ಅರಬ್ ಮತ್ತು ಮಧ್ಯ ಏಶಿಯಾದಿಂದ ಅವರು ಬಂದರು. ಈಗಾಗಲೇ ಶಿಷ್ಟರಿಂದ ನಿರ್ಲಕ್ಷಿಸಲ್ಪಟ್ಟಿದ್ದ ಅನುಭಾವಿಕ ಜನರಿಗೆ ಸೂಫಿಗಳ ಸಖ್ಯದಿಂದ ಪ್ರಭುತ್ವದ ಆಶ್ರಯವೂ ದೊರಕಿತು. ಇದರಿಂದಾಗಿ ಸಾಮಾನ್ಯ ಜನಜೀವನ ಮತ್ತು ಅವರ ಅನುಭವ, ತತ್ವಗಳಿಗೆ ಮಹತ್ವ ಬಂದಿತು. ಸೀಮಿತ ಪ್ರದೇಶ, ಸಂಸ್ಕೃತಿ, ಭಾಷೆ, ವಿಚಾರಗಳಿಗೆ ಸೀಮಿತವಾಗಿದ್ದ ವೈದಿಕವು ಜನಮಾನಸದಿಂದ ದೂರಾಗಲ್ಪಟ್ಟಿತ್ತು. ಇಡೀ ದೇಶದ ತುಂಬಾ ಪ್ರಾದೇಶಿಕ ಭಾಷೆ, ಅನುಭವಗಳ ಬೆಳವಣಿಗೆಯ ಕಾಲವೆಂದರೆ ೧೨–೧೩ನೇ ಶತಮಾನ ಮತ್ತು ನಂತರದ ಕಾಲ. ಹೀಗೆ ಭಕ್ತಿ ಪರಂಪರೆಯು ಒಂದು ಚಳುವಳಿಯ ರೂಪವನ್ನು ಪಡೆದುಕೊಂಡಿತು. ಇದನ್ನು ಚಳುವಳಿ ಎಂದು ಗುರುತಿಸಲು ಪ್ರಮುಖ ಕಾರಣ ಅದರಲ್ಲಿ ಕುಲಹದಿನೆಂಟು ಜಾತಿಯ ಶ್ರಮಿಕರು ಪಾಲ್ಗೊಂಡದ್ದು, ಕಾಲಕಾಲದಿಂದ ನಿರ್ಲಕ್ಷಕ್ಕೊಳಗಾಗಿದ್ದ ಸ್ತ್ರೀಯರು, ಅಸ್ಪೃಶ್ಯರು ಈ ಚಳುವಳಿಯಲ್ಲಿ ಪಾಲ್ಗೊಂಡದ್ದು, ವೇದ, ಆಗಮ ಮತ್ತು ಶ್ರೇಷ್ಠತೆಯ ವ್ಯಸನಗಳನ್ನು ಕಿತ್ತುಹಾಕಿದ್ದು. ಜನಪರವಾದ ಚಿಂತನೆಗಳಿಂದ, ಕಳಕಳಿಯಿಂದಲೂ ಬಹುಬೇಗ ಜನರನ್ನು ತನ್ನೆಡೆಗೆ ಸೆಳೆದುಕೊಂಡಿತು.

ಭಾರತೀಯ ವಿವಿಧ ಭಾಷೆಗಳಲ್ಲಿ ಈ ಪರಂಪರೆಯು ಜನರನ್ನು ಮುನ್ನಡೆಸಿದೆ. ಕನ್ನಡ – ಶಿವಶರಣರು (೧೨ನೇ ಶತಮಾನ), ದಾಸರು ಮತ್ತು ತತ್ವಪದಕಾರರು. (೧೫ನೇ ಶತಮಾನದಿಂದ ಈಚೆಗೆ) ಬಂಗಾಲಿ – ಚೈತನ್ಯ (೧೪೮೫–೧೫೩೩), ತಮಿಳು – ಆಂಡಾಳ್, ನಯನಾರರು (೭, ೮ನೇ ಶತಮಾನ), ಆಳ್ವಾರರು (೭ ರಿಂದ ೧೨ನೇ ಶತಮಾನ), ರಾಮಾನುಜಾಚಾರ್ಯ (೧೦೧೭ ರಿಂದ ೧೧೩೭). ಮರಾಠಿ – ನಾಮದೇವ (೧೨೭೦–೧೩೫), ಜ್ಞಾನದೇವ (೧೨೭೫–೧೨೯೬). ಏಕನಾಥ (೧೫೩೩–೧೫೯೯), ತುಕಾರಾಮ (೧೬೦೮–೧೬೫೦). ಕಾಶ್ಮೀರಿ – ಲಲ್ಲಾದೇವಿ (೧೩೨೦–೧೩೯೨), ಶೇಖ್ ನೂರುದ್ದೀನ್ (೧೩೭೭–೧೪೪೦) ರಾಜಸ್ಥಾನಿ ಮತ್ತು ಗುಜರಾಥಿ –ಮೀರಾಬಾಯಿ (೧೪೯೮–೧೫೪೬). ದಾದು ದಯಾಳ (೧೫೪೪–೧೬೦೩), ನರಸಿಂಹ ಮೆಹ್ತಾ (೧೪೧೪–೧೪೮೧) ಲಾಲ್ ದಾಸ (೧೫೪೦–೧೫೯೯). ಹಿಂದಿ – ತುಳಸಿದಾಸ (೧೫೧೧–೧೬೨೩). ಕಬೀರದಾಸ (೧೪೪೦–೧೫೧೮), ಸೂರದಾಸ (೧೪೭೮–೧೬೨೦). ಆಸ್ಸಾಮಿ – ಶ್ರೀಮಂತ ಶಂಕರದೇವ (೧೪೪೯–೧೫೬೮). ಮಾಧವದೇವ (೧೪೮೯–೧೫೯೬) ಪಂಜಾಬಿ – ಗುರುನಾನಕ (೧೪೬೯–೧೫೩೯). ಗುರು ರಾಮದಾಸ (೧೬೦೮–೧೬೬೮೧). ಉರ್ದು – ರಾಬಿಯಾ (೮೦೦). ರೂಮಿ (೧೨೦೭). ಜಾಮಿ (೧೪೧೪). ಗುಲಾಂ ರಸೂಲ್ ಆಲಂಪುರಿ (೧೮೪೯–೧೮೯೨). ಮಿರ್ಜಾ ಗಾಲಿಬ್ (೧೭೯೭).

ಕನ್ನಡನಾಡಿನಲ್ಲಿ ಅದರಲ್ಲಿಯೂ ಉತ್ತರ ಕರ್ನಾಟಕದಲ್ಲಿ ೧೫ ರಿಂದ ೧೯ನೇ ಶತಮಾನದಲ್ಲಿ ದಾಸರು ಮತ್ತು ತತ್ವಪದಕಾರರು ಬಹುದೊಡ್ಡ ಭಕ್ತಿ ಸಾಹಿತ್ಯವನ್ನು ನೀಡಲು ಕಾರಣರಾದರು. ದಕ್ಷಿಣ ಕರ್ನಾಟಕದಲ್ಲಿಯೂ ತತ್ವಪದಕಾರರು ಆಗಿಹೋದರೂ ಉತ್ತರ ಕರ್ನಾಟಕದಷ್ಟು ದೊಡ್ಡ ಪ್ರಮಾಣದಲ್ಲಿ ಇಲ್ಲ. ಅನುಭಾವಿ ಪರಂಪರೆಯ ಆದ್ಯರಾದ ನಿಜಗುಣ ಶಿವಯೋಗಿ, ಸರ್ಪಭೂಷಣ ಶಿವಯೋಗಿಗಳು ದಕ್ಷಿಣ ಕರ್ನಾಟಕದಿಂದ ಉದಿಸಿದವರು. ಇವರು ಉತ್ತರ ಕರ್ನಾಟಕದಲ್ಲಿ ಮನೆಮಾತಾದಷ್ಟು, ದಕ್ಷಿಣ ಭಾಗದಲ್ಲಿ ಅವರನ್ನು ಗುರುತಿಸುವುದು ಕಷ್ಟ. ಇವರ ಪ್ರಭಾವದಿಂದ, ಇವರ ಅದ್ವೈತ ತತ್ವದಿಂದ ಪ್ರಾರಂಭವಾದ ಅನುಭಾವಿ ಪರಂಪರೆಯು ಉತ್ತರ ಕರ್ನಾಟಕದ ತುಂಬಾ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿತು. ಕಡಕೋಳ ಮಡಿವಾಳಪ್ಪ, ಶಿಶುನಾಳ ಶರೀಫ್, ಅಜಾತ ನಾಗಲಿಂಗಪ್ಪ, ಚಿದಾನಂದ ಅವಧೂತ, ಹುಬ್ಬಳ್ಳಿಯ ಸಿದ್ಧಾರೂಢ ಇವರೆಲ್ಲಾ ನಿಜಗುಣರ ತತ್ವಗಳನ್ನೇ ತಮ್ಮ ಜೀವಮಾನ ಪರ್ಯಂತರ ಪಾಲಿಸಿಕೊಂಡು ಬಂದವರು. ಇದು ತತ್ವಪದಕಾರರ ಅಧ್ಯಯನದ ಸಂದರ್ಭದಲ್ಲಿ ತಿಳಿದುಕೊಂಡ ಸತ್ಯ.

ಉತ್ತರ ಕರ್ನಾಟಕ ಅದರಲ್ಲಿಯೂ ಕಲ್ಯಾಣ ಕರ್ನಾಟಕದ ಭಾಗದ ಜನಮಾನಸದಲ್ಲಿ ನೆಲೆನಿಂತ ಇವರು ಈಗಲೂ ಜನರ ಆರಾಧ್ಯರಾಗಿದ್ದಾರೆ. ತಿಂಥಿಣಿ ಮೌನೇಶ್ವರ (೧೭೬೦-೧೮೨೦), ಕಡಕೋಳ ಮಡಿವಾಳಪ್ಪ (೧೭೮೦-೧೮೫೫), ಚಿದಾನಂದ ಅವಧೂತ (೧೭೯೦-೧೮೬೫), ಕೊಡೇಕಲ್ ಬಸವಣ್ಣ (೧೭೯೦-೧೮೬೦), ದಿಗ್ಗಿ ಸಂಗಮನಾಥ (೧೭೯೦-೧೮೬೦), ಸಾವಳಗಿ ಶಿವಲಿಂಗ (೧೮೧೦-೧೯೯೦), ಕೂಡಲೂರು ಬಸವಲಿಂಗಪ್ಪ (೧೭೭೦-೧೮೫೦), ಚನ್ನೂರು ಜಲಾಲಸಾಬ (೧೭೭೦-೧೮೫೦), ಹಜರತ್ ಮಹ್ಮದ್ ಸಾಬ್(೧೭೯೦-೧೮೬೦), ಖೈನೂರು ಕೃಷ್ಣಪ್ಪ (೧೮೨೫-೧೮೭೫), ಮರುಕುಂದಿ ಬಸವಣ್ಣೆಪ್ಪ (೧೮೧೨-೧೮೭೨), ಸಂತೆಕೆಲ್ಲೂರು ಘನಮಠ ಶಿವಯೋಗಿ (೧೮೩೦-೧೯೦೦), ಘಾಡಿವಡಿಕಿ ವಡಿಕೆಪ್ಪ ತಾತ (೧೮೮೦-೧೯೫೬), ನೀರಲಕೆರಿ ಬಸಲಿಂಗಪ್ಪ (೧೮೯೯-೧೯೪೫) ಬಿಜಲಿ ವಸ್ತಾದಿ (೧೮೬೦-೧೯೫೦), ಹೇರೂರು ವಿರುಪನಗೌಡ (೧೮೨೫-೧೯೯೦), ದ್ಯಾಗಾಯಿ ಗುಂಡಪ್ಪ (೧೮೭೭-೧೯೨೭), ಗಬ್ಬೂರು ಹಂಪಣ್ಣ (೧೮೮೦-೧೯೩೫), ರಾಮಪುರದ ಬಕ್ಕಪ್ಪ (೧೮೮೦-೧೯೪೦), ರಾಮದಾಸ (ಬಡೇಸಾಬ-೧೮೯೦-೧೯೭೦), ಮಹಾಗಾಂವ್ ಮೀರಸಾಬ (೧೯೦೦-೧೯೫೫), ಕೊಳ್ಳೂರು ಹಸನಸಾಬ (೧೯೦೦-೧೯೯೪), ಆದಿ ಅಮಾತೆಪ್ಪ (೧೯೧೦-೧೯೮೦), ರಾಯಚೂರು ಹನ್ಮಂತವ್ವ (೧೯೦೦-೧೯೭೦), ಎರಿಮಾರೆಪ್ಪ (೧೯೨೦-೧೯೭೦), ಹಟ್ಟಿ ಲಿಂಗಾವಧೂತ (೧೮೭೦-೧೯೪೦), ಮಸ್ಕಿಯ ಗುರಪ್ಪ ತಾತ (೧೮೯೯-೧೯೮೭) ಮಸ್ಕಿಯ ಅರಕೇರಿ ಚೆನ್ನಯ್ಯ ತಾತ (೧೯೦೫-೧೯೮೯) ಬಿ.ದೇವೇಂದ್ರಪ್ಪ ಮಾಸ್ತರ (೧೯೨೦-೨೦೦೪) ಮುಂತಾದವರು ಹೆಸರುವಾಸಿಯಾದ ತತ್ವಪದಕಾರರಾಗಿದ್ದಾರೆ. ಕೊಡೆಕಲ್ಲಿನ

ರಾಚಪ್ಪಯ್ಯ ಮತ್ತು ಚಾಮರಾಜನಗರ ಜಿಲ್ಲೆಯ ಮಂಟೇಸ್ವಾಮಿಗಳು ಆಪ್ತರಾಗಿ ಕೂಡಿ ಬದುಕಿದ್ದಾರೆ. ನಿಜಗುಣರ ತತ್ವಗಳನ್ನು ಚಿದಾನಂದ ಅವಧೂತರು ಪಾಲಿಸಿಕೊಂಡು ಬಂದ ಬಗ್ಗೆ ತಿಳಿಯುತ್ತದೆ. ಸಿದ್ಧಾರೂಢರ ತತ್ವಗಳನ್ನು ಮಹಾರಾಷ್ಟ್ರ, ಆಂಧ್ರದ ಜನರನ್ನು ಆಕರ್ಷಿಸಿದ್ದು ತಿಳಿಯುತ್ತದೆ. ಹಾಗಾಗಿ ಪ್ರಾದೇಶಿಕತೆಯ ಮಿತಿಗಳು ಅಧ್ಯಯನಕ್ಕೆ ಮಾತ್ರ ಇವೆ ಎನ್ನುವ ಸತ್ಯವನ್ನು ನಾನು ಕಂಡುಕೊಂಡಿದ್ದೇನೆ. ಹೈದ್ರಾಬಾದ್ ಕರ್ನಾಟಕ ಪ್ರದೇಶವಲ್ಲದೆ ಮಧ್ಯ ಕರ್ನಾಟಕ, ದಕ್ಷಿಣ ಕರ್ನಾಟಕದಲ್ಲಿಯೂ ಇಂತಹ ಪರಂಪರೆಯ ಪೋಷಕರು, ಜ್ಞಾನಿಗಳೂ ಆಗಿಹೋಗಿದ್ದು ಬಹುದೊಡ್ಡ ಹೆಸರುಗಳೆಂದರೆ ಕೈವಾರ ನಾರಾಣಪ್ಪ (೧೭೭೦–೧೮೮೦) ಸದ್ಗುರು ಸಿದ್ಧಾರೂಢ (೧೮೬೦–೧೯೫೫), ಗರಗದ ಮಡಿವಾಳ ಶಿವಯೋಗಿ (೧೮೩೦–೧೯೪೫), ನವಲಗುಂದ ನಾಗಲಿಂಗಪ್ಪ (೧೮೪೬–೧೯೩೫), ಸಂತ ಶಿಶುನಾಳ ಶರೀಫ (೧೮೧೯–೧೮೭೫), ಹರಪನಹಳ್ಳಿ ಭೀಮವ್ವ (೧೮೨೩–೧೯೦೩), ಚೆಳ್ಳಗುರ್ಕಿ ಎರ್ರಿತಾತ (೧೮೫೦–೧೯೪೦), ಕೆಸ್ತೂರ ದೇವ (೧೮೨೦–೧೮೯೦) ಇನ್ನೂ ಮುಂತಾದವರು. ನನ್ನ ಅಧ್ಯಯನದ ಸಂದರ್ಭದಲ್ಲಿ ಉಡುಪಿ, ಮಂಗಳೂರು, ಕೊಡಗುಗಳಲ್ಲಿ ಈ ಪರಂಪರೆಯನ್ನು ನನ್ನಿಂದ ಗುರುತಿಸಲಾಗಲಿಲ್ಲ. ಇದು ನನಗೆ ಈಗಲೂ ಕಾಡುವ ದೊಡ್ಡ ಕೊರತೆಯಾಗಿದೆ.

೧೨–೧೩ನೇ ಶತಮಾನದ ನಂತರ ಬಂದ ಭಾರತೀಯ ಎಲ್ಲಾ ಅನುಭಾವಿಕ ಚಿಂತನೆಗಳು ಮತ್ತು ಸಂತರ ಅನುಭವಗಳು ಜನಸಮುದಾಯದ ಹಿತವನ್ನು ಸಾಂಸ್ಥಿಕ ಧರ್ಮಗಳ ಮೋಸಗಳನ್ನು ಬಿಚ್ಚಿಟ್ಟಿವೆ. ಆದ್ದರಿಂದ ಆ ಕಾಲದ ನಂತರ ಉದಿಸಿದ ಅನುಭವ ವಾಣಿಗಳು ಮತ್ತು ಚಿಂತನೆಗಳು ಭಿನ್ನವಾಗಿವೆ.

ಅಕ್ಷರ ಕಲಿತು ಆಡಳಿತದಲ್ಲಿ ಸಕ್ರಿಯ ಪಾಲುದಾರರಾದ ಪುರೋಹಿತರು ಪ್ರಭುತ್ವದ ಹತ್ತಿರವಾಗಿ, ಕಾಲಕಾಲದಿಂದ ಅಧಿಕಾರ, ಅಂತಸ್ತಿನ ಸುಖ ಅನುಭವಿಸಿದ್ದರು. ಜನತೆ ಹಗಲಿರುಳು ದುಡಿದರೂ ಕನಿಷ್ಠ ಜೀವನದ ಅನುಕೂಲಗಳು ದೊರೆಯುತ್ತಿದ್ದಿಲ್ಲ. ದೇವರು, ಧರ್ಮ, ದೇವರ ಅಸ್ತಿತ್ವದ ಹುಟ್ಟಿನ ಮೂಲಗಳಾದ ಮೂರ್ತಿ, ಮಠ, ಗುರುಭಕ್ತಿ ಮುಂತಾದ ವ್ಯವಸ್ಥಿತ ರಚನೆಯನ್ನು ರಚಿಸಿ, ಪುರಾಣ ಮತ್ತು ಪುಣ್ಯ ಕತೆಗಳ ಹೆಸರಿನಲ್ಲಿ ಜನರನ್ನು ಹತ್ತಿಕ್ಕುತ್ತಿದ್ದರು. ಮುಗ್ಧ ಜನತೆ ಮುಂದೆ ಎಂದಾದರೂ ಅಕ್ಷರ ಕಲಿತು ಜಾಣರಾದರೆ ಹೇಗೆಂದು ದುರಾಲೋಚನೆ ಮತ್ತು ದೂರಾಲೋಚನೆಯಿಂದ ಜನಸಾಮಾನ್ಯರನ್ನು ಅಕ್ಷರದಿಂದ ದೂರವಿಡಲು ಅಕ್ಷರ ಕಲಿಯಲು ಉನ್ನತ ಜಾತಿಯವರಿಗೆ ಮಾತ್ರ ಅವಕಾಶ ಸಿಗುವಂತೆ ಮಾಡಿತ್ತು. ಜನಸಾಮಾನ್ಯರು ಓದಿದರೆ ಕಣ್ಣು ಕೀಳಿಸುವ, ಅಕ್ಷರ ಕೇಳಿದರೆ ಕಿವಿಯಲ್ಲಿ ಕಾದ ಸೀಸವನ್ನು ಹಾಕುವ ಪದ್ಧತಿಗಳನ್ನು ರೂಪಿಸಿದ್ದರು. ಅಷ್ಟೇ ಅಲ್ಲದೆ ಕಷ್ಟಪಟ್ಟು ಕಲಿತರೆ ಅವರ ಮುಖ್ಯ ಅಂಗಗಳನ್ನು ಬಲಿ ಪಡೆದ ಘಟನೆಗಳೂ ದಾಖಲಾಗಿವೆ. ಏಕಲವ್ಯನ ಹೆಬ್ಬೆರಳು, ಕರ್ಣನಿಗೆ ನೀಡಿದ ಶಾಪ, ಮೊನ್ನೆ ಮೊನ್ನೆಯವರೆಗೆ ಅಸ್ಪೃಶ್ಯರಿಗೆ ಶಾಲೆಯೊಳಗೆ ಸೇರಿಸಿಕೊಳ್ಳದ ವ್ಯವಸ್ಥೆಗಳು. ಆದರೆ ಅನುಭಾವಿಗಳು ಮಾತ್ರ ಈ ವ್ಯವಸ್ಥೆಯಿಂದ ದೂರಾಗಿ ತಮ್ಮ ಅನುಭವಗಳನ್ನು

ದಾಖಲಿಸಿಕೊಂಡು ಬದುಕಿದೆ. ಸೂಫಿಗಳ ಮತ್ತು ಅನುಭಾವಿ ಪರಂಪರೆಯ ಪರಸ್ಪರ ಕೊಡುಕೊಳ್ಳುವಿಕೆಯು ಭಾರತೀಯ ಕಾಲುದಾರಿಯ ಸಂತಪರಂಪರೆಗೆ ಮತ್ತಷ್ಟು ಕಸುವನ್ನು ನೀಡಿತು. ಇವರಲ್ಲಿ ಕನ್ನಡ ನಾಡಿನಲ್ಲಿ ಪ್ರಸಿದ್ಧರಾದ ಪರಂಪರೆಗಳೇ ಬೆಳೆದಿವೆ. ಸಿದ್ಧಾರೂಢ ಮತ್ತು ಕಬೀರ, ಶಿರಹಟ್ಟಿ ಫಕೀರೇಶ್ವರ ಮತ್ತು ದಿಣದಾರ್ ಚೆನ್ನಬಸವೇಶ್ವರ, ಶಿಶುನಾಳ ಶರೀಫ್ ಮತ್ತು ಗುರುಗೋವಿಂದ ಭಟ್ಟ, ಶಾನುಂಗ ಮತ್ತು ಮಹಿಪತಿದಾಸ, ತಿಂಥಿಣಿ ಮೌನೇಶ್ವರ ಮತ್ತು ಪಾಚೋ ಪೀರ್ ಪೈಗಂಬರ, ಕೊಡೇಕಲ್ಲು ಬಸವಣ್ಣ ಶಾವಲಿ, ಕೌತಾಳಂ ಗುರುಖಾದ್ರಿ– ವೀರಭದ್ರ ಇವರು ಸೂಫಿ ಶರಣ ಪರಂಪರೆಗಳ ಕೊಂಡಿಗಳಂತೆ ಇದ್ದಾರೆ. ಎಷ್ಟೋ ಇಸ್ಲಾಂ ಸಂತರ ದರ್ಗಾಗಳು ಧರ್ಮಬೇಧಗಳನ್ನು ಮರೆತು ಆರಾಧನೆಗೊಳ್ಳುತ್ತಿವೆ.

ಜ್ವಾಕೀಲೆ ಹದಿನೆಂಟು ಜಾತೀಗೆ ಹೇಳತೀನಿ: ತನ್ನ ತಾ ತಿಳಿದ ಮೇಲೆ ಇನ್ನೇನಿನ್ನೇನು ಇನ್ನೇನು?

ಈಶ್ವರವಾದ ಮತ್ತು ನಿರೀಶ್ವರವಾದ ಪ್ರಾಚೀನ ಕಾಲದಿಂದಲೂ ಇವೆ. ಸಗುಣೋಪಾಸಕರು ಮತ್ತು ನಿರ್ಗುಣೋಪಾಸಕರು ಧಾರ್ಮಿಕ ಚರಿತ್ರೆಯಲ್ಲಿ ಸಿಗುತ್ತಾರೆ. ನಿರೀಶ್ವರವಾದಿಗಳು ಭಕ್ತಿಯನ್ನು ಗೌಣವಾಗಿಸಿ, ಜೀವನ ಪ್ರೀತಿಗೆ ಮಹತ್ವ ನೀಡಿದರು. ಆದರೆ ಸಗುಣ ಉಪಾಸಕರು ಭಕ್ತಿಯ ಆಚರಣೆಯಿಂದ ಎಲ್ಲಾ ಸಂಕಷ್ಟಗಳ ಪರಿಹಾರ ಅವನಿಗೆ ಸೇರಿದೆ ಎಂದರು. ನಿರ್ಗುಣೋಪಾಸಕರಾದ ಸಾಂಖ್ಯರು 'ಜಗತ್ತಿಗೆ ಕಾರಣವಾದುದು ಪ್ರಕೃತಿ, ಅದು ನಿತ್ಯ ಮತ್ತು ಪರಿವರ್ತನಶೀಲ. ಸತ್ವ, ರಜ ಮತ್ತು ತಮ ಇವು ಮೂರು ಮೂಲ ಪ್ರಕೃತಿಯ ಗುಣಗಳಾಗಿವೆ. ಜಗತ್ತಿನ ವಸ್ತುಗಳು ಕಾರ್ಯಗಳು, ಅವುಗಳಲ್ಲಿ ಸುಖ, ದುಃಖ ಮತ್ತು ಮೋಹ ಕಾಣಿಸಿಕೊಳ್ಳುತ್ತವೆ. ಅದಕ್ಕೆ ಅಂತಿಮವಾಗಿ ಕಾರಣವಾದ ಪ್ರಕೃತಿಯನ್ನು ತಿಳಿಬೇಕು' ಎನ್ನುವ ವಿಚಾರಗಳು ಅವರಲ್ಲಿವೆ. ಕಣಾದನು 'ಜಗತ್ತು ಅಸಂಖ್ಯ, ಅದೃಶ್ಯ, ಶಾಶ್ವತ ಹಾಗೂ ಆದಿ ಅಂತ್ಯವಿಲ್ಲದ ಕಣಗಳಿಂದ ರಚನೆಯಾಗಿದೆ' ಎಂದನು. ಮತ್ತೊಬ್ಬ ಚಿಂತಕ ಮಕ್ಕಲಿಪುತ್ರ ಗೋಶಾಲನು 'ಪಾಪ–ಪುಣ್ಯ ಕರ್ಮಗಳಿಂದ, ಪೂಜೆ ಪುನಸ್ಕಾರಗಳಿಂದ ಯಾವ ಪರಿಣಾಮವೂ ಉಂಟಾಗುವುದಿಲ್ಲ' ಎಂದ. ಹೀಗೆ ಸ್ಥಾಪಿತ ಧರ್ಮ ಮತ್ತು ದೈವ ನಿರ್ಲಕ್ಷತನ ಮತ್ತು ಅವೈದಿಕ ಚಿಂತನೆಗಳು ಇಡೀ ದೇಶದ ತುಂಬಾ ಜನರಲ್ಲಿ ವ್ಯಾಪಿಸಿದ್ದಿರಬೇಕು. ಸಾಂಖ್ಯರು, ವೈಶೇಷಿಕರು, ಬೌದ್ಧರು, ಜೈನರು, ಲಿಂಗಾಯತರು, ಮುಂತಾದವರ ಚಿಂತನೆಗಳನ್ನು ಪ್ರಭಾವಿಗಳು ಮತ್ತು ಸಂಪ್ರದಾಯವಾದಿಗಳು ಹತ್ತಿಕ್ಕಿದ್ದನ್ನು ವಿದ್ವಾಂಸರು ಗುರುತಿಸಿದ್ದಾರೆ. ಆದರೂ ಅವರ ಚಿಂತನೆಗಳು ಜನರ ಕಾಳಜಿಯಿಂದ ನುಸುಳಿಕೊಂಡು ಇಂದಿಗೂ ನಮ್ಮಲ್ಲಿ ಉಳಿದುಕೊಂಡಿವೆ. ಜನತೆಯ ಶ್ರಮ ಸಂಸ್ಕೃತಿಯ ಗೌರವಕ್ಕೆ, ಮಾನಸಿಕ ಆರೋಗ್ಯಕ್ಕೆ ಹಿತಕಾರಿಯಾದ ಇಂತಹ ಚಿಂತನೆಗಳನ್ನು ಜನರು ಗೌರವಿಸಿದ್ದು ಸಹಜವಾಗಿದೆ. ಇಂತಹ ಪರಂಪರೆಗಳನ್ನು ಕನ್ನಡನಾಡಿನ ವಚನಕಾರರು, ಕೆಲವೊಬ್ಬ ದಾಸರು ಮತ್ತು ತತ್ವಪದಕಾರರು ಹಿಡಿದುಕೊಂಡದ್ದು ಅವರ ಸಾಹಿತ್ಯ ಕೃತಿಗಳಿಂದ ಕಂಡುಬರುತ್ತದೆ.

'ಮಾನವ ನಾಲ್ಕು ಮೂಲ ವಸ್ತುಗಳಿಂದ ಅಸ್ತಿತ್ವ ಪಡೆಯುತ್ತಾನೆ. ಪರಲೋಕಕ್ಕಾಗಿ ಮಾಡುವ ದಾನ ಮುಂತಾದ ಪುಣ್ಯ ಕಾರ್ಯಗಳು ವ್ಯರ್ಥ, ಆಸ್ತಿಕವಾದ ಎಂಬುದು ಸುಳ್ಳಿನ ಕಂತೆ' ಎನ್ನುತ್ತಾನೆ ಅಸಿತ ಕೇಶಕಂಬಳಿ. ನಂತರ ಮಧ್ಯಕಾಲೀನ ಸಂದರ್ಭದಲ್ಲಿ ನಾಥರು, ಅವಧೂತರು, ಆರೂಢರು ಇಂತಹ ಚಿಂತನೆಗಳನ್ನು ಬೆಳೆಸಿದರು. ನಾಥ ಪರಂಪರೆಯ ದೊಡ್ಡ ಸಂತನಾದ ಗೋರಕನಾಥ್‌ನು ತನ್ನೊಂದು ಬಾನಿಯಲ್ಲಿ,

ದೇವಲ ಜಾತ್ರಾ ಸುಂನಿ ಜಾತ್ರಾ, ತೀರಥ ಜಾತ್ರಾ ಪಾಂಣೀ।
ಅತೀತ ಜಾತ್ರಾ ಸುಫಲ ಜಾತ್ರಾ ಬೋಲೈ ಅಮೃತ ಬಾಂಣೀ ॥

(ದೇವಾಲಯದ ಯಾತ್ರೆ ಶೂನ್ಯವಾದುದು, ಇದರಿಂದ ಯಾವ ಫಲವೂ ಸಿಗುವುದಿಲ್ಲ. ತೀರ್ಥಯಾತ್ರೆ ನೀರಿನ ಯಾತ್ರೆಯಾಗುತ್ತದೆ ಅಷ್ಟೆ ಅತೀತ ಯಾತ್ರೆಯೇ ಸುಫಲವಾದದ್ದು. ಅಮೃತ ನುಡಿಗಳನ್ನು ನುಡಿಯುವವರಲ್ಲಿಗೆ ನುಡಿಯುವವರಲ್ಲಿಗೆ ಯಾತ್ರೆ ಮಾಡಿದಾಗ ಬೇರೆ ಯಾತ್ರೆಗಳಿಗೆ ಹೋಗಬೇಕಾದ ಸಂಭವ ಬರುವುದಿಲ್ಲ)

ಬುದ್ಧನ ಸುತ್ತ ನಿಪಾಟದಲ್ಲಿ 'ಹುಟ್ಟಿನಿಂದ ಜಾತಿ ಎನ್ನುವುದು ಇಲ್ಲ, ಅದು ಅವನ ನಡತೆಯ ಮೇಲೆ ನಿರ್ಧಾರವಾಗುತ್ತದೆ. ಬ್ರಾಹ್ಮಣನು ನಡೆತೆಯಿಂದ ಆದವನು' ಬುದ್ಧನ ಆರ್ಯ ಸತ್ಯಗಳು, ಅಷ್ಟಾಂಗ ಮಾರ್ಗಗಳಲ್ಲಿಯ ಪ್ರಜ್ಞೆಯು ಜನರನ್ನು ತನ್ನೆಡೆಗೆ ಸೆಳೆಯಿತು. ಶರೀರ, ಮಾತು ಮತ್ತು ಮನಸ್ಸುಗಳಿಂದ ಮಾಡುವ ಹಿಂಸೆಯೇ ಪಾಪ, ಅಪ್ಪಿತಪ್ಪಿ ಆದ ಪಾಪಕರ್ಮಗಳಿಗೆ ದೇಹದಂಡನೆ ಬೇಡ, ಆದರೆ ಹತ್ತು ಪುಣ್ಯಕರ್ಮಗಳನ್ನು ಮಾಡಬೇಕೆಂಬ ನಿಯಮವಿದೆ. ದಾನ, ಧ್ಯಾನ, ಶೀಲ, ಆದರ, ಪರರ ಪುಣ್ಯದಲ್ಲಿ ಸಂತಸ ಪಡುವುದು, ಸ್ವಂತ ಗಳಿಸಿದ ಪುಣ್ಯವನ್ನು ಅನ್ಯರಿಗೆ ನೀಡುವುದು, ಶ್ರವಣ, ಉಪದೇಶ, ಸರಿಯಾದ ನಂಬಿಕೆ ಹೀಗೆ ಒಂದು ಒಳ್ಳೆಯ ಬದುಕಿಗಾಗಿ ಮನುಷ್ಯ ಮಾಡಬೇಕಾದುವುಗಳನ್ನು ಪಾಲಿಸಲು ತಿಳಿಸುತ್ತಾನೆ. ಈ ರೀತಿಯ ಭಕ್ತಿ ಚಳುವಳಿಯ ಕಾಲದ ಚಿಂತನೆಗಳನ್ನು ಜನರು ಕೇಳಿ ಅನುಭಾವಿಗಳ ಬೆನ್ನುಬಿದ್ದರು. ಕನ್ನಡ ನಾಡಿನ ಸಂತನಾದ ಶಿಶುನಾಳ ಶರೀಫನು ಇಂತಹ ವಿಶಾಲ ತತ್ವಕ್ಕೆ ಮುಖಾಮುಖಿಯಾಗಿದ್ದು ಹೀಗೆ. ಬೋಕಿಯೊಳಗ ಮೂರುಲೋಕ ಹುಟ್ಟೀತು ಆಕುಲ ಈಕುಲ ಎಲ್ಲಿತ್ತೋ ॥ಪ॥

ಜ್ವಾಕೀಲೆ ಹದಿನೆಂಟು ಜಾತೀಗೆ ಹೇಳತೀನಿ । ಏಕಮುಂಡಿಗಿ ಮಾತಿದು ಗೊತ್ತೋ॥ಅ.ಪ॥ ಬಲ್ಲವರಾದರೆ ಹೇಳಿರಿ ಜಾತಿಗೆ ತಿಳದು । ಮುಲ್ಲಾನಮಸೀದಿ ಎಲ್ಲಿತ್ತೋ। ಗುಲ್ಲುಮಾಡಿಗುದ್ದಾಡಿ ಅಲಾವಿಗೆ । ಬೆಲ್ಲ ಓದಿಸೋದು ಎಲ್ಲಿತ್ತೋ ॥೧॥ ಫಕೀರರಾಗಿ ಪಾಪರಿವಾಯಿತು । ಏಕಾರಿ ಕಲಿಕರ್ಮದ ಗೊತ್ತು । ಠಿಕಾಣಿಗೆ ಶಿಶುನಾಳಧೀಶನಿಗೆ । ಸವ್ವಾಲಿಗುತ್ತರ ಹೆಚ್ಚಿತ್ತು॥೨॥ ಕುಂಬಾರಕಿ ನಾ ಕುಂಬಾರಕಿ । ಜಗವೆಲ್ಲ ತುಂಬಿಕೊಂಡಿರುವ ಕುಂಬಾರಕಿ ॥ಪ॥ ಚಿನ್ನ ಎಂಬುವ ಮಣ್ಣನ್ನು ತರಿಸಿ । ತನು ಎಂಬು ನೀರನು ಹನಿಸಿ। ಮನ ಎಂಬುವ ರಾಡಿಯ ಕಲಸಿ । ಗುಣ ಎಂಬುದೊಮದು ಸೋಸುಹಾಕಿ॥೧॥ ಜ್ಞಾನ ಎಂಬುವ ತಿಗರಿಯ ಹೂಡಿ । ಭಕ್ತಿಯೆಂಬುವ ಬಡಗೀಯ ಊರಿ।

ಮುನ್ನೂರರದರವತ್ತು ಸುತ್ತನು ತಿರವಿ । ಗಡಗಿಯ ತಯಾರು ಮಾಡುವಾಕಿ ॥೨॥ ಆಚಾರ ಎಂಬುವ ಆವಿಗೆ ಮುಚ್ಚಿ । ಸತ್ಯ ಎಂಬುವ ಬೆಂಕೀ ಹಚ್ಚಿ । ಸಾವಿರ ಕೊಡಗಳನೆಲ್ಲಾ ಸುಟ್ಟು । ಸಂತೆಯೊಳಿಟ್ಟು ಮಾರುವಾಕಿ ॥೩॥ ಆರುತಾಸಿಗೊಂದು ಗಡಗೀಯ ಮಾಡಿ । ಮೂರು ತಾಸಿಗೊಂದು ಕುಡಕೀಯ ಮಾಡಿ । ಅರಿವಿನೊಳಗ ನಮ್ಮ ಶಿವಲಿಂಗೇಶನ । ಜ್ಞಾನದ ಮಗಿಯೊಂದು ಮಾಡುವಾಕೀ ॥೪॥[೭]

ಬುದ್ಧನ ಸಮಕಾಲೀನನಾದ ಪ್ರಕೃತ ಕಾತ್ಯಾಯನನು 'ಪ್ರಕೃತಿಯನ್ನು ಯಾರೂ ಸೃಷ್ಟಿಸಿಲ್ಲ, ಅದು ತನಗೆ ತಾನೇ ಆಗಿದೆ, ಭೂಮಿ, ನೀರು, ಬೆಂಕಿ, ಗಾಳಿ, ಸುಖ, ದುಃಖ ಎನ್ನುವ ಈ ಏಳು ತತ್ವಗಳು ಒಂದಕ್ಕೊಂದು ಹಾನಿ ಮಾಡಲಾರವು. ಒಂದು ಇನ್ನೊಂದಕ್ಕೆ ಕಾರಣವಾಗಲಾರವು. ಈ ತತ್ವಗಳ ಮಧ್ಯೆ ಖಾಲೀ ಅವಕಾಶ ಹೆಚ್ಚಾಗಿ ಇರುವುದೆಂದೂ, ನಾವು ಎಷ್ಟೇ ಬಲವಾಗಿ ಹೊಡೆದರೂ; ಅದು ಖಾಲೀ ಪ್ರದೇಶವನ್ನು ತಗುಲುತ್ತದೆಯೇ ಹೊರತು ಮೂಲತತ್ವಕ್ಕೆ ಪೆಟ್ಟು ಬೀಳುವುದಿಲ್ಲ.' ಎಂದಿದ್ದಾನೆ.

ಕನ್ನಡ ನಾಡಿನ ವಚನಕಾರರು, ಹಿಂದಿಯ ಸೂರದಾಸ, ಕಬೀರದಾಸ ಮತ್ತು ಮರಾಠಿಯ ವಾರಕರಿ ಪಂಥದವರು ಮನುಷ್ಯನ ಇರುವ ಜೀವನವನ್ನು ತ್ಯಜಿಸಿ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ದೇಹ ನಶ್ವರ, ಹೆಣ್ಣು ಕೀಳು, ಪ್ರಪಂಚ ಸುಳ್ಳು ಎನ್ನುವುದನ್ನು ಅನುಭಾವಿ ಪರಂಪರೆಯು ಒಪ್ಪುವುದಿಲ್ಲ ಬದಲಾಗಿ, ಇಂತಹ ಸುಳ್ಳು ತತ್ವಗಳನ್ನು ಬಿತ್ತಿ ದುಡಿಯದೆ ಸುಖ ಪಡುವ ಸಾಂಪ್ರದಾಯಿಕ ಆಚರಣೆಗಳನ್ನು ಮೀರಬೇಕು ಎನ್ನುತ್ತಾರೆ. ಅನುಭಾವಿ ಪರಂಪರೆಯಲ್ಲಿ ಕಾಯ ಮತ್ತು ಕಾಯಕದ ಘನತೆಯನ್ನು ತಿಳಿಸಿದ್ದಾರೆ. 'ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಫಲವೇನೋ? ಕಾಮಕ್ರೋಧ ಲೋಭ ಮೋಹ ಮದ ಮತ್ಸರ ವಿಷಯವನತಿಗಳೆದಲ್ಲಿ ಫಲವೇನೋ ಇವೆಲ್ಲವ ಕೊಂದ ಪಾಪ ನಿಮ್ಮ ತಾಗುವುದು ಗುಹೇಶ್ವರಾ!'[೩] ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ. ತುಟ್ಟ ತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ. ನಿತ್ಯ ನೇಮದಿಂದ ತನುವ ಮುಟ್ಟಿಕೊಂಡಡಿಲ್ಲ. ನಿಚ್ಚಕ್ಕೆ ನಿಚ್ಚ ನೆನೆವ ಮನವ, ಅಂದಂದಿಗೆ ಅತ್ತಲಿತ್ತ ಹರಿವ ಮನವ ಚಿತ್ರದಲ್ಲಿ ನಲಿಸಬಲ್ಲಡೆ, ಬಚ್ಚಬರಿಯ ಬೆಳಗು ಗುಹೇಶ್ವರ ಲಿಂಗವು[೪] ಇದರಿಂದಾಗಿ ಶ್ರೇಷ್ಠತೆಯ ವ್ಯಸನದಿಂದ ಬಳಲುವ ರೋಗಗ್ರಸ್ಥ ಸಮಾಜವನ್ನು ವಿಮರ್ಶಿಸಿ, ಅದರ ತಪ್ಪುಗಳನ್ನು ತಿಳಿಸಲು ಸಾಧ್ಯವಾಯಿತು. ವೈಚಾರಿಕ ಪ್ರಜ್ಞೆಯು ಜನಸಮುದಾಯದಲ್ಲಿದ್ದು, ಅದನ್ನು ತತ್ವಪದಕಾರರು ಅರ್ಥಪೂರ್ಣವಾಗಿ ಹಿಡಿದಿಟ್ಟಿದ್ದಾರೆ. ಕಲ್ಲುಕಲ್ಲಿಗೆ ಜಗಳ ನೋಡಣ್ಣ । ಕಲ್ಲೊಳಗೆಜನಿಸಿದ ಜಡದ ಮೂರ್ತಿಗೆ ಜಗದ ಅಭಿಮಾನ ॥ಪ॥ ಜಡವುಸೂಕ್ಷ್ಮವಾದ ಬಳಿಕ । ಜಗದ ಅಭಿಮಾನ ಹೊರುವುದ್ಯಾಕ ಜಗವು ತನ್ನನು ಜರಿದು ನುಡಿದರೆ । ಹಿರಿದು ಕಿರಿದು ಅಂತನ್ನುದ್ಯಾಕ ॥೧॥ ಸಾಧು ಸಂಗಡ ವಾದ ನೋಡಣ್ಣ ಗುರು । ಹಾದಿ ತಿಳಿದರ ಗುಡಿಸಲಿದ್ದರ ಗೋಪಿತನಗಣ್ಣ । ಗುಡಿಯಕಟ್ಟಿಸಿ ಒಡಿಯನಾದಡೆ । ಗುಡಿಯ ಗುಡಿಸೀಲಡಿಯ ಇಡುವನು । ಅಡಿಗೆ ಅಗಿದ ಕಡುಮೃಗ ತಾ । ನಡಿಗೆ ಬಂದರ ನರಕ ತಪ್ಪದು ॥೨॥ ಸುಖವು ಸಿಗದಯ್ಯ ಸುಡು ಈ ಲೋಕದಿ । ಸುಖವಾದರೆ ಸೋತುಸ್ವರ್ಗಕೆ ನಾಕದೊಳು

ಮೇದಿ । ಸೃಷ್ಟಿಯೊಳಗೆ ಸಿರಗಾಪುರ ವಾಸ ಶ್ರೇಷ್ಠ ವೀರನಪಾದವಾಸಾ ಇಷ್ಟು ಹೇಳಿದ ಗುರುವೀರೇಶ ॥೩॥"

ಎಷ್ಟು ತೊಳಿಯಲಮ್ಮ ಈ ದೇಹದ ಮೈಲಿಗೋಗದಮ್ಮಾ:

ವಚನಕಾರರ ನೆರಳಿನಲ್ಲಿ ತಮ್ಮ ವಿಚಾರಗಳನ್ನು ಕಟ್ಟಿಕೊಂಡ ತತ್ವಪದಕಾರರು, ಕಾಯಕ ಮೂಲವನ್ನು ನೆಚ್ಚಿಕೊಂಡವರು. ತಮ್ಮ ತಮ್ಮ ಕಾಯಕದಿಂದ ಕಾಯ ದಂಡನೆಯು ಅನುಭವಗಳನ್ನು ಒಂದೆಡೆ ಹಿಡಿದಿಟ್ಟರು. ಅದನ್ನು ಕಾವ್ಯದ ವಸ್ತುವನ್ನಾಗಿಸಿಕೊಂಡರು. ದುಡಿಯುತ್ತಲೆ ಕರಗುವ ಮತ್ತು ದಣಿಯುವ ಕಾಯವನ್ನು ಹಿಡಿದುಕೊಂಡೇ ಬಿಡುಗಡೆ ಪಡೆಯುವ ಹಂಚಿಕೆಗಳನ್ನು ಕಂಡುಕೊಂಡವರು. ಹೊರಗಿನ ದುಡಿಮೆಯೊಂದಿಗೆ ಸಿಗುವ ಅನುಭವ ಮತ್ತು ಒಳಗಿನ ಅರಿವಿನ ವಾಣಿಯ ಎಚ್ಚರದಿಂದ ಬಿಡುವಿನ ವೇಳೆಯಲ್ಲಿ ಕಂಡುಕೊಂಡ ಅನುಭಾವಕ್ಕೆ ತಮ್ಮ ಕಾಯಕ ಸಾಧನೆ ಮತ್ತು ಭಕ್ತಿಯನ್ನು ಜೋಡಿಸಿಕೊಂಡರು. ನರಜನ್ಮ ಕನಿಷ್ಠ, ದೇವರು ಪಾಪಿಗಳ ಪ್ರಾರಬ್ಧಕ್ಕಾಗಿ ಜಾತಿಗಳ ಶ್ರೇಣೀಕರಣದಲ್ಲಿ ಹುಟ್ಟಿಸುತ್ತಾನೆ, ಈ ಜನ್ಮದಲ್ಲಿ ಉನ್ನತ ಜಾತಿಯಲ್ಲಿ ಜನಿಸಲು ಪುಣ್ಯದ ಫಲ ಕಾರಣ, ಕೃಷಿಕೃತ್ಯ ಕಾಯಕ ಮಾಡುವವನು ಪಾಪಿ ಜನ್ಮದವನು ಎನ್ನುವ ವಾದವನ್ನು ಅನುಭಾವಿಗಳು ತಿರಸ್ಕರಿಸಿದರು.

ಶ್ರಮವಿರೋಧಿ ಧರ್ಮ, ದೇವರು, ತತ್ವ ಮತ್ತು ಅದರಿಂದ ಬಂದ ಸಾಹಿತ್ಯವನ್ನು ತಿರಸ್ಕರಿಸಿದರು. ದೇಹವೇ ದೇಗುಲವಾಗಿರುವಾಗ ಮತ್ತೆ ಬೇರೆ ದೇವಾಲಯಕ್ಕೆ ಎಡೆಯಾಡಲೇಕೇ?, ಕಷ್ಟ ಸುಖಗಳು ನಮ್ಮ ಪ್ರಾರಬ್ಧದ ಫಲಗಳಲ್ಲ, ಬದಲಾಗಿ ಅಕ್ಷರವಂತರ ಮೋಸ ಎಂದರು. ದೇವರಿಗೂ ತಮ್ಮ ಕಷ್ಟಗಳ ಅರಿವಾಗಬೇಕಾದರೆ, ಅವನನ್ನೇ ತಮ್ಮಂತೆ ಒಡಲುಗೊಂಡು ಇಷ್ಟ ಅನಿಷ್ಟಗಳನ್ನು ಅನುಭವಿಸಲು ಕರೆ ನೀಡಿದರು. ದೇವನನ್ನು ಪತಿಯಾಗಿಸಿಕೊಂಡು, ಜೀವನು ಸತಿಯಾಗಿಸಿಕೊಂಡು, ಒಳಗಿನ ಅರಿವನ್ನು ಗುರುವನ್ನು ಮಾಡಿಕೊಂಡು ಬದುಕುವ ಅನಿವಾರ್ಯತೆಯನ್ನು ಹೇಳಿಕೊಟ್ಟರು. ದುಡಿಯುವ, ಉಣ್ಣುವ, ಬೆಳೆಯುವ ಮತ್ತು ಅಳಿಯುವ ದೇಹವಿಡಿದೇ ಬದುಕಬೇಕಲ್ಲ, ದೇಹವೇ ಹೋದರೆ ಇನ್ನೇನು? ದೇಹ ಇರುವುದರೊಳಗೆ ಜೀವಿಯ ಪತಿಯ ಮಹತ್ವ ಅರಿತುಕೊಳ್ಳಬೇಕಲ್ಲವೇ? ಅದಕ್ಕಾಗಿ ಅವನನ್ನು ಬೇರೆಲ್ಲಿಯೂ ಹುಡುಕುವುದಕ್ಕಿಂತ ಒಳಗೇ ಇದ್ದಾನೆ, ಅವನೇ ಅಂತರಾತ್ಮ ಎಂದರು. ಅವನು ಹೊರಗೆ ಪ್ರಕೃತಿಯಾಗಿ, ಒಳಗೆ ಆತ್ಮವಾಗಿ ಇದ್ದು ಎಲ್ಲರಲ್ಲಿಯೂ. ಎಲ್ಲೆಡೆಯೂ ಇರುವ ದೊರೆಯವನು ಎಂದರು. ಅವನನ್ನು ಪ್ರಕೃತಿಯನ್ನಾಗಿ, ಪುರುಷನನ್ನಾಗಿ ಒಲಿಸಿಕೊಳ್ಳುವ ದಾರಿ ಕಂಡುಕೊಂಡರು. ತನ್ನೊಳಗಿನ ಪರಮಾತ್ಮನನ್ನು ಅರಿಯಲು 'ಅರಿವನ್ನು ಗುರುವನ್ನಾಗಿ ಮಾಡಿಕೊಳ್ಳಬೇಕು, ಮಣ್ಣಬಿಟ್ಟು ಮಡಿಕೆಯಿಲ್ಲ, ತನ್ನ ಬಿಟ್ಟು ದೇವರಿಲ್ಲ ಎನ್ನುವ ದೃಢ ಭಾವವೂ ಬೇಕು. ಆಗ ಮಾತ್ರ ದಿನನಿತ್ಯದ ಕಾಯಕದ ಜೊತೆಗೆ ದೇಹ ಶುದ್ಧಿಯ, ಸಿದ್ಧಿಯ ಯೋಗ, ಧ್ಯಾನಗಳು ಒಲಿಯಲು ಸಾಧ್ಯ.

ನಿನ್ನೊಳಿಹ ತೀರ್ಥಕ್ಷೇತ್ರಗಳನರಿಯ । ದಿನ್ನನ್ಯ ಬಯಸುವದೇಕೋ ಮೂಢ ಶಿರವೆಂಬುವದೇ ಶ್ರೀಗಿರಿ ಶ್ರೋತ್ರಂಗ । ಉರು ತರದ ಗೋಕರ್ಣವು ಕುಚವೇ ಕುರುಕ್ಷೇತ್ರವು ರಮೆವುಳುಮೆ ಕರಕಾಂಚಿ । ವರಭೃಕುಟಿ ಮಧ್ಯಕಾಶಿ ಪುರವು[೧]

ಜೀವಿಯ ದೇಹ ಗೋಚರಿಸುವಂಥಾದ್ದು. ಆದರೆ ಈ ದೇಹಕ್ಕೆ ಒಂದು ಗೌರವ ಒದಗಿಸುವುದು ಮತ್ತು ದೇಹದ ಚಲನವಲನಕ್ಕೆ ಕಾರಣವಾಗಿರುವ ಆತ್ಮ ಅಥವಾ ಚೈತನ್ಯ ಅಗೋಚರ. ಈ ಗೋಚರ ದೇಹದಲ್ಲಿ ಸಕಲ ವ್ಯಾಪಾರಕ್ಕೆ ಕಾರಣವಾಗಿ, ಈ ಶರೀರ ಅಥವಾ ದೇಹವನ್ನು ಚೈತನ್ಯಶೀಲಗೊಳಿಸಿದ್ದು ಆತ್ಮ. ಚೈತನ್ಯ ಇಲ್ಲದಿದ್ದರೆ ಈ ದೇಹವಿದ್ದೂ ವ್ಯರ್ಥ. 'ನಲ್ಲನಿಲ್ಲದ ಪಲ್ಲಂಗವಿದ್ದರೇನು? ನಲ್ಲನಿಲ್ಲದ ಕರಿತುರಗವಿದ್ದರೇನು?' ಎಂದು ಆತ್ಮವಲ್ಲನಿಲ್ಲದ ಸ್ಥಿತಿಯನ್ನು ಪ್ರಶ್ನಿಸಿದ್ದಾರೆ. ಪಂಚಭೂತಗಳಿಂದ ಆದ ಈ ದೇಹದ ವ್ಯಾಪಾರಕ್ಕೆ ಮನ ಬೀಜ. 'ಕರಣಂಗಳ ಚೇಷ್ಟೆಗೆ ಮನವೇ ಬೀಜ' ಎಂದಂತೆ. ಮನವು ದೇಹವನ್ನು ನಡೆಸುವ ಸಾರಥಿ. ಅದರಿಂದಲೇ ಎಲ್ಲಾ ನಡೆಯುತ್ತಿದ್ದರೆ ಆತ್ಮವನ್ನು ಅಥವಾ ಚೈತನ್ಯವನ್ನು ಬಳಲಿಸುತ್ತದೆ. ಮನದ ಸ್ವಭಾವವು ನೀರಿದ್ದಂತೆ ಇಳಿವಿನ ಕಡೆಗೆ ಹರಿಯುವುದು. ಇದರಿಂದಾಗಿ ನಿಜದ ಅರಿವಿಗೆ ಮನವು ಒಲಿಯುವುದಿಲ್ಲ ಅದು ಅಳಿವಿನತ್ತಲೇ ಜಾರುತ್ತದೆ. ಆದರೆ ಜ್ಞಾನಿಯಾದವನು ಅಥವಾ ವಿವೇಕಿಯಾದವನು ತನಗೆ ಸಿಕ್ಕ ಅವಕಾಶಗಳಿಂದ ಮನದ ಮಾತಿಗೆ ಮಹತ್ವ ನೀಡದೆ, ದೇಹದ ಆಸೆಗಳನ್ನು ಮಿತಿಗೊಳಪಡಿಸಿ ಆತ್ಮಾನಾತ್ಮವಿವೇಕಕ್ಕೆ ಹೊಂದಿಕೊಂಡು ಔನ್ನತ್ಯಕ್ಕೆ ಏರುತ್ತಾನೆ. ಇದನ್ನು ಕಠಿಣ ಸಾಧನೆಯಿಂದ ಗಳಿಸಿಕೊಳ್ಳಬೇಕು ಎಂದು ಕೆಲವೊಂದಿಷ್ಟು ಸಾಧನೆಗಳನ್ನು ತಾಂತ್ರಿಕರು ನೀಡಿದರು. ಯಾವುದೇ ಸಾಧನೆಗೆ ಶರೀರ ಮೂಲ ಮಾಧ್ಯಮ. ಆದ್ದರಿಂದ ಅನುಭಾವಿ ಪರಂಪರೆಯವರು ಶರೀರವನ್ನು ತುಚ್ಛವಾಗಿ ಕಾಣದೇ, ಅದನ್ನು ಆಶ್ರಯಿಸಿಕೊಂಡೇ ಸಾಧನೆ, ಸಿದ್ಧಿ ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.

ಈ ದೇಹವನ್ನು ಒಂದು ಸಾಧನವೆಂದು, ಎಲ್ಲಾ ಕಾಯಕಕ್ಕೂ ಇದು ಅವಶ್ಯವೆಂದು ತಿಳಿದು, ಅದರ ರಕ್ಷಣೆಯ ಜವಾಬ್ದಾರಿಯನ್ನು ಪ್ರತಿಪಾದಿಸಿದರು. 'ದೇಹವೆಂಬುದು ಅವಿದ್ಯೆ ಎಂಬುವರು; ಅದೆಂತಯ್ಯಾ? ದೇಹ ತಾನಿಲ್ಲದಿರೆ ಆಶ್ರಯಿಸುವ ಪರಿ ಎಂತಯ್ಯಾ? ಅರಿದಡೆ ಆಶ್ರಯಿಸ: ಮರೆದಡೆ ಆಶ್ರಯಿಸುವ. 'ಅಜ್ಞಾನಾದಧಶ್ಚಲತಿ' ಎಂಬುದ ಅಳಿದೆನಯ್ಯಾ, ದೇಹವದು ಜಡಸಾಕ್ಷಿ! ಅಜಡವೆಂಬ ಭಾವ ವಚನದಲ್ಲಲ್ಲದೆ ಅನುಭಾವದಲ್ಲಿಲ್ಲ ನೋಡಾ, ಕಪಿಲಸಿದ್ಧ ಮಲ್ಲಿಕಾರ್ಜುನಾ'[೨] ಶರೀರವನ್ನು ಧರಿಸಿಕೊಂಡೇ ಸಕಲ ವ್ಯಾಪಾರಗಳು ನಡೆಯುತ್ತಿರುವಾಗ ಅದರಿಂದಲೇ ತಿಳಿದುಕೊಳ್ಳುವ ಅವಶ್ಯಕತೆ ಹೆಚ್ಚಿದೆ. ಅರಿವಿನ ಹುಡುಕಾಟವು ತನ್ನನ್ನು ತಿಳಿಯುವುದರಲ್ಲಿದೆ ಎಂದರು. ಅನುಭಾವಿಗಳು ತಮ್ಮ ತಮ್ಮ ಕಾಯಕದಲ್ಲಿಯೇ ಶರೀರದ ದಂಡನೆಯಾಗುವುದರಿಂದಲೂ, ಅದು ಶುದ್ಧಿಗೊಳ್ಳುವುದರಿಂದಲೂ ಅವರವರ ಕಾಯಕವೂ ಮುಖ್ಯ ಅದರಿಂದ ಬರುವ ಅನುಭವವೂ ಬದುಕಿಗೆ ಬಹುಮುಖ್ಯ ಎಂದರು. ಸಾಂಪ್ರದಾಯಿಕ ಅನುಭವಗಳನ್ನು

ಕಂಡುಕೊಂಡ ಕೆಲವೊಬ್ಬ ತತ್ವಪದಕಾರರು ಶರೀರವನ್ನು 'ತೊಗಲಿನ ಹೊದಿಕೆ' 'ಚೀಲ' 'ವಿಷಯಗಳ ಮಡಿಕೆ' 'ಕಾಮಾದಿಗಳ ಆಶ್ರಯ ತಾಣ' ಎಂಬ ವೇದಾಂತಿಗಳ ಮಾತನ್ನೂ ಒಪ್ಪಿದ್ದಾರೆ.

ವೇಷಗಳಿಂದ ಮನಬದಲಾವಣೆ ಸಹಕಾರಿ ಆಗಬಹುದು ಎಂಬುದನ್ನು ತಿರಸ್ಕರಿಸದವರು ಅನುಭಾವಿಗಳು. ದೇಹಕ್ಕೆ ವಿಧ ವಿಧದ ಸಿಂಗಾರ ಮಾಡಿಕೊಂಡು ಮನದ ಅವಗುಣವನ್ನು ಬಿಡದವರನ್ನು ಕಂಡು, 'ಹೆಂಡದ ಮಡಿಕೆಗೆ ಹೊರಗೆ ಸಿಂಗರಿಸಿದಂತೆ' ಎಂದರು. ತನುಬತ್ತಲೆಯಿದ್ದಡೇನೊ ಮನ ಶುಚಿಯಾಗದನ್ನಕ್ಕರ? ಮಂಡೆ ಬೋಳಾದಡೇನೊ ಭಾವ ಬಯಲಾಗದನ್ನಕ್ಕರ? ಭಸ್ಮವ ಹೂಸಿದಡೇನೊ ಕರಣಾದಿ ಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ? ಇಂತೀ ಆಶೆಯ ವೇಷದ ಭಾಷೆಗೆ ಗುಹೇಶ್ವರಾ ನೀ ಸಾಕ್ಷಿಯಾಗಿ ಛಿ ಎಂಬೆನು.[೮] ತನುವಿಕಾರಿಗೆ ಮುಕ್ತಿಯೆಲ್ಲಿಯದೋ? ಮನವಿಕಾರಿಗೆ ಲಿಂಗವೆಲ್ಲಿಯದೋ? ಧನವಿಕಾರಿಗೆ ಪ್ರಸಾದವೆಲ್ಲಿಯದೋ? ಇಂತೀ ತ್ರಿವಿಧ ವಿಕಾರಿಗೆ ಪಂಚಾಚಾರವಿಲ್ಲವಾಗಿ ಸದ್ಗುರು ಮಲ್ಲಿಕಾರ್ಜುನದೇವ, ನಿಮ್ಮ ಶರಣರು ಅವನ ಮುಖವ ನೋಡರಯ್ಯಾ.[೯] ತನುವಾದರೂ ಬಂದಿದ್ದು ಎಲ್ಲಿಂದ ಎನ್ನುವ ಮೂಲ ಪ್ರಶ್ನೆಯೊಂದಿಗೆ ಮನಸ್ಸಿನ ಶುದ್ಧಿಗೆ ಅರಿವು ಕಾರಣ ಎಂದವರು ಅನುಭಾವಿಗಳು. ಮುಡಚಟ್ಟಿನೊಳು ಬಂದು ಮುಟ್ಟೀ ತಟ್ಟೀ ಅಂತೀರಿ। ಮುಡಚಟ್ಯಾಲ್ಲಾದ ಹೇಳಣ್ಣ। ಮುಟ್ಟಾದ ಮುರು ದಿನಕ ಹುಟ್ಟಿ ಬಂದೀರಿ ನೀವು। ಮುಡಚಟ್ಟು ಎಲ್ಯಾದ ಹೇಳಣ್ಣ ॥ಪ॥ ತೊಗಲೊಳು ತೊಗಲ್ಹೊಕ್ಕು ತಗಲಿ ಬಂದವ ನೀನು। ತಗಲ ಮಾತಾಡುವದೇನಣ್ಣ। ಇದರ ಬಗಿಯ ತಿಳಿಯದೆ ಬಗೆದು ಮಾತಾಡಿದರೆ। ನಗೆಗೇಡಿ ಕಾಣತಾದಣ್ಣ। ಎಲವಿನಾಲಯದೊಳು ಒಳಗ್ಹೊಕ್ಕು ನೀ ಕುಂತು। ಓಡ್ಯಾಡ ಬೇಡ ನೀ ಕೇಳಣ್ಣ। ಎಲವು ತೊಗಲ ಮಲಮೂತ್ರ ಮಾಂಸವು। ನಿನ್ನಲ್ಲಿ ಕಾಣುತಾದಣ್ಣ। ಊರ ನರಕವ ತಿಂದು ಬೋರ್ಯಾಡ್ಹಿಂಡುವ ಎಮ್ಮಿ। ಹಾಲಿನ ಸವಿ ನೋಡಣ್ಣ। ಅದರ ಸ್ವಾದತ್ತಿ ನೀ ಉಂಡು ಗಾಡಾಗಿ ಕುಂತೀರಿ। ಶೀಲ ಎಲ್ಲಿ ಉಳಿತೇಳಣ್ಣ। ಊರ ಬಾವಿಯ ನೀರು ದಾರಾದರೂ ತರುವರು। ನಿಮ್ಮ ನೀರಬ್ಯಾರ್ಯಾವೇನಣ್ಣ। ಲಂಡೇನ್ಹಳ್ಳ ಹೋಗಿ ನದಿಯ ಕೂಡಿದ ಮೇಲೆ। ನೈವೇದ್ಯ ಹೇಗಾದವು ಹೇಳಣ್ಣ। ಸೂಸಲಾಡುವ ದೇಹ ಸೋಸಿ ನೀರವ ಮಾಡಿ। ಮಡಿಮಾಡಿಕೊಳ್ಳಬೇಕಣ್ಣ। ನಮ್ಮ ಧೀರಮಹಾಂತೇಶನ ಜಿಡದೆ ಕೊಂಡಾಡಿದರೆ। ಕಡಿತನಕ ಮಡಿಯಾಗುವುದಣ್ಣ।[೧೦]

ಪ್ರೇಮದಿಂದಲಿ ಮಾಡಿಕೊ ನಿನ್ನ ಪೂಜೆ:

ಕಾಯವಿಡಿದ ಜೀವರಾಶಿಗಳಿಗೆ ತನ್ನ ಪ್ರಿಯತಮ ಪರಮಾತ್ಮ ಎನ್ನುವ ಅರಿವು ಬಲಗೊಳ್ಳಬೇಕು. ಅವನನ್ನು ಒಲಿಸಿಕೊಳ್ಳಲು ಪ್ರೇಮ ಮಾರ್ಗದಿಂದಲೂ ಸಾಧ್ಯ ಎಂದು ತಿಳಿಸಿಕೊಟ್ಟವರು ಇವರು. ಜೀವಿಯಾದ ಪ್ರೇಮಿಗೆ ಭಕ್ತಿ ಬಹಳ ಆಪ್ತವಾಯಿತು. ತತ್ವ ಎಂದರೆ ವಸ್ತು. ಪದ ಎಂದರೆ ಅಭಿವ್ಯಕ್ತಿ. ಅಂದರೆ ವಸ್ತು ಅಭಿವ್ಯಕ್ತಿಸುವ ಮಾರ್ಗವು ಹಾಡುಗಬ್ಬವಾಗಿ ಜನತೆಯನ್ನು ಸೆಳೆಯಿತು. ಪದ ಶಬ್ದ ಹಾಡುಗಬ್ಬವೇ.

ಹಾಡುಗಬ್ಬಕ್ಕೆ ತಾಳ, ಲಯ ಮುಂತಾದ ಸಂಯುಕ್ತ ಸಂಗೀತ ಬೇಕೇ ಬೇಕಲ್ಲವೇ? ಅನುಭಾವಿಕ ಪರಂಪರೆಯವರು ಇಂತಹ ಸಂಗೀತವನ್ನು ಬಳಸಿಕೊಂಡು ಕೇಳುಗರನ್ನು ತಮ್ಮೆಡೆಗೆ ಸೆಳೆದುಕೊಂಡರು. ನಮ್ಮ ದೇಶದ ಸೂಫಿಗಳು, ಹಿಂದಿ ಮತ್ತು ಮರಾಠಿ ಅಭಂಗಗಳು, ತಮಿಳಿನ ತೇವಾರಂ ಪಾಟ್ಟುಗಳು, ತೆಲುಗಿನ ಗೀತಾಲು, ನಮ್ಮ ನಾಡಿನ ದಾಸರು ಇಂತಹ ನಾವೀನ್ಯತೆಯ ಮಾರ್ಗದಲ್ಲಿ ಕ್ರಮಿಸಿ ಭಕ್ತರನ್ನು ಸೆಳೆಯುವಲ್ಲಿ ಯಶಸ್ವಿಗಳಾಗಿದ್ದಾರೆ. ಪ್ರಾದೇಶಿಕ ಸಂಗೀತ, ಹಾಡುಗಳ ಜೊತೆಗೆ ಕೆಲವೊಬ್ಬರು ಕುಣಿತಗಳನ್ನು ಪ್ರಯೋಗಿಸಿದರು. ಅವರ ತಾಳಗಳಾಗಿ ಚಳ್ಳಂ, ತಪ್ಪಡಿ, ಡಗ್ಗ, ತಬಲಾ, ಏಕತಾರಿಗಳು ಸಹವಾದ್ಯಗಳಾದವು. ಇವು ದಿನಯ ಜೊತೆಗೆ ನಾದದ ಭಾಗವಾದವು. ಕಾಯ ಬದುಕಿನ ಮತ್ತು ಭಕ್ತಿಯ ಸಾಧನವಾಯಿತು. ಭಕ್ತಿ ಮತ್ತು ಶೃಂಗಾರ ರಸದ ಸ್ಥಾನಕ್ಕೇರಿತು. ತಾಳ ಮತ್ತು ತಾಳಗಳ ಜೊತೆಗೆ ಭಕ್ತಿಯ ಆತ್ಮನಿವೇದನೆಯ ದನಿಯೂ ಸೇರಿದ ಪರಿಣಾಮ ಸಾಹಿತ್ಯ ಮತ್ತು ಸಂಗೀತಗಳು ಗೆಣೆಕಾರರಾದವು. ಆಯಾ ಕಾಯಕಗಳಲ್ಲಿ ಸಂಗೀತ ಸ್ಥಾನ ಪಡೆಯಿತು. ಹರಿಹರನ ರಗಳೆಗಳಲ್ಲಿ, ಮಧ್ಯಯುಗೀನ ಸಾಹಿತ್ಯ ಕೃತಿಗಳಲ್ಲಿ, ಕವಿಗಳಲ್ಲಿ ಇದನ್ನು ನೋಡಬಹುದು. ಹೀಗೆ ಕಾಯ ಮತ್ತು ಕಾಯಕದ ಘನತೆಗೆ ನಾದದ ರಂಗು ಸೇರಿ ಭಕ್ತಿ ಜನಮನ ಸೂರೆಗೊಂಡಿತು. ಹಾಗೇ ನೋಡಿದರೆ ಪ್ರತಿಯೊಂದು ಭಾಷೆಗೆ ತನ್ನದೆ ಲಯ, ಯತಿ, ಭಂಸ್ಸುಗಳಿವೆ. ಭಾಷೆ ಮತ್ತು ಅಭಿವ್ಯಕ್ತಿಯ ಬದುಕಿನ ಜೊತಗೆ ಸಂಗೀತಕ್ಕೆ ಒಂದು ಇತಿಹಾಸವಿದೆ. ಹಿಂದೆ ತಮಿಳುನಾಡಿನ ನಯನ್ಮಾರರಲ್ಲಿ ಕಾಯಕದ ಮತ್ತು ಕಾಯವನ್ನು ಅರ್ಪಿಸುವ ಶೈವ ಸಾಹಿತ್ಯದ ಕಠಿಣ ತತ್ವಗಳು ನಾದವನ್ನು ಸೇರಿಸಿಕೊಂಡಿದ್ದವು. ಆಳ್ವಾರರಲ್ಲಿಯೂ ಅದು ರೂಪುವಡೆಯುತ್ತಾ ನಾದ ಮತ್ತು ಲಯಗಳನ್ನು ಒಳಗೊಳ್ಳುವ ಆರಂಭಿಕ ಕಾಣ್ಕೆಗಳನ್ನು ಕಟ್ಟಿಕೊಂಡಿತು. ೧೦-೧೧ನೇ ಶತಮಾನದ ಕಾಶ್ಮೀರಿ ಶೈವರಲ್ಲಿಯೂ ಭಕ್ತಿಯ ಹಾಡಿನ ಲಯವು ಆರಂಭವಾಗಿತ್ತು. ಆದರೆ ಮಧ್ಯಯುಗೀನ ಭಕ್ತಿ ಪರಂಪರೆಯಲ್ಲಿ ಸಂಗೀತ, ನೃತ್ಯ ಪ್ರಧಾನ ಪಾತ್ರವಹಿಸಿತು. ಕನ್ನಡ ನಾಡಿನ ದಾಸರು, ಮರಾಠಿಯ ವಾರಕರಿ ಪಂಥದವರು, ತೆಲುಗಿನ ಅನ್ನಮಾಚಾರ್ಯರು, ಹಿಂದಿಯ ಸೂರದಾಸರು, ಬಂಗಾಳದ ವೈಷ್ಣವ ಕವಿಗಳು, ರಾಜಸ್ಥಾನಿ, ಗುಜರಾಥಿನ ನರಸಿಂಹ ಮೆಹ್ತಾ, ಮಹಾಕವಿಗಳಾದ ಸೂರದಾಸ, ರಾಮಚಂದ್ರ ಚರಿತ ಮಾನಸದ ತುಲಸಿದಾಸ, ಗೀತಗೋವಿಂದದ ಜಯದೇವ, ಕನ್ನಡದ ಲಕ್ಷ್ಮೀಶ, ಕುಮಾರವ್ಯಾಸ ಇವರೆಲ್ಲಾ ಭಕ್ತಿಗೆ ಸಂಗೀತದ ಗುಂಗು ಹಿಡಿಸಿದವರು. ಅನುಭಾವಿಗಳು ದುಡಿಯುವ ವರ್ಗದ ಪ್ರತಿನಿಧಿಗಳಾಗಿ ಕಾಣಿಸಿಕೊಂಡರು. ಯಾವಾಗ ಸಂಗೀತ ಪ್ರಧಾನವಾಯಿತೋ ನೃತ್ಯವೂ ಸೇರಿಕೊಂಡು ಹಾಡುತ್ತಾ ಕುಣಿಯುತ್ತಾ ದೇವರಿಗೆ ಸೇವೆ ಸಲ್ಲಿಸುವ ಪದ್ಧತಿ ಚಾಲ್ತಿಗೆ ಬಂದಿತು. ತಮ್ಮ ತಮ್ಮ ದೈವಗಳ ಒಲಿಸಿಕೊಳ್ಳುವುದಕ್ಕಾಗಿ ಮೇಲಾಟವೂ ನಡೆಯಿತು.

ಭಕ್ತಿ ಮತ್ತು ಭಕ್ತಿ ಕವಿಗಳು ವಿವಿಧ ಕುಲಮೂಲದ ಜನತೆ ಹಿಂದೆ ಸರಿದು ಭಕ್ತಿಯ ಆರಾಧನೆಯ ವ್ಯವಸ್ಥೆ ರೂಪುಗೊಂಡು ದೇವಸ್ಥಾನಗಳಲ್ಲಿ ಸ್ಥಾಪನೆಗೊಂಡು

ಅಲ್ಲಿಯೂ ಶ್ರೇಷ್ಠಕುಲಜರ ಸೊತ್ತೂ ಆಯಿತು. ದೇಹದ ನಶ್ವರತೆಯು ಮುನ್ನೆಲೆಗೆ ಬಂದಿತು. ಹಾಗಾಗಿ ಪುನಾ ಪುನಾ ಮುರಿಯುವ, ಮುರಿದು ಕಟ್ಟುವ ಕ್ರಿಯೆಗಳು ಆಯಾ ಕಾಲಕ್ಕೆ ಬರುತ್ತಲೇ ಇರುವುದು ಜೀವಂತಿಕೆಯ ಲಕ್ಷಣ. ಅನುಭಾವಿ ಸಾಹಿತ್ಯವೂ ಕಾಲಕ್ಕಾಲಕ್ಕೆ ಬರುವ ಎಲ್ಲಾ ಮೌಲ್ಯಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡು ಬೆಳೆದಿದೆ. ಹಾಗಾಗಿ ಮಧ್ಯಯುಗೀನ ಭಕ್ತಿ ಪರಂಪರೆಯಲ್ಲಿ ಕಾಯ ಮತ್ತು ಕಾಯಕದ ಜಾಡು ಹಿಡಿದೇ ಭಕ್ತಿಯನ್ನು ನೋಡಬೇಕಾಗುತ್ತದೆ. ತಮ್ಮ ನಂಬಿಗೆಗಳನ್ನು, ವೃತ್ತಿಮೂಲದ ಅನುಭವಗಳನ್ನು, ಜೀವನ ಪ್ರೀತಿಯ ತತ್ವಗಳನ್ನು ಅರಗಿಸಿಕೊಂಡು ಸಾಹಿತ್ಯವನ್ನು ರಚಿಸಿಕೊಟ್ಟರು.

ಭಾರತೀಯ ನೆಲಮೂಲದ ಎಲ್ಲ ಚಿಂತಕರು ಈ ಭಕ್ತಿಯನ್ನು ಕೈಬಿಡಲಿಲ್ಲ. ಆದರೆ ವೇದ, ಆಗಮ, ಯಜ್ಞ, ಯಾಗಾದಿಗಳಿಂದ ದೂರಾದರು. ಧರ್ಮ ಮತ್ತು ದೇವರನ್ನು ಗುತ್ತಿಗೆ ಹಿಡಿದ ವೈದಿಕರು ತೋರಿಸುವ ಮೋಕ್ಷ, ದೇವಲೋಕ ಎಲ್ಲವೂ ಸುಳ್ಳು, ಶೂನ್ಯದಿಂದ ಜನಿಸುವುದೂ ಸುಳ್ಳು ಎನ್ನುವ ನಿಲುವನ್ನು ಹೊಂದಿದವರು ತತ್ವಪದಕಾರರು. 'ಕಂಡಾಕ್ಷಣ ರಮಣೀಯವಿದೆಲ್ಲ ಉಂಡಾಗಲೆ ನಿರಶನಮಿದೆಲ್ಲ' ಎನ್ನುವ ದೃಢ ನಿಲುವಿನವರು. ಗ್ರಾಮೀಣ ಜನತೆಯ ಆಚರಣೆ, ಆಚಾರ ವಿಚಾರಗಳನ್ನು ಕೈಬಿಡದೇ ಬಹುಸಾಂಸ್ಕೃತಿಕ ಚಿಂತನೆಗಳನ್ನು ಪೋಷಿಸಿಕೊಂಡರು. ಶಕ್ತಿ ಮತ್ತು ಶಿವರ, ವಿಷ್ಣು, ರಾಮ, ಕೃಷ್ಣ, ಹನುಮಂತ ಮುಂತಾದವರ ಆರಾಧನೆಯಷ್ಟೇ ಅಲ್ಲದೆ, ಕಿರುಕುಳ ದೈವಗಳಲ್ಲಿ ಭಕ್ತಿಯನ್ನು ಉಳಿಸಿಕೊಂಡದ್ದು ವಿಶೇಷ. ಇವರ ಜೀವನ ಪ್ರೀತಿ ಮತ್ತು ಭಕ್ತಿಗಳನ್ನು ಕಂಡ ಜನತೆ ಇವರನ್ನು ಪ್ರೀತಿಸಿದರು. ಇವರನ್ನು ಜನ ಕಕ್ಕುಲಾತಿಯಿಂದ ಅಪ್ಪಿಕೊಂಡರೆ, ಇವರು ಜನರಿಗೆ ಮಾರ್ಗದರ್ಶನ ನೀಡಿದರು.

ಅಲ್ಲಲ್ಲಾ ಇಲ್ಲಿಲ್ಲಾ ಶಿವನಲ್ಲಿಲ್ಲಾ ಶಿವನೆಲ್ಲಿಲ್ಲಾ ?
ನಿನ್ನ ನೀ ತಿಳಿ ನೀನೆ ಪರಬ್ರಹ್ಮನಲ್ಲ ॥ಪ॥

ಆರು ಶಾಸ್ತ್ರವ ಓದಿದರಿಲ್ಲ
ಮೂರಾರು ಪುರಾಣ ಮುಗಿಸಿದರಿಲ್ಲ
ಘೋರ ಸಂಸಾರ ಸತಿಯಳ ಬಿಟ್ಟು
ಯಾರೂ ಇರದ ಅಡವಿ ಸೇರಿದರಿಲ್ಲ ॥೧॥

ಗುಡ್ಡ ಗಂವಾರ ಸೇರಿದರಿಲ್ಲ
ಗಡ್ಡಜಡೆಯ ಬಾಳ ಬೆಳೆಸಿದರಿಲ್ಲ
ದೊಡ್ಡವರೆಂದು ಕರಮುಗಿದರೂ ಇಲ್ಲ
ಗೊಡ್ಡಾಕಳಿನಂತೆ ಚರಿಸ್ಯಾಡಿದರಿಲ್ಲ ॥೨॥

ಕರ್ಣಿಕೆ ನಖ ಊರಿ ಕೂಗಿದರಿಲ್ಲ
ಧರ್ಮಶಾಸ್ತ್ರ ಅವ ಪಠಿಸಿದರಿಲ್ಲ
ನಿರ್ಮಲಮನದೊಳು ಇಟಪುರೀಶನರಿಯದೆ
ಬೆರಳೊಳು ಜಪಮಣಿ ಎಣಿಸಿದರಿಲ್ಲ ॥೩॥೧೧

ಅಡಿಟಿಪ್ಪಣಿ

೧. ಶಿಶುನಾಳ ಶರೀಫರು ತತ್ವಪದಗಳು ಪ್ರಾತಿನಿಧಿಕ ಸಂಕಲನ ಪ್ರಸಂ : ಶಾಂತರಸ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು : ೨೦೦೦ : ಪು.೧೯೨
೨. ಮೋಟ್ನಳ್ಳಿ ಹಸನಸಾಬ. ತತ್ವಪದಗಳು ಪ್ರಾತಿನಿಧಿಕ ಸಂಕಲನ ಪ್ರಸಂ: ಶಾಂತರಸ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು : ೨೦೦೦ : ಪು.೧೬೨
೩. ಅಲ್ಲಮಪ್ರಭುದೇವರ ವಚನಗಳು. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ : ೧೯೭೬ : ಪು.೧೩೪. ವ.ಸಂ.೩೫೧ .
೪. ಅಲ್ಲಮಪ್ರಭುದೇವರ ವಚನಗಳು. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ : ೧೯೭೬ : ಪು.೬೨. ವ.ಸಂ.೧೫೨.
೫. ಸಿರಗಾಪುರ ಬಂಡೆಪ್ಪ ತತ್ವಪದಗಳು ಪ್ರಾತಿನಿಧಿಕ ಸಂಕಲನ ಪ್ರಸಂ: ಶಾಂತರಸ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು : ೨೦೦೦ : ಪು೧೨೯
೬. ಅಜ್ಞಾತ ತತ್ವಪದಗಳು ಪ್ರಾತಿನಿಧಿಕ ಸಂಕಲನ ಪ್ರಸಂ: ಶಾಂತರಸ : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು : ೨೦೦೦ : ಪು.೬೩
೭. ಸಿದ್ಧರಾಮೇಶ್ವರ ವಚನಗಳು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ : ೧೯೬೮ : ವ.ಸಂ.೧೨೧೦. ಪು.೩೭೫.
೮. ಅಲ್ಲಮಪ್ರಭುದೇವರ ವಚನಗಳು. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ : ೧೯೭೬. ವ.ಸಂ.೫೨೯ : ಪು.೧೯೨.
೯. ಸಿದ್ಧರಾಮೇಶ್ವರ ವಚನಗಳು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ : ೧೯೬೮ : ವ.ಸಂ.೧೩೧೫ : ಪು.೪೦೮.
೧೦. ಕಡಕೋಳ ಮಡಿವಾಳಪ್ಪ : ತತ್ವಪದಗಳು : ಪ್ರಾತಿನಿಧಿಕ ಸಂಕಲನ ಪ್ರಸಂ: ಶಾಂತರಸ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು : ೨೦೦೦ : ಪು.೧೦೩
೧೧. ಮೋಟ್ನಳ್ಳಿ ಹಸನಸಾಬ : ತತ್ವಪದಗಳು : ಪ್ರಾತಿನಿಧಿಕ ಸಂಕಲನ ಪ್ರಸಂ: ಶಾಂತರಸ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು : ೨೦೦೦ : ಪು. ೧೬೨

ಗ್ರಂಥಋಣ

೧. ಅಲ್ಲಮಪ್ರಭುದೇವರ ವಚನಗಳು. ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ : ೧೯೭೬
೨. ತತ್ವಪದಗಳು ಪ್ರಾತಿನಿಧಿಕ ಸಂಕಲನ ಪ್ರಸಂ: ಶಾಂತರಸ : ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು : ೨೦೦೦
೩. ವಚನ ಸಂಚಯ. ಸಂ.ಅಲ್ಲಮಪ್ರಭು ಸ್ವಾಮೀಜಿ : ಬಸವಯೋಗ ಟ್ರಸ್ಟ್, ಬೆಂಗಳೂರು : ೨೦೧೧
೪. ಸಂಸ್ಕೃತಿ ಕಥನ : ಡಿ.ಆರ್. ನಾಗರಾಜ್ ಸಂ: ಅಗ್ರಹಾರ ಕೃಷ್ಣಮೂರ್ತಿ : ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು : ೨೦೦೨
೫. ಸಿದ್ಧರಾಮೇಶ್ವರ ವಚನಗಳು : ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ : ೧೯೬೮
೬. ಸೂಫಿ ಪಥ ಮತ್ತು ಶರಣ ಪಥಗಳ ತೌಲನಿಕ ಅಧ್ಯಯನ–ಡಾ॥ ಅಬ್ದುಲ್ ಹಮೀದ್ ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು : ೧೯೯೮

ಕನ್ನಡಕ್ಕೆ ಇನ್ನೊಂದು 'ಕವಿರಾಜಮಾರ್ಗ'

– ಎನ್.ಎಸ್. ಗುಂಡೂರ

ಕನ್ನಡವನ್ನು ಕಟ್ಟುವ ವಿಚಾರಕ್ಕೆ ಸಂಬಂಧಪಟ್ಟಂತೆ ಹತ್ತು ಹಲವಾರು ರೀತಿಯ ನಡೆ–ನುಡಿಗಳನ್ನು ಕಾಣುತ್ತೇವೆ. ಚಳುವಳಿಗಳು, ಪ್ರತಿಭಟನೆಗಳು, ಕನ್ನಡದವರಿಗೆ ಮೀಸಲಾತಿ, ಕಾವಲು ಸಮಿತಿ, ರಕ್ಷಣಾ ವೇದಿಕೆಗಳು, ಸರ್ಕಾರದ ನೀತಿ ನಿಯಮಗಳು ಕನ್ನಡವನ್ನು ಒಂದು ರೀತಿಯಲ್ಲಿ ಕಟ್ಟುವ ಪ್ರಯತ್ನಗಳಾದರೆ, ಕನ್ನಡ ಭಾಷೆಯನ್ನು ಕೃಷಿಮಾಡಿ, ಆ ಭಾಷೆಯೋಳ್ ಭಾವಿಸಿದ ಕನ್ನಡದ ಬುದ್ಧಿಯನ್ನು ರೂಪಿಸುವುದು ಇನ್ನೊಂದು ಬಗೆಯ ಕನ್ನಡ ಕಟ್ಟುವ ಪ್ರಯತ್ನ. ಹೀಗೆ ಹೊರಗಿನಿಂದ ಕನ್ನಡವನ್ನು ಕಟ್ಟುವುದರ ಜೊತೆಗೆ, ಒಳಗಿನಿಂದ ಅದನ್ನು ಹೇಗೆ ಕಟ್ಟಬೇಕೆಂತಲೂ ತುಸು ಯೋಚಿಸಬೇಕಾಗಿದೆ.

ಕನ್ನಡ ನಾಡು ನುಡಿಯ ಇತಿಹಾಸದಲ್ಲಿ ಕನ್ನಡವನ್ನು ಒಳಗಿನಿಂದ ಕಟ್ಟುವ ಅನೇಕ ಹೆಜ್ಜೆಗಳಲ್ಲಿ ಕವಿರಾಜಮಾರ್ಗಕಾರನ ಕನ್ನಡದ ಕಾಳಜಿಯೂ ಒಂದು. ನಮಗೆಲ್ಲಾ ಗೊತ್ತಿರುವಂತೆ ಕನ್ನಡ ನಾಡಿನ ದೇಶಭಾಷೆ ತನ್ನ 'ವಿಶ್ವಾತ್ಮಕತೆ'ಯನ್ನು ಕಟ್ಟಿಕೊಂಡಿದ್ದು ಸಂಸ್ಕೃತದೊಂದಿಗೆ ಮುಖಾಮುಖಿಯಾಗಿ. ಸಂಸ್ಕೃತವನ್ನು ಬಳಸಿಕೊಂಡು ಕನ್ನಡ 'ಸಾಹಿತ್ಯದ ಮತ್ತು ಶಾಸ್ತ್ರಿಯ ಭಾಷೆ'ಯಾಗಿ ತನ್ನ ಅಸ್ಮಿತೆಯನ್ನು ಹೇಗೆ ಕಟ್ಟಿಕೊಳ್ಳಬೇಕೆಂಬ ಯೋಜನೆಯೊಂದನ್ನು ಕವಿರಾಜಮಾರ್ಗ ಮುಂದಿರಿಸಿತು. ಯು. ಆರ್. ಅನಂತಮೂರ್ತಿಯವರು ಗುರುತಿಸುವಂತೆ ಕನ್ನಡ ಚಲಿಸದ ಭಾಷೆ. ಆದರೆ ಚಲಿಸದೆ ತನ್ನ ವಿಶ್ವಾತ್ಮಕತೆಯನ್ನು ಕಟ್ಟಿಕೊಳ್ಳುವ ಶಕ್ತಿಯನ್ನು ಅದು ಗಿಟ್ಟಿಸಿಕೊಂಡಿದೆ. ಆಧುನಿಕಪೂರ್ವ ಕನ್ನಡ ತನ್ನನ್ನು ತಾನು ಕಟ್ಟಿಕೊಂಡಿದ್ದು ಅಷ್ಟು ಆಕ್ರಮಣಕಾರಿಯಾಗಿರದ ಸಂಸ್ಕೃತದೊಂದಗಿನ ಒಡನಾಟದಿಂದ. ಸದ್ಯ ಕನ್ನಡದ್ದು ಇಂಗ್ಲೀಶ್ ಭಾಷೆಯೊಂದಿಗಿನ ಸಹವಾಸ. ಇಲ್ಲಿಯ ಮುಖಾಮುಖಿ ಅಷ್ಟು ಸರಳವಾಗಿಲ್ಲ. ಇಂಗ್ಲೀಶ್ ಹೇಳಿ ಕೇಳಿ ಯುರೋಪಿನ ಭಾಷೆ. ಲ್ಯಾಟಿನ್‌ನಂತೆ ಆಕ್ರಮಣಶೀಲ ಸ್ವಭಾವದ್ದು. ಜಾಗತೀಕರಣ, ಬಂಡವಾಳಶಾಹಿ ಮತ್ತು ತಂತ್ರಜ್ಞಾನದ ಜೊತೆ ಇಂಗ್ಲೀಶ್‌ನ ಪಾಲುದಾರಿಕೆ ಇನ್ನೂ ಹೆಚ್ಚಿನ ಸವಾಲನ್ನು ಒಡ್ಡುತ್ತದೆ. ಈ ಆಕ್ರಮಣಶೀಲ ಜಗತ್ತನ್ನು ನಿಭಾಯಿಸಲು ಕನ್ನಡ

ಸಜ್ಜಾಗಬೇಕಾದರೆ ಈ ಹಿಂದೆ ತನ್ನ ವಿಶ್ವಾತ್ಮಕತೆಯನ್ನು ಕಟ್ಟಿಕೊಂಡಿದ್ದು ಸಾಲದು. ಅದು ಹೊಸ ದೃಷ್ಟಿಕೋನ, ವಿಭಿನ್ನ ಆಯಾಮ, ನೂತನ ನುಡಿಗಟ್ಟನ್ನು ರೂಢಿಸಿಕೊಳ್ಳುವುದು ಅನಿವಾರ್ಯ. ಹಾಗಾಗಿ ಕನ್ನಡ-ಇಂಗ್ಲೀಶ್‌ನ ಈಗಿನ ನಮ್ಮ ಸಂದರ್ಭವನ್ನು ಗಮನಿಸಿದರೆ ಕನ್ನಡಕ್ಕೆ ಇನ್ನೊಂದು ಕವಿರಾಜಮಾರ್ಗ ಬೇಕೆನಿಸುತ್ತದೆ. ಅಂದರೆ ಇಂದು ಯಾರೋ ಒಬ್ಬ ವಿದ್ವಾಂಸ ಕವಿರಾಜಮಾರ್ಗದಂತಹ ಕೃತಿಯನ್ನು ರಚಿಸಬೇಕೆಂದು ಇದರ ಅರ್ಥವಲ್ಲ. ಕನ್ನಡವನ್ನು ಕಟ್ಟುವುದರ ಬಗ್ಗೆ ಮಾರ್ಗಕಾರನಿಗಿದ್ದ ವೈಚಾರಿಕ ಕಾಳಜಿಯನ್ನು ಇಂದು ನಮ್ಮ ನಡುವೆ ಪಸರಿಸಬೇಕಾಗಿದೆ. ಹಾಗಾಗಿ ಇಂದು ಕನ್ನಡ ಕಟ್ಟುವ ಪ್ರಯತ್ನಗಳು ಕವಿರಾಜಮಾರ್ಗದ ಪ್ರಜ್ಞೆಯನ್ನು ಮತ್ತೆ ನೆನಪಿಸಿಕೊಳ್ಳಬೇಕು. ಈ ಸಂದರ್ಭದಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆಗಳೆಂದರೆ- ಎಲ್ಲ ಸೈದ್ಧಾಂತಿಕ ವಿರೋಧ, ಜಾಗತೀಕರಣ ಮತ್ತು ಭಾಷಾ ಸಾಮ್ರಾಜ್ಯಶಾಹಿಯ ಅಧಿಕಾರ-ಶಕ್ತಿ, ಮಾಧ್ಯಮಗಳ ಭರಾಟೆ ಇತ್ಯಾದಿಗಳ ಮಧ್ಯೆ ಕನ್ನಡವನ್ನು ಹೇಗೆ ಕಟ್ಟಬೇಕು? ಕನ್ನಡವನ್ನು ಜ್ಞಾನದ ಭಾಷೆಯಾಗಿ ರೂಪಿಸುತ್ತ, ಅದರ ವಿಶ್ವಾತ್ಮಕತೆಯನ್ನು ಹೇಗೆ ಕಾಯ್ದುಕೊಳ್ಳಬೇಕು?

ಕನ್ನಡಕ್ಕಾಗಿ ಶ್ರಮಿಸುತ್ತಿರುವ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಗಳು ಈ ಮೇಲಿನ ಪ್ರಶ್ನೆಗಳನ್ನು ಕೇಂದ್ರವನ್ನಾಗಿಟ್ಟುಕೊಂಡು ತಮ್ಮ ದೂರದೃಷ್ಟಿ, ಕಾರ್ಯವೈಖರಿಗಳನ್ನು ಕನ್ನಡ ಎದುರಿಸುತ್ತಿರುವ ಸವಾಲುಗಳಿಗೆ ಸ್ಪಂದಿಸುವಂತೆ ಪುನರ್‌ರಚನೆ ಮಾಡಬೇಕಾದ ಸಂದರ್ಭವಿದು. ತಮ್ಮ ರಚನೆಗಳಲ್ಲಿ ಹೊಸ ರಕ್ತವನ್ನು ತುಂಬಿ, ಕನ್ನಡದಲ್ಲಿ ಜ್ಞಾನಸೃಷ್ಟಿಸಲು ನಾವು ಯಾವ ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕೆಂಬುದನ್ನು ಕುರಿತು ಚಿಂತಿಸುವ ಜರೂರತ್ತು ಇದೆ. ಕೆ.ವಿ.ಸುಬ್ಬಣ್ಣನವರ 'ಶ್ರೇಷ್ಠತೆಯ ವ್ಯಸನ' ಎಂಬ ಲೇಖನ ಸಾಂಸ್ಥಿಕವಾಗಿ ಕನ್ನಡವನ್ನು ಕಟ್ಟುವ ಮಿತಿಗಳ ಬಗ್ಗೆ ನಮ್ಮನ್ನು ಎಚ್ಚರಿಸಿದ್ದನ್ನು ನೆನಪಿಸಿಕೊಳ್ಳುತ್ತ, ಕನ್ನಡವನ್ನು ಸಂಸ್ಥೆಗಳಾಚೆ ರೂಪಿಸುವ ರೂಢಿ ಅಭ್ಯಾಸಗಳನ್ನು ಹುಟ್ಟುಹಾಕುವುದು ಅಪೇಕ್ಷಣೀಯ. ಮುಖ್ಯವಾಗಿ ನಾವು ಸೃಷ್ಟಿಸುವ ಜ್ಞಾನ, ಮತ್ತಿತರ ಚಟುವಟಿಕೆಗಳ ಗುಣಮಟ್ಟದಲ್ಲಿ ಯಾವ ರಾಜಿಮಾಡಿಕೊಳ್ಳದೇ, ಕನ್ನಡದ ತಿಳುವಳಿಕೆಗೆ ಎಂತಹ ಲೋಕಜ್ಞಾನದ ಅಗತ್ಯವಿದೆ ಎಂಬುದನ್ನು ಯೋಚಿಸಿ ಮುಂದೆ ಸಾಗಬೇಕಾಗಿದೆ. ಕನ್ನಡದಲ್ಲಿ ಹೊಸ ಜ್ಞಾನಸೃಷ್ಟಿಗೆ ಸದ್ಯ ಎಂತಹ ವಿದ್ವಾಂಸರ ಪಡೆಯನ್ನು ಕಟ್ಟಬೇಕೆಂಬ ಪ್ರಶ್ನೆ ನಮ್ಮ ಮುಂದಿರುವಾಗ, ಇಂದಿನ ಕನ್ನಡದ ವಿದ್ವಾಂಸ ಏಕಭಾಷಾ ಉಪಾಸಕನಾಗದೇ, ಬಹುಭಾಷಾ ಅಥವಾ ಕನಿಷ್ಟ ಪಕ್ಷ ದ್ವಿಭಾಷಾ ಪರಿಣತನಾದರೆ ಕನ್ನಡಕ್ಕೆ ಹೆಚ್ಚು ಪ್ರಯೋಜಕ. ಐತಿಹಾಸಿಕವಾಗಿ ಕನ್ನಡ ಸಂಸ್ಕೃತದಿಂದ ಕಟ್ಟಿಕೊಂಡ ವಿಶ್ವಾತ್ಮಕತೆಯನ್ನು ಜೀವಂತವಾಗಿಡಲು ಮತ್ತು ಸದ್ಯದ ಜಾಗತಿಕ ಭಾಷೆಗಳಲ್ಲಿರುವ, ವಿಶೇಷವಾಗಿ ಇಂಗ್ಲೀಶ್‌ನಲ್ಲಿರುವ ಜ್ಞಾನ ವ್ಯವಸ್ಥೆಗಳನ್ನು ಜಾಗರೂಕತೆಯಿಂದ ಬಳಸಿಕೊಂಡು ಕನ್ನಡ ಕಟ್ಟಲು ಬಹುಭಾಷಾ, ದ್ವಿಭಾಷಾ ಪಂಡಿತರ ಪಾಲ್ಗೊಳ್ಳುವಿಕೆ ಅನಿವಾರ್ಯ. ಇಂಗ್ಲೀಶ್‌ನ್ನು ವಿರೋಧಿಸುವ ಅಥವಾ ಮೋಹಿಸುವ ಎರಡೂ

ಅತಿರೇಕಗಳು ಕನ್ನಡ 'ಜ್ಞಾನದ ಭಾಷೆ'ಯಾಗಿ ರೂಪುಗೊಳ್ಳುವಲ್ಲಿ ಅಡ್ಡಿಯಾಗುವ ಸಂಭವನೀಯತೆ ಹೆಚ್ಚು. ವಿಶೇಷವಾಗಿ ಇಂದು ಇಂಗ್ಲೀಶ್ ನಮಗೆ ಜ್ಞಾನದ ಭಾಷೆಯಾಗಿ ಬೇಕೆ ಬೇಕು. ಆದರೆ ಇಂಗ್ಲೀಶನ್ನು ನಾವು ಸಾಮಾಜಿಕ ಸಂವಹನದ ಭಾಷೆಯಾಗಿ ಕಲಿಸುವುದಕ್ಕೆ ಹೆಚ್ಚು ಒತ್ತು ಕೊಡುತ್ತಿದ್ದೇವೆಯೇ ಹೊರತು, ಜ್ಞಾನದ ಭಾಷೆಯಾಗಿ ಅಲ್ಲ. ಈ ಕಾರಣದಿಂದ ಇಂಗ್ಲೀಶ್ ಕಲಿಸುವ ಯೋಜನೆಯೂ ಈಗ ಸಂಪೂರ್ಣವಾಗಿ ಬದಲಾಗಬೇಕಾಗಿದೆ, ಕನ್ನಡದ ದೃಷ್ಟಿಕೋನದಿಂದ. ವಿರೋಧಾಭಾಸವೆನಿಸಿದರೂ ಸರಿ, ಇಂಗ್ಲೀಶ್‌ನ ಸಾಮ್ರಾಜ್ಯಶಾಹಿಯನ್ನು ವಿರೋಧಿಸುತ್ತಲೇ ಅದನ್ನು ಕನ್ನಡಕ್ಕಾಗಿ ಬಳಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಸಂದರ್ಭದಲ್ಲಿ ಭಾರತೀಯ ಇತರ ಭಾಷೆಗಳ ಜೊತೆ, ಇನ್ನಿತರ ವಿದೇಶಿ ಭಾಷೆಗಳ ಒಡನಾಟವು ಕೂಡಾ ಕನ್ನಡಕ್ಕೆ ಹೆಚ್ಚು ಪ್ರಯೋಜನಕಾರಿ.

ಮುಂದುವರೆದು ಹೇಳುವುದಾದರೆ ಎಲ್ಲ ಭಾಷೆಗಳ ಸ್ವರೂಪದಂತೆ ನಮ್ಮಲ್ಲಿ 'ಕನ್ನಡಗಳು' ಇವೆ, ಕನ್ನಡವೆಂಬ ಏಕರೂಪ ಇಲ್ಲ! ಕೊಂಕಣಿ, ಕೊಡವ, ತುಳು ಇನ್ನುಳಿದ ತಳಸಮುದಾಯಗಳ ಜೀವಂತ ಭಾಷೆಗಳೊಡನೆ ಕನ್ನಡ ಯಜಮಾನ್ಯಿಕೆಯನ್ನು ಸಾಧಿಸದೆ ಸಹಬಾಳ್ವೆ ಮಾಡಬೇಕಾಗಿದೆ. ಕನ್ನಡಿಗರು, ಮರಾಠಿಗರು ಭೌಗೋಳಿಕ-ರಾಜಕೀಯಕ್ಕೆ ಜಗಳವಾಡಿದರೂ, ಕನ್ನಡ ಮತ್ತು ಮರಾಠಿ ಭಾಷೆಗಳ ಮಧ್ಯೆ ನಡೆದ ಅನುವಾದ ಮತ್ತು ಕೊಡುಕೊಳ್ಳುವಿಕೆ ಸಮಕಾಲೀನ ಕನ್ನಡದ ದಲಿತ-ಬಂಡಾಯದ ಬರವಣಿಗೆಗಳನ್ನು ಹುಟ್ಟುಹಾಕಿದೆ. ಹೀಗೆ ಇತರೆ ಸಮುದಾಯಗಳ ಧ್ವನಿಗಳನ್ನು ಒಳಗೊಳ್ಳುವುದರ ಮೂಲಕ ಕನ್ನಡದ ಜ್ಞಾನ ಕ್ಷಿತಿಜವನ್ನು ವಿಸ್ತರಿಸಬಹುದು.

ಶಾಸ್ತ್ರೀಯ ಸ್ಥಾನಮಾನ ಪಡೆದ ಕನ್ನಡವನ್ನು ಶಾಸ್ತ್ರೀಯ ನೆಲೆಯಲ್ಲಿ ಅಧ್ಯಯನ ಮಾಡುವವರು ಕಡಿಮೆಯಾಗುತ್ತಿದ್ದಾರೆ. ನಮ್ಮ ಬದುಕಿನ ಕೆಲವು ಹಳೆಯ ಅರ್ಥಗಳು ಕಳೆದು ಹೋಗಬಾರದು. ಆ ಅರ್ಥಗಳಿಗೆ ಸಮಕಾಲೀನ ಜೀವ ತುಂಬಿ ಕನ್ನಡವನ್ನು ಕಟ್ಟಲು ನಮಗೆ ಪಠ್ಯ-ಪ್ರವೀಣರು (ಫಿಲಾಲಜಿಸ್ಟ್) ಬೇಕು. ಭಾರತದಲ್ಲಿ ಫಿಲಾಲಜಿಸ್ಟ್‌ಗಳ ಕೊರತೆಯ ಬಗ್ಗೆ ಆಗಾಗ ಶೆಲ್ಡನ್ ಪೋಲಾಕರು ಮಾತನಾಡುತ್ತಿದ್ದಾರೆ. ಈಗ ಕನ್ನಡ ಕಟ್ಟುವ ಕೆಲಸಕ್ಕೆ ನಮ್ಮ ಮಧ್ಯ ಕನ್ನಡದ ಫಿಲಾಲಜಿಸ್ಟ್‌ಗಳನ್ನು ತಯಾರಿಸಬೇಕಾಗಿದೆ. ಇವರು ಭಾಷಾ ವಿಜ್ಞಾನಿಗಳಲ್ಲ. ಆದರೆ ಭಾಷಾ ಪರಿಣಿತರು. ಪಠ್ಯಗಳನ್ನು ಅರ್ಥವಂತಿಕೆಯಿಂದ ಓದುವವರು. ಆಧುನಿಕಪೂರ್ವ ಕನ್ನಡದ ಜೊತೆ ಕೊಂಡಿಕಳಚದಂತೆ ನೋಡಲು ಹಳಗನ್ನಡದ ಪಠ್ಯ-ಪ್ರವೀಣರ ತರಬೇತಿ ಅಗತ್ಯವಾಗಿದೆ. ಈ ರೀತಿ ಅನುಭಾವಿ, ತತ್ವಪದಕಾರರ, ನಾಥ ಪಂಥದ, ಜಾನಪದ ಇತ್ಯಾದಿ ಪರಂಪರೆಗಳ ಪಠ್ಯಗಳನ್ನು ಅಧಿಕೃತವಾಗಿ ಓದುವ ಪಠ್ಯ-ಪ್ರವೀಣರ ಮುಂದಿನ ಪೀಳಿಗೆಯನ್ನು ತಯಾರು ಮಾಡುವ ಯೋಜನೆಯೂ ಬೇಕು. ಒಟ್ಟಾರೆಯಾಗಿ ಕನ್ನಡಲೋಕಕ್ಕೆ ವಿವಿಧ ರೀತಿಯ ಪಠ್ಯಗಳನ್ನು ಅರ್ಥವಂತಿಕೆಯಿಂದ ಓದುವ ಭಾಷಾತಜ್ಞರು ಬೇಕು. 'ಓದಿ'ನ ಸಾಮರ್ಥ್ಯದ ಕೊರತೆಯಿಂದ ಬಳಲುತ್ತಿರುವ ನಮ್ಮ ಕಾಲದಲ್ಲಿ ಪೋಲಾಕ ಉದ್ಧರಿಸುವ

ವಿದ್ವಾಂಸರಾದ ಆರ್. ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಬಿ.ಎಂ.ಶ್ರೀಕಂಠಯ್ಯ, ಎಮ್.ವ್ಹಿ.ಸೀತಾರಾಮಯ್ಯ, ಮುಳಿಯ ತಿಮ್ಮಪ್ಪಯ್ಯ, ಎಂ.ಗೋವಿಂದಪೈ ಮುಂತಾದವರಂತಹ ಫಿಲಾಲಜಿಸ್ಟರನ್ನು ಸೃಷ್ಟಿಸಬೇಕಾಗಿದೆ.

ಕವಿರಾಜಮಾರ್ಗದ ಕಾಳಜಿಯು ಕನ್ನಡವನ್ನು ಕಾವ್ಯ ಭಾಷೆಯಾಗಿಸುವುದಷ್ಟೇ ಅಲ್ಲದೇ ಕನ್ನಡವನ್ನು ಶಾಸ್ತ್ರದ ಭಾಷೆಯನ್ನಾಗಿಸುವ ತುಡಿತವೂ ಇತ್ತು. ಅದು ಎಷ್ಟರಮಟ್ಟಿಗೆ ಸಾಧ್ಯವಾಗಿದೆಂಬುದನ್ನು ಅಧ್ಯಯನ ಮಾಡಿ ಗುರುತಿಸಬೇಕಾಗಿದೆ. ಆಧುನಿಕ ಕನ್ನಡ ರೂಪುಗೊಂಡ ಬಗೆಯನ್ನು ಅವಲೋಕಿಸಿದರೆ ಕನ್ನಡ 'ಸಾಹಿತ್ಯದ ಭಾಷೆ'ಯಾಗಿ ಹೊರಹೊಮ್ಮುವಲ್ಲಿ ಯಶಸ್ವಿಯಾಗಿದೆ. ಆದರೆ ಕನ್ನಡ ಪರಿಕಲ್ಪನಾತ್ಮಕ, ತಾತ್ವಿಕ ಜಿಜ್ಞಾಸೆಯ ಭಾಷೆಯಾಗಬೇಕಾದ ಯೋಜನೆ ಇನ್ನೂ ಅಪೂರ್ಣಗೊಂಡಿದೆ. ನವೋದಯಕಾಲದ ಬರಹಗಾರರಿಂದ ಹಿಡಿದು, ನವ್ಯದವರಿಗೂ ಆಧುನಿಕ ಕನ್ನಡ ಗದ್ಯದ ಹಾಗೂ ಸಾಹಿತ್ಯ ವಿಮರ್ಶೆಯ ಭಾಷೆಯಾಗಿ ರೂಪುಗೊಂಡಿದ್ದು ಗಮನಾರ್ಹ. ಆದರೆ ಇಲ್ಲಿ ಕನ್ನಡ 'ಸಾಹಿತ್ಯ'ವೆಂಬ ಸಂಸ್ಥೆಯ ಅಡಿಯಲ್ಲಿಯೇ ಕೆಲಸ ಮಾಡಿದೆ; ಕನ್ನಡವೆಂದರೆ ಕನ್ನಡ ಸಾಹಿತ್ಯದ ಭಾಷೆಯೆಂಬಂತಾಗಿದೆ. ಇಂದು ಕನ್ನಡವನ್ನು ವಿಜ್ಞಾನದ ಭಾಷೆಯಾಗಿ, ಸಮಾಜ ವಿಜ್ಞಾನಗಳ ನುಡಿಗಟ್ಟಾಗಿ ಕಟ್ಟುವ ಪ್ರಯತ್ನ ಮಾಡದಿದ್ದರೆ, ಕನ್ನಡ ಜ್ಞಾನದ ಭಾಷೆಯಾಗಿ ಬೆಳೆಯವುದು ಕಷ್ಟಸಾಧ್ಯ. ಅದಕ್ಕನುಗುಣವಾಗಿ ತಾತ್ವಿಕ ಪರಿಕಲ್ಪನೆಗಳ ಪರಿಭಾಷೆಯೊಂದರ ಕಟ್ಟುವಿಕೆ ಅವಶ್ಯ. ಇಂತಹ ಪ್ರಯತ್ನಗಳು ಸಮಕಾಲೀನ ಸಂದರ್ಭದಲ್ಲಿ ಕಾಣುತ್ತಿದ್ದರೂ, ಈ ಯೋಜನೆಯನ್ನು ನಾವು ಪ್ರಜ್ಞಾಪೂರ್ವಕವಾಗಿ ಕೈಗೊಳ್ಳಬೇಕಾಗಿದೆ. ಜ್ಞಾನಸೃಷ್ಟಿಗೆ ಕೇವಲ ಒಂದು ಭಾಷೆಯನ್ನು ಮಾತನಾಡುವ ಸಮುದಾಯವಿದ್ದರೆ ಸಾಲದು. ಆ ಭಾಷೆಯನ್ನು ಉಪಯೋಗಿಸಿ ನಮ್ಮ (ಕನ್ನಡದ) ಅನುಭವವನ್ನು ವಿವರಿಸುವ ಪರಿಕಲ್ಪನೆಗಳನ್ನು ಸೃಷ್ಟಿಸಬೇಕು. ಪಶ್ಚಿಮದಿಂದ ಎರವಲು ಪಡೆದ ಪರಿಕಲ್ಪನೆಗಳು ಕನ್ನಡದಲ್ಲಿ ಜೀರ್ಣಗೊಳ್ಳಬೇಕಾದರೆ, ಕನ್ನಡದ ಪರಿಭಾಷೆಯನ್ನು ಜಾಗರೂಕತೆಯಿಂದ ಹೊಸೆಯಬೇಕು. ಹಾಗೆಯೇ ಕನ್ನಡ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ಕೊಡಬೇಕಾದರೆ ಮೊದಲು ಸಮಾಜ ವಿಜ್ಞಾನಗಳ, ನೈಸರ್ಗಿಕ ವಿಜ್ಞಾನಗಳ ಉತ್ಕೃಷ್ಟ ಪಠ್ಯಗಳು ಕನ್ನಡದಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಬೇಕು. ಅಷ್ಟೇ ಅಲ್ಲ, ಪರಿಕಲ್ಪನಾತ್ಮಕ ಪರಿಭಾಷೆಯನ್ನು ಓದುವ ಸಮುದಾಯಗಳನ್ನು ನಮ್ಮ ಶೈಕ್ಷಣಿಕ ಸಂಸ್ಕೃತಿ ಹುಟ್ಟುಹಾಕದಿದ್ದರೆ ಏನೂ ಪ್ರಯೋಜನವಿಲ್ಲ.

ಅನುವಾದ ಕಾರ್ಯಯೋಜನೆಯು ಕನ್ನಡದ ಬುದ್ಧಿಯನ್ನು ರೂಪಿಸುವಲ್ಲಿ ಮಹತ್ವದ ಪಾತ್ರವಹಿಸಿದೆ. ಆದರೆ ಆಧುನಿಕ ಕನ್ನಡ ನಿರ್ಮಾಣದಲ್ಲಿ ಹೆಚ್ಚಿನ ಅನುವಾದಗಳು ವಿಫುಲವಾಗಿ ಕಾಣುವುದು ಸಾಹಿತ್ಯ ಕ್ಷೇತ್ರದಲ್ಲಿಯೇ. ಅನುವಾದ ಕೇವಲ ಭಾಷಿಕ ಕ್ರಿಯೆಯಲ್ಲ. ಅದು ಕೇವಲ ಭಾಷೆ ಮತ್ತು ಸಾಹಿತ್ಯಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರು ಮಾತ್ರ ಮಾಡಬೇಕಾದ ಕೆಲಸವೂ ಅಲ್ಲ. ಅನುವಾದ ಕೂಡಾ ಜ್ಞಾನಸೃಷ್ಟಿಸುವ ಕ್ರಿಯೆ.

ಒಂದು ಮರುಬರವಣಿಗೆ. ಆದ್ದರಿಂದ ಕನ್ನಡದ ವಿಜ್ಞಾನಿಗಳು, ತತ್ವಜ್ಞಾನಿಗಳು ಮತ್ತು ಸಮಾಜ ವಿಜ್ಞಾನಿಗಳು ಕೂಡ ಮಾಡಬೇಕಾದ ಜವಾಬ್ದಾರಿಯಾಗಿದೆ. ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳ ಎಷ್ಟೋ ಪಠ್ಯಗಳು ಕನ್ನಡಕ್ಕೆ ಬರಬೇಕಾಗಿದೆ. ಹಾಗಾಗಿ ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿರುವ ಹೆಚ್ಚಿನ ವಿಭಾಗಗಳು, ಇತರೆ ಜ್ಞಾನಸೃಷ್ಟಿಸುವ ಸಂಸ್ಥೆಗಳು ತೊಡಗಿಸಿಕೊಂಡಿರುವ ಜ್ಞಾನಶಿಸ್ತುಗಳು ಏನಾಗಿದ್ದರೂ ಸರಿಯೇ, ಅವುಗಳ ಒಂದು ಲಕ್ಷ್ಯ ಕನ್ನಡದ ಕಡೆ ಇರುವುದು ಅಪೇಕ್ಷಣೀಯ.

ಜ್ಞಾನ ಸೃಷ್ಟಿಯು, ತಾನು ಲಭ್ಯವಿರುವ ತಾಣಗಳ ಸ್ವರೂಪವನ್ನೂ ಅವಲಂಬಿಸಿರುತ್ತದೆ. ಹಾಗಾಗಿ ಕನ್ನಡದ ಜ್ಞಾನ ಲಭ್ಯವಿರಬೇಕಾದ ತಾಣಗಳ ಬಗ್ಗೆ ಕೂಡಾ ಚರ್ಚಿಸಬೇಕಾಗಿದೆ. ಇಂಗ್ಲೀಶ್‌ಗೆ ಹೋಲಿಸಿದರೆ ಸುಮಾರು ೮೦%ರಷ್ಟು ಕನ್ನಡದ ಪಠ್ಯಗಳು ಮತ್ತು ಮಾಹಿತಿ ಇಂದು ಜಾಲತಾಣಗಳಲ್ಲಿ ಸಿಗುವುದಿಲ್ಲ. ಕನ್ನಡ ನುಡಿ, ವಿಚಾರ ಮತ್ತು ಬದುಕಿನ ಬಗ್ಗೆ ಮಾಹಿತಿ, ಹೊಳಹುಗಳು ಯೂ-ಟ್ಯೂಬ್‌ಗಳಲ್ಲಿ ಹೇರಳವಾಗಿ ಲಭ್ಯವಿಲ್ಲ. ಕನ್ನಡದಲ್ಲಿ ಬರೆಯಲು ಮತ್ತು ಅನುವಾದದಲ್ಲಿ ತೊಡಗಿಸಿಕೊಳ್ಳಲು ಬೇಕಾಗಿರುವ ಸಂಪನ್ಮೂಲಗಳಾದ ನಿಘಂಟುಗಳು, ಸಮಾನಾರ್ಥಕ ಮತ್ತು ವಿರುದ್ಧಾರ್ಥಕ(ತೆಸಾರಸ್)ದಂತಹ ಶಬ್ದನಿಧಿಗಳು, ಮುಂತಾದ ವೈಚಾರಿಕ ಸಲಕರಣೆಗಳು ಜಾಲತಾಣಗಳಲ್ಲಿ ಹೆಚ್ಚು ಹೆಚ್ಚು ಸಿಗುವಂತಾಗಬೇಕು. ಕನ್ನಡದ ವಿಕಿಪಿಡಿಯಾದಿಂದ ಹಿಡಿದು ವಿದ್ವತ್‌ಪತ್ರಿಕೆಗಳು ಈ ನುಡಿಯನ್ನು ಜ್ಞಾನದ ಭಾಷೆಯಾಗಿಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಇಂದು ಕನ್ನಡಿಗರಿಗೆ ಯಾವ ಲೋಕಜ್ಞಾನಬೇಕೆಂಬ ನಿಟ್ಟಿನಲ್ಲಿ ಹೊಸ ಮಾಧ್ಯಮಗಳು ಆಲೋಚನೆ ಮಾಡದಿದ್ದರೆ, ಕನ್ನಡದ ಪ್ರಜ್ಞೆಯನ್ನು ರೂಪಿಸುವಲ್ಲಿ ನಾವು ಸೋಲುವ ಸಾಧ್ಯತೆ ಹೆಚ್ಚು. ವಿದ್ಯುನ್ಮಾನ ಮಾಧ್ಯಮಗಳು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿರುವಾಗ, ಸಿನಿಮಾ ಸೇರಿದಂತೆ ಉಳಿದ ಇ-ಮಾಧ್ಯಮಗಳು ಕನ್ನಡದ ಅರಿವನ್ನು ಹಿಗ್ಗಿಸುವಲ್ಲಿ ಸಹಭಾಗಿತ್ವವನ್ನು ಪಡೆಯಬೇಕಾಗಿದೆ. ಹೀಗೆ ಮಾಧ್ಯಮ ಸಂಸ್ಥೆಗಳ ಜೊತೆ ಕನ್ನಡವನ್ನು ಜ್ಞಾನದ ಭಾಷೆಯಾಗಿಸುವ ನಿಟ್ಟಿನಲ್ಲಿ ನಮ್ಮ ವಿದ್ಯಾಸಂಸ್ಥೆಗಳು, ಪಠ್ಯಕ್ರಮಗಳು ಸಾಗಬೇಕಾಗಿವೆ. ಆದರೆ ಕನ್ನಡದ ಬದುಕನ್ನು ಕುರಿತು ಚಿಂತಿಸುವುದೆಂದರೆ ಕೇವಲ ಕನ್ನಡ ಭಾಷೆ, ಜ್ಞಾನಸೃಷ್ಟಿ ಇತ್ಯಾದಿ ಕುರಿತು ಯೋಚಿಸುವುದಲ್ಲ! ಕನ್ನಡದ ಭೂಗೋಳ, ರಾಜಕೀಯ ವ್ಯವಸ್ಥೆ, ಆರ್ಥಿಕ ನೀತಿ, ಸಾಮಾಜಿಕ ಸ್ವಾಸ್ಥ್ಯ ಇತ್ಯಾದಿ ಕುರಿತು ಯೋಚಿಸುವುದಾಗಿದೆ. ಆದರೆ ಈ ಲೇಖನ ಮುಖ್ಯವಾಗಿ ಗಮನಹರಿಸಿದ್ದು ಕನ್ನಡ 'ಭಾಷೆ'ಯ ಮೂಲಕ ಭಾವಿಸಬಹುದಾದ ಕನ್ನಡದ ಬುದ್ಧಿ ಮತ್ತು ಬದುಕು.

ತ.ರಾ.ಸು. ಅವರ ಪೌರಾಣಿಕ ಕಾದಂಬರಿಗಳಲ್ಲಿ ಸ್ತ್ರೀ ಸಂವೇದನೆ

– ಡಾ. ಆರ್. ಮಹೇಶ್

ಕಾದಂಬರಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾದ ಪ್ರಕಾರ ಹಾಗೂ ಜನಪ್ರಿಯವಾದ ರೂಪವು ಕೂಡ. ಕಾದಂಬರಿಗೆ ಇರುವ ಇತಿಹಾಸ ಸರಿಸುಮಾರು ಒಂದು ಶತಮಾನದಷ್ಟು. ಇಂತಹ ಕಾದಂಬರಿ ಪ್ರಕಾರವನ್ನು ಸಾಮಾಜಿಕ, ಐತಿಹಾಸಿಕ, ಪೌರಾಣಿಕ, ಪತ್ತೇದಾರಿ ಎಂಬುದಾಗಿ ವಿಭಾಗ ಮಾಡಬಹುದಾಗಿದೆ. ಪೌರಾಣಿಕ ಕಾದಂಬರಿ ಪ್ರಕಾರ ವಿಮರ್ಶಕರ ಅವಜ್ಞೆಗೆ ಒಳಗಾಗಿದೆ ಎಂದರೂ ತಪ್ಪಾಗಲಾರದ ಬೇರೆ ಪ್ರಕಾರಗಳಿಗೆ ಸಿಕ್ಕಷ್ಟು ಮಾನ್ಯತೆ ಪೌರಾಣಿಕ ಕಾದಂಬರಿಗಳಿಗೆ ಸಿಕ್ಕಿರಲಿಲ್ಲ. ಇತ್ತೀಚೆಗೆ ಪೌರಾಣಿಕ ಕಾದಂಬರಿಗಳನ್ನು ಪ್ರತ್ಯೇಕವಾಗಿ ಗುರುತಿಸಲಾಗುತ್ತಿದೆ.

ಪರಂಪರಾನುಗತವಾಗಿ ರೂಢಿಯಲ್ಲಿದ್ದ ಪ್ರಸಿದ್ಧವಾದ ಪುರಾಣಗಳಿಂದ ವಸ್ತುವನ್ನು ತೆಗೆದುಕೊಂಡು ಕಾದಂಬರಿ ಸ್ವರೂಪವನ್ನು ನೀಡಿ ಬರೆದ ಸಾಹಿತ್ಯ ಕೃತಿಗಳು ಕನ್ನಡದಲ್ಲಿ ಇತ್ತೀಚಿನ ಐವತ್ತು ವರ್ಷಗಳಿಂದ ಪ್ರಕಟಗೊಳ್ಳುತ್ತಿರುವುದನ್ನು ಕಾಣಬಹುದು, ಕನ್ನಡದಲ್ಲಿ ಆರಂಭಕ್ಕೆ ಅನುವಾದ ಕಾದಂಬರಿಗಳು ಕಂಡು ಬಂದರೂ ನವೋದಯ ಸಾಹಿತ್ಯದ ಆರಂಭದ ವೇಳೆಗೆ ಸ್ವತಂತ್ರ ಕಾದಂಬರಿಗಳು ಕಾಣಿಸಿಕೊಂಡವು. ಕಾದಂಬರಿಗಳು ಉದಯವಾದ ಸಂದರ್ಭದಲ್ಲಿ ಪೌರಾಣಿಕ ಕಾದಂಬರಿಗಳು ಒಂದೂ ಕಂಡುಬರಲಿಲ್ಲ ಮತ್ತು ಕಾದಂಬರಿಯ ಬೆಳವಣಿಗೆಯಲ್ಲೂ ಪೌರಾಣಿಕ ಕಾದಂಬರಿಗಳು ಹಿಂದೆ ಸರಿದವು. ಹತ್ತೊಂಬತ್ತನೆ ಶತಮಾನದ ಆದಿಭಾಗದಲ್ಲಿ ಪರಂಪರೆಯಲ್ಲಿದ್ದ ಕಾಲ್ಪನಿಕ ಕಥಾನಕಗಳನ್ನು ಒಳಗೊಂಡ ಅದ್ಭುತ ರಮ್ಯ ಘಟನೆಗಳನ್ನೊಳಗೊಂಡು ರಚಿಸಲ್ಪಟ್ಟ ಯಾದವನ 'ಕಲಾವತಿ ಪರಿಣಯ (೧೮೧೫)', ಮುಮ್ಮಡಿಕೃಷ್ಣರಾಜ ಒಡೆಯರ ಕೃತಿ 'ಸೌಗಂಧಿಕಾಪರಿಣಯ (೧೮೧೫)', ಕೆಂಪುನಾರಾಯಣನ 'ಮುದ್ರಾಮಂಜೂಷ' (೧೮೨೩) ಕೃತಿಗಳಲ್ಲಿ ಪೌರಾಣಿಕ ಕಾದಂಬರಿಗಳ ಸ್ಥೂಲ ಲಕ್ಷಣಗಳು ಕಂಡುಬಂದಿವೆ. ೧೯೫೦ ರಲ್ಲಿ ದೇವುಡು ನರಸಿಂಹಶಾಸ್ತ್ರಿ 'ಮಹಾಬ್ರಾಹ್ಮಣ' ಪ್ರಕಟಿಸುವ ತನಕ ಪೌರಾಣಿಕ ಕಾದಂಬರಿಯೆಂಬ ಪ್ರತ್ಯೇಕ ರೂಪ ಕನ್ನಡದಲ್ಲಿ ಇರಲಿಲ್ಲ. ಆದರೂ ಆಂಗ್ಲ ಭಾಷೆಯ ಪ್ರಭಾವದಿಂದ ಪೌರಾಣಿಕ ಕಾದಂಬರಿ ರೂಪ ನವೋದಯದ ಪೂರ್ವದಲ್ಲೆ

ಮೊಳಕೆಯೊಡೆದಿದ್ದು ಇಪ್ಪತ್ತನೆ ಶತಮಾನದ ಮಧ್ಯಕಾಲದವರೆಗೆ ಭಾರತ ಸ್ವಾತಂತ್ರ್ಯಾನಂತರ ಪೌರಾಣಿಕ ಕಾದಂಬರಿಗಳು ಜನ್ಮತಳೆದವು.

ಕನ್ನಡ ಸಾಹಿತ್ಯದಲ್ಲಿ ಪುರಾಣಾಧಾರಿತ ಕಾದಂಬರಿಗಳದೇ ಒಂದು ಪುಟ್ಟ ಪರಂಪರೆಯಿದೆ. 'ಇದೊಂದು ವಿಶಿಷ್ಟ ಪ್ರಕಾರ, ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣ ಕತೆಗಳನ್ನು ವೇದೋಪನಿಷತ್ ಕಥಾ ಪ್ರಸಂಗಗಳನ್ನು ಇಡಿ ಇಡಿಯಾಗಿ ಅಥವಾ ಬಿಡಿ ಘಟನೆಗಳಾಗಿ ಕಾದಂಬರಿಗೆ ವಸ್ತುವಾಗಿಸಿಕೊಂಡು ಆ ಕಥಾಭಿತ್ತಿಯಲ್ಲಿ ಕಾದಂಬರಿ ತಂತ್ರ ಮುಖೇನ ಸಮಕಾಲೀನ ಮೌಲ್ಯಗಳನ್ನೂ ಸಮಸ್ಯೆಗಳನ್ನೂ ಬಿಂಬಿಸುವ ಅಥವಾ ಪ್ರಾಚೀನ ಮೌಲ್ಯಗಳನ್ನು ಪುನಃ ಪ್ರತಿಪಾದಿಸುವ ಅಥವಾ ಪ್ರಾಚೀನ, ಅಧುನಿಕ ಸಮಾಜ ಹಾಗೂ ಸಾಮಾಜಿಕರನ್ನು ವಿಡಂಬಿಸುವ ಕೃತಿಗಳನ್ನು ಪೌರಾಣಿಕ ಕಾದಂಬರಿಗಳು ಎನ್ನಬಹುದು."[೧] ಈ ಅಭಿಪ್ರಾಯ ಪೌರಾಣಿಕ ಕಾದಂಬರಿ ಸ್ವರೂಪವನ್ನು ತಿಳಿಯಲು ಸಹಕಾರಿಯಾಗುತ್ತದೆ. ಕನ್ನಡದಲ್ಲಿ ಬಹುಸಂಖ್ಯಾತ ವೈದಿಕ ಪರಂಪರೆಯ ವೈಷ್ಣವ ಪುರಾಣಗಳನ್ನಾಧರಿಸಿದ ಪೌರಾಣಿಕ ಕದಂಬರಿಗಳಷ್ಟೇ ಅಲ್ಲದೆ ಜೈನ, ಬೌದ್ಧ ಮುಂತಾದ ಧರ್ಮಗಳ ಪುರಾಣವನ್ನಾಧರಿಸಿದ ಕಾದಂಬರಿಗಳು ಕಂಡುಬರುತ್ತವೆ.

ಕನ್ನಡ ಸಾಹಿತ್ಯದಲ್ಲಿ ಪೌರಾಣಿಕ ಕಾದಂಬರಿಗಳಿಂದಲೇ ಪ್ರಸಿದ್ಧರಾದವರೆಂದರೆ ದೇವುಡು ನರಸಿಂಹಶಾಸ್ತ್ರಿ ಮತ್ತು ಸತ್ಯಕಾಮರು. ಕನ್ನಡದಲ್ಲಿ ಪೌರಾಣಿಕ ಕಾದಂಬರಿಗಳ ಪರಂಪರೆಯನ್ನು ಆರಂಭಿಸಿದ ಕೀರ್ತಿ ದೇವುಡು ಅವರಿಗೆ ಸಲ್ಲುತ್ತದೆ. ತಮ್ಮ 'ಮಹಾಬ್ರಾಹ್ಮಣ' (೧೯೫೨) ಕಾದಂಬರಿಯ ಮೂಲಕ ಈ ಶತಮಾನದ ಮಧ್ಯದಲ್ಲಿ ಹೊಸ ಸಾಹಿತ್ಯ ಪ್ರಕಾರದ ಹುಟ್ಟಿಗೆ ಕಾರಣರಾದರು ಅನಂತರ 'ಮಹಾಕ್ಷತ್ರಿಯ' (೧೯೫೨), 'ಮಹಾದರ್ಶನ' (೧೯೬೨) ಬರೆಯುವುದರ ಮೂಲಕ ಪೌರಾಣಿಕ ಕಾದಂಬರಿ ಪರಂಪರೆಗೆ ಭದ್ರ ಬುನಾದಿಯನ್ನು ಹಾಕುತ್ತಾರೆ. ಪೌರಾಣಿಕ ಕಾದಂಬರಿ ಕ್ಷೇತ್ರಕ್ಕೆ ದೇವುಡು ಪ್ರಾತಃಸ್ಮರಣೀಯರೆಂದೇ ಹೇಳಬಹುದು ಇವರ ಅನಂತರ ಗುರುತಿಸಬಹುದಾದ ಪೌರಾಣಿಕ ಕಾದಂಬರಿಕಾರರೆಂದರೆ, ಸತ್ಯಕಾಮ. ಅನಂತರ ದೇವುಡು ಆ ಕ್ಷೇತ್ರದನ್ನಾಕ್ರಮಿಸಿದ ಅನಭಿಷಿಕ್ತ ದೊರೆ. ಅತಿ ಹೆಚ್ಚು ಪೌರಾಣಿಕ ಕಾದಂಬರಿಗಳನ್ನು ರಚಿಸುತ್ತಾರೆ.

ಪ್ರಗತಿಶೀಲ ಸಾಹಿತ್ಯ ಪಂಥದಲ್ಲಿ ಕಾದಂಬರಿ ಪ್ರಕಾರ ಪ್ರಧಾನವಾಗಿ ಬೆಳೆದು ಬಂದರೂ ಪೌರಾಣಿಕ ಕಾದಂಬರಿಗಳು ವಿರಳವೇ. ತ.ರಾ.ಸು ಅವರ ಎರಡು ಕಾದಂಬರಿಗಳನ್ನು ಹೊರತುಪಡಿಸಿದರೆ ಅನುಪಮ ನಿರಂಜನ ಮುಂತಾದ ಕೆಲವೇ ಬೆರಳೆಣಿಕೆಯಷ್ಟು ಕಾದಂಬರಿಕಾರರು ಪೌರಾಣಿಕ ಕಾದಂಬರಿಗಳನ್ನು ರಚಿಸಿದ್ದಾರೆ. ತ.ರಾ.ಸು ಅವರ ೬೯ ಕಾದಂಬರಿಗಳಲ್ಲಿ ೧೪ ಐತಿಹಾಸಿಕ, ೫೩ ಸಾಮಾಜಿಕ ಕಾದಂಬರಿಗಳನ್ನು ಹೊರತುಪಡಿಸಿದರೆ ಉಳಿದ ಎರಡು ಕಾದಂಬರಿಗಳು ಪೌರಾಣಿಕ ಕಾದಂಬರಿಗಳು. ಅವೆಂದರೆ 'ಬೆಳಕು ತಂದ ಬಾಲಕ' ಮತ್ತು 'ನಾಲ್ಕು ನಾಲ್ಕು=ಒಂದು'.

ತ.ರಾ.ಸು ಅವರ ಈ ಪೌರಾಣಿಕ ಕಾದಂಬರಿಗಳಲ್ಲಿ ಸ್ತ್ರೀಸಂವೇದನೆ ಹೇಗೆ ವ್ಯಕ್ತವಾಗಿದೆ ಎಂಬುದನ್ನು ಪರಿಶೀಲಿಸಬಹುದಾಗಿದೆ.

ತ.ರಾ.ಸು ಅವರು ತಮ್ಮ ಈ ಎರಡೂ ಪೌರಾಣಿಕ ಕಾದಂಬರಿಗಳನ್ನು ಉಪನಿಷತ್ತುಗಳನ್ನು ಆಧರಿಸಿ ರಚಿಸಿದ್ದಾರೆ. 'ಬೆಳಕು ತಂದ ಬಾಲಕ' ಕಠೋಪನಿಷತ್ತನ್ನು ಆಧರಿಸಿ ರಚಿಸಲ್ಪಟ್ಟಿದೆ. ನಚಿಕೇತನನ್ನು ಕುರಿತದ್ದು. ಹಾಗೆಯೇ 'ನಾಲ್ಕು ನಾಲ್ಕು=ಒಂದು' ಛಾಂದೋಗ್ಯ ಉಪನಿಷತ್ತನ್ನು ಒಳಗೊಂಡು ಸತ್ಯಕಾಮ ಜಾಬಾಲಿಯನ್ನು ಕುರಿತಂತೆ ರಚಿಸಲ್ಪಟ್ಟಿದೆ. ಎರಡೂ ಕಾದಂಬರಿಗಳಲ್ಲಿಯೂ ಇಬ್ಬರು ಬಾಲಕರ ಬದುಕನ್ನು ನೋಡುವ ದೃಷ್ಟಿಯಿದೆ. ಇಲ್ಲಿ ಬರುವ ಬಾಲಕರಿಬ್ಬರೂ ಜ್ಞಾನಪಿಪಾಸುಗಳೆ, ಬ್ರಹ್ಮಜ್ಞಾನಕ್ಕಾಗಿ ಹಾತೊರೆಯುವವರಾಗಿದ್ದಾರೆ.

'ಬೆಳಕು ತಂದ ಬಾಲಕ' ಕಾದಂಬರಿಯಲ್ಲಿ ಬರುವ ನಚಿಕೇತ, ತಂದೆ ವಾಜಶ್ರವ ತಾಯಿ ವಿಶ್ವವರಾದೇವಿ, ನಚಿಕೇತನಿಗೆ ವಿದ್ಯೆ ಕಲಿಸುವ ಛಾಧ್ಯೋಗ ಋಷಿ ಮತ್ತು ಇವಕ್ಕೆ ಪೂರಕವಾಗಿ ಕೆಲ ಋಷಿಗಳ ಪಾತ್ರಗಳು ಬರುತ್ತವೆ. ನಚಿಕೇತನ ತಂದೆ ವಾಜಶ್ರವಸ್ಸು ಬ್ರಹ್ಮಜ್ಞಾನಗಳಿಸಿ ಈಗಾಗಲೆ ಬ್ರಹ್ಮಜ್ಞಾನದಲ್ಲಿ ಅಪಾರವಾದ ಜ್ಞಾನ ಸಂಪಾದಿಸಿರುವ ಛಾಧ್ಯೋಗ ಋಷಿಗಳು ಮತ್ತು ವಾಮದೇವರನ್ನೂ ಮೀರಿಸಬೇಕೆಂಬ ಹಠದ ಸ್ವಭಾವದವ. ಇವನ ಹಠ, ಸಿಟ್ಟು, ಆಕ್ರೋಶಕ್ಕೆ ಛಾಧ್ಯೋಗ ಋಷಿಗಳ ಬಳಿ ವಿದ್ಯೆ ಕಲಿತ ತನ್ನ ಮಗ ನಚಿಕೇತನೆ ಬಲಿಯಾಗುತ್ತಾನೆ. ತನ್ನ ತಂದೆಯಿಂದ ಯಮನಿಗೆ ಅರ್ಪಿಸಲ್ಪಟ್ಟು, ಸಾವನ್ನ ಗೆದ್ದು ಯಮನಿಂದ ಮೂರು ವರಗಳನ್ನು ಪಡೆದು ಭೂಲೋಕದಲ್ಲಿ ಮತ್ತೆ ಜನ್ಮವೆತ್ತಿ ತನ್ನ ತಂದೆಯ ಅಹಂನ್ನು ಹೋಗಲಾಡಿಸಿ ಕಣ್ತೆರೆಸುತ್ತಾನೆ. ತನ್ನ ತಂದೆಯ ಉಗ್ರ ಕೋಪವನ್ನು ಶಮನಗೊಳಿಸುತ್ತಾನೆ. ತಂದೆಯ ಸಿಟ್ಟಿಗೆ ಗುರಿಯಾಗಿದ್ದ ನಚಿಕೇತ ಮೃತ್ಯುದೇವನಿಂದ ಆತ್ಮಜ್ಞಾನವನ್ನು ಪಡೆದು ಭೂಲೋಕಕ್ಕೆ ಹಿಂತಿರುಗುತ್ತಾನೆ. ನಚಿಕೇತನಲ್ಲಿ ಸಾತ್ವಿಕ ಮತ್ತು ತಾತ್ವಿಕ ಗುಣಗಳು ಕಂಡುಬಂದರೆ ವಾಜಶ್ರವಸ್ಸುನಲ್ಲಿ ಆಕ್ರೋಶ, ಆಕಾಂಕ್ಷೆಗಳು ಕಂಡು ಬರುತ್ತವೆ.

ಈ ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರವೆಂದರೆ ನಚಿಕೇತನ ತಾಯಿ ವಿಶ್ವವರಾದೇವಿ, ವಾಜಶ್ರವಸ್ ಮತ್ತು ವಿಶ್ವವರಾದೇವಿ ಆದರ್ಶ ದಂಪತಿಗಳಾದರೂ ಮಗನಿಲ್ಲದಿರುವುದು ಬಹು ದೊಡ್ಡ ಕೊರತೆಯಾಗಿತ್ತು ವಿಶ್ವವರಾದೇವಿಯ ಈ ಹಂಬಲ ವಾಜಶ್ರವಸ್‌ನನ್ನೂ ಕಾಡುತ್ತಿತ್ತು. ವಿಶ್ವವರಾದೇವಿಯ ಕೊರಗಿನ ಬೇಗೆಯನ್ನು ಸಹಿಸಲಾಗದೇ, ಕೊನೆಗೆ ಒಂದು ದಿನ ಇಬ್ಬರೆ ಏಂಕಾತದಲ್ಲಿ ಇದ್ದಾಗ ನಿನ್ನ ಮನಸ್ಸಿನ ದುಗುಡಕ್ಕೆ ಕಾರಣವೇನೆಂದು ಕೇಳುತ್ತಾನೆ. ಆತ ತಾನಾಗಿಯೇ 'ನಿನ್ನ ಕೊರಗಿನ ಕಾರಣವೇನು?' ಎಂದು ಕೇಳಿದಾಗ ಆ ಮಾತಿನಲ್ಲಿ ಪ್ರಸನ್ನತೆ ಶಾಂತತೆ ಇದೆ ಎಂಬುದನ್ನು ಅರಿತು ಆನಂತರ ವಿಶ್ವವರಾದೇವಿ "ನಿಮ್ಮ ವಿಶ್ವಾಸ, ಅನುಗ್ರಹದಿಂದ ನನ್ನಗೆ ಯಾವ ಕೊರತೆಯು ಇಲ್ಲ. 'ಎಲ್ಲಾವು ಇದ್ದರೂ ನನ್ನ ಬಾಳು ಹಣ್ಣು ಬಿಡದ ಮರವಾಯಿತಲ್ಲಾ. ಈ ಮನೆಗೆ ಸೊಸೆಯಾಗಿ ಬಂದದು ಸಾರ್ಥಕವಾಗಲಿಲ್ಲವಲ್ಲ' ಎಂದು ನನ್ನ ದೌರ್ಭಾಗ್ಯಕ್ಕಾಗಿ ವ್ಯಥೆಪಡುತ್ತಿದ್ದೆನೆ".

('ಬೆಳಕು ತಂದ ಬಾಲಕ' ಪುಟ-೨೧). ಆಯಿತು ಕಾರಣ ಗೊತ್ತಾದುದಕ್ಕೆ ಪರಿಹಾರವನ್ನು ಕಂಡುಹಿಡಿಯುವುದು ಕಷ್ಟವಲ್ಲವೆಂದು ಹೇಳುತ್ತಾನೆ. ಅನಂತರ ಜರತ್ಕಾರು ಋಷಿಗಳ ಕಥೆ ನೆನಪಾಗಿ ಆತನ ಹೃದಯವನ್ನು ಹಿಡಿದು ಬಲವಾಗಿ ಅಲುಗಿಸಿದಂತಾಯಿತು. (ಜರತ್ಕಾರು ಋಷಿ ವಿವಾಹಿತನಾಗದೆ ಸಂತಾನಹೀನನಾಗಿದ್ದರಿಂದ ಆತನ ಪಿತೃಗಳು ತಲೆಕೆಳಗಾಗಿ ಬಿದ್ದು ಒದಾಡುತ್ತಿದ್ದರು). ಮಕ್ಕಳಭಾಗ್ಯ ಪ್ರಾಪ್ತಿಯಾಗಬೇಕಾದರೆ ಶ್ರೀಮಂತಕರ್ಮದಿಂದ ಸಾಧ್ಯವೆಂದು ವಾಮದೇವರಿಂದ ತಿಳಿದು ಛಾಧ್ಯೋಗ ಋಷಿಗಳಲ್ಲಿ ಶಿಷ್ಯನಾಗುತ್ತಾನೆ. ಛಾಧ್ಯೋಗ ಋಷಿಗಳಿಂದ ಶ್ರೀಮಂತ ಕರ್ಮ ಉಪದೇಶಿಸಲ್ಪಟ್ಟು ಆ ಮೂಲಕ ಆ ದಂಪತಿಗಳಿಗೆ ಜನಿಸುವ ಮಗನನ್ನು ಉಪನಯನ ಅನಂತರ ವಿದ್ಯಾರ್ಜನೆಗೆ ತನ್ನಲ್ಲಿಗೆ ಕಳುಹಿಸಬೇಕೆಂದು ತೀರ್ಮಾನವಾಗುತ್ತದೆ.

ಇಲ್ಲಿ ವಿಶ್ವವರಾದೇವಿ ಸಂತಾನ ಪ್ರಾಪ್ತಿಗಾಗಿ ಪರಿತಪಿಸುವ ಹೆಣ್ಣು. ವಾಜಶ್ರವಸ್ಸನು ಶ್ರೀಮಂತಕರ್ಮದ ಬೋಧನೆಗಾಗಿ ಛಾಧ್ಯೋಗ ಋಷಿಗಳ ಬಳಿ ಹೋದಾಗ ಅವನ ಬರುವಿಕೆಯ ನಿರೀಕ್ಷೆಯಲ್ಲೇ ಕಾಲವನ್ನು ಕಳೆಯುತ್ತಿರುತ್ತಾಳೆ. ತಾನು ಜನ್ಮಕೊಡುವ ಮಗನಿಗೆ ನಚಿಕೇತನೆಂದು ಹೆಸರಿಡುತ್ತಾರೆ. ಅನಂತರ ವಿಶ್ವವರಾದೇವಿಯ ಆನಂದ ದಿನದಿನಕ್ಕೂ ಹೆಚ್ಚಾಗುತ್ತಿರುತ್ತದೆ. ಆದರೆ ತನ್ನ ಪತಿಯ ಪರಿವರ್ತನೆ ಕಂಡು ನೊಂದುಕೊಳ್ಳುತ್ತಾಳೆ. ಮುಂಗೋಪಿಯಾದ ವಾಜಶ್ರವಸ್ ತಮ್ಮ ಮಾತನ್ನು ಕೇಳದಿದ್ದಾಗ ನಚಿಕೇತನಿಗೆ ವಿಶ್ವವರಾದೇವಿಯೇ ಸರ್ವಸ್ವವಾಗುತ್ತಾಳೆ. ಅಪ್ಪ ಮಗನ ಮಧ್ಯೆ ನಡೆಯುವ ಮಾತಿನ ವಾಗ್ವಾದದಲ್ಲಿ ವಿಶ್ವವರಾದೇವಿ ಮುಂದೆ ಬಂದು ಇಬ್ಬರನ್ನೂ ಸಮಾಧಾನ ಪಡಿಸುತ್ತಿರುತ್ತಾಳೆ. ಇಂಥ ಸಂದರ್ಭದಲ್ಲಿ ಸದಾ ಆತಂಕದಲ್ಲಿಯೇ ವಿಶ್ವವರಾದೇವಿ ಕಾಲವನ್ನು ದೂಡಬೇಕಾಗುತ್ತದೆ. ನಚಿಕೇತನು ವಿದ್ಯಾರ್ಜನೆಗಾಗಿ ಗುರುಗಳ ಬಳಿ ತೆರಳಿದರೆ, ವಾಜಶ್ರವಸ್ ಜ್ಞಾನಸಂಪತ್ತಿಗಾಗಿ ಬೇರೊಂದೆಡೆಗೆ ತೆರಳುತ್ತಾನೆ. ಆ ವೇಳೆಯಲ್ಲಿ ವಿಶ್ವವರಾದೇವಿ ಒಂಟಿತನ ಅನುಭವಿಸಬೆಕಾತುತ್ತದೆ. ಒಂಟಿತನ ಅನುಭವಿಸಿದರೂ ಮಗ ತನ್ನ ಪತಿಯ ಕೋಪತಾಪಗಳಿಗೆ ತುತ್ತಾಗದೆ ಮುಕ್ತ ವಾತಾವರಣದಲ್ಲಿ ವಿದ್ಯಾರ್ಜನೆ ಮಾಡುತ್ತಾನೆಂದು ಸಮಾಧಾನಪಟ್ಟುಕೊಳ್ಳುತ್ತಾಳೆ. ಆದರೂ ತುಂಬಾ ತಳಮಳ ಉಂಟಾಗುತ್ತಿರುತ್ತದೆ. ಏಕೆಂದರೆ ಪತಿಯ ಜೊತೆ ಮಾತನಾಡುವಂತಿಲ್ಲ, ಮಗ ವಿದ್ಯಾರ್ಜನೆಗಾಗಿ ಬೇರೆ ಕಡೆಗೆ ಹೋಗಿದ್ದಾನೆ. ಈ ಕಾರಣದಿಂದ ಅವಳಿಗೆ ಏಕಾಂಗಿತನ. ವಾಜಶ್ರವಸ್ ನಿನ್ನನ್ನು ಯಮನಿಗೆ ಅರ್ಪಿಸಿದ್ದೇನೆಂದು ತನ್ನ ಮಗನಿಗೆ ಹೇಳಿದಾಗ ವಿಶ್ವವರಾದೇವಿಗೆ ಹೃದಯಕ್ಕೆ ಸಿಡಿಲೇ ಬಂದೆರಗಿದಂತಾಗುತ್ತದೆ. ಆ ಸಂದರ್ಭದಲ್ಲಿ ಆಕೆಯ ಆಕ್ರಂದನ ಹೇಳತೀರದು. ತನ್ನ ಹೆಂಡತಿಯ ಕ್ರೋಧ ಶಮನವಾದ ಮೇಲೆ ವಾಜಶ್ರವಸ್ ಮಮ್ಮಲ ಮರುಗುತ್ತಾನೆ. ನಚೀಕೇತನು ಯಮನ ಬಳಿ ಆತ್ಮರಹಸ್ಯವನ್ನು ತಿಳಿಯುವಾಗ ಯಮನ ಪತ್ನಿಯು ನಚಿಕೇತನಿಗೆ ಸಹಕರಿಸುತ್ತಾಳೆ.

ತ.ರಾ.ಸು ಅವರ ಮತ್ತೊಂದು ಪೌರಾಣಿಕ ಕಾದಂಬರಿ 'ನಾಲ್ಕು ನಾಲ್ಕು=ಒಂದು' ಇದು ಮತ್ತೊಬ್ಬ ಬಾಲಕನಾದ ಸತ್ಯಕಾಮ ಜಾಬಾಲಿಯರನ್ನು ಕುರಿತದ್ದು. ಒಬ್ಬ

ಬಾಲಕ ಆತ್ಮಜ್ಞಾನ ಸಂಪಾದಿಸ ಹೊರಟರೆ ಮತ್ತೊಬ್ಬ ಬ್ರಹ್ಮಜ್ಞಾನ ಸಂಪಾದಿಸಲು ಗುರುವನ್ನರಸಿಕೊಂಡು ಹೊರಡುತ್ತಾನೆ. ಛಾಂದೋಗ್ಯ ಉಪನಿಷತ್‌ನಲ್ಲಿ ಬರುವ ಸತ್ಯಕಾಮ ಜಾಬಾಲಿಯ ಕತೆ ಕಾದಂಬರಿಯ ವಸ್ತು. ದಾಸೀಪುತ್ರನಾದ ಸತ್ಯಕಾಮ ಜಾಬಾಲಿ ಬ್ರಹ್ಮೋಪದೇಶವನ್ನು ಪಡೆಯಲು ಆಶಿಸಿ, ತನ್ನ ತಾಯಿಯ ಬಳಿಗೆ ಬಂದು 'ತನ್ನ ಗೋತ್ರ ಯಾವುದೆಂದು ಕೇಳುತ್ತಾನೆ. ಮಗನ ಮಾತನ್ನು ಕೇಳಿ ನೊಂದುಕೊಂಡ ತಾಯಿ ತಾನು ಪರಿಚಾರಕಳಾಗಿ ಹಲವೆಡೆಗಳಲ್ಲಿ ದುಡಿಯುವಲ್ಲಿ ಅವನು ಹುಟ್ಟಿದನೆಂದೂ, ಆದ್ದರಿಂದ ಅವನ ಗೋತ್ರವನ್ನು ತಾನು ತಿಳಿಯೆನೆಂದು ಉತ್ತರವಿತ್ತಳು. ನನ್ನ ಹೆಸರು ಜಬಲಾ, ನಿನ್ನ ಹೆಸರು ಸತ್ಯಕಾಮ, ಆದ್ದರಿಂದ ಗುರುಗಳಿಗೆ ಸತ್ಯಕಾಮ ಜಾಬಾಲನೆಂದು ತಿಳಿಸೆಂದು ಹೇಳಿದಳು.[೨] ಹೀಗೆ ಇಲ್ಲಿ ಬರುವ ಜಬಾಲ ಸತ್ಯವನ್ನೇ ಹೇಳುತ್ತಾಳೆ. ಈ ಸತ್ಯವನ್ನು ಬಾಲಕ ಗುರುಗಳಾದ ಹಾರಿದ್ರುಮತ ಗೌತಮನ ಬಳಿ ಹಾಗೆಯೇ ಹೇಳುತ್ತಾನೆ. ಆಗ ಗುರುಗಳು ಬಾಲಕನ ಸತ್ಯವನ್ನು ಮೆಚ್ಚಿ ಅವನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ.

ದಾಸೀಪುತ್ರನೊಬ್ಬ ಬ್ರಹ್ಮಜ್ಞಾನವನ್ನು ಪಡೆಯುವುದು ಕಾದಂಬರಿಯಲ್ಲಿ ಕಂಡು ಬರುವ ವಿಶೇಷ. ನಾಲ್ಕುನೂರು ಆಕಳುಗಳನ್ನು ಅರಣ್ಯದಲ್ಲಿ ಮೇಯಿಸುತ್ತಾ ಅರಣ್ಯವಾಸದಲ್ಲಿದ್ದಾಗ ಬ್ರಹ್ಮಜ್ಞಾನ ಇವನಿಗೆ ಲಭಿಸುತ್ತದೆ. ಮನುಷ್ಯೇತರದಿಂದ ಬ್ರಹ್ಮಜ್ಞಾನದ ಒಂದೊಂದು ಪಾದವನ್ನು ಕಲಿಯುತ್ತಾನೆ. ವೃಷಭನಿಂದ ಬ್ರಹ್ಮನ ಮೊದಲನೆ ಪಾದವಾದ ಪ್ರಕಾಶವಾನ್, ಅಗ್ನಿಯಿಂದ ಬ್ರಹ್ಮನ ಎರಡನೆ ಪಾದವಾದ ಅನಂತವಾನ್, ಹಂಸಪಕ್ಷಿಯಿಂದ ಮೂರನೆಯ ಪಾದವಾದ ಜ್ಯೋತಿಷ್ಮಾನ್, ಜಲಚರ ಪಕ್ಷಿಯಿಂದ ನಾಲ್ಕನೆ ಪಾದವಾದ ಆಯತನವಾನ್‌ಗಳನ್ನು ತಿಳಿದುಕೊಳ್ಳುತ್ತಾನೆ.

ಕಾದಂಬರಿಯಲ್ಲಿ ಜಬಲಾ ಉವಾಚ ಮುಖ್ಯವಾದ ಭಾಗ, ಸತ್ಯಕಾಮನು ತಾಯಿಯನ್ನು "ಅಮ್ಮ ನನ್ನ ತಂದೆ ಯಾರು"? ಎಂದು ಕೇಳುವ ಪ್ರಶ್ನೆ ಸರಳವಾಗಿದ್ದರೂ ಅದನ್ನು ಬಿಡಿಸಿ ಹೇಳುವುದಕ್ಕೆ ಜಬಲೆಗೆ ಮಾತೆ ಬರುವುದಿಲ್ಲ. ಅಡವಿಯ ಹುಡುಗಿಯಾಗಿ, ತನ್ನ ತಂದೆತಾಯಿಗಳೊಡನೆ ಸ್ವೇಚ್ಛೆಯಾಗೆ ಬೆಳೆದ ಜಬಲೆ, ರಾಜನೊಬ್ಬನು ದಾಳಿಯಿಡಲು, ಆತನ ಕೈಸೆರೆಯಾಗಿ ಅರಮನೆಯ ದಾಸಿಯಾದಳು. ಅರಮನೆಯ ವಾತಾವರಣ ಎಷ್ಟೇ ವೈಭವವಾಗಿದ್ದರೂ, ಸ್ವಾತಂತ್ರ್ಯವಿಲ್ಲದ ಆ ಬದುಕು ಅಸಹನೀಯವೆನಿಸುತ್ತದೆ. ಅರಮನೆಗೆ ಆಗಮಿಸಿದ ಮುನಿಪೋತ್ತಮನನ್ನು ಸತ್ಕರಿಸಿದ ರಾಜನು ಅವರ ಪರಿಚಾರಿಕೆಗಾಗಿ ಜಬಲೆಯನ್ನು ಒಪ್ಪಿಸಿಕೊಡುತ್ತಾನೆ. ಅಲ್ಲಿಯೂ ಕೂಡ ಅವಳಿಗೆ ಅತಿಥಿಗಳನ್ನು ಸತ್ಕರಿಸುವ ಕೆಲಸವೇ ದಕ್ಕುತ್ತದೆ. "ಒಮ್ಮೆ ಅತಿಥಿಯಾಗಿ ಬಂದ ಋಷಿಯೊಬ್ಬರು ಜಬಲೆಯ ನಯ, ವಿನಯವನ್ನು ಕಂಡು ಸಂತೋಷಿಸಿದರು. ಅಲ್ಲದೆ ಅವಳ ಸೌಂದರ್ಯಕ್ಕೆ ಮಾರುಹೋಗುತ್ತಾರೆ. ಅತಿಥಿ ಸೇವಾವೃತ್ತಿಗೆ ಕಂಕಣಬದ್ಧಳಾಗಿದ್ದ ಜಬಲೆ ಯಾವ ಸಂಕೋಚವನ್ನು ತೋರದೆ ಆ ಋಷಿಯ ಕಾಮಾಪೇಕ್ಷೆಯನ್ನು ಸಲ್ಲಿಸಿದಳು".[೩] ಈ ರೀತಿ ಕಾದಂಬರಿಯಲ್ಲಿ ಜಬಲೆಯ ಪ್ರಾಮಾಣಿಕತೆ ವ್ಯಕ್ತವಾಗುತ್ತದೆ. ಇವಳ ಈ ತರಹದ ಸ್ವಭಾವ ಋಷಿಗಳಿಗೆ ಇಷ್ಟವಾಗುತ್ತದೆ. ಅಂದಿನಿಂದ ಆ ಯತಿ

ದಂಪತಿಗಳು ಜಬಲೆಯನ್ನು ಪರಿಚಾರಿಕಳಾಗಿದ್ದರೂ ತನ್ನ ಮಗಳಂತೆಯೇ ನೋಡಿಕೊಳ್ಳುತ್ತಾರೆ. ಅವಳಿಗೆ ಜನಿಸುವ ಮಗುವಿಗೆ ಸತ್ಯಕಾಮನೆಂದು ಹೆಸರಿಡುತ್ತಾರೆ.

ಕಾದಂಬರಿಯಲ್ಲಿ ಜಬಲೆಯನ್ನು ಕಾಡುವ ಬಹುದೊಡ್ಡ ಸಂಶಯವೆಂದರೆ ದಾಸೀಪುತ್ರನಾದ ಸತ್ಯಕಾಮನನ್ನು ಗೌತಮ ಹಾರಿದ್ರುಮತರು ತನ್ನ ಮಗನಿಗೆ ವಿದ್ಯೆ ಕಲಿಸುತ್ತಾರೋ ಇಲ್ಲವೋ ಎನ್ನುವುದು ಸತ್ಯಕಾಮನು ತನ್ನ ತಾಯಿ ಪರಿಚಾರಿಕೆಯಾಗಿದ್ದಾಗ ತಾನು ಹುಟ್ಟಿದ್ದರಿಂದ ತನ್ನ ತಂದೆ ಯಾರೆಂದು ತಿಳಿದಿಲ್ಲವೆನ್ನುವ ಸತ್ಯವನ್ನು ಹಾರಿದ್ರುಮತರ ಬಳಿ ಹೇಳುತ್ತಾನೆ. ಇವನ ಸತ್ಯ ಮತ್ತು ಪ್ರಾಮಾಣಿಕತೆ ಮೆಚ್ಚಿಕೊಂಡ ಹಾರಿದ್ರುಮತರು ಸತ್ಯಕಾಮನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ಸತ್ಯಕಾಮ ಗುರುಗಳ ಬಳಿ ವಿದ್ಯೆ ಕಲಿಯಲು ಹೊರಡುವ ಸಂದರ್ಭದಲ್ಲಿ ಅವನಿಗೆ ಜಬಲೆ ಸ್ನಾನ ಮಾಡಿಸುವಾಗ ದೇಹ ಶುದ್ಧಿಗಾಗಿ ಎಂಥದೋ ಹಿಟ್ಟನ್ನು ನೀರಿನಲ್ಲಿ ಕಲಸಿಕೊಂಡು ಸತ್ಯಕಾಮನ ಮೈಯನ್ನು ಉಜ್ಜಲಾರಂಭಿಸುತ್ತಾಳೆ. ಬಹಳ ಹೊತ್ತಿನ ತನಕ ಈ ಕ್ರಿಯೆ ನಡೆದಾಗ ಎಷ್ಟು ಹೊತ್ತು ನನ್ನ ಮೈ ಉಜ್ಜುತ್ತೀಯಾ? ನನ್ನ ಮೈ ಅಷ್ಟು ಕೊಳೆಯಾಗಿದೆಯೇ? ಎಂದು ಕೇಳಿದಾಗ, ಆಕೆ ಕಣ್ಣಲ್ಲಿ ತಟಕನೆ ನೀರು ತಂದು "ನಿನ್ನ ಮೈ ಕೊಳೆಯೇನೊ ಹೋಯಿತು ಮಗು. ಈ ಕೊಳೆಯ ಹಾಗೆ ಇನ್ನೊಂದು ಕೊಳೆಯನ್ನು ತೊಳೆಯುವ ಶಕ್ತಿ ನನಗಿದ್ದಿದ್ದರೆ–ಎಷ್ಟು ಚೆನ್ನಾಗಿತ್ತು ಎಂದು ಹೇಳಿದಳು". ('ನಾಲ್ಕುನಾಲ್ಕು=ಒಂದು' ಪುಟ–೮೮) ಈ ರೀತಿ ತನ್ನ ಮಗನ ಹುಟ್ಟಿಗೆ ಅಂಟಿರುವ ಕಳಂಕದ ಬಗ್ಗೆ ಧಾರ್ಮಿಕವಾಗಿ ಜಬಲೆ ಮಾತನಾಡುತ್ತಾಳೆ. ಅಲ್ಲಿಂದ ಮುಂದೆ ಹಾರಿದ್ರುಮತರು ಕೊಡುವ ೪೦೦ ಆಕಳುಗಳನ್ನು ಒಂದು ಸಾವಿರ ಆಕಳುಗಳನ್ನಾಗಿಸಿ ಹಾರಿದ್ರುಮತರಿಗೆ ತಂದೊಪ್ಪಿಸುತ್ತಾನೆ. ಆಕಳುಗಳೊಂದಿಗೆ ದಾರಿ ಸವೆಸುತ್ತಿದ್ದ ಸತ್ಯಕಾಮ ಮತ್ತು ನಾಲ್ಕುನಾಲ್ಕ ರಂತೆ ಬ್ರಹ್ಮನ ಸ್ವರೂಪವನ್ನು ಗ್ರಹಿಸುತ್ತಿದ್ದುದನ್ನು ನೆನೆಯುತ್ತಿರುವಂತೆಯೇ ಆತನ ಅಂತರಂಗದಲ್ಲಿ ತತ್–ತ್ವಂ–ಅಸಿ ಎಂಬ ವಾಣಿಯೊಂದು ಮಿಡಿದುದನ್ನು ಕೇಳಿದ ಅನುಭವವಾಯಿತು. ಕಾದಂಬರಿ ಶೀರ್ಷಿಕೆ ಕುರಿತಂತೆ "ಬ್ರಹ್ಮನ ಹದಿನಾರು ಕಲೆಗಳನ್ನು ನಾಲ್ಕುನಾಲ್ಕಾಗಿ ವಿಂಗಡಿಸಿ ಆ ಒಂದೊಂದು ವಿಭಾಗವನ್ನು ಕ್ರಮವಾಗಿ ಪ್ರಕಾಶವಾನ್, ಅನಂತವಾನ್, ಜ್ಯೋತಿಷ್ಮಾನ್, ಮತ್ತು ಅಯುತನವಾನ್ ಎಂದು ಕರೆಯಲಾಗಿದೆ.

ಈ ನಾಲ್ಕು ನಾಲ್ಕರ ಗುಣಲಬ್ಧವಾದ ಹದಿನಾರು ಏಕೈಕ ಬ್ರಹ್ಮನನ್ನು ನಿರ್ದೇಶಿಸಿರುವುದರಿಂದ ತ.ರಾ.ಸು. ಅವರು ತಮ್ಮ ಕಾದಂಬರಿಯನ್ನು 'ನಾಲ್ಕುನಾಲ್ಕು=ಒಂದು' ಎಂದು ಕರೆದಿರುವುದೂ ಸಹ ಅತ್ಯಂತ ಮಾರ್ಮಿಕವೂ ಸಾಂಕೇತಿಕವೂ ಆಗಿದೆ. (ಕಥಾಭಾಗವನ್ನು ನಾಲ್ಕು ಪಾದಗಳಾಗಿ ವಿಂಗಡಿಸಿರುವುದೂ ಗಮನಾರ್ಹ ವಿಷಯ)".[೪]

ತ.ರಾ.ಸು ಅವರ ಈ ಎರಡೂ ಪೌರಾಣಿಕ ಕಾದಂಬರಿಗಳಲ್ಲಿ ಕಂಡು ಬರುವ ಸ್ತ್ರೀಯರು ಬದುಕಲ್ಲಿ ಸಂಶಯದ ಸುಳಿಗೆ ಸಿಲುಕಿದವರು. ನಚಿಕೇತನ ತಾಯಿಗೆ ತನ್ನ

ಪತಿ ವಾಜಶ್ರವಸ್‌ನ ಮುಂಗೋಪಕ್ಕೆ ಎಲ್ಲಿ ನನ್ನ ಮಗ ಬಲಿಯಾಗುತ್ತಾನೋ ಎನ್ನುವ ಸಂಶಯ ಕಾಡಿದರೆ. ಜಬಲಾಳಿಗೆ ದಾಸೀಪುತ್ರನಾದ ನನ್ನ ಮಗ ಸತ್ಯಕಾಮನಿಗೆ ಗೌತಮ ಹಾರಿದ್ರುಮತರು ವಿದ್ಯೆ ಕಲಿಸುತ್ತಾರೋ ಇಲ್ಲವೋ ಎನ್ನುವ ಸಂಶಯ ಕಾಡುತ್ತದೆ. ವಿಶ್ವವರಾದೇವಿ ಆತಂಕದಿಂದ ಬಾಳನ್ನು ದೂಕಿದರೂ ತನ್ನ ಪತಿ ನಚಿಕೇತನನ್ನು ಯಮನಿಗರ್ಪಿಸಿದಾಗ ತುಂಬಾ ಆತಂಕಕ್ಕೊಳಗಾಗುತ್ತಾಳೆ. ಹಾಗೆಯೇ ಇಲ್ಲಿನ ಜಬಲಾ ಪ್ರಾಮಾಣಿಕತೆಯನ್ನು ಮೆರೆಯುವವಳು.

ತ.ರಾ.ಸು ಅವರ ಕಾದಂಬರಿಗಳಲ್ಲಿನ ವಿವಿಧ ಮನೋಧರ್ಮದ ಮತ್ತು ದೃಷ್ಟಿಕೋನದ ಸ್ತ್ರೀಯರು ಕಂಡುಬರುತ್ತಾರೆ. ಐತಿಹಾಸಿಕ ಕಾದಂಬರಿಗಳಲ್ಲಿನ ಸ್ತ್ರೀ ದಿಟ್ಟನಿಲುವನ್ನು ತಳೆಯುವವಳಾದರೆ, ಸಾಮಾಜಿಕ ಕಾದಂಬರಿಯಳಲ್ಲಿನ ಸ್ತ್ರೀ ಸಮಸ್ಯೆಗಳ ಸುಳಿಗೆ ಸಿಲುಕಿದವಳು. ನಾನಾ ತರಹದ ಸ್ವಭಾವದ ಸ್ತ್ರೀಯರು ಸಾಮಾಜಿಕ ಕಾದಂಬರಿಗಳಲ್ಲಿ ಕಂಡುಬರುತ್ತಾರೆ. ಐತಿಹಾಸಿಕ ಕಾದಂಬರಿಗಳಲ್ಲಿ ಮಕ್ಕಳಿಲ್ಲದ ಸ್ತ್ರೀ, ಉತ್ತರಾಧಿಕಾರತ್ವದ ಪ್ರಶ್ನೆ ಎದುರಾದಾಗ ತಳೆಯುವ ನಿಲುವು ಆ ವೇಳೆಗೆ ದತ್ತು ಮಕ್ಕಳಿಗೆ ಹಕ್ಕಿಲ್ಲವೆಂಬ ಬ್ರಿಟಿಷರ ಆಡಳಿತದ ನೀತಿ ಜಾರಿಯಲ್ಲಿರುತ್ತದೆ. ಸಹಗಮನದ ವಿಷಯ ಬಂದಾಗ ಆಕೆ ತೆಗೆದುಕೊಳ್ಳುವ ನಿರ್ಧಾರ, ಆಡಳಿತ ನಡೆಸುವ ಸ್ತ್ರೀ ಹೀಗೆ ನಾನಾ ರೀತಿಯ ಸಮಸ್ಯೆಗಳನ್ನೆದುರಿಸುವ ಸ್ತ್ರೀಯರು ಕಂಡುಬರುತ್ತಾರೆ. ಸಾಮಾಜಿಕ ಕಾದಂಬರಿಗಳಲ್ಲಿನ ಸ್ತ್ರೀಗೆ ಎದುರಾಗುವ ಸಮಸ್ಯೆಗಳೆಂದರೆ ವೇಶ್ಯಾಸಮಸ್ಯೆ, ಲೈಂಗಿಕ ಸಮಸ್ಯೆ, ಬಡತನ, ಸ್ತ್ರೀ ಸ್ವಾತಂತ್ರ್ಯ, ಹಠದ ಸ್ವಭಾವ, ಅಸೂಯೆ, ಮತ್ಸರ, ಸಾಮಾಜಿಕ ಪರಿಸರದಲ್ಲಿನ ಸ್ತ್ರೀ, ಗ್ರಾಮೀಣ ಪರಿಸರ, ನಗರದ ಹೆಣ್ಣುಗಳೂ ಹೀಗೆ ನಾನಾ ತರಹ ಸ್ತ್ರೀ ಸಮಸ್ಯೆಗಳು ಕಂಡು ಬರುತ್ತವೆ. ಆದರೆ ಪೌರಾಣಿಕ ಕಾದಂಬರಿಗಳಲ್ಲಿನ ಸ್ತ್ರೀ ಪ್ರಪಂಚವೆ ಬೇರೆ ತರಹದ್ದು.

ಇವರ ಪೌರಾಣಿಕ ಕಾದಂಬರಿಗಳಲ್ಲಿನ ಸ್ತ್ರೀ ಬೇರೆ ರೀತಿಯಲ್ಲಿ ಕಂಡು ಬರುತ್ತಾಳೆ. ಹೆಣ್ಣನ್ನು ಕಾಡುವ ಬಂಜೆತನ ಇಲ್ಲಿನ ವಿಶ್ವವರಾದೇವಿಯನ್ನು ಕಾಡುತ್ತದೆ. ಮದುವೆಗಿಂತಲೂ ಮುಂಚೆಯೇ ಜನಿಸುವ ಮಗು ಸಮಾಜ ಬಾಹಿರವಾದದ್ದು. ಇಂತಹ ಸಮಸ್ಯೆ ಜಬಲೆಯನ್ನು ಕಾಡಿದರೂ ಕಾದಂಬರಿಕಾರರು ಈ ಸಮಸ್ಯೆಗೆ ಹೆಚ್ಚಿನ ಒತ್ತು ಕೊಟ್ಟಿಲ್ಲ. ಆ ಬಾಲಕನ ಜ್ಞಾನದಾಹದ ಮುಂದೆ ಈ ಸಮಸ್ಯೆ ಗೌಣವಾಗುತ್ತದೆ. ಈ ರೀತಿ ತ.ರಾ.ಸು ಅವರು ಪೌರಾಣಿಕ ಕಾದಂಬರಿಗಳಲ್ಲಿನ ಸ್ತ್ರೀಪ್ರಪಂಚವನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸಿರುವಂತೆ ಕಂಡುಬರುವುದಿಲ್ಲ. ಆ ಕಾರಣದಿಂದಾಗಿಯೇ ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳಲ್ಲಿನ ಸ್ತ್ರೀಸಂವೇದನೆ ಗುರುತಿಸಿ ಚರ್ಚೆ ಮಾಡಿದಷ್ಟು ಗಂಭೀರವಾದ ಮತ್ತು ದೀರ್ಘವಾದ ಚರ್ಚೆಗೆ ಪೌರಾಣಿಕ ಕಾದಂಬರಿಗಳಲ್ಲಿನ ಸ್ತ್ರೀಸಂವೇದನೆ ದಾರಿಮಾಡಿಕೊಡುವುದಿಲ್ಲ. ಕಾದಂಬರಿಕಾರರು ಸ್ತ್ರೀ ಸಂವೇದನೆಗಿಂತ ಪುರಾಣದ ವಸ್ತುವನ್ನಾರಿಸಿಕೊಂಡು ಕಾದಂಬರಿ ರಚಿಸಿದರೂ ಅಧ್ಯಾತ್ಮದ ಕಡೆಗೆ ಹೆಚ್ಚಿನ ಗಮನ ಹರಿಸಿದ್ದಾರೆ.

ಅಡಿಟಿಪ್ಪಣಿಗಳು :

೧. ರಮೇಶ್ ಜೆ.ಕೆ : ಕನ್ನಡ ಪೌರಾಣಿಕ ಕಾದಂಬರಿಕಾರರು : ಪುಟ : ೨
೨. ಶ್ರೀಶೈಲ ಆರಾಧ್ಯ ಹೆಚ್ : ಸಂ : ಗಿರಿ ಮಲ್ಲಿಗೆ : ಪುಟ : ೨೧೩
೩. ಶ್ರೀಶೈಲ ಆರಾಧ್ಯ ಹೆಚ್ : ಗಿರಿ ಮಲ್ಲಿಗೆ : ಪುಟ : ೨೧೫-೨೧೬
೪. ಶ್ರೀಶೈಲ ಆರಾಧ್ಯ ಹೆಚ್ : ಗಿರಿ ಮಲ್ಲಿಗೆ : ಪುಟ : ೨೨೩

ಬೇಂದ್ರೆ ಕಾವ್ಯದಲ್ಲಿ ದೇಸಿಯ ಬೇರುಗಳು

– ಡಾ. ರವಿಶಂಕರ ಎ.ಕೆ.

ದೇಸಿ ಎಂದರೆ ನೆಲಮೂಲ ಸಂಸ್ಕೃತಿಯ ಪ್ರತಿನಿಧೀಕರಣ. ಆ ಮಣ್ಣಿನ ಸಂಕೇತವಾಗಿ ರೂಪಿತವಾದ ಎಲ್ಲಾ ಭೌತಿಕ ಜಗತ್ತು ಕೂಡ ಅಲ್ಲಿನ ದೇಸಿಯ ಸಂಕೇತವಾಗುತ್ತದೆ. ಈ ಭೌಗೋಳಿಕ ಸನ್ನಿವೇಶಗಳು ಪ್ರಕಟಿಸುವ ಅಂಶಗಳನ್ನು ಪ್ರಕೃತಿಯೆಂದೂ ಆ ಪ್ರಕೃತಿಯಲ್ಲಿ ಈ ಮನುಷ್ಯ ರೂಪಿಸಿಕೊಂಡ ಜಗತ್ತನ್ನು ಸಂಸ್ಕೃತಿಯಾಗಿ ಕಾಣುತ್ತೇವೆ. ಈ ಸಂಸ್ಕೃತಿಯಲ್ಲಿ ಆಚಾರ, ವಿಚಾರ, ಭಾಷೆ, ವೇಷ, ಭೂಷಣ ಎಲ್ಲವೂ ಪ್ರತಿನಿಧಿಸುತ್ತವೆ. ದೇಸಿ ಎಂದರೆ ಕೇವಲ ಭಾಷೆ ಹಾಗೂ ಬರಹದ ಶೈಲಿಯಾಗಿ ಗ್ರಹಿಸದೆ ಅದೊಂದು ಅನುಭವ ಹಾಗೂ ಪ್ರೇರಣೆ ಎಂಬ ತಳಮೂಲ ಜಾಗೃತಿಯಿಂದ ಗ್ರಹಿಸಬೇಕಾಗುತ್ತದೆ. ದೇಸಿಯ ಜೊತೆಗೆ ಮಾರ್ಗವನ್ನು ಮುಖಾಮುಖಿಯಾಗಿಸಿ ಅರ್ಥೈಸಿಕೊಳ್ಳುವ ಜಾಗೃತಿಯನ್ನು ನಮ್ಮ ವಿಮರ್ಶಕರು ನೀಡಿದ್ದಾರೆ. ಈ ದೇಸಿಯೊಂದಿಗೆ ಬೆಸೆಯುವ ಮಾರ್ಗವನ್ನು ದೇಶಿ ಎಂದೂ ಬಳಸಲಾಗಿದೆ. ಅನುಭವದೊಂದಿಗೆ ಅಗತ್ಯವಾಗುವ ಪ್ರೇರಣೆಯ ಜ್ಞಾನವನ್ನು ದೇಶಿಯೆಂಬ ವಿಸ್ತಾರ ಚಿಂತನೆಯು ಕನ್ನಡ ಸಾಹಿತ್ಯದ ದೇಸಿಯ ಮೇಲೂ ಪೂರ್ಣವಾಗಿ ಪ್ರಭಾವಿಸಿದೆ.

ಭಾಷಾವಿಜ್ಞಾನದ ಚಿಂತಕರಾದ ಕೆ.ವಿ.ನಾರಾಯಣ ಅವರು ದೇಸಿ ಓದು ಎಂದರೇನು? ಎಂಬುದನ್ನು ಚರ್ಚಿಸುತ್ತಾ 'ಕನ್ನಡದ ಮೊದಲ ದೇಸೀವಾದಿ ವಿಮರ್ಶಕರಾಗಿ ದ.ರಾ ಬೇಂದ್ರೆ' ಅವರನ್ನು ಗುರ್ತಿಸಿದ್ದಾರೆ. ಈ ವಿಮರ್ಶಕ ಹುಟ್ಟಿಕೊಂಡಿದ್ದೇ ಕಾವ್ಯದ ಕಾರಣದಿಂದ ಎನ್ನಬಹುದು. ತನ್ನ ಕಾವ್ಯಕ್ಕೆ ಮುನ್ನುಡಿಯನ್ನು, ಭಾವ ಸಂದರ್ಭವನ್ನು ನೀಡುವಾಗ ಬೇಂದ್ರೆ ಸಹೃದಯ ವಿಮರ್ಶಕರಾಗಿ ಕಾಣುತ್ತಾರೆ. ಆದ್ದರಿಂದ ಮೊದಲ ಕನ್ನಡ ಕವಿಯಾಗಿ ದೇಸಿಯ ಬೇರುಗಳಿಂದ ಕಾವ್ಯ ನಿರ್ಮಿತಿ ಮಾಡಿದವರೂ ಬೇಂದ್ರೆ ಅವರೇ ಆಗಿದ್ದಾರೆ. ಬೇಂದ್ರೆ ಅವರನ್ನು ಸಲೀಸಾಗಿ ದೇಸಿಯ ಕವಿಯೆಂದು ಒಪ್ಪಿಕೊಳ್ಳುವ ಸುಲಭತೆಯಲ್ಲಿಯೇ ಪಾಶ್ಚಾತ್ಯ ಪ್ರಭಾವ ಹಾಗೂ ದೇಶಿಯ ಪ್ರಭಾವವನ್ನು ಪರಿಪೂರ್ಣವಾಗಿ ಸ್ವೀಕರಿಸಿದ ಕವಿಯಾಗಿಯೂ ಒಪ್ಪಿಕೊಳ್ಳಬಹುದು. ದೇಸೀಯ ಬೇರುಗಳಿಂದ ಸೃಷ್ಟಿಗೊಂಡ ಕಾವ್ಯಶಕ್ತಿಗೆ 'ಅನುಭವಜನ್ಯ ಜಗತ್ತು' ರೂಪು

ಪಡೆಯಿತು. ಈ ಅನುಭವಕ್ಕೆ ಅಧ್ಯಯನವೆಂಬ ಜ್ಞಾನದ ತಿರುವುಗಳು ಪಾಶ್ಚಾತ್ಯ ಹಾಗೂ ಭಾರತೀಯ ಸಾಹಿತ್ಯದಿಂದ ಪಡೆದುಕೊಂಡರು. ಬೇಂದ್ರೆ ಅವರು 'ಅಂಬಿಕಾತನಯದತ್ತ'ನಾಗುವ ಕ್ರಿಯೆಯಲ್ಲಿಯೇ ದೇಸೀಯ ಸೃಷ್ಟಿ ಸಾಪೇಕ್ಷವಾಗಿ ಗೋಚರಿಸುತ್ತದೆ. ಬೇಂದ್ರೆ ಅವರು ರಚಿಸಿದ ಸಾವಿರದ ನಾಲ್ಕುನೂರ ಇಪ್ಪತ್ತೇಳಕ್ಕೂ ಹೆಚ್ಚಿನ ಕವಿತೆಗಳಲ್ಲಿ ದೇಸಿಯ ಅನುಭವವೇ ಮೈತಾಳಿದೆ. ಬೇಂದ್ರೆ ಅವರ ಕಾವ್ಯ ಜಗತ್ತಿಗೆ ದೇಸೀಯ ಬೇರುಗಳ ಅನುಭವ ಸಾರವೇ ಶಕ್ತಿ ಹಾಗೂ ಸೃಜನಕೃಷಿಯಾಗಿ ಗಮನಿಸಬಹುದು.

'ನೆಲಮೂಲ ಸಂಸ್ಕೃತಿ'ಯು ದೇಸೀಯ ಬೇರುಗಳ ಜೀವಂತಕ್ರಿಯೆ. ಹೊಸ ಟಿಸಿಲುಗಳಿಗೆ ಸಾರವನ್ನು ಒದಗಿಸುವ ಸತ್ತ್ವಕ್ರಿಯೆ. ಪ್ರಕೃತಿಜನ್ಯವಾದ ಸ್ವೀಕಾರಗಳಿಗೆ ಸಂಸ್ಕೃತಿಯ ಸ್ವರೂಪ ಕ್ರಿಯೆಯನ್ನು ನೀಡುತ್ತೇವೆ. ಬೇಂದ್ರೆ ಅವರು ಈ ಕ್ರಿಯೆಯ ಕಾರ್ಯದಿಂದಲೇ ಅಪೂರ್ವ ಕವಿಯಾಗಿ, ಗಾರುಡಿಗನಾಗಿ, ವರಕವಿಯಾಗಿ ಹಲವು ಓದುಗಳ ಅರ್ಥಪಡೆಯುತ್ತಿದ್ದಾರೆ. ಈ ದೃಷ್ಟಿಯಿಂದ ಬೇಂದ್ರೆ ಅವರ ಕಾವ್ಯದಲ್ಲಿ ದೇಸೀಯ ಬೇರುಗಳನ್ನು ಗುರ್ತಿಸಿಕೊಂಡರೆ ಕನ್ನಡ ಕಾವ್ಯದ ಶಕ್ತಿಯನ್ನು ಅರಿಯಲು ಸಹಾಯಕವಾಗುತ್ತದೆ. ಬೇಂದ್ರೆ ಅವರ ಕಾವ್ಯವನ್ನು ಹಲವಾರು ಆಯಾಮಗಳಲ್ಲಿ ವಿಮರ್ಶಕರು ಅಧ್ಯಯನ ನಡೆಸಿದ್ದಾರೆ. 'ಜನಪದ ಕವಿ'ಯಾಗಿ ಬೇಂದ್ರೆ ಅವರ ಕಾವ್ಯಶಕ್ತಿ ಪ್ರೇರಣೆ ಪಡೆದಿದೆ ಎಂಬ ಸಹಜವಾದ ಉತ್ತರ ನೀಡಿದ್ದಾರೆ. ಆದರೆ ಜನಪದವು ಒಂದು ವಿಶಾಲವ್ಯಾಪ್ತಿಯಲ್ಲಿ ರೂಪಿತವಾದ ಸಂಸ್ಕೃತಿಯ ಪ್ರತಿನಿಧಿ ಎಂಬುದನ್ನು ಅರಿಯಬೇಕಿದೆ. ಈ 'ಜಾನಪದ ಶಕ್ತಿ'ಯ ಹಿಂದೆ ದೇಸೀಯ ಬೇರುಗಳ ಕಾರ್ಯವನ್ನು ವಿಮರ್ಶಕರು ಗುರ್ತಿಸಬೇಕಾಗಿದೆ. ಈ ವಿಶಾಲ ಚಿಂತನೆಯನ್ನು ಅರ್ಥೈಸುವ ಕ್ರಿಯೆಯಾಗಿ ಈ ಲೇಖನದಲ್ಲಿ ಅಧ್ಯಯನಮಾಡಲಾಗಿದೆ.

ಬೇಂದ್ರೆ ಅವರು ತಮ್ಮ ಕಾವ್ಯದ ನಿಲುವನ್ನು 'ಗರಿ' ಸಂಕಲನದಲ್ಲಿಯೇ ಸ್ಪಷ್ಟಪಡಿಸಿದ್ದಾರೆ. "ಇಲ್ಲಿ ತುಂಗಭದ್ರೆಯ ಉತ್ತರಾಪಥದ 'ದೇಶಿ'ಯ ಮಾರ್ಗವನ್ನು ಹುಡುಕುವ ಹಾಗೆಯೇ ಹುಟ್ಟಿಸುವ ಕುರುಹಿದೆ. ಹುಡುಕುವುದಕ್ಕೆ ಹಾಯ್ದಾಡುವದರಿಂದಲೆ ಹಾದಿ ತಾನೆ ಹುಟ್ಟುವದು. ಪಂಡಿತ, ಪಾಮರ, ಬಡವ, ಬಲ್ಲಿದ, ನಾಗರೀಕ, ನಾಡಾಡಿ ಎಂಬ ಭೇದವನ್ನಲ್ಲಗಳೆದು ಕನ್ನಡಜೀವಾಳವು ಕನ್ನಡಿಗರಿಗಾಗಿ ಕನ್ನಡಿಸಲ್ಪಡ ಬೇಕಾಗಿದೆ. ಹಾದಿ ಬಹಳ ಸುತ್ತುಸುತ್ತು ಎನಿಸಬಹುದಾದರೂ ಎಲ್ಲವನ್ನೂ ಸುತ್ತದೆ ಗತಿಯಿಲ್ಲ. 'ದೇಶಿ'ಯ ಶಬ್ದಕೋಶಗಳು ಸಿದ್ಧವಾಗಬೇಕು. ಗಮಕಿಗಳು ಹಾಡಿ ತೋರಿಸಬೇಕು; ಸಹೃದಯರು ಅರ್ಥಮಾಡಿ ತೋರಿಸಬೇಕು"[1] ಹೀಗೆ ಒಂದೇ ಕನ್ನಡದ ಕನಸಿನಲ್ಲಿ ಬೇಂದ್ರೆ ತಮ್ಮ ಕಾವ್ಯದ ಬರಹವನ್ನು ಸ್ಪಷ್ಟಗೊಳಿಸಿಕೊಂಡಿದ್ದರು. ಅದರ ವಿಸ್ತಾರ ನೆಲೆಯನ್ನು ಬೇಂದ್ರೆ ಅವರ ಕಾವ್ಯದ ಮೂಲಕ, ವಿಮರ್ಶಕರ ಅಧ್ಯಯನ ಮೂಲಕ ತಿಳಿಯಬಹುದು.

ಈ ಕನ್ನಡ ಮಣ್ಣಿನ ಹಸಿರು ಮೀಮಾಂಸೆಯ ಚಿಂತಕರಾದ ಚಂದ್ರಶೇಖರ ನಂಗಲಿ ಅವರು ಬೇಂದ್ರೆ ಕಾವ್ಯದ ಅಧ್ಯಯನಕ್ಕೆ ಕೆಲವು ವಿಚಾರಗಳನ್ನು 'ತಿಟ್ಹತ್ತಿ ತಿರುಗಿ' ಎಂಬ ವಿಮರ್ಶಾ ಕೃತಿಯಲ್ಲಿ ನೀಡಿದ್ದಾರೆ. "ಬೇಂದ್ರೆ ಕಾವ್ಯದಲ್ಲಿ ದೇಸಿ ಸಂಸ್ಕೃತಿಯ ನೆಲಗಳನ್ನು ಕೇವಲ ಭಾಷಿಕತೆಯಲ್ಲಷ್ಟೇ ಗುರುತಿಸಿಕೊಳ್ಳುವ 'ಸ್ಥಾವರ' ವಿಮರ್ಶೆಗೆ ವ್ಯತಿರಿಕ್ತವಾಗಿ ಅವರ ಕಾವ್ಯದಲ್ಲಿ ಪ್ರವಹಿಸುತ್ತಿರುವ ದೇಸಿ ಸಂಸ್ಕೃತಿಯ ಜೀವದ್ರವ್ಯಗಳಾದ (ದೇಸಿ ಸಂಸ್ಕೃತಿಯಲ್ಲಿ ನೆಲ-ನೀರು-ಬೆಳಕುಗಳನ್ನು ಭೂಮ್ತಾಯಿ ಗಂಗಮ್ಮ, ಜೋತಮ್ಮ ಎಂದು ಕರೆಯುತ್ತಾರೆ) ಪಂಚಭೂತ ಸಮನ್ವಿತವಾದ ನವನವೋನ್ಮೇಷಶಾಲಿನೀ ಪ್ರತಿಭೆಯನ್ನು ಮನಗಾಣಿಸಲು ಇಲ್ಲಿ ಪ್ರಯತ್ನಿಸಲಾಗಿದೆ."[೨] ತಮ್ಮ ಲೇಖನದ ಗ್ರಹಿಕೆಯನ್ನು ಅಭಿವ್ಯಕ್ತಪಡಿಸುವ ಈ ಸಾಲುಗಳು ದೇಸಿಯ ಅರ್ಥವನ್ನು ವಿಸ್ತಾರವಾಗಿ ಗ್ರಹಿಸಬೇಕಾದ ನೆಲೆಯನ್ನು ತಿಳಿಸುತ್ತವೆ. ಬೇಂದ್ರೆ ಅವರ ಕಾವ್ಯದ ಬೇರುಗಳು ದೇಸಿಯ ಪದಗಳಿಂದಲೇ ಸೃಷ್ಟಿಗೊಳ್ಳುವ ಜೊತೆಗೆ ಪ್ರಾದೇಶಿಕ ಸಂಸ್ಕೃತಿಯ ಅರ್ಥದ ನೆಲೆಯನ್ನು ಸೂಕ್ಷ್ಮಗೊಳಿಸಿವೆ. ದೇಶಿ ಹಾಗೂ ಪಾಶ್ಚಾತ್ಯ ಪ್ರಭಾವವು ಸಮಾಜದ ಮೇಲೆ ದೇಸಿ ಚಿಂತನೆಯೊಳಗೆ ಮಿಳಿತಗೊಂಡ ಬಗೆಯನ್ನು ಬೇಂದ್ರೆ ಅವರು ನೇರವಾಗಿಯೇ ಬಳಸಿದ್ದಾರೆ. ಭಾಷೆಯೊಂದೇ ದೇಸಿಯ ಚಿಂತನೆಯಲ್ಲ ಎಂಬುದನ್ನು ಗದ್ಯ ಬರಹದಲ್ಲಿ ಬೇಂದ್ರೆ ಹಲವು ಕಡೆ ಸ್ಪಷ್ಟಪಡಿಸಿದ್ದಾರೆ.

ಬೇಂದ್ರೆ ಅವರ ಕಾವ್ಯದಲ್ಲಿ ದೇಸಿಯ ಬೇರುಗಳು ಮೈತಾಳಿರುವ ಬಗೆಯನ್ನು ಅಧ್ಯಯನ ಮಾಡುವಾಗ ಅವರ ಕವಿತೆಗಳೇ ಕಾವ್ಯಶಕ್ತಿ, ಶೈಲಿ ಹಾಗೂ ಪ್ರಭಾವ, ಪ್ರೇರಣೆಗಳನ್ನು ಸ್ಪಷ್ಟಪಡಿಸುತ್ತವೆ. ಬೇಂದ್ರೆ ಅವರು ತಮ್ಮ ಗದ್ಯ ಬರಹದಲ್ಲಿ ತನ್ನ ಸಾಹಿತ್ಯ ರಚನೆಯ ಮೂಲಬೇರುಗಳನ್ನು ಸ್ಪಷ್ಟಪಡಿಸಿದ್ದಾರೆ. 'ಸಾಹಿತ್ಯದ ವಿರಾಟ್ ಸ್ವರೂಪ'ದಲ್ಲಿ 'ಕೌಟುಂಬಿಕ' ಭಾಗದಲ್ಲಿ "ಕನ್ನಡ ಜಾನಪದ ಪ್ರಕೃತಿಯ ಪ್ರವೇಶವೂ ಆವೇಶವೂ ಎಂದು ನನ್ನಲ್ಲಿ ಗೂಡು ಮಾಡಿಕೊಂಡಿತೋ ನಾನು ಹೇಳಲಾರೆ. ತಾಯಿ, ಅಜ್ಜಿ ಬೀಸುವಾಗ ಹೇಳುವ ಪದಗಳಿಂದ, ಬೆಳಗುಜಾವದಲ್ಲಿ ನನಗೆ ಎಚ್ಚರಿಕೆಗಿಂತ ನಿದ್ದೆ ಹೆಚ್ಚು. ಏನು ಆ ಅವಸ್ಥೆಯಲ್ಲಿಯೇ ಪರಿಣಾಮ ಹೆಚ್ಚೋ? ದಾಸರ ಗೋವಿಂದಪ್ಪ ಮೃದುತಾಳ ಭಜನೆಯೊಡನೆ, 'ಗರುಡಾನೇರಿ ಬರುವಾ। ಇವನಾರಮ್ಮಯ್ಯಾ॥' ಎಂದೋ, 'ಜಯಪಾಂಡುರಂಗ। ಏನು ಮಾಡಿದೀ ಮಾನಭಂಗಾ!' ಎಂದೋ ರಾಗ ಎಳೆದಾಗ ನನಗೆ ಚುಕ್ಕುಬಡೆದು ಮಲಗಿಸಿದಂತಾಗುತ್ತಿತ್ತು. 'ನಿಂಬಿಯ ಮರ ಹುಟ್ಟಿ ನಿಂಗಕ್ಕೆ ನೆರಳಾಗಿ ಬಂದ ಜಂಗಮಕ ಬಸವಯ್ಯಾ ಸೂವಿ॥' ಎಂದು ಬಾಲ ಬಸವರ ಹಾಡು ಕಿವಿಗೆ ಬೀಳುತ್ತಲೇ ನಮ್ಮ ಕಾಲು ಹೇಳದೆ ಕಿತ್ತಿ ಅವರಿದ್ದಲ್ಲಿಗೆ ಹೋಗಿ ಅವರ ಸಾಕ್ಷಾತ್ಕಾರವಾದಾಗ ಈ ಕಣ್ಣಿಗೆ ತೃಪ್ತಿ. ಗೊಲ್ಲರು, ಕವಲೆತ್ತಿನವರು, ದುರ್ಗಮುರ್ಗಿಗಳು- ಎಂಥ 'ತನಾ ತಂದಾನಾ' ಇದ್ದರೂ ಕಿವಿಗೆ ಔತಣವೆನಿಸುತ್ತಿತ್ತು."[೩] ಬಾಲ್ಯದಲ್ಲಿ ದೇಸಿಯ ಬೇರುಗಳನ್ನು ಗಟ್ಟಿಗೊಳಿಸಿದ ಈ ಎಲ್ಲಾ ಜನಪದರ ಜೊತೆಗೆ ಗೊಂದಲಿಗರು, ಹಕ್ಕಿಪಿಕ್ಕಿಗಳು, ದಾಸರು, ವ್ಯಾಪಾರಿಗರು ಈ ಎಲ್ಲಾ ಶ್ರಮಜೀವಗಳಿಂದಲೂ ಬೇಂದ್ರೆ

ಸತ್ತ್ವಪೂರ್ಣರಾದರೆಂಬುದಕ್ಕೆ ಅವರ ಕಾವ್ಯದಿಂದಲೇ ನಮಗೆ ತಿಳಿಯುತ್ತದೆ. ಅವರ ಕಾವ್ಯದಲ್ಲಿ (ಬಾಲ್ಯಕಾಂಡ) ಅಭಿವ್ಯಕ್ತಗೊಳ್ಳುವ ಜೀವನ ಚರಿತ್ರೆ ವಿಶೇಷವಾದುದು. ಗ್ರಾಮೀಣ ಸೊಗಡಿನ ನೈಜ ಪ್ರತಿಭೆಯಾಗಿ ಮೀಯುವ ಬೇಂದ್ರೆ ಜೀವ ಕೇಂದ್ರಿತ ಜಗತ್ತಿನ ಜೊತೆಗೆ ಭೌತಿಕ ಹಾಗೂ ಅಭೌತಿಕ ಚರಾಚರಗಳನ್ನು ಕಾವ್ಯದ ವಸ್ತುವಾಗಿ ಸ್ವೀಕರಿಸಿದ್ದಾರೆ. ಈ ದಟ್ಟ ಪ್ರೇರಣೆಯು ಬೇಂದ್ರೆ ಅವರಲ್ಲಿ ದೇಸಿಯ ಬೇರುಗಳಂತೆ ಕಂಡುಬರುತ್ತದೆ. ಕುವೆಂಪು ಅವರಲ್ಲಿ ಅನುಭವದ ಅನನ್ಯತೆ ಅಥವಾ ಅನುಭಾವಿಕ ನೆಲೆಯಂತೆ ಅಭಿವ್ಯಕ್ತಗೊಂಡಿದೆ. ಈ ಇಬ್ಬರೂ ಕವಿಗಳು ಕಾಲನಿರ್ಮಿತಿಯ ಭೌತಿಕ, ಅಭೌತಿಕ ಜಗತ್ತನ್ನು ಕಾಲಜ್ಞಾನದಂತೆ ತಮ್ಮ ಸಾಹಿತ್ಯದಲ್ಲಿ ಪೋಣಿಸಿದರು.

ಬೇಂದ್ರೆ ಅವರನ್ನು ಬಹುಶಿಸ್ತೀಯ ನೆಲೆಯಲ್ಲಿ ಅಧ್ಯಯನ ಮಾಡಿದ ವಿಮರ್ಶಕರೆಂದರೆ ಜಿ. ಕೃಷ್ಣಪ್ಪ ಅವರು. ಇವರ ಕೃತಿಗಳಲ್ಲಿ ಬೇಂದ್ರೆ ಕುರಿತ ಜೀವನ ಚರಿತ್ರೆಯ ಸ್ಪಷ್ಟತೆ ಗೋಚರಿಸುತ್ತದೆ. ಕೀರ್ತಿನಾಥ ಕುರ್ತಕೋಟಿ ಅನುಭವಜನ್ಯವಾಗಿ ಹೇಳುತ್ತಲೇ 'ಬೇಂದ್ರೆ ಕಾವ್ಯದಲ್ಲಿ ರೂಪಿತವಾದ ರಸಜನ್ಯ'ವನ್ನು ಮರೆಯುತ್ತಾರೆ. ಈ ಸೂಕ್ಷ್ಮತೆಯನ್ನು ಅರಿತ ಜಿ. ಕೃಷ್ಣಪ್ಪ ಅವರು ಬೇಂದ್ರೆ ಕಾವ್ಯದ ಅಧ್ಯಯನದ ಮೂಲಕವೇ ದೇಸಿಯ ಬೇರುಗಳನ್ನು ಸ್ಪಷ್ಟಪಡಿಸುತ್ತಾರೆ. 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ- ಒಂದು ಅಧ್ಯಯನ' ಎಂಬ ಸಂಶೋಧನಾ ಪ್ರಬಂಧದಲ್ಲಿ ಜಿ. ಕೃಷ್ಣಪ್ಪ ಅವರು ಬೇಂದ್ರೆ ಅವರ ಬಾಲ್ಯದ ಪ್ರಭಾವಳಿಯನ್ನು ಈ ರೀತಿ ತಿಳಿಸಿದ್ದಾರೆ. "ಬೇಂದ್ರೆಯವರು – ಅಜ್ಜಿ, ತಾಯಿ, ಖಾನಾವಳಿಗೆ ಊಟಕ್ಕೆ ಬರುವ ಮಹನೀಯರು, ಶಾಲೆಯ ಶಿಕ್ಷಕರು, ಕಾಲೇಜು ಪ್ರಾಧ್ಯಾಪಕರು, ಸಾಹಿತಿಗಳು, ಗುರುಗಳು ಮೊದಲಾದ ಯಾರ ಪ್ರಭಾವಕ್ಕೂ ಬಗ್ಗಲಿಲ್ಲ. .... ಮೂಲ ಕಾರಣ ಅವರ ಅಜ್ಜಿ ಮತ್ತು ತಾಯಿ ಮತ್ತು ಅಂದಿನ ಧಾರವಾಡ ಪರಿಸರ. ಬಾಲ್ಯದಲ್ಲಿ ಬೇಂದ್ರೆಯವರ ಕಿವಿಯ ಮೇಲೆ ಬಿದ್ದದ್ದು ಜನಪದ ಹಾಡುಗಳು, ಮಂತ್ರಗಳಲ್ಲ. ಅದರ ಪ್ರಭಾವ ಎಳೆಯ ಬಾಲಕನ ಮೇಲೆ ಉಂಟಾಗಿ ಅದು ತಾಯಿಯ ಮೊಲೆಹಾಲಿನಂತೆ ಬೇಂದ್ರೆ ಜೀವಸತ್ತ್ವದ ಭಾಗವಾಯಿತು."[೪] ಬೇಂದ್ರೆ ಅವರ ಬಾಲ್ಯವನ್ನು 'ಬಾಲ್ಯಕಾಂಡ'ದ ಜೊತೆಗೆ, 'ಅಜ್ಜಿ : ಗೋದೂಬಾಯಿ', 'ಗೋದಲೆಗೆ ಬಾ ಗೋದು ಹೇ!', 'ತಂದೆ ರಾಮಚಂದ್ರ', 'ತಾಯಿ- ಪಾರ್ವತಿ-ಅಂಬಿಕೆ', 'ಓ ತಾಯೇ', 'ಮಾತೆ!', 'ನಲ್ ತಾಯಿ' ಈ ಎಲ್ಲಾ ಕವಿತೆಗಳು ಅತ್ಯಂತ ಸಮರ್ಥವಾಗಿ ದೇಸಿಯ ಬೇರುಗಳನ್ನು ಸ್ಪಷ್ಟಪಡಿಸಿವೆ. ಬಾಲ್ಯದ ನೆನಪು, ಪ್ರೇರಣೆ, ಆಟಗಳು ಈ ವಿಚಾರಗಳೇ ಕಾವ್ಯದ ವಿಚಾರಗಳಾಗಿ ಮುಂದೆ ಪ್ರತಿನಿಧಿಸುತ್ತವೆ. 'ಕರುಳಿನ ಸಂಬಂಧ ತಿಳಿಯುವುದು ಕರುಳಿಗೆ ತಲೆಗೇನು ಕಂಡೀತು ಅದರ ತಲೆ! ಆದರೂ, ಏನೇನೂ ಆದರು, ಮೈಯಂಥ ಮೈಗೂನೂ ಹೊಳೆಯುವದದರ ನೆಲೆ' ಎನ್ನುವಾಗ ಕರುಳ ಸಂಬಂಧದಂತೆ ಕಾವ್ಯದ ಬೇರುಗಳು ಸೃಷ್ಟಿಗೊಂಡ ಕ್ರಿಯೆಯನ್ನು ವರ್ಣಿಸುವರು. ಕಾವ್ಯದ ನಿಜವಾದ ಕರುಳಿನ ಸಂಬಂಧದಂತೆ ಅನುಭವಕ್ಕಿಂತಲೂ ಆಳವೆನ್ನುವುದು ಬೇಂದ್ರೆ ಅವರ ಚಿಂತನೆ. 'ತೆಯ್ಯದ್ದೆ ತೆಯ್ಯದ್ದು ತುಟಿಗೆರೆ ಬಿಚ್ಚಿರಲು,

ಉಸಿರೆ ಆಗುವದಣ್ಣ ಸಾಕಾರವು! , ಯಾವ ತಿಪ್ಪೆಯ ಬಸಿರ ಬಿರಕಿಗೆ ಮೋಡಿತ್ತೊ, ಮಾವಿನ ಪೀಪಿಯ ಆಕಾರವು?' ಎನ್ನುವ ಆಶ್ಚರ್ಯ ಹಾಗೂ ಪ್ರಶ್ನೆಗಳಿಗೆ ಸೂಕ್ಷ್ಮವಾದ ಅರ್ಥಗಳಿವೆ. ಜಿ. ಕೃಷ್ಣಪ್ಪ ಅವರು ಈ ಸಾಲುಗಳನ್ನು ಸಂಶೋಧನೆ ನಡೆಸಿ ಅದೊಂದು ಗ್ರಾಮೀಣ ಆಟವಾದ ಮಾವಿನ ವಾಟೆಯಿಂದ ಹೊಮ್ಮಿದ ನಾದವಾಗಿ ತಿಳಿಸಿದ್ದಾರೆ. ಈ ಉತ್ತರದಿಂದ ದೇಸಿ ಪ್ರಜ್ಞೆಯು ಬೇಂದ್ರೆ ಅವರಲ್ಲಿ ಮೂರ್ತಗೊಂಡ ಬಗೆಗಳನ್ನು ಆಳವಾಗಿ ಸ್ಪಷ್ಟಪಡಿಸುತ್ತದೆ. ಈ ಕಾವ್ಯ ದೇಸಿಯ ಅರ್ಥದೊಂದಿಗೆ ಸೀಮಿತವಾಗದೆ ಲೋಕಜ್ಞಾನವಾಗಿಯೂ ಹೊರಹೊಮ್ಮಿದೆ. ಕಾವ್ಯದ ರಚನೆ, ಸೃಷ್ಟಿಯ ಬಗೆ, ಕಾವ್ಯದ ವಸ್ತುಗಳು ಇರುವ ಬಗೆ, ಅದನ್ನು ಕುಸುರಿಸುವ ರೀತಿಯನ್ನೂ ಸ್ಪಷ್ಟಪಡಿಸಿದ್ದಾರೆ. ತಿಪ್ಪೆಯೆಂಬ ಅಗೌರವದಲ್ಲೂ ಸಮಾಜಕ್ಕೆ ಗೌರವ ಸೂಚಕ ಪ್ರತಿನಿಧಿತ್ವದ ನಾದ ಹೊಮ್ಮಿಸುವ ಜೀವಸೃಷ್ಟಿಯ ಶಕ್ತಿ ಇದೆ ಎಂಬ ಸಾರ್ಥಕತೆಯ ಪಾಠವನ್ನು ನಾಲ್ಕು ಸಾಲಿನಲ್ಲಿ ನಿರ್ಮಿಸಿದ್ದಾರೆ. ಇಲ್ಲಿ ಕುವೆಂಪು ಅವರ 'ಗೊಬ್ಬರ' ಕವಿತೆ ಕೂಡ ಈ ಸಾರ್ಥಕ ಚಿಂತನೆಯನ್ನು ಅಭಿವ್ಯಕ್ತಪಡಿಸಿರುವ ಬಗೆಯನ್ನು ನೆನೆಯಬಹುದು.

ಬೇಂದ್ರೆ ಅವರು ಸಂಸ್ಕೃತದೊಂದಿಗೆ ಭಾರತೀಯ ಇತರ ಭಾಷೆಗಳ ಮೂಲಕ ಕಾಳಿದಾಸ, ವ್ಯಾಸ, ವಾಲ್ಮೀಕಿಯರನ್ನು ಅಧ್ಯಯನ ಮಾಡುವ ಜೊತೆಗೆ ಗಾಂಧಿ, ಅರವಿಂದರು, ರವೀಂದ್ರನಾಥ ಠಾಕೂರರನ್ನು ಅತ್ಯಂತ ಸಮರ್ಥವಾಗಿ ಅಧ್ಯಯನ ಮಾಡಿದ್ದರು. ಆಂಗ್ಲಭಾಷೆಯ ಮೂಲಕ ಪಾಶ್ಚಾತ್ಯ ಸಾಹಿತ್ಯವನ್ನು ಅದರಲ್ಲಿ ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಇವರ ಸಾಹಿತ್ಯವನ್ನು ಗಂಭೀರವಾಗಿ ಅಧ್ಯಯನ ಮಾಡುವ ಜೊತೆಗೆ ಕನ್ನಡ ಲೇಖಕರನ್ನು ಸ್ವೀಕರಿಸಿದಂತೆ ಸ್ವೀಕರಿಸಿದ್ದರು. ಕಾವ್ಯದಲ್ಲಿ ಇವರ ಹೆಸರು ಸಲೀಸಾಗಿ ಕನ್ನಡೀಕರಣಗೊಂಡು ಬಳಕೆಯಾಗಿವೆ. ನೆಲಮೂಲ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಾಹಿತ್ಯ ನಿರ್ಮಿಸಿದ ಪ್ರತಿಯೊಬ್ಬ ಕವಿಗೂ ತನ್ನದೇ ಆದ ಗುರುತ್ವ ಇರುತ್ತದೆ. ಈ ವಿಚಾರವನ್ನು ಬೇಂದ್ರೆ ಅವರು ಸೂಕ್ಷ್ಮವಾಗಿ ಅರಿತಿದ್ದರು. ಜನಪದ ಗಂಭೀರತೆಯನ್ನೂ, ಸಂಸ್ಕೃತದ ಭೂಹಿಷ್ಠತೆಯನ್ನೂ, ಆಂಗ್ಲದ ಪ್ರಭಾವವನ್ನು ದೇಸಿಯ ನುಡಿಗಳ ಮೂಲಕ ಸಹಜವಾಗಿ ದುಡಿಸಿಕೊಂಡಿದ್ದಾರೆ. ಬೇಂದ್ರೆ ಕಾವ್ಯದ ಮುಖ್ಯ ಗುರಿಯೇ ಕನ್ನಡವನ್ನು ಕನ್ನಡೀಕರಿಸುವ, ವಿಶ್ವದೊಳನುಡಿಯಾಗಿಸುವ ಹೊಣೆ ಎಂದು ಭಾವಿಸಿದ್ದರು.

ದೇಸಿಯ ಪ್ರಖರತೆಯು ಕಾವ್ಯ ಅಧ್ಯಯನ ಮೂಲಕ ನಮಗೆ ಹೆಜ್ಜೆ ಹೆಜ್ಜೆಗೂ ಅರಿವಾಗುತ್ತದೆ. ಚಂದ್ರಶೇಖರ ನಂಗಲಿ ಅವರು 'ಬೇಂದ್ರೆಕಾವ್ಯದ ದ್ವಂದ್ವ ವಸ್ತು ವಿನ್ಯಾಸ – ಒಂದು ಟಿಪ್ಪಣಿ' ಎಂಬ ಲೇಖನದಲ್ಲಿ ಈ ಅಂಶಗಳನ್ನು ಸ್ಥಳೀಯತೆ, ರಾಷ್ಟ್ರೀಯತೆಯ ದೃಷ್ಟಿಯಲ್ಲಿ ಬೇಂದ್ರೆ ಕಾವ್ಯದ ಸಾಂಸ್ಥಿಕ ಸ್ವರೂಪವು ದೇಸಿಯ ಬೇರುಗಳಲ್ಲಿ ಬಲಿಷ್ಠಗೊಂಡಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. "ಯುರೋಪಿಯನ್ನರ ಆಗಮನ ದೇಶಭಾಷಾ ಸಂಸ್ಕೃತಿಗಳ ಮೇಲೆ ಬೀರಿದ ಪ್ರಭಾವ ನಿಚ್ಚಳವಾದುದು. ದೇಶಭಾಷೆಗಳು ಸಂಸ್ಕೃತಜನ್ಯವಲ್ಲವೆಂಬ ಪ್ರತಿಪಾದನೆಯೊಂದಿಗೆ ಕ್ರೈಸ್ತ ಮಿಷನರಿಗಳು

ನಡೆಸಿದ ಚಿಂತನೆ ಮತ್ತು ಸಾಧನೆಗಳು ದೇಶಭಾಷೆಗಳ ಅನನ್ಯತೆ ಮತ್ತು ಸ್ವಂತಿಕೆಯ ಹುಡುಕಾಟಕ್ಕೆ ಚಾಲನೆ ನೀಡಿದ್ದವು. ಇದೇ ಸಂದರ್ಭದಲ್ಲಿ ಕಣ್ಣು ಕುಕ್ಕುವ ಐರೋಪ್ಯ ಮಾರ್ಗದ ವಿಶ್ವಸ್ಥ ಮಾದರಿಗಳು ಸಾರಸ್ವತ ಕ್ಷೇತ್ರದಲ್ಲಿ ವಿಜೃಂಭಿಸುತ್ತಾ 'ಯುರೇಷಿಯನ್ (ಯುರೋಪ್ + ಏಷಿಯನ್) ಎನ್ನಬಹುದಾದ ವಿಚಾರ ಸರಣಿಯೊಂದು ಮೊದಲಿಟ್ಟುಕೊಂಡಿತು. ಹೀಗೆ ಪಶ್ಚಿಮದಿಂದ ಹರಿದು ಬಂದ ವಿಚಾರಧಾರೆಗೆ ಕುರುಡಾಗದೆ, ವೈದಿಕ ಎನ್ನಬಹುದಾದ ನಿಲುವುಗಳಿಗೆ ಶರಣಾಗದೆ ಏಕಕಾಲಕ್ಕೆ ವಿದೇಶಿ ವಸಾಹತುಶಾಹಿ ಮತ್ತು ಸ್ವದೇಶಿ ವಸಾಹತುಶಾಹಿಗಳೆರಡರ ಹಿಡಿತದಿಂದ ಪಾರಾಗಬೇಕಿದ್ದ ಸವಾಲು ಎದುರಿಗಿತ್ತು. ಇಂಥ ವಿಷಮ ವಾತಾವರಣದಲ್ಲಿ ಬೇಂದ್ರೆಯವರು ಕಾವ್ಯ ಮತ್ತು ವಿಮರ್ಶೆಯ ಕ್ಷೇತ್ರಗಳೆರಡರಲ್ಲು ಯುರೇಷಿಯನ್ ವಿಶ್ವಸ್ಥ ಮಾದರಿಗಳನ್ನು ಶೋಧಿಸುತ್ತಾ ಛಿದ್ರಿಸುತ್ತಾ ದೇಸೀಯ ಎನ್ನಬಹುದಾದ ಮಟ್ಟುಗಳು – ನುಡಿಗಟ್ಟುಗಳು – ಜೀವನಾನುಭವಗಳನ್ನು ಆಧರಿಸಿ ಪಟ್ಟಪಾಡುಗಳನ್ನೆಲ್ಲ ಹುಟ್ಟುಹಾಡಾಗಿಸಿದ್ದಾರೆ"೫ ಇಲ್ಲಿ ಬೇಂದ್ರೆ ಅವರು ಸಾಹಿತ್ಯ ದೃಷ್ಟಿಕೋನವನ್ನು ವಿಸ್ತರಿಸಿಕೊಂಡ ಬಗೆಯು ದೇಸಿಯ ಅಂಶಗಳ ಮೂಲಕವೇ ಗೋಚರಿಸುತ್ತದೆ. 'ನರಬಲಿ', 'ಮೂವತ್ತು ಮೂರು ಕೋಟಿ', 'ಕನಸಿನೊಳಗೊಂದು ಕಣಸು', 'ತುತ್ತಿನ ಚೀಲ', 'ಕುರುಡು ಕಾಂಚಾಣ' ಮೊದಲಾದ ಕವಿತೆಗಳಲ್ಲಿ ಅಡಗಿರುವ ಸಾಮ್ರಾಜ್ಯಶಾಹಿಯ ವಿರುದ್ಧದ ದನಿ, ವಸಾಹತುಶಾಹಿ ಅವರ ವಿರುದ್ಧದ ಕವಿತೆಗಳಲ್ಲಿ ಬಳಸಿರುವ ಭಾಷೆಯ ಜೊತೆಗೆ ವಸ್ತು ಪ್ರತಿಮೆಯೂ ದೇಸಿಯ ಬೇರಿನಿಂದ ಮೂಡಿರುವುದನ್ನು ಗಮನಿಸಬಹುದು. ಉದಾಹರಣೆಗೆ ಒಂದೆರಡು ಕವಿತೆಗಳನ್ನು ಇಲ್ಲಿ ಗಮನಿಸಿದ್ದೇನೆ. 'ನರಬಲಿ' ಕವಿತೆಯಲ್ಲಿ "ಬಲಗಾಲಲಿ ಬಿಡುಗಡೆಯನು ಮೆಟ್ಟಿ–ನಿಂತಿಹೆ ಎಲೆ ಕಾಳಿ!, ನಿನ್ನೆಡಗಾಲನು ನೆಕ್ಕುತಲಿಹುದು–ಶ್ವಾನಸೂಕರಾಳಿ!, ಭಯದಾಯಕ ಬಲಗೈಯನು ಚಾಚಿಹೆ!, ಶಾಪವ ಕೊಡಲೆಡಗೈಯನು ಎತ್ತಿಹೆ ಎಲೆಲೆ ರುದ್ರಕಾಳಿ!" ಇಲ್ಲಿ ಬಳಕೆಯಾಗಿರುವ ಪದಗಳೆಲ್ಲಾ ನಮ್ಮ ದೇಸಿ ಜನರ ಆಡುಭಾಷೆಯೇ ಆಗಿದೆ. ಆದರೆ ಅರ್ಥ ಸ್ವರೂಪದಲ್ಲಿ ಭಾರತ ದೇವಿ ಹಾಗೂ ಬ್ರಿಟಿಷ್ ಆಳ್ವಿಕೆ ಕುರಿತು ಒಂದು ಸ್ವರೂಪವನ್ನೇ ತಿಳಿಸುತ್ತದೆ. 'ಮೂವತ್ತು ಮೂರು ಕೋಟಿ' ಕವಿತೆಯಲ್ಲಿ "ಮಕ್ಕಳಿವರೇನಮ್ಮ ? ಮಕ್ಕಳಿವರೇನಮ್ಮ, ಮೂವತ್ತು ಮೂರು ಕೋಟಿ?... ಹಾಳರ್ಧ ಹೊಲೆಯರೆಂದೂ ಬೀಳರ್ಧ ಹೆಣ್ಣು ಎಂದೂ, ಹೋಳು ಹೋಳಾಗಿಹುದು; ಆಳು ಬಾಳಾಗಿಹುದು. ಏಳಿರೋ ಆಳಿರೆಂಬೇ– ಬಾಳಿರೋ. ಮೂವತ್ತುಮೂರು ಕೋಟಿ!!" ಹಾಗೂ 'ತುತ್ತಿನ ಚೀಲ' ಕವಿತೆಯಲ್ಲಿ "ಅನ್ನಬ್ರಹ್ಮದ ದೇಗುಲದಲ್ಲಿ ಬೆಳಗೂ ಬೈಗೂ ಛಿಳಿ ಛಿಟಿ ಬೆಂಕಿ. ಡೊಂಬರ ಪೂಜೆಯು. ಕಾಗೆಯ ಮಂತ್ರ, ಗಾಳಿಯ ಎಡೆಯು. ಬೊಬ್ಬೆಯ ಗಂಟೆ – ಅನ್ನ ಬ್ರಹ್ಮದ ದೇಗುಲದಲ್ಲಿ!" ಈ ಎಲ್ಲಾ ಕವಿತೆಗಳಲ್ಲೂ ದೇಸಿಯ ಅಂಶಗಳು ಸಮಾಜದ ತಿದ್ದುವಿಕೆಯಲ್ಲಿ ಭಾಷೆ, ನಿಸರ್ಗದ ಪದಗಳು ಇಲ್ಲಿ ಸಹಜವಾಗಿ ಗಂಭೀರವಾದ ವಿಚಾರಗಳನ್ನು ಮೂಡಿಸಿದೆ. ನಾನಿಲ್ಲಿ ಭಾಷೆಯ ವಿಚಾರದಲ್ಲಿ ಕನ್ನಡವನ್ನು ಮಾತ್ರ ದೇಸಿಯ ಬೇರಿನ ಸಹಜತೆ

ಎಂದು ಗ್ರಹಿಸುವುದಕ್ಕಿಂತ ಜನರಾಡುವ ಭಾಷೆ, ಸಂಸ್ಕೃತಿ ಹಾಗೂ ವಿಚಾರಗಳನ್ನು ಮುಖ್ಯವಾಗಿ ಗ್ರಹಿಸುತ್ತಿದ್ದೇನೆ. ಎಷ್ಟೋ ಸಂಸ್ಕೃತ ಪದಗಳು ಕನ್ನಡದಲ್ಲಿ ಬೆರೆತು ಕನ್ನಡ ಪದಗಳೇ ಆಗಿವೆ.

'ಕೆಲಸವಿಲ್ಲದವರ ಹಾಡು' ಕವಿತೆಯಲ್ಲಿ "ದೇವರ ಕಾಟವೊ ಮಾನವರಾಟವೊ, ಹತ್ತಿ ಬಿತ್ತಿ ಬೆಳೆಕೊಂಡೆವು ಹಾಳು, ತಿನ್ನಲು ಬೆಳೆಯದು ತುಸು ಕಡಿಕಾಳು, ಬಕ್ಕರಿಸುವದೋ ಹೆಂಟೆಯ ಕೂಳು, ಬತ್ತಿತು ಅನ್ನ ಹೊತ್ತಿತು ಚಿನ್ನ, ಚಂಚಲ ಲಕ್ಷ್ಮಿಯ ಕಟಾಕ್ಷದನ್ನ, ಹುಟ್ಟಿದ ಕೂಡಲೇ ಹಾರಿತೊ ಅಣ್ಣ" ಎಂಬ ಈ ಸಾಲುಗಳು ವಸಾಹತು ಶಾಹಿಯ ನೀತಿಗಳು ಹೊತ್ತು ತಂದ ವ್ಯಾಪಾರಿಧೋರಣೆಯಿಂದ ಉಂಟಾದ ಅನ್ನದ ಸಮಸ್ಯೆಯನ್ನು ತಿಳಿಸುತ್ತವೆ. ಇಲ್ಲಿ ಬಳಕೆಯಾಗಿರುವ ಪದಗಳು ನೆಲಮೂಲ ಸಂಸ್ಕೃತಿಯನ್ನು ಪ್ರತಿನಿಧಿಸುವ ದೇಸೀ ಪದಗಳು. ಬೇಂದ್ರೆ ಅವರಿಗೆ ತನ್ನ ಕಾವ್ಯವನ್ನು ಸಾಮಾನ್ಯ ಜನರಿಗೆ ತಲುಪಿಸುವ ಉದ್ದೇಶವೇ ಹೊರೆತು ಬೇರೆ ಆಯಾಮವಿರಲಿಲ್ಲ. ತನ್ನ ಕವಿತೆಗಳನ್ನು ತಾವು ಖುದ್ದಾಗಿ ಹಾಡುತ್ತಿದ್ದರು, ಓದುತ್ತಿದ್ದರು. ಅವರ ಒಡನಾಡಿಗಳು ಅತ್ಯಂತ ಹೆಚ್ಚು ಮನಸೋತಿರುವ ವಿಚಾರವೆಂದರೆ ಬೇಂದ್ರೆ ಅವರಿಗಿದ್ದ ಚಿಕ್ಕ ಚಿಕ್ಕ ಅಂಶಗಳ ಮೇಲಿನ ಕುತೂಹಲ, ಇನ್ನೊಬ್ಬರಿಗೆ ಒಪ್ಪಿಸುವ ಪರಿ. ಈ ಆಯಾಮವು ಗ್ರಾಮ್ಯ ಪರಂಪರೆಯ ತೋಂಡಿಸಂಸ್ಕೃತಿಯಲ್ಲಿ ಸಮೃದ್ಧವಾಗಿ ಬೆಳೆದುಬಂದುದು. ಕಥೆ ಹೇಳುವ, ಜನಪದ ಹಾಡುಕಟ್ಟಿ ಹಾಡುವ ಈ ಆಯಾಮದಲ್ಲಿ ಬೇಂದ್ರೆ ತನ್ನ ಕಾವ್ಯವನ್ನು ಅರ್ಪಿಸಿದ್ದರು. ಇಂದಿಗೂ ಬೇಂದ್ರೆ ಅವರ ಕವಿತೆಗಳನ್ನು ದೊಡ್ಡ ದನಿಯಲ್ಲಿ ಓದುವ, ಹಾಡಿದರೆ ಮಾತ್ರ ಅದರ ಗಮ್ಮತ್ತೆ ಅರ್ಥವಾಗುವುದು ಎನಿಸುತ್ತದೆ.

ಬೇಂದ್ರೆ ಅವರ ಕಾವ್ಯದಲ್ಲಿ ದೇಸಿಯ ಆಯಾಮವನ್ನು ಪರಿಪೂರ್ಣವಾಗಿ ಗುರ್ತಿಸಬಹುದಾದರೂ ಅದರ ಸೂಕ್ಷ್ಮತೆಗಾಗಿ ನಾಣ್ಣುಡಿಗಳು, ಗಾದೆಗಳು, ಪಡೆನುಡಿಗಳು, ನುಡಿಗಟ್ಟುಗಳ ಬಳಕೆಯನ್ನು ಇಲ್ಲಿ ಗಮನಿಸಬಹುದು. ಹೂತದ ಹುಣಸಿ ಎಂದು ಕರೆಯುವಾಗಲೇ ಕಾವ್ಯದ ಹದವನ್ನು ಅಭಿವ್ಯಕ್ತಗೊಳಿಸುವ ಬೇಂದ್ರೆ ಅವರು ಜನರ ಮಾತಿನಲ್ಲಿಯೇ ಉಕ್ತಿಗಳನ್ನು ಕವಿತೆಗಳಲ್ಲಿ ಮೇಳೈಸಿದ್ದಾರೆ. ಚತುರೋಕ್ತಿ ಮತ್ತು ಇತರ ಕವನಗಳು ಸಂಕಲನದಲ್ಲಿ 'ಬಸವನ ಬೆನ್ನು ಮುಸವ ಹತ್ತಲಾರದು', 'ಪ್ರೀತಿನ ಇಲ್ಲದಲ್ಲಿ ದೂತೀ ಕೆಲಸ ಏನು?', 'ಹುಳದ ಬಾಯೊಳಗ ಹೂವಿನ ಜೇನು', 'ಹೋರಿ ಬಂತು ಏರಿ, ಮೇಲೆ ಶಿವನ ಸವಾರಿ', 'ಕುಳದ ಹಕ್ಕಲದಾಗ ಕಳಾ, ಬೆಂಕಿ ಹತ್ತಿದಾಗ ಎಳೆದಾನ ಗಳಾ', 'ಬೆಲ್ಲಕ್ಯಾಕ ಬ್ಯಾರೇ ಸವಿ, ಭಕ್ತಗಿಲ್ಲಾ ಬ್ಯಾರೆ ಕಿವಿ' ಹೀಗೆ 'ಗರಿ' ಸಂಕಲನದಲ್ಲಿ 'ಕರಿ ಮರಿ ನಾಯಿ ಕುಂಯಿಗುಡುತಿತ್ತು, ಭಟ್ಟರ ಬಾಯಿ ಒಟಗುಡುತಿತ್ತು', 'ಕುನ್ನಿಯು ಒಳಗೇ ಬಂದೇನೆಂದಿತು; ಭಟ್ಟರು, ಬಂದರೆ ಕೊಂದೇನೆಂದರು', ಮುಕ್ತಕಂಠ ಸಂಕಲನದಲ್ಲಿ 'ಜಗದೊಳು ತುಂಬಿಹರೋ ಜನರು, ಹುಲಿಮಂಗನ ಸಂತತಿಯವರು', 'ಜನಮನದಲಿ ಜನಕತೆ ಹಿಗ್ಗಿ, ವೈದೇಹರ ಪ್ರಕೃತಿಯ ಸುಗ್ಗಿ' ನಾಕುತಂತಿಯಲ್ಲಿ 'ಶಬ್ದ ಶ್ರುತಿಯಾದಾಗ ಮಾತು ಕೃತಿಯಾದೀತು', ಈ ರೀತಿಯಲ್ಲಿ

ನುಡಿಯುಕ್ತಿಯನ್ನು ಅತ್ಯಂತ ಸಹಜವಾಗಿ ತಂದಿರುವ ಹಲವು ಉದಾಹರಣೆಗಳನ್ನು ಗಮನಿಸಬಹುದು. ಗೌರೀಶ ಕಾಯ್ಕಿಣಿ ಅವರು ತಮ್ಮ 'ಕಂಪಿನ ಕರೆ' ಎಂಬ ಕೃತಿಯಲ್ಲಿ 'ಅಪ್ಪಟ ಜಾನಪದ ಅಪರಂಜಿ'ಯಾಗಿ ಬೇಂದ್ರೆ ಅವರನ್ನು ಈ ರೀತಿಯಲ್ಲಿ ಅರ್ಥೈಸಿದ್ದಾರೆ. " 'ಜನವಾಣಿ ಬೇರು, ಕವಿವಾಣಿ ಹೂ' – ಅಂದರು ಬಿ.ಎಂ.ಶ್ರೀ ಆದರೆ ಬೇಂದ್ರೆಯವರಲ್ಲಿ ಈ ಬೇರು ಬೇರಲ್ಲ, ಹೂವೂ ಬೇರಲ್ಲ. ನೇರ ಬೇರಿಗೇ ಹೂವು ಅರಳಿವೆ. ಬಾಳದ ಬೇರಿನಂತೆ, ಇಲ್ಲಿ ಜನಪದ ಸತ್ವವನ್ನೆಲ್ಲ ಹೀರಿಕೊಂಡು ಬೇರಿಗೇ ಪರಿಮಳ ಕೊನರಿದೆ. ಇದಕ್ಕೆ ಉದಾಹರಣೆ ಕೊಟ್ಟಷ್ಟೂ ಕಡಿಮೆ ಅನಿಸುತ್ತದೆ."[೬] ಬೇಂದ್ರೆ ಅವರ ತಮ್ಮ ಕಾವ್ಯದಲ್ಲಿ ತರುವ ದೇಸಿ ಶಬ್ದ ಭಂಡಾರವನ್ನು ಇಷ್ಟೇ ಎಂದೂ ಗುರ್ತಿಸಲಾಗದು. ಏಕೆಂದರೆ ಇಡೀ ಕಾವ್ಯದ ಶರೀರವೇ ದೇಸಿಯಲ್ಲಿ ಮೈತಾಳಿದೆ. ಇವರು ತೊಟ್ಟ ಭಾಷೆ, ಕಟ್ಟಿದ ಪ್ರತಿಮಾವೇಶ, ಕವನಗಳ ಭಾವದ ನಿಬಿಡತೆ ಎಲ್ಲವೂ ಸತ್ತ್ವಪೂರ್ಣ ಶಕ್ತಿಯ ದರ್ಶನಗಳು ಎನ್ನಬಹುದು.

ದೇಸಿಯ ಬೇರುಗಳ ಭಾವದ ತೀವ್ರತೆ ಹಾಗೂ ಕಾವ್ಯಶೈಲಿಯ ಗಮ್ಯತೆಗೆ ಕೆಲವು ಉದಾಹರಣೆಗಳಾಗಿ ಗಮನಿಸಬಹುದು. 'ಗುರುದೇವ' ಕವನದಲ್ಲಿ "ಹಾಡಿ ಹಣ್ಣಾದಿ ನೀ, ಸವೆದು ಸಣ್ಣಾದಿ ನೀ, ಜಗದ ಕಣ್ಣಾದಿ ನೀ ಗುರುದೇವಾ" ಇಲ್ಲಿ ರವೀಂದ್ರ ನಾಥ ಟಾಕೂರರನ್ನು ವರ್ಣಿಸಿರುವ ಬಗೆಯು ಶುದ್ಧ ದೇಸಿಯ ಕೈಪಿಡಿಯಾಗಿ ಅರಿಸಬಹುದು. 'ನನ್ನ ಕೈಯ ಹಿಡಿದಾಕಿ' ಕವಿತೆಯಲ್ಲಿ "ಬಡತನ ಒಡೆತನ ಕಡೆತನಕುಳಿದಾವೇನ, ಎದೆ ಹಿಗ್ಗು ಕೊನೆ ಮಟ್ಟ?, ಬಾಳಿನ ಕಡಲಾಗ ಅದನ ಮುಳುಗಿಸಬ್ಯಾಡ, ಕಡಗೋಲ ಹಿಡಿ ಹುಟ್ಟ" ಈ ಸಾಲುಗಳಲ್ಲಿ ಬದುಕನ್ನು ಅತ್ಯಂತ ಸರಳವಾಗಿ ಜನರಾಡುವ ಭಾಷೆಯಲ್ಲಿಯೇ ಛಂದಸ್ಸಿನ ದುಡಿಮೆಯೊಂದಿಗೆ ನೀಡಿರುವುದು ವಿಶೇಷ. 'ಮುಗಿಲ ಮಲ್ಲಿಗೆ' ಸಂಕಲನದಲ್ಲಿ ಕಲ್ಲಾಗಿದ್ದೇನೋ, ಯಾವದೋ ಜನ್ಮದೊಳಗ ನಾನು, ಕಲ್ಲೆದಿ ಮಾಡಿಕೊಂಡು ಕೇಳಿದ್ದೇ ದುಃಖಾ, ಪಕ್ಕಾ ಐತಿ ಆ ಲೆಕ್ಕಾ, ಎಷ್ಟು ತೊಳೆದರೂ ಹೋಗವಲ್ಲದು ಅದರಾ ಸಿಕ್ಕಾ" ಹೀಗೆ ಕವಿತೆಯು ಬದುಕಿನ ದುಃಖದ ಅನನ್ಯತೆಯನ್ನು ಜಗತ್ತಿನ ಪ್ರತಿಯೊಬ್ಬರ ನೋವಾಗಿ ತರುವಲ್ಲಿ ದೇಸಿಯ ಪ್ರಯೋಗವು ಭಾಷೆಯನ್ನು ಮೀರಿ ಭಾವದ ಸ್ಪಂದನೆಗೆ ಬೆಲೆಯಾಗುತ್ತದೆ. ಜೀವಲಹರಿ ಸಂಕಲನದಲ್ಲಿ "ಚಿಟ್ಟಗುಬ್ಬಿ ಚಿಂವು ಚಿಂವು, ಅದೇ ಬೆಳಗು ಅದೇ ಗಾಳಿ. ಕೂಗುವದೂ ಅದೇ ಕೋಳಿ, ಆದರೂ ನವ ಮುದವ ತಾಳಿ. .... ಹಿಟ್ಲರನೂ ಸತ್ತರೇನು, ಪೋಲ್ಯಾಂಡು ಅತ್ತರೇನು, ಸ್ವಾತಂತ್ರ್ಯವನಿತ್ತರೇನು. ಯಾವ ದೇಶಕೆ. ವಿಜಯ ಘೋಷಕೆ? ಚಿಟ್ಟಗುಬ್ಬಿ ಚಿಂವು ಚಿಂವು" ಇಲ್ಲಿ ಪ್ರಕೃತಿಯ ಸಹಜತೆಯಲ್ಲಿ ಈ ಜನರ ನಿತ್ಯ ನರಕಗಳು ಅಡ್ಡಿ ಬರುವು. ಆನಂದವು ಎಲ್ಲೆಡೆಯೂ ಒಂದೇ ಅದು ನಿಸರ್ಗ ಕ್ರಿಯೆ ಎಂಬುದನ್ನು ದೇಸಿಯ ನುಡಿಯಿಂದಲೇ ತಿಳಿಸುವ ಬೇಂದ್ರೆಯು ಜನಕವಿಯಾಗಿ ನೆಲೆನಿಂತರು.

ಬೇಂದ್ರೆ ಅವರ ಕಾವ್ಯಾಧ್ಯಯನದ ಅತ್ಯಂತ ಸಮರ್ಥ ಅಧ್ಯಯನಕಾರರಲ್ಲಿ ಶಂಕರ ಮೊಕಾಶಿ ಪುಣೇಕರ ಅವರು ಮುಖ್ಯವಾದವರು. ಕೆಲವು ಅಧ್ಯಯನಕಾರರು ಬೇಂದ್ರೆ ಜನಪದ ಕವಿ, ದೇಸಿಯಲ್ಲಿಯೇ ಪೂರ್ಣ ಕಾವ್ಯ ರಚಿಸಿದ್ದಾರೆ ಎಂಬ ಬೀಸು ಹೇಳಿಕೆಗಳಿಗೆ ಈರೀತಿ ಉತ್ತರಿಸಿದ್ದಾರೆ. "ಬೇಂದ್ರೆಯವರು ಬರೆದದ್ದು ದೇಸಿಯೊಂದರಲ್ಲಿಯೇ ಅಲ್ಲ, ಎಂಬ ಮಾತನ್ನು ಬೇಂದ್ರೆ ಪ್ರೇಮಿಯು ಜನತೆಗೆ ಇಂದು ಸಾರಿ ಸಾರಿ ಹೇಳಬೇಕಾಗಿದೆ. 'ಅಪರಂಪಾರದ ಪಾರಾವಾರವು ಕೂಡ ಎದೆಯ ತೆರೆತೆರೆಗೂಡಹಾರುವುದು, ಬಾ ಹಾಕೂ ರಿಂಗಣಾಗಗನದಂಗಣದಾಗ, ನನ್ನ ಕಾಲಾಗ,' 'ಲಹರಿಗೂ ತರಲ, ಸುಳಿಯೆಲರಿಗೂ ವಿರಲ, ಸವಿಯರಲಿಗೂ ಚಂಚಲನು ಇರುವನಂತೆ,' 'ಲಯದ ಬಸಿರ ಬಯಲಲ್ಲಿ ದೇವಭವ ಬೀಜ ಬಿತ್ತಿದಾಕೆ', 'ಗಾಳಿಯೊಡನೆ ತಿಳ್ಳಿಯಾಡವಾಡುತದರ ನೋಟಾ, ದಿಕ್ತಟಗಳ ಹಾಯುತ್ತಿತ್ತು.' 'ಶಿಖೀ, ಶಿಖೀ, ಸಹಸ್ರನಖೀ,' 'ಮಾಮರನ ಚಿಗುರನ್ನು ಕನಸಿನಲ್ಲಿಯೇ ಕಂಡು ಕಣ್ಮುಚ್ಚಿಕುಕಿಲುತಿಹ ತರುಣ ಪಿಕನಂತೆ' ಇಂಥ ಸಾಲುಗಳೂ ಬೇಂದ್ರೆಯವರಲ್ಲಿ ಧಾರಾಳವಾಗಿ ಇವೆಯೆಂಬ ಸಂಗತಿ ಪ್ರಚಾರವಾಗದ ಹೊರೆತು, ಹಳೆಯ ಸಂಪ್ರದಾಯದಲ್ಲಿ ಬೆಳೆದ ಕಾವ್ಯ ರಸಿಕರಿಗೆ ಬೇಂದ್ರೆಯವರ ಕಾವ್ಯ ಒಮ್ಮೆಲೆ ಮೆಚ್ಚುಗೆಯಾಗದು"[೭] ಬೇಂದ್ರೆ ಅವರು ಸಂಪೂರ್ಣವಾಗಿ ಬರೀ ದೇಸಿ ಕಾವ್ಯದಲ್ಲಿಯೇ ಬರೆದರೆನ್ನುವುದು ತಪ್ಪಾಗುತ್ತದೆ. ಆದರೆ ಸಂಸ್ಕೃತ, ಇಂಗ್ಲೀಷ್ ಮೊದಲಾದ ಭಾಷೆಗಳನ್ನು ದೇಸಿಯ ಸೊಗಡಿನಂತೆ ಬಳಸಿಕೊಂಡರೆಂಬುದು ಗಮನಿಸಬಹುದು.

ಬೇಂದ್ರೆ ಅವರನ್ನು ದೇಶಿ ಕವಿಯಲ್ಲವೆಂದು ಚರ್ಚಿಸುವ ಒಂದು ಲೇಖನವಿದೆ. ಇದುವರೆಗೂ ಸಾಕಷ್ಟು ವಿಚಾರಗಳನ್ನು ಚರ್ಚಿಸಿದರೂ ಅಂತಹ ಅಂಶಗಳ ವಿರುದ್ಧ ಸವಾರಿಮಾಡುವ ವಿಮರ್ಶೆಗಳೂ ನನಗೆ ಮುಖ್ಯ ಎನಿಸುತ್ತವೆ. ಬೇಂದ್ರೆ ಒಬ್ಬ ಕವಿ ಎಂಬುದನ್ನು ಎಲ್ಲರೂ ಒಪ್ಪಿದ್ದಾರೆ. ಹಾಗೇಯೇ ಕಾವ್ಯದ ಸೂಕ್ಷ್ಮತೆಯಲ್ಲಿ ದೇಸಿಯ ಪ್ರಜ್ಞೆಯು ತನ್ನ ಬೇರುಗಳಿಂದ ಮೂಡಿದೆ ಎಂಬುದನ್ನು ಒಪ್ಪಲೇಬೇಕು. ಬರಗೂರು ರಾಮಚಂದ್ರಪ್ಪ, ದೊಡ್ಡರಂಗೇಗೌಡ, ಸಿ.ಪಿ.ಕೆ., ಕಾಳೇಗೌಡ ನಾಗವಾರ ಹಾಗೂ ಸುಮತೀಂದ್ರ ನಾಡಿಗ, ಚಂಪಾ ಇವರೆಲ್ಲರೂ ಬೇಂದ್ರೆ ಅವರ ಸಾಹಿತ್ಯವನ್ನು ಗ್ರಹಿಸಿದ ನೆಲೆಗಳು ಭಿನ್ನವಾದವು ಹಾಗೂ ಇದುವರೆಗೂ ಸಾವಿರಾರು ಅಧ್ಯಯನಕಾರರು ಗಮನಿಸಿದ ರೀತಿಗಳಲ್ಲಿ ಭಿನ್ನತೆಯನ್ನು ಕಂಡವರು. ಆದರೆ ಮೊಗಳ್ಳಿ ಗಣೇಶ ಅವರು 'ಬೇಂದ್ರೆ ಕುವೆಂಪು ಕಾವ್ಯದ ನೆಲೆಗಳು' ಎಂಬ ಲೇಖನದಲ್ಲಿ "ಬೇಂದ್ರೆಯ ಕಾವ್ಯ ದೇಶೀಯ ಕವಚದಲ್ಲಿ ತನ್ನ ವೈದಿಕಾರ್ಥಗಳನ್ನು ಬಚ್ಚಿಡುತ್ತದೆ. ಅಥವಾ ದೇಶಿಯ ಶೈಲಿಯಲ್ಲಿ ಅಗ್ರಹಾರದ ಸಂವೇದನೆಯನ್ನು ಸುಂದರವಾಗಿ ಧ್ವನಿಸುತ್ತದೆ. ನಿಜವಾಗಿಯೂ ಮಣ್ಣಿನ ಸಾರವನ್ನು ತನ್ನ ಸೃಜನಶೀಲತೆಗೆ ಧಾರೆಯೆರೆದುಕೊಂಡದ್ದು ಬೇಂದ್ರೆಯೇ ಎಂದು ಹೇಳುವಾಗ ಎಲ್ಲರೂ ಮೋಸ ಹೋಗುತ್ತಿರುತ್ತಾರೆ."[೮] ಈ ವಿಚಾರವಾಗಿ ಸಂದರ್ಶನ ಮಾಡಿದ ನನಗೆ ಇದರ ವಿರುದ್ಧ ಪ್ರತಿಕ್ರಿಯೆಯು ಮೊಗಳ್ಳಿ ಗಣೇಶ

ಅವರಿಂದ ಬಂದಿತು. ಹಾಗಾದರೆ ಬೇಂದ್ರೆ ಕೆಲವು ಪೂರ್ವಗ್ರಹಗಳ ಮೂಲಕ ಇಲ್ಲವೇ ಒಬ್ಬ ಕವಿಯನ್ನು ಇನ್ನೊಬ್ಬ ಕವಿಗೆ ಹೋಲಿಸಲು ತಂದುಕೊಂಡ ರೂಪಕವಾಗಿ ಈ ಮೇಲಿನ ಲೇಖನವನ್ನು ತಿಳಿಯಬಹುದು.

ಬೇಂದ್ರೆ ಅವರಿಗೆ ಈ ಸೋಂಕುಗಳಿಂದ ಮುಕ್ತವಾಗಿ ಜನಸಾಮಾನ್ಯರೊಂದಿಗೆ ಬಡತನ ಅನುಭವಿಸಿದ ಅನುಭವ ತಿಳಿದಿತ್ತು. ಅದು ದೇಸೀಯ ಬೇರುಗಳ ಸತ್ತ್ವವನ್ನು ನಿತ್ಯಯೆರೆಯುತ್ತಿತ್ತು. ಸಂಸ್ಕೃತವನ್ನು, ಇಂಗ್ಲೀಷನ್ನು ಪ್ರತ್ಯೇಕ ಭಾಷೆಯಾಗಿ ಅಥವಾ ನೆಲಮೂಲ ಸಂಸ್ಕೃತಿಯಿಂದ ದೂರ ನಿಂತು ಎಂದಿಗೂ ಗಮನಿಸಿಲ್ಲ. ಏಕೆಂದರೆ ಬೇಂದ್ರೆ ಅವರ ಭಾಷಣಗಳಲ್ಲಿ ಇಂಗ್ಲೀಷ್ ಸರಾಗವಾಗಿ ಮೂಡುತ್ತದೆ. ಅದನ್ನು ಪ್ರತ್ಯೇಕಗೊಳಿಸುವ ಅಥವಾ ಹುದುಗಿಸುವ ಮುಚ್ಚುಮರೆ ಕಾರ್ಯವನ್ನು ಬೇಂದ್ರೆ ಅನುಸರಿಸಿರಲಾರರು. ಬೇಂದ್ರೆ ಅವರು ಸಾಕಷ್ಟು ದೃಷ್ಟಿಕೋನದಿಂದ ಅಧ್ಯಯನಮಾಡಬಹುದು. ಆದರೆ ಟೀಕಿಸಲು, ಒಂದೇ ವಲಯದಲ್ಲಿ ವಾದಿಸಲು ಕಾರಣಗಳು ಸೂಕ್ತವಾಗಿ ಸಿಗಲಾರವು.

ರಾಜೇಂದ್ರ ಚೆನ್ನಿ ಅವರು ಬೇಂದ್ರೆ ಕಾವ್ಯದ ಅಧ್ಯಯನದಲ್ಲಿ ದೇಸಿಯ ತೊಡಕುಗಳನ್ನು ಈ ರೀತಿ ಬಿಡಿಸಿದ್ದಾರೆ "ಬೇಂದ್ರೆಯವರ ಕಾವ್ಯದ ಮೂಲವಿರುವುದು ಸಂಸ್ಕೃತಿಯ ಕೇಂದ್ರವಾಗಿ ತೋರುವ ಮುಖ್ಯ ಪ್ರವಾಹದಲ್ಲಿ ಅಲ್ಲ. ಆದ್ದರಿಂದ ವೈದಿಕ ಸಂಸ್ಕೃತಿಯ ಛಾಯೆಯನ್ನು ಅವರ ಕಾವ್ಯದಲ್ಲಿ ಭ್ರಮಿಸುವುದು ಅನವಶ್ಯಕ. ಅವರ ಕಾವ್ಯದ ಒಂದು ಮುಖ್ಯ ಎಳೆ ಅವರಂತೆಯೆ ಜನಾಂಗದ ಸ್ಮೃತಿಗಳಿಗೆ ದುಃಖ ದುಮ್ಮಾನಗಳಿಗೆ ತನ್ನನ್ನು ಮಾಧ್ಯಮವಾಗಿ ಒಡ್ಡಿಕೊಂಡಿದ್ದ ಅನಾಮಿಕ ಜಾನಪದ ಕಾವ್ಯದಲ್ಲಿ. ಜಾನಪದವೆಂದರೆ ಈಗ ನಮ್ಮಲ್ಲಿ ಟೂರಿಸ್ಟ್ ಆಕರ್ಷಣೆ ಮಾತ್ರ ಹುಟ್ಟಿಸುವ ಅಥವಾ ಗೊಡ್ಡು ಪಿ.ಎಚ್.ಡಿ ಪ್ರಬಂಧಗಳಿಗೆ ಆಹಾರವಾಗಿರುವ ಜಾನಪದವಲ್ಲ. ... ... ತಮ್ಮ ಕಾವ್ಯದ ಕಸುವನ್ನು ಮಾರ್ಗ ಮತ್ತು ದೇಸಿ, ನಾಗರೀಕ ಮತ್ತು ಜಾನಪದ ಇವುಗಳ ಸೃಷ್ಟಿಶೀಲ ತಿಕ್ಕಾಟವನ್ನು ಭಾಷೆಯಲ್ಲಿ ಸಾಧಿಸುವ ಮೂಲಕ ಪಡೆಯುತ್ತಾರೆ. ಬೇಂದ್ರೆ ಅಥವಾ ಕನ್ನಡದ ಯಾವುದೇ ಬರಹಗಾರನಲ್ಲಿ ಇದು ಕೇವಲ ಶೈಲಿಯ ವೈವಿಧ್ಯದ ಪ್ರಶ್ನೆಯಲ್ಲ. ದೇಸಿ ಹಿಡಿದುಕೊಡುವ ಅನುಭವವನ್ನು ಮಾರ್ಗದ ಮುಖಾಂತರ ಬೆಲೆಗಟ್ಟುವುದು. ಅಂದರೆ ಕವನವೊಂದರಲ್ಲಿ ಎರಡು ಶೈಲಿಗಳ ಹಿಂದಿರುವ ಸ್ಪಂದನೆಯ ವಿವಿಧ ಬಗೆಗಳನ್ನು ಕರ್ಷಣಕ್ಕಿಳಿಸಿ ಅನುಭವಕ್ಕೆ ಹೆಚ್ಚಿನ ಹರಹು ಕೊಡಿಸುವುದು. ಇದು ಕನ್ನಡ ಕಾವ್ಯದ ಮೂಲಗುಣವಾಗಿದೆ. ಬೇಂದ್ರೆಯವರ ಕಾವ್ಯದಲ್ಲಿ ಇದು ಅತ್ಯಂತ ಸೂಕ್ಷ್ಮವಾಗಿ ನಡೆಯುತ್ತದಷ್ಟೇ."[೫] ಬೇಂದ್ರೆ ಕಾವ್ಯದ ಅಧ್ಯಯನದಲ್ಲಿ ದೇಸಿಯ ಚಿಂತನೆಗಳನ್ನು ಈ ಜಾನಪದ, ವೈದಿಕ ಮೊದಲಾದ ತೊಡಕಿನಿಂದ ಬಿಡಿಸಿಕೊಂಡಷ್ಟೂ ಸರಳವಾಗಿ ತಿಳಿಯಬಹುದು.

ಬೇಂದ್ರೆ ಕಾವ್ಯದ ದೇಸಿಯ ಬೇರುಗಳನ್ನು ಗುರ್ತಿಸುತ್ತಾ ಸಾಗುವುದು ಅದೊಂದು ಸಹೃದಯ ಅಧ್ಯಯನವೆನಿಸುತ್ತದೆ. ಅರಣ್ಯವನ್ನು ಅರ್ಥೈಸಿಕೊಳ್ಳುವಾಗ ಹಸಿರು ಆರೋಗ್ಯ, ಆನಂದ ನೀಡುತ್ತದೆ ಹೊರೆತು ತೊಡಕಲ್ಲ. ತೊಡಕಾಗಿ ಭ್ರಮಿಸಿದವರು ಬರಡು

ಕನಸನ್ನು ಕಾಣುತ್ತಿರುತ್ತಾರೆ. ಬೇಂದ್ರೆ ಕಾವ್ಯದಲ್ಲಿ ನೆಲಮೂಲ ಸಂಸ್ಕೃತಿಯ ದಟ್ಟಹಸಿರಿದೆ, ಅಲ್ಲಿಂದಲೇ ಚಿಗುರಿದೆ. ಹಬ್ಬಿದ ಬೇರೆ ಬೇರೆ ಸಂಸ್ಕೃತಿಗಳ ಸಹಚರ್ಯೆಯನ್ನು ನಾಟಿಯ ನಿಲುವಿನಲ್ಲಿ ಆಶ್ರಯ ನೀಡಿದೆ. ಹೊಸ ಅರ್ಥವನ್ನೂ ಬೀರಿದೆ. ಆದರೆ ತನ್ನ ಮೂಲ ಸತ್ತ್ವವನ್ನೇ ಸಾರವಾಗಿ ತುಂಬಿರುವುದನ್ನು ಕಾಣಬಹುದು.

ಆಕರ ಗ್ರಂಥಗಳು

೧. ವಾಮನ ಬೇಂದ್ರೆ(ಸಂ), ದ.ರಾ. ಬೇಂದ್ರೆ., ೨೦೦೬, ಗರಿ, ಶ್ರೀಮಾತಾ ಪ್ರಕಾಶನ, ಹುಬ್ಬಳಿ, ಮುನ್ನುಡಿ
೨. ಚಂದ್ರಶೇಖರ ನಂಗಲಿ, ೨೦೦೨, ತಿಟ್ಹತ್ತಿ ತಿರುಗಿ, ಬೇಂದ್ರೆ ಕಾವ್ಯದ ದ್ವಂದ್ವ ವಸ್ತು ವಿನ್ಯಾಸ– ಒಂದು ಟಿಪ್ಪಣಿ, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು, ಪುಟಸಂಖ್ಯೆ ೭೨
೩. ಬೇಂದ್ರೆ ದ.ರಾ., ೧೯೭೪, ಸಾಹಿತ್ಯದ ವಿರಾಟ್ ಸ್ವರೂಪ, ಸಮಾಜ ಪುಸ್ತಕಾಲಯ ಧಾರವಾಡ, ಪುಟ ಸಂಖ್ಯೆ ೫೨
೪. ಕೃಷ್ಣಪ್ಪ ಜಿ, ೨೦೦೧, ೨೦೧೨, ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ – ಒಂದು ಅಧ್ಯಯನ, ಕಾಮಧೇನು ಪುಸ್ತಕ ಭವನ, ಬೆಂಗಳೂರು ಪುಟ ಸಂಖ್ಯೆ ೩೪
೫. ಚಂದ್ರಶೇಖರ ನಂಗಲಿ, ೨೦೦೨, ತಿಟ್ಹತ್ತಿ ತಿರುಗಿ, ಬೇಂದ್ರೆ ಕಾವ್ಯದ ದ್ವಂದ್ವ ವಸ್ತು ವಿನ್ಯಾಸ – ಒಂದು ಟಿಪ್ಪಣಿ, ಸಿ.ವಿ.ಜಿ. ಪಬ್ಲಿಕೇಷನ್ಸ್, ಬೆಂಗಳೂರು, ಪುಟಸಂಖ್ಯೆ ೭೨–೭೩
೬. ಗೌರೀಶ ಕಾಯ್ಕಿಣಿ, ೧೯೮೦, ಕಂಪಿನ ಕರೆ, ಸಮಾಜ ಪುಸ್ತಕಾಲಯ, ಧಾರವಾಡ, ಪುಟ ಸಂಖ್ಯೆ ೫೨–೫೩
೭. ಚನ್ನಪ್ಪ(ಸಂ) ಶಂಕರ ಮೊಕಾಶಿ ಪುಣೇಕರ, ೨೦೦೭, ಪುಣೇಕರರ ಆಯ್ದ ಲೇಖನಗಳು, ಸಾಹಿತ್ಯನಿಧಿ, ಮೈಸೂರು, ಪುಟಸಂಖ್ಯೆ ೪೦
೮. ಮೊಗಳ್ಳಿ ಗಣೇಶ, ೨೦೦೮, ತಕರಾರು, ಬೇಂದ್ರೆ ಕುವೆಂಪು ಕಾವ್ಯದ ನೆಲೆಗಳು, ಪಲ್ಲವ ಪ್ರಕಾಶನ, ಚೆನ್ನಪಟ್ಟಣ, ಪುಟಸಂಖ್ಯೆ ೧೨
೯. ರಾಜೇಂದ್ರ ಚೆನ್ನಿ, ೧೯೮೭, ಅಧ್ಯಯನ, ಬೇಂದ್ರೆ ಕಾವ್ಯ ಕೆಲವು ಟಿಪ್ಪಣಿಗಳು, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ. ಪುಟ ಸಂಖ್ಯೆ ೧೫–೧೬

ಹಾಗೂ ಪರಾಮರ್ಶನ ಗ್ರಂಥಗಳು

೧. ವಾಮನ ಬೇಂದ್ರೆ (ಸಂ), ೨೦೦೫, ಅಂಬಿಕಾತನಯದತ್ತರ ಸಮಗ್ರ ಸಾಹಿತ್ಯ, ಔದುಂಬರ ಗಾಥೆ (ಆರು ಸಂಪುಟಗಳು), ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ
೨. ಪ್ರಭುಶಂಕರ, ೨೦೦೦, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು
೩. ಕೃಷ್ಣಪ್ಪ ಜಿ, ೨೦೦೦, ಹೂತದ ಹುಣಸಿ, ದ. ರಾ. ಬೇಂದ್ರೆ ಕಾವ್ಯವಿಮರ್ಶೆ, ಶ್ರೀರಂಗಪ್ರಕಾಶನ, ಮೈಸೂರು
೪. ಕೃಷ್ಣಪ್ಪ ಜಿ, ೨೦೦೮, ಬರೆಹದಲ್ಲಿ ಬೇಂದ್ರೆಯವರ ಬದುಕು, ಪ್ರಸಾರಾಂಗ, ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ
೫. ಕೃಷ್ಣಪ್ಪ ಜಿ, ೨೦೧೮, ಬೇಂದ್ರೆಕಾವ್ಯ : ಪದ ನಿರುಕ್ತ, ವಂಶಿ ಪಬ್ಲಿಕೇಷನ್ಸ್, ಬೆಂಗಳೂರು

೬. ಬಸು ಬೇವಿನಗಿಡದ, ೨೦೧೩, ಬೆಳಕಿನ ಹಕ್ಕಿ ಬೇಂದ್ರೆ ನಿಸರ್ಗ ಕಾವ್ಯ : ಅನುಭೂತಿ ಹಾಗೂ ಅಭಿವ್ಯಕ್ತಿ, ಸುಂದರ ಪುಸ್ತಕ ಪ್ರಕಾಶನ, ಧಾರವಾಡ.
೭. ರಾಘವೇಂದ್ರರಾವ್ ಎಚ್.ಎಸ್, ೧೯೯೨, ಹಾಡೆ ಹಾದಿಯ ತೋರಿತು, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು.
೮. ಶಿವಾರೆಡ್ಡಿ ಕೆ.ಸಿ., ೨೦೦೩, ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು
೯. ಸುಮತೀಂದ್ರ ನಾಡಿಗ, ೧೯೮೯, ಬೇಂದ್ರೆಯವರ ಕಾವ್ಯದ ವಿಭಿನ್ನ ನೆಲೆಗಳು; ಸುವಿದ್ಯಾ ಪ್ರಕಾಶನ, ಬೆಂಗಳೂರು.
೧೦. ಸಂಗನಾಳ ಮಠ ಯು. ಆರ್ (ಸಂ), ೨೦೧೪, ಕಾವ್ಯ ಲೋಕದ ಗಾರುಡಿಗ, ಗಾಯತ್ರಿ ಎಂಟರ್ ಪ್ರೈಸಸ್, ಬೆಂಗಳೂರು.
೧೧. ಶಿವರುದ್ರಪ್ಪ ಜಿ.ಎಸ್., ೨೦೧೪, ಬೇಂದ್ರೆಯವರ ಕಾವ್ಯ ಸೃಷ್ಟಿಯ ಸ್ವರೂಪ, ಅಭಿನವ, ಬೆಂಗಳೂರು.

ಸಾಹಿತ್ಯ ಚರಿತ್ರೆ ಎಂಬ ಪರಿಕಲ್ಪನೆಯ ಹರಿಕಾರ – ರೆ. ವೈಗಲ್

– ಡಾ. ಚೈತಾಲಿ ಕೆ.ಎಸ್.

ಹದಿನೆಂಟು ಮತ್ತು ಹತ್ತೊಂಭತ್ತನೆಯ ಶತಮಾನಗಳು ಕನ್ನಡ ಸಾಹಿತ್ಯದ ದೃಷ್ಟಿಯಿಂದ ವೈವಿಧ್ಯತೆಯ ಯುಗ. ಕನ್ನಡದ ಪ್ರಾಚೀನ ಮತ್ತು ಸಮೃದ್ಧ ಸಾಹಿತ್ಯ ಪರಂಪರೆಯನ್ನು ಶೋಧಿಸಿ, ಪರಿಷ್ಕರಿಸಿ, ಪ್ರಕಟಿಸುವ ಮೂಲಕ ಕನ್ನಡ ಭಾಷೆಯ ಶ್ರೀಮಂತಿಕೆಯನ್ನು ಪರಿಚಯಿಸುವ ಯತ್ನಗಳು ಈ ಕಾಲಾವಧಿಯಲ್ಲಿ ಸಮರೋಪಾದಿಯಲ್ಲಿ ನಡೆದವು. ಜೊತೆಗೆ ನಾಡಿನಾದ್ಯಂತ ಹರಡಿದ್ದ ಗರತಿಯ ಹಾಡುಗಳು, ಸೋಬಾನೆ ಪದಗಳು, ಲಾವಣಿಗಳು, ದಾಸರಪದಗಳಂತಹ ಸಾಮಾನ್ಯ ಅನಕ್ಷರಸ್ಥ ಜನರ ಅಭಿವ್ಯಕ್ತಿಗಳೆಲ್ಲ ವಿದ್ವಾಂಸರಿಂದ ಸಂಗ್ರಹಿಸಲ್ಪಟ್ಟು ಕನ್ನಡ ಸಾಹಿತ್ಯದ ಸಮೃದ್ಧತೆಯುನ್ನು ತಿಳಿಯುವಂತಾಯಿತು. ಚಂಪೂ, ರಗಳೆ, ಷಟ್ಪದಿಗಳಂತಹ ಛಂದೋರೂಪಗಳಲ್ಲೇ ತೃಪ್ತವಾಗಿದ್ದ ಕನ್ನಡ ಸಾಹಿತ್ಯಕ್ಕೆ ಗದ್ಯರೂಪದ ಬರವಣಿಗೆಯ ಮೂಲಕ ಚಾಲನೆ ದೊರೆಯಿತು. ನಾಟಕ, ಭಾಷಾಶಾಸ್ತ್ರ, ವ್ಯಾಕರಣದಂತಹ ಕೃತಿಗಳು ರಚನೆಗೊಂಡು ಸಾಹಿತ್ಯದ ವೈವಿಧ್ಯತೆ ಹೆಚ್ಚಾಯಿತು. ಪ್ರಾಚೀನ ಕೃತಿಗಳೆಲ್ಲವೂ ಇತರೆ ಭಾಷೆಗಳಿಗೆ ಭಾಷಾಂತರಗೊಂಡವು. ಬೇರೆ ಭಾಷೆಯ ಕೃತಿಗಳೂ ಅನುವಾದದ ಮೂಲಕ ಕನ್ನಡಿಗರಿಗೆ ಲಭ್ಯವಾಗುವಂತಾಯಿತು.

ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಾದ ಇಷ್ಟೆಲ್ಲಾ ಬದಲಾವಣೆಗಳಿಗೆ ಮೂಲ ಪ್ರೇರಣೆಯಾದುದು ಭಾರತಕ್ಕೆ ಪಾಶ್ಚಾತ್ಯರ ಆಗಮನ. ಬೇರೆ ಬೇರೆ ರಾಜರು, ಆಡಳಿತ, ಸೇನೆ, ಹಣಕಾಸು ವ್ಯವಹಾರಗಳಿಂದ ಹಂಚಿಹೋಗಿದ್ದ ಭಾರತವೆಂಬ ದೇಶವನ್ನು ಭೌಗೋಳಿಕವಾಗಿ ಒಂದುಗೂಡಿಸಿ 'ಸಮಗ್ರಭಾರತ'ದ ಕಲ್ಪನೆಯನ್ನು ಮೂಡಿಸಿದ್ದು ಇವರ ಮೊದಲ ಕೊಡುಗೆಯಾಗಿದೆ. ಪ್ರವಾಸಿಗರಾಗಿ, ವ್ಯಾಪಾರಿಗಳಾಗಿ, ಕ್ರೈಸ್ತಮತ ಪ್ರಚಾರಕರಾಗಿ ಭಾರತಕ್ಕೆ ಬಂದರೂ ದೇಶಕ್ಕೆ ಒಂದು ಸಮಗ್ರತೆಯ ಕಲ್ಪನೆಯನ್ನು ರೂಪಿಸಿಕೊಟ್ಟದ್ದೇ ಅಲ್ಲದೇ ದೇಶೀಯ ಭಾಷೆಗಳ ಅಧ್ಯಯನವನ್ನು ಆರಂಭಿಸಿದರು. ಪಾಶ್ಚಾತ್ಯರಿಗೆ ಹಿಂದೂಸ್ಥಾನವು ಒಂದು ದೇಶ. ಅವರಿಗೆ ದೇಶದ ಎಲ್ಲಾ ಸೀಮೆಗಳೂ ಮತ್ತು ಭಾಷೆಗಳೂ ಒಂದೇ. ಹೀಗಾಗಿ ಎಲ್ಲ ಪ್ರಾಂತ್ಯ ಮತ್ತು ಭಾಷೆಗಳ ವೈವಿಧ್ಯತೆಯನ್ನು ಏಕಪ್ರಕಾರವಾಗಿ ಪರಿಶೀಲಿಸಿ ವಿವೇಚಿಸುವ ಕೆಲಸ ಮಾಡಿದರು.

ಹತ್ತೊಂಬತ್ತನೆಯ ಶತಮಾನದಲ್ಲಿ ಭಾರತದಲ್ಲುಂಟಾದ ಅನೇಕ ಮಹತ್ವದ ಬದಲಾವಣೆಗಳಲ್ಲಿ ಒಂದು ಮಿಷನರಿಗಳ ಆಗಮನ. ಈ ಅವಧಿಯನ್ನು ಜನಪ್ರಿಯವಾಗಿ ಪುನರುತ್ಥಾನದಯುಗವೆಂದು ಗುರುತಿಸುತ್ತೇವೆ. ಬ್ರಿಟಿಷರ ಆಡಳಿತಯಂತ್ರದ ಭಾಗವಾಗಿ ಭಾರತಕ್ಕೆ ಆಗಮಿಸಿದ ಮಿಷನರಿಗಳು "ಒಂದು ಕೈಯಲ್ಲಿ ಬೈಬಲ್, ಅದರ ಬೆನ್ನಿಗೆ ಮುದ್ರಣ ಸಾಮಗ್ರಿ, ಇವನ್ನು ಹಿಡಿದುಕೊಂಡು ಬಂದು ಸ್ವಮತದ ಪ್ರಚಾರಕಾರ್ಯದಲ್ಲಿ ತೊಡಗಿದರು. ಆ ನಿಮಿತ್ತದಿಂದ ಸಾಹಿತ್ಯ, ಶಿಕ್ಷಣ ಕ್ಷೇತ್ರಕ್ಕೆ ನೇರವಾಗಿ ಪ್ರವೇಶಿಸಿದರು". ಅವರು ಉನ್ನತಶಿಕ್ಷಣ ಪಡೆದವರು ಮೇಲಾಗಿ ಕುಶಾಗ್ರಮತಿಗಳೂ ಆಗಿದ್ದರಿಂದ ಸ್ವಧರ್ಮ ನಿಷ್ಠೆಯಿಂದ ಪ್ರೇರಿತರಾಗಿ ಭಾರತೀಯ ಭಾಷೆ ಮತ್ತು ಸಾಹಿತ್ಯಗಳಲ್ಲಿ ಪರಿಣಿತಿ ಪಡೆಯಲಾರಂಭಿಸಿದರು. ತಾವು ಕಾರ್ಯನಿರ್ವಹಿಸುವ ಕ್ಷೇತ್ರದ ಭಾಷೆಯನ್ನು ಕಲಿಯುವುದು, ಪರಿಣಿತಿ ಪಡೆದ ನಂತರ ಬೈಬಲನ್ನು ಆ ಭಾಷೆಗೆ ಭಾಷಾಂತರಿಸುವುದು, ಆ ಭಾಷೆಯ ವ್ಯಾಕರಣ, ಕೋಶಗಳನ್ನು ರಚಿಸುವುದು, ಪಠ್ಯಪುಸ್ತಕಗಳ ರಚನೆ ಮಾಡುವುದು ಮುಂತಾದ ಕೆಲಸಗಳ ಮೂಲಕ ಜನಸಾಮಾನ್ಯರಿಗೆ ಹತ್ತಿರವಾಗತೊಡಗಿದರು. ಅವರ ಈ ಬಗೆಯ ಎಲ್ಲ ಕೆಲಸಗಳ ಹಿಂದೆ ಧಾರ್ಮಿಕ ಹಿತಾಸಕ್ತಿ ಅದರಲ್ಲೂ ಸ್ವಮತದ ಪ್ರಚಾರದ ಉದ್ದೇಶವೇ ಕೆಲಸಮಾಡಿದ್ದರೂ ಇದರಿಂದ ಭಾರತೀಯರಿಗೆ ಪ್ರಯೋಜನವಾದದ್ದಂತೂ ಸತ್ಯ. ಕರ್ನಾಟಕ ಮತ್ತು ಕನ್ನಡ ಭಾಷೆಗೆ ಸಂಬಂಧಿಸಿದಂತೆ ಈ ವಿದ್ವಾಂಸರ ಕೊಡುಗೆಯೇನು ಕಡಿಮೆಯಾದುದಲ್ಲ. ಕರ್ನಾಟಕಕ್ಕೆ ಜೆಸುಯೆಟ್ ಮಿಷನ್, ಲಂಡನ್ ಮಿಷನ್, ವೆಸ್ಲಿಯನ್ ಮಿಷನ್ ಮತ್ತು ಬಾಸೆಲ್ ಮಿಷನ್‌ಗಳಿಂದ ಬಂದ ಮಿಷನರಿಗಳು ಆಗತಾನೇ ಬೆಳಕಿಗೆ ಬಂದ ಮುದ್ರಣಯಂತ್ರದ ಸಹಾಯದಿಂದ ಅನೇಕ ಪುಸ್ತಕಗಳನ್ನು ಹೊರತಂದರು. ಕನ್ನಡದ ವ್ಯಾಕರಣ ಕೃತಿಗಳು, ಇಂಗ್ಲೀಷ್ ಕನ್ನಡ ನಿಘಂಟುಗಳು, ಇಂಗ್ಲೀಷ್ ಭಾಷೆಯಿಂದ ಅನುವಾದಿತ ಕೃತಿಗಳು ರಚನೆಯಾದವು. ನಮ್ಮ ಹಳೆಯ ಗೆದ್ದಲು ಹತ್ತಿದ್ದ ಕೃತಿಗಳನ್ನು ಹುಡುಕಿ ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದರು. ಸ್ಟೀವನ್‌ಸನ್ ಸಂಪಾದಿಸಿದ 'ಮುದ್ರಾಮಂಜೂಷ', 'ಸೋಮೇಶ್ವರಶತಕ', ಕಿಟೆಲ್‌ರಿಂದ ಸಂಪಾದಿಸಲ್ಪಟ್ಟ 'ಛಂದೋಂಬುಧಿ' ಮತ್ತು 'ಶಬ್ದಮಣಿದರ್ಪಣ', 'ಇಂಗ್ಲೀಷ್-ಕನ್ನಡ ನಿಘಂಟು' ಕನ್ನಡ ವಿದ್ವತ್‌ಲೋಕವನ್ನು ಜಗತ್ತಿಗೆ ಪರಿಚಯಸಿಕೊಟ್ಟಿತು. ತಮ್ಮ ವಿದ್ವತ್‌ಪೂರ್ಣ ಪ್ರಸ್ತಾವನೆಗಳ ಮೂಲಕ ಕನ್ನಡನಾಡಿನ ವಿದ್ವಾಂಸರ ಕಣ್ಣು ತೆರೆಸುವಂತೆ ಮಾಡಿದ ಮಿಷನರಿಗಳು ನಾವು ಸಾಹಿತ್ಯವನ್ನು ನೋಡುವ ದೃಷ್ಟಿಕೋನವನ್ನೇ ಬದಲಾಯಿಸಿಕೊಳ್ಳಲು ಮೂಲ ಪ್ರೇರಕರಾದರು. ಈ ಮಿಷನರಿಗಳು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಮತ್ತೊಂದು ಪ್ರಮುಖ ಕೊಡುಗೆಯೆಂದರೆ ಸಾಹಿತ್ಯ ಚರಿತ್ರೆಗಳನ್ನು ರಚಿಸಲು ಆರಂಭಿಸಿದ್ದು. ಆ ಸಂದರ್ಭಕ್ಕೆ ಲಭ್ಯವಾದ ಕನ್ನಡ ಕಾವ್ಯಗಳನ್ನು ಆಧರಿಸಿ 'ಸಾಹಿತ್ಯಚರಿತ್ರೆ' ಎಂಬ ಹೊಸ ಪರಿಕಲ್ಪನೆಯೊಂದನ್ನು ಹುಟ್ಟುಹಾಕಿದರು. ನಮ್ಮಲ್ಲಿ ಸಾಹಿತ್ಯ ಕೃತಿಗಳ ಅಧಿಕೃತ ಅಸ್ತಿತ್ವ ಇದ್ದುದು ಅಲಿಖಿತ ರೂಪದಲ್ಲಿ. ಇದಕ್ಕೆ ಉದಾಹರಣೆ ನಮ್ಮ ಜನಪದ ಸಾಹಿತ್ಯ.

ಅಸಂಖ್ಯಾತ ಗೀತೆ, ಗಾದೆ, ಒಗಟುಗಳು ನಲಿಯಿತ್ತಿದ್ದುದು ಜನರ ಬಾಯಿಯಲ್ಲಿಯೇ. ಕುಮಾರವ್ಯಾಸ ಭಾರತ, ಜೈಮಿನಿ ಭಾರತ, ದೇವಿ ಮಹಾತ್ಮೆಗಳಂತಹ ಲಿಖಿತ ಕೃತಿಗಳನ್ನೂ ಒಬ್ಬರು ಓದಿ ಒಂದು ಸಮೂಹ ಕೇಳಿ ನಲಿಯುವ ಕ್ರಮವಿತ್ತು. ಆದರೆ ಜೀವಂತವಾದುದೆಲ್ಲ ವಿಕಾಸಶೀಲ, ವಿಕಾಸಶೀಲವಾದಕ್ಕೆಲ್ಲ ಚರಿತ್ರೆ ಇರುತ್ತದೆ ಎಂಬ ಪಾಶ್ಚಾತ್ಯರ ನಂಬಿಕೆಯ ಪರಿಣಾಮವಾಗಿ ನಮ್ಮಲ್ಲಿಯೂ ಸಾಹಿತ್ಯವನ್ನು ಚರಿತ್ರೆಯ ವ್ಯಾಪ್ತಿಗೆ ತರುವ ಪ್ರಯತ್ನಗಳು ಮಿಷನರಿಗಳಿಂದಲೇ ಆರಂಭವಾದವು. ಬ್ರಿಟಿಷರು ಭಾರತದಲ್ಲಿ ಹಿಡಿತ ಸಾಧಿಸಿದ ನಂತರ ಆಡಳಿತಾತ್ಮಕ ಅನುಕೂಲಕ್ಕಾಗಿ ಮತ್ತು ಮತ ಪ್ರಚಾರದ ಕಾರಣಕ್ಕಾಗಿ ದೇಶೀಯ ಭಾಷೆಗಳ ವ್ಯವಸ್ಥಿತ ಅಧ್ಯಯನ ಆರಂಭಿಸಿದ್ದು ಇದರ ಮೊದಲ ಹೆಜ್ಜೆ. ಈ ಪ್ರಯತ್ನದ ಫಲವಾಗಿ ಹಳೆಯ ಸಾಹಿತ್ಯ ಕೃತಿಗಳ ಸಂಪಾದನೆ, ಪ್ರಕಟಣೆಯ ಕಾರ್ಯಗಳು ಆರಂಭಗೊಂಡವು. ಬಿ.ಎಲ್. ರೈಸ್, ಮೊಗ್ಲಿಂಗ್ ಮುಂತಾದವರು 'ಪಂಪಭಾರತ', 'ಪಂಪರಾಮಾಯಣ', 'ಕರ್ನಾಟಕ ಶಬ್ದಾನುಶಾಸನ'ದಂತಹ ಕೃತಿಗಳನ್ನು ಪ್ರಕಟಿಸಿದರು. ಬಿಬ್ಲಿಯಾಥಿಕಾ ಕರ್ನಾಟಿಕಾ ಮಾಲಿಕೆಯಲ್ಲಿ 'ಜೈಮಿನಿ ಭಾರತ', 'ತೊರವೆ ರಾಮಾಯಣ', 'ಕುಮಾರವ್ಯಾಸ ಭಾರತ', 'ಬಸವ ಪುರಾಣ' ಮುಂತಾದ ಕೃತಿಗಳು ಪ್ರಕಟಗೊಂಡವು. ಹೀಗೆ ಪಠ್ಯಗಳ ಸಂಕಲನ, ಸಂಪಾದನೆಯ ಮೂಲಕ ಆರಂಭವಾದ ಸಾಹಿತ್ಯಾಧ್ಯಯನ 'ಸಾಹಿತ್ಯ ಚರಿತ್ರೆ'ಯ ರಚನೆಯ ಮೂಲಕ ವ್ಯವಸ್ಥಿತ ರೂಪ ಪಡೆಯಿತು. ಕನ್ನಡ ಸಾಹಿತ್ಯ ಪರಂಪರೆಯನ್ನು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಬಹುದಾದ ಸಾಧ್ಯತೆಗಳ ಅರಿವೇ ನಮಗಿಲ್ಲದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯ ರಚನೆಗೆ ಆರಂಭಿಕ ಅಡಿಗಲ್ಲನ್ನು ಹಾಕಿದವರು ಮಂಗಳೂರಿನ ಬಾಸೆಲ್ ಮಿಷನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ರೆವರೆಂಡ್ ಗಾಡ್ ಫ್ರೈಡ್ ವೈಗಲ್ ಎಂಬ ಮಿಷನರಿ. ಕನ್ನಡ ಭಾಷೆಯ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ 'Canares spracher U literature' ಎಂಬ ಶೀರ್ಷಿಕೆಯಡಿಯಲ್ಲಿ ಜರ್ಮನ್ ಭಾಷೆಯಲ್ಲಿ ಲೇಖನ ಬರೆದರು. ೧೮೪೭ರಲ್ಲಿ ರಚಿಸಲ್ಪಟ್ಟ ಈ ಲೇಖನ ಜರ್ಮನಿಯ ಚಿಆಒಉ ಎಂಬ ಓರಿಯಂಟಲ್ ಮ್ಯಾಗಝೀನ್‌ನಲ್ಲಿ ೧೮೪೮ ರಲ್ಲಿ ಪ್ರಕಟಗೊಂಡಿತು. ಇದರ ಇಂಗ್ಲೀಷ್ ಅನುವಾದವನ್ನು ಕರೆನ್ ಸ್ಚಿರರ್ ಎಂಬುವವರು ಮಾಡಿದ್ದಾರೆ. ಬಿ.ವಿ. ಮಹೀದಾಸ, ಎಚ್.ಶಶಿಕಲಾ, ಎಸ್.ಎಲ್. ಶ್ರೀನಿವಾಸಮೂರ್ತಿಯವರು ಈ ಲೇಖನವನ್ನು ಕನ್ನಡಿಸಿದ್ದಾರೆ. ಈ ಲೇಖನ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯ ಮೊದಲ ಸಂಪುಟ 'ಮುಂಬೆಳಗು' ಇದರ ಅನುಬಂಧದಲ್ಲಿ ಸೇರ್ಪಡೆಗೊಂಡಿದೆ.

ಮೈಸೂರು ವಿಶ್ವವಿದ್ಯಾಲಯದ 'ಕನ್ನಡ ಸಾಹಿತ್ಯ ಚರಿತ್ರೆ'ಯ ಸಂಪುಟ ಒಂದನ್ನೂ ಒಳಗೊಂಡಂತೆ ಶ್ರೀನಿವಾಸ ಹಾವನೂರ, ಡಾ. ಕೆ. ಅನಂತರಾಮು, ಡಾ. ಕೆಳದಿ ವೆಂಕಟೇಶ ಜೋಯಿಸ್ ಮುಂತಾದ ಬಹುತೇಕ ವಿದ್ವಾಂಸರು ಈ ಲೇಖನವನ್ನು ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತು ಪ್ರಸ್ತಾಪಿಸುವ ಮೊದಲ ಲೇಖನವೆಂದು

ಒಪ್ಪಿಕೊಂಡಿದ್ದಾರೆ. "ವೆಯಗ್ಲೆ ೧೮೪೪ರಲ್ಲಿ ಬರೆದ ೨೮ ಪುಟಗಳ ಲೇಖನವೇ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ಮೊದಲ ಬರಹ ಎಂಬ ಕೆ. ಅನಂತರಾಮು ಅವರ ಮಾತು ಪರಿಷ್ಕಾರ ಯೋಗ್ಯ. ದೇವಚಂದ್ರನ 'ರಾಜಾವಳಿ ಕಥಾಸಾರ'ದ ನಂತರದ ಎರಡನೆಯ ದಾಖಲೆಯಾಗಿ ಇದನ್ನು ನೋಡಬಹುದು" ಎಂಬ ಡಾ.ಜಿ.ಬಿ.ಹರೀಶ್‌ರವರ ಮಾತು ಇದಕ್ಕೆ ಅಪವಾದ. ಅವರು ತಮ್ಮ ಲೇಖನದಲ್ಲಿ ದೇವಚಂದ್ರನು ತನ್ನ 'ರಾಜಾವಳಿ ಕಥಾಸಾರ'ದಲ್ಲಿ ಉಲ್ಲೇಖಿಸಿರುವ ಜೈನ, ವೀರಶೈವ, ವೈದಿಕ, ಶೂದ್ರ, ಇಸ್ಲಾಂ ಮತದ ಕವಿ-ಕೃತಿಗಳ ಮಾಹಿತಿಯನ್ನು ನೀಡಿ ಒಟ್ಟು ೧೭೬ ಕವಿಗಳನ್ನು ಕುರಿತು ಪ್ರಸ್ತಾಪಿಸಿರುವ ರಾಜಾವಳಿ ಕಥಾಸಾರದ ಮರು ಅವಲೋಕನ ಮಾಡುವ ಅಗತ್ಯವನ್ನು ಒತ್ತಿ ಹೇಳಿದ್ದಾರೆ. ಆದರೆ ದೇವಚಂದ್ರ ತನ್ನ ಕೃತಿಯನ್ನು ರಚಿಸುವ ಸಂದರ್ಭದಲ್ಲಿ ಕನ್ನಡ ಸಾಹಿತ್ಯವನ್ನು ಚರಿತ್ರೆಯ ಚೌಕಟ್ಟಿನೊಳಗೆ ಇಟ್ಟು ನೋಡುವ ಪ್ರಯತ್ನವನ್ನೇನೂ ಮಾಡಿಲ್ಲ. ಹಾಗೆ ನೋಡುವುದಾದರೆ ಶ್ರೀವಿಜಯನ 'ಕವಿರಾಜಮಾರ್ಗ'ವೇ ಕನ್ನಡದ ಮೊದಲ ಸಾಹಿತ್ಯ ಚರಿತ್ರೆಯಾಗುತ್ತದೆ.

ಸಾಹಿತ್ಯವನ್ನು ಚರಿತ್ರೆಯ ಮಾನದಂಡವನ್ನಾಧರಿಸಿ ನೋಡುವ ಮೊದಲ ಪ್ರಯತ್ನವಾಗಿ ವೈಗಲ್‌ನ ಲೇಖನವನ್ನು ನೋಡಬಹುದು. ಈ ಲೇಖನ ಸಾಹಿತ್ಯದ ಜೊತೆಗೆ ಕನ್ನಡ ಭಾಷೆ ಮತ್ತು ವ್ಯಾಕರಣಗಳ ಕುರಿತಾಗಿಯೂ ವೈಜ್ಞಾನಿಕವಾಗಿ ವಿಶ್ಲೇಷಿಸುತ್ತದೆ. ಕನ್ನಡ ಭಾಷೆಯನ್ನಾಡುವ ಜನರು ವಾಸಿಸುವ ಭೌಗೋಳಿಕ ಪ್ರದೇಶಗಳು, ಕನ್ನಡವು ತೆಲುಗು, ತಮಿಳು, ಮಲೆಯಾಳಂ ಮತ್ತು ತುಳು ಮುಂತಾದ ದಕ್ಷಿಣ ಭಾರತದ ಭಾಷೆಗಳೊಂದಿಗೆ ಹೊಂದಿರುವ ನಿಕಟ ಸಂಬಂಧ, ಇವುಗಳೊಟ್ಟಿಗೆ ಕೊರಗ. ಕೊಡವ, ಮಲೆಕುಡಿಯ, ಗೊಂಡ್ಯಾನಾ ಮುಂತಾದ ಭಾಷಾವರ್ಗಗಳು ಬಳಕೆಯಲ್ಲಿ ಇರುವುದನ್ನು ಪ್ರಸ್ತಾಪಿಸಲಾಗಿದೆ. ಕನ್ನಡವನ್ನು ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆಯನ್ನಾಗಿ ಗುರುತಿಸಲಾಗಿದೆ. ಕನ್ನಡ, ತಮಿಳು, ತೆಲುಗಿನ ಜೊತೆಗೆ ಮಲಯಾಳಂ ಮತ್ತು ತುಳುವನ್ನು ಪಂಚದ್ರಾವಿಡ ಭಾಷೆಗಳೆಂದು ಪ್ರತಿಪಾದಿಸಿದ್ದಾನೆ. 'ಎಲ್ಲಿಸ್ ದ್ರಾವಿಡ ಭಾಷಾ ಕುಟುಂಬದ ಅನ್ವೇಷಕನಾದರೆ, ವೈಗಲ್ ದ್ರಾವಿಡ ಭಾಷಾ ಸಾಮ್ರಾಜ್ಯದ ವಿಸ್ತರಣಕಾರ' ಎಂಬ ಅಭಿಪ್ರಾಯ ಈತನ ಕುರಿತಾಗಿ ವ್ಯಕ್ತವಾಗಿದೆ. 'ಭಾರತದ ಭಾಷೆಗಳೆಲ್ಲವೂ ಒಂದೇ ಮೂಲದವು ಮತ್ತು ಸಂಸ್ಕೃತದಿಂದ ಹುಟ್ಟಿದವು' ಎಂಬ ಕೆಲ ಇಂಗ್ಲೀಷ್ ವಿದ್ವಾಂಸರ ವಾದವನ್ನು ಈ ಲೇಖನ ಪ್ರಬಲವಾಗಿ ವಿರೋಧಿಸುತ್ತದೆ.

ಕನ್ನಡ ವರ್ಣಮಾಲೆ ಸಂಸ್ಕೃತವನ್ನಾಧರಿಸಿದೆ ಹಾಗೂ ಲಿಪಿ ದೇವನಾಗರಿಯ ಮೂಲದ್ದಾಗಿ ಗೋಚರಿಸುತ್ತದೆ ಎನ್ನುತ್ತಾ ಸಂಸ್ಕೃತದಿಂದ ಕನ್ನಡ ಬಹುತೇಕ ಪದಗಳನ್ನು ಎರವಲಾಗಿ ಪಡೆದಿದ್ದನ್ನು ಚರ್ಚಿಸಿದ್ದಾರೆ. "ತತ್ಸಮ-ತದ್ಭವ ಈ ಎರಡೂ ವರ್ಗಗಳ ಹೊರಗಿನ ಪದಗಳನ್ನು ಬಳಸದೇ ಕನ್ನಡದಲ್ಲಿ ಏನನ್ನಾದರೂ ಹೇಳುವುದು ಮತ್ತು ಬರೆಯುವುದು ಹೆಚ್ಚು ಕಡಿಮೆ ಅಸಾಧ್ಯ; ಕನ್ನಡ ಭಾಷೆಗೆ ಹೊಸ ಪದಗಳ ಖಜಾನೆಯಾಗಿ ಸಂಸ್ಕೃತವನ್ನು ಬಳಸುವ ನಿರಾಕರಿಸಲಾಗದ ಹಕ್ಕಿದೆ" ಎಂದು ಖಚಿತವಾಗಿ ಹೇಳಿದ್ದಾರೆ.

ಜೊತೆಗೆ ಲಿಂಗ, ವಚನ, ವಿಭಕ್ತಿಗಳು, ನಾಮಪದ, ಸರ್ವನಾಮ, ವಿಶೇಷಣಗಳು, ಸಂಖ್ಯಾವಾಚಕಗಳು, ಕ್ರಿಯಾಪದ, ಕಾಲಗಳು, ಕೃದಂತಗಳು, ಪ್ರೇರಣಾರ್ಥಕಗಳು, ವಾಕ್ಯರಚನೆ ಹೀಗೆ ವ್ಯಾಕರಣವನ್ನು ಕುರಿತಾದ ಎಲ್ಲ ವಿಷಯಗಳ ಕುರಿತ ಚರ್ಚೆಯಿದೆ. ಇದರೊಂದಿಗೆ ವಿಶಿಷ್ಟವಾದ ಭಿನ್ನರಾಶಿಯ ಪದ್ಧತಿಯೊಂದು ಕನ್ನಡವನ್ನೂ ಒಳಗೊಂಡಂತೆ ದ್ರಾವಿಡ ಭಾಷೆಗಳಲ್ಲಿ ಬಳಕೆಯಲ್ಲಿರುವುದನ್ನು ತಿಳಿಸುತ್ತಾ, ಕನ್ನಡದಲ್ಲಿ ಅರೆ–೧/೨, ಕಾಲು–೧/೪, ಬೇಳೆ–೧/೮, ವೀಸ–೧/೧೬, ಅರೆವೀಸ–೧/೩೨, ಕಾಣಿ–೧/೬೪, ಅರೆಕಾಣಿ–೧/೧೨೮, ಗಿಡ್ಡಾಣಿ–೧/೨೫೬ – ಮುಂತಾದ ಭಿನ್ನರಾಶಿಗಳಿವೆಯೆಂದು ತಿಳಿಸುವುದರ ಜೊತೆಗೆ ತೆಲುಗು–ತಮಿಳುಗಳ ಭಿನ್ನರಾಶಿಗಳ ಮಾಹಿತಿ ನೀಡಿದ್ದು, ದ್ರಾವಿಡ ಸಂಖ್ಯಾ ಪದ್ಧತಿಯ ವೈಚಿತ್ರ್ಯವನ್ನರಿಯಲು ಸೂಕ್ಷ್ಮ ಮತ್ತು ಆಳವಾದ ಅಧ್ಯಯನದ ಅಗತ್ಯವಿದೆಯೆಂದು ಹೇಳಿದ್ದಾರೆ. ಕನ್ನಡದಲ್ಲಿ ಕರ್ಮಣಿ ಪ್ರಯೋಗವಿಲ್ಲವೆಂಬುದನ್ನು, ಕನ್ನಡದ ವಿಶಿಷ್ಟ ಮತ್ತು ವ್ಯವಸ್ಥಿತ ವಾಕ್ಯರಚನಾ ಕ್ರಮವನ್ನು, ಜೋಡಿಪದಗಳನ್ನು ನಿದರ್ಶನಗಳ ಮೂಲಕ ಖಚಿತವಾಗಿ ಪ್ರತಿಪಾದಿಸಿದ್ದಾರೆ. ದ್ರಾವಿಡ ಭಾಷೆಯ ಅಧ್ಯಯನ ಕೈಗೊಂಡ ಎಲ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸುತ್ತಾ, ತನ್ನ ನಿಲುವುಗಳನ್ನು ಸಾರುವ ಈ ಲೇಖನ ಕನ್ನಡ ಅಷ್ಟೇ ಏಕೆ ದ್ರಾವಿಡ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಪ್ರಮುಖ ಲೇಖನವೆನಿಸುತ್ತದೆ. ಲೇಖನದ ನಂತರದ ಭಾಗ ಕನ್ನಡ ಸಾಹಿತ್ಯವನ್ನು ಕುರಿತದ್ದಾಗಿದೆ. ಕನ್ನಡ ಸಾಹಿತ್ಯವನ್ನು ಕುರಿತು ವಿಸ್ತೃತವಾಗಿ ಮತ್ತು ಕರಾರುವಕ್ಕಾಗಿ ಮಾತನಾಡುವಷ್ಟು ಅಧ್ಯಯನ ನಡೆದಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಲೇ ಕನ್ನಡ ಭಾಷೆಯಲ್ಲಿರುವ ಸಾಹಿತ್ಯ ಸಂಪತ್ತನ್ನು ಪರಿಚಯಿಸುವ ಉದ್ದೇಶದಿಂದಾಗಿ ಇದನ್ನು ರಚಿಸುತ್ತಿರುವುದಾಗಿ ಹೇಳಿಕೊಂಡಿರುವ ವಿನಮ್ರತೆಯಿದೆ. ಅನುಕ್ರಮವಾಗಿ ವ್ಯಾಕರಣ, ನಿಘಂಟು, ಛಂದಶ್ಶಾಸ್ತ್ರಗಳಿಗೆ ಸಂಬಂಧಿಸಿದ ಶಬ್ದಮಣಿದರ್ಪಣ, ಶಬ್ದಮಂಜರಿ ಮತ್ತು ಛಂದೋಂಬುಧಿಗಳನ್ನು ಮೊದಲ ಘಟ್ಟದಲ್ಲಿ ಸೂಚಿಸಿ ಇವುಗಳ ಕಾಲವನ್ನು ಸುಮಾರು ೬೦೦–೭೦೦ ಎಂದು ಊಹಿಸಿದ್ದಾರೆ. ಹದಿನಾಲ್ಕನೇ ಶತಮಾನದ ನಂತರದ ಕೃತಿಗಳಾಗಿ ನಾರಣನ ಮಹಾಭಾರತ, ನರಸಪ್ಪನ ರಾಮಾಯಣ, ನಿತ್ಯಾತ್ಮನ ಭಾಗವತ, ಲಕ್ಷ್ಮೀಪತಿಯ ಜೈಮಿನಿ ಭಾರತವನ್ನು ಗುರುತಿಸಿದ್ದಾರೆ. "ಈ ನಾಲ್ಕು ಕೃತಿಗಳು ಭಾರತೀಯ ಪೌರಾಣಿಕ ಆಖ್ಯಾಯಿಕೆಗಳ ವಿಶ್ವಕೋಶದಂತಿದೆ." ಎಂದಿದ್ದಾರೆ. ಈ ಕೃತಿಗಳನ್ನು ಓದುವುದು ಯುರೋಪಿನ್ನರಿಗೆ ಶ್ರಮದಾಯಕವಾದರೂ ಕನ್ನಡಿಗರಿಗೆ ಅವರ ಅಭಿರುಚಿಯ ಕಾರ್ಯಚಾತುರ್ಯವೇ ಕೃತಿಯ ಆಕರ್ಷಣೆ ಎಂದಿದ್ದಾರೆ. ಮುಂದಿನ ಘಟ್ಟದಲ್ಲಿ ದಿನನಿತ್ಯ ಬಳಸುವ ಭಾಷೆಗೆ ಸಮೀಪವಾದುದೆಂದು ಸೊಬಗಿನ ಸೋನೆ, ಕನಕದಾಸರ ಬಿರುಮಳೆ, ಗಯಚರಿತ್ರೆ, ಬಸವಪುರಾಣ, ರಾಘವಾಂಕನ ಕಾವ್ಯಗಳನ್ನು, ಸ್ತುತಿಗೀತೆಗಳ ಗುಂಪಿಗೆ ಸೇರುವ ಕನಕದಾಸರ ಭಕ್ತಿಸಾರ, ಅನುಭವಾಮೃತ, ಸರ್ವಜ್ಞನ ಪದಗಳನ್ನು, ದಾಸರ ಕೀರ್ತನೆಗಳನ್ನು ಪ್ರಸ್ತಾಪಿಸಿದ್ದಾರೆ. ದಾಸರ ರಚನೆಗಳನ್ನು ಪರ್ಷಿಯನ್ ಘಜಲ್‌ಗಳಿಗೆ

ಹೋಲಿಸುತ್ತಾ ಪುರಂದರದಾಸರ ಸಾಲುಗಳ ಉಲ್ಲೇಖ ನೀಡಿದ್ದಾರೆ. ಗದ್ಯ ಕೃತಿಗಳಾಗಿ ಶೃಂಗೇರಿ ಶಂಕರ ಮಠದ ಇತಿಹಾಸ, ಮೈಸೂರಿನ ಅರಸರ ಚಾರಿತ್ರಿಕ ಕೃತಿಗಳ ಮಾಹಿತಿಯಿದೆ. ಸಂಸ್ಕೃತದಿಂದ ಅನುವಾದಿಸಲಾದ ನೀತಿಕಥೆಗಳ ಸಂಕಲನದಲ್ಲಿ 'ಪಂಚತಂತ್ರ'ದ ಮಾಹಿತಿಯಿದೆ. ಯಾದವನ 'ನೀಲವತಿ' ಕಾದಂಬರಿಯ ಪ್ರಸ್ತಾಪವಿದೆ. ಸಮಕಾಲೀನ ರಚನೆಗಳ ಪರಿಚಯವೂ ಇದೆ.

ವಿಶೇಷವೆಂದರೆ ನಮ್ಮ ಮುಂದಿನ ಬಹುತೇಕ ಸಾಹಿತ್ಯ ಚರಿತ್ರೆಗಳು ನಿರ್ಲಕ್ಷಿಸಿರುವ ಯಕ್ಷಗಾನ ಪ್ರಸಂಗದ ಕುರಿತಾದ ಮಾಹಿತಿ ನೀಡಿ ಅವುಗಳಲ್ಲಿ ಸಾಹಿತ್ಯಕ ಮೌಲ್ಯ ಕಡಿಮೆಯಿರುವುದನ್ನೂ ಒಪ್ಪಿಕೊಂಡಿದ್ದಾರೆ. ನಮ್ಮ ಜನಪದ ಸಾಹಿತ್ಯವನ್ನು 'ಮೌಖಿಕ ಸಾಹಿತ್ಯ'ವೆಂದು ಕರೆದು ಕಾವ್ಯ ಸೌಂದರ್ಯದಲ್ಲಿ ಯಾವುದೇ ರೀತಿಯಲ್ಲಿಯೂ ಕಡಿಮೆಯಿಲ್ಲದ ಇವುಗಳನ್ನು ಸಂಗ್ರಹಿಸುವುದು ಕಷ್ಟವೆಂದಿದ್ದಾರೆ. "ಇವುಗಳನ್ನು ಮಹಿಳೆಯರೇ ಹಾಡುತ್ತಾರೆ; ಆದ್ದರಿಂದ ಗಂಡಸರು ಈ ರಚನೆಗಳ ಬಗೆಗೆ ಅಷ್ಟಾಗಿ ಆಸಕ್ತಿ ವಹಿಸುವುದಿಲ್ಲ" ಎಂಬ ಅವರ ಮಾತು ನಮ್ಮನ್ನು ವಿವೇಚನೆಗೆ ಹಚ್ಚುತ್ತದೆ.

ಇಡೀ ಲೇಖನದಲ್ಲಿ ಸಾಹಿತ್ಯಕ್ಕಿಂತ ಭಾಷೆ ಮತ್ತು ವ್ಯಾಕರಣದ ವಿವರಣೆಗೆ ಹೆಚ್ಚಿನ ಮಹತ್ವ ದೊರೆತಿದೆ. ಕನ್ನಡ ಕಾವ್ಯಗಳು ಒಂದೆಡೆ ದೊರೆಯುವುದಿಲ್ಲ. ಆದಕಾರಣ ಅದರ ಅಭ್ಯಾಸ ಪೂರ್ಣವಾಗಿಲ್ಲವೆಂಬ ಸಮರ್ಥನೆ ನೀಡಿಲಾಗಿದೆ. ಲೇಖನದಲ್ಲಿ ಮುಖ್ಯವೆನಿಸುವುದು 'ಧರ್ಮ'ದ, ಧಾರ್ಮಿಕ ದೃಷ್ಟಿಕೋನದ ಗೈರುಹಾಜರಿ. "ಸಾಹಿತ್ಯ ಚರಿತ್ರೆ ಎಂಬ ಪರಿಕಲ್ಪನೆ ಉಗಮವೇ ರಿಲಿಜಿಯಸ್ ಆದುದು. ಕ್ರಿಶ್ಚಿಯನ್ ಧರ್ಮ ಹರಡಿದಂತೆಲ್ಲ 'ರಿಲಿಜಿಯಸ್' ಮತ್ತು 'ಚರಿತ್ರೆ'ಗಾಗಿ ಜಗತ್ತಿನಾದ್ಯಂತ ಹುಡುಕಾಟ ನಡೆಯಿತು. ಪ್ರಾಚೀನ ಸಂಸ್ಕೃತಿಗಳ ಅಧ್ಯಯನ ಮಾಡುವುದಕ್ಕೆ ಚರಿತ್ರೆಯ ಹಾಗೆ ಸಾಹಿತ್ಯವೂ ಪೂರಕವಾಗುತ್ತದೆ ಎಂದು ನಂಬಲಾಗಿತ್ತು. ಒಂದೇ ಮಾತಿನಲ್ಲಿ ಹೇಳುವುದಾದರೆ ಸಾಹಿತ್ಯ ಚರಿತ್ರೆ ಎಂಬ ಕಲ್ಪನೆಯ ಉಗಮ, ಅದರ ವಿಕಾಸ ರಿಲಿಜಿಯನ್ನಿನ ವಿಕಾಸದೊಂದಿಗೆ ತಳಕು ಹಾಕಿಕೊಂಡಿದೆ." ಎಂಬ ಮಾಧವ ಪೆರಾಜೆಯವರ ಅಭಿಪ್ರಾಯವನ್ನು ಈ ಲೇಖನದ ಹಿನ್ನೆಲೆಯಲ್ಲಿ ಒಪ್ಪಲಾಗದು. ಕಾರಣ ಇಡೀ ಲೇಖನದಲ್ಲಿ ಎಲ್ಲಿಯೂ ಧರ್ಮವನ್ನಾಗಲೀ, ಧಾರ್ಮಿಕ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಗುರುತಿಸಿರುವುದಾಗಲೀ ಕಂಡುಬರುವುದಿಲ್ಲ. "ಇದರಲ್ಲಿ ಜೈನ, ವೀರಶೈವ, ದಾಸಸಾಹಿತ್ಯ, ಯಕ್ಷಗಾನಗಳ ಪರಿಚಯವಿದೆ", "ಜೈನ ಸಾಹಿತ್ಯ, ಲಿಂಗಾಯತ ಸಾಹಿತ್ಯ, ದಾಸಸಾಹಿತ್ಯ, ಯಕ್ಷಗಾನಗಳನ್ನು ಪರಿಚಯ ಮಾಡಿಕೊಟ್ಟಿದ್ದಾನೆ" – ಇವು ಈ ಲೇಖನದ ಕುರಿತು ವಿದ್ವಾಂಸರಿಂದ ವ್ಯಕ್ತವಾದ ಅಭಿಪ್ರಾಯಗಳಾಗಿದ್ದು ಇದೇ ಮಾತನ್ನು ಡಾ. ಕೆಳದಿ ವೆಂಕಟೇಶ್ ಜೋಯಿಸರು ಪುನರುಚ್ಚರಿಸಿದ್ದಾರೆ. ಆದರೆ ಶ್ರೀನಿವಾಸ ಹಾವನೂರರು ಸಂಗ್ರಹಿಸಿಕೊಟ್ಟಿರುವ ಲೇಖನದ ಭಾಗದಲ್ಲಾಗಲೀ, ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ಅಧಿಕೃತ ಲೇಖನದಲ್ಲಿಯಾಗಲೀ ಎಲ್ಲಿಯೂ ಹೀಗೆ ಧರ್ಮದ ಪ್ರಸ್ತಾಪವೇ ಬರುವುದಿಲ್ಲ. ವೀರಶೈವ ಅಥವಾ ಲಿಂಗಾಯತ ಎಂಬ ಪದಗಳ ಸುಳಿವೂ

ಇಲ್ಲ. ಶಬ್ದಮಣಿದರ್ಪಣದ ಉಲ್ಲೇಖವಿದೆಯಾದರೂ 'ಜೈನ'ಸಾಹಿತ್ಯ ಎಂಬ ಶೀರ್ಷಿಕೆಯಡಿಯಲ್ಲಿ ಅದನ್ನು ಚರ್ಚಿಸಲಾಗಿಲ್ಲ. ಭಾಷೆಯನ್ನು ಕುರಿತಾದ ಭಾಗದಲ್ಲಿ ಬ್ರಾಹ್ಮಣರ ಅಧಿಪತ್ಯ, ಅವರ ವಲಸೆ, ಸಂಪರ್ಕದಿಂದ ಭಾಷೆಯ ಮೇಲಾಗಿರುವ ಪರಿಣಾಮಗಳ ಚರ್ಚೆಯಿದೆಯೇ ವಿನಹ ಯಾವುದೇ ಧರ್ಮವನ್ನಾಧರಿಸಿದ ವ್ಯಾಖ್ಯಾನ ಕಂಡುಬರುವುದಿಲ್ಲ.

ಈ ಲೇಖನ ಜರ್ಮನ್ ವಿದ್ವಾಂಸನಿಂದ ರಚಿತಗೊಂಡಿದ್ದರೂ ಇತರ ಪಾಶ್ಚಾತ್ಯ ಬರವಣಿಗೆಗಳಲ್ಲಿ ಕಂಡುಬರುವಂತೆ ಭಾರತದಂತಹ ವಸಾಹತು ರಾಷ್ಟ್ರದ ಪ್ರಾದೇಶಿಕ ಭಾಷೆಯೊಂದರ ಕುರಿತಾದ ಯಾವುದೇ ಬಗೆಯ ಪೂರ್ವಾಗ್ರಹಗಳಾಗಲೀ, ನಿರ್ಲಕ್ಷ್ಯದ ಮನೋಭಾವವಾಗಲೀ ಎಲ್ಲಿಯೂ ಕಂಡುಬರುವುದಿಲ್ಲ. ಲೇಖನದ ಕೊನೆಯಲ್ಲಿ "ಕನ್ನಡಿಗರು ಯುರೋಪಿನಲ್ಲಿ ಅತಿ ವಿರಳವಾಗಿ ಪರಿಚಿತರಾಗಿದ್ದಾರಾದರೂ ಅವರು ತಮ್ಮ ಭಾಷೆ ಮತ್ತು ಸಾಹಿತ್ಯಗಳ ವಿಷಯದಲ್ಲಿ ಉನ್ನತವಾದ ಸ್ಥಾನವನ್ನು ಗಳಿಸಿಕೊಂಡಿದ್ದು ಯಾವ ರೀತಿಯಲ್ಲಿಯೂ ಅವಹೇಳನಕ್ಕೆ ಪಾತ್ರವಾಗುವ ಸ್ಥಿತಿಯಲ್ಲಿಲ್ಲ ಎಂಬುದನ್ನರಿತರೆ ಮತ್ತು ಕನ್ನಡ ಭಾಷೆ-ಸಾಹಿತ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಅಭ್ಯಸಿಸಲು ಯೋಗ್ಯವಾಗಿದೆ ಎಂಬ ಭಾವನೆಯನ್ನು ಈ ಪ್ರಬಂಧ ಮೂಡಿಸಿದರೆ ಈ ಲೇಖಕನ ಶ್ರಮ ವ್ಯರ್ಥವಲ್ಲ" ಎಂಬ ಮಾತುಗಳು ಒಂದು ನಿರ್ದಿಷ್ಟ ಭಾಷೆ ಮತ್ತು ಸಾಹಿತ್ಯದ ನಿಜವಾದ ಸತ್ವವನ್ನರಿಯುವ ಮತ್ತು ಅದನ್ನು ಇತರರಿಗೆ ಪರಿಚಯಿಸಬೇಕೆನ್ನುವ ಒಬ್ಬ ವಿಜ್ಞಾನಿಯ, ಸಂಶೋಧಕನ ಸೆಕ್ಯೂಲರ್ ದೃಷ್ಟಿಕೋನವನ್ನು, ದೇಶ-ಭಾಷೆಯ ಎಲ್ಲೆ ಮೀರಿದ ಆತನ ಸಾಹಿತ್ಯ ಪ್ರೀತಿಯನ್ನು ತೋರುತ್ತದೆ. ಸಾಹಿತ್ಯ ಚರಿತ್ರೆಯ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯದ ಕುರಿತು ಮಾತನಾಡಿದ ಮೊದಲ ಚಾರಿತ್ರಿಕ ಲೇಖನವಿದು. ಅಲ್ಲದೆ ಸಾಹಿತ್ಯ ಚರಿತ್ರೆ ಎಂದರೆ ಸಾಹಿತ್ಯ ಕೃತಿಗಳ ಪಟ್ಟಿ ಮಾತ್ರವಾಗಿರದೆ ನಿರ್ದಿಷ್ಟ ಭಾಷೆಯ ಚರಿತ್ರೆ, ವ್ಯಾಕರಣದ ಚರಿತ್ರೆಯಾಗಿಯೂ ಈ ಲೇಖನವನ್ನು ಗುರುತಿಸಬಹುದು. ಜೆ.ಎಫ್.ಕಿಟೆಲ್‌ರವರ 'An Essay on canarese Literature' ಸಾಹಿತ್ಯ ಚರಿತ್ರೆಯ ಅಧಿಕೃತವೆನಿಸುವ ಲೇಖನ ರಚನೆಗೊಂಡದ್ದು ಈ ಲೇಖನ ಪ್ರಕಟವಾದ ಸರಿ ಸುಮಾರು ೩ ದಶಕಗಳ ನಂತರ ೧೮೭೫ರಲ್ಲಿ ಎಂಬುದನ್ನು ಗಮನಿಸಿದರೆ ಈ ಲೇಖನದ ಮಹತ್ವ ನಮಗೆ ಅರಿವಾಗುತ್ತದೆ.

ಶಾಸನ ಸಂಪಾದನೆಯ ಇತಿಹಾಸ

– ಡಾ. ಟಿ.ಎಲ್. ಜಗದೀಶ

ಶಾಸನಗಳು ರಾಜರ ಆಡಳಿತಾತ್ಮಕ ಸಂದರ್ಭದಲ್ಲಿ ಅನುಷ್ಠಾನಕ್ಕೆ ತಂದ ಆದೇಶಗಳು. ಅವರ ಆಗ್ರಹ ಮತ್ತು ಆಜ್ಞೆ. ಇವುಗಳು ಒಂದು ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡುವಲ್ಲಿ ಇರುವ ಅಧಿಕೃತ ಆಧಾರಗಳೆನಿಸಿವೆ. ಶಾಸನಗಳು ಘಟಿಸಿದ ಘಟನೆಗಳ ದಾಖಲೆಯೆನಿಸಿ ತಲೆತಲಾಂತರದವರೆವಿಗೂ ಅವುಗಳ ಅಸ್ತಿತ್ವ ಇರುವುದನ್ನು ಕಾಣಬಹುದು. ಯಾವುದೋ ಒಂದು ಪ್ರಮುಖ ಘಟನೆಗಳನ್ನು ಆಳ್ವಿಕೆಯ ಹಿನ್ನೆಲೆಯಲ್ಲಿ ದಾಖಲಿಸಬೇಕಾಗಿರುವುದು ಶಾಸನ ಭಾಷೆಯಲ್ಲಿ ಅಧಿಕೃತವಾಗಿ ಪ್ರಕಟಿಸಬೇಕಾಗುತ್ತದೆ. ಯಾವುದೇ ಸಂದರ್ಭದಲ್ಲಿ ಶಾಸನ ರಚನೆಯಾದರೂ ಆಯಾ ಕಾಲಘಟ್ಟದಲ್ಲಿ ಅಸ್ತಿತ್ವದಲ್ಲಿದ್ದ ಆಡಳಿತ ಭಾಷೆಯಲ್ಲಿಯೇ ಪ್ರಕಟಿಸಿರುವುದನ್ನು ಗಮನಿಸಬಹುದಾಗಿದೆ. ಈ ಹಿನ್ನೆಲೆಯನ್ನು ಅವಲೋಕಿಸಿದ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಪಂಡಿತರು ಶಾಸನಗಳ ಸಂಪಾದನೆಗೆ ತೊಡಗಿದರು. ಆ ಮೂಲಕ ಪ್ರತಿಯೊಂದು ಶಾಸನವನ್ನು ಸಂಪಾದಿಸಿ ಪ್ರಕಟಿಸುವ ಮೂಲಕ ಈ ನಾಡು ನುಡಿಯ ಚರಿತ್ರೆಯನ್ನು ಕಟ್ಟುವಲ್ಲಿ ಹಲವಾರು ವಿದ್ವಾಂಸರು ಶ್ರಮಿಸಿದ್ದಾರೆ.

ಪ್ರಕಟಿತ ಹಾಗೂ ಅಪ್ರಕಟಿತ ೨೫೦೦೦ ಶಾಸನಗಳು ಇವರ ಅಧ್ಯಯನಕ್ಕೆ ಸಾಮಗ್ರಿಗಳೆನಿಸಿದವು. ಇವುಗಳನ್ನು ಸಂಗ್ರಹಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಪಂಡಿತರ ಕೊಡುಗೆ ಅಪಾರವಾದುದು. ಈ ಹಿನ್ನೆಲೆಯಲ್ಲಿ ಅವರು ಸಂಗ್ರಹಿಸಿದ ಶಾಸನಗಳನ್ನು ಪ್ರಾಮಾಣಿಕತೆಯಿಂದ ಅಭ್ಯಸಿಸಿ ಅಧ್ಯಯನ ಮಾಡಿ ಅರ್ಥೈಸಿದರು. ಈ ಮೂಲಕ ಸುಮಾರು ಗತಕಾಲದ ಇತಿಹಾಸ ಮತ್ತು ಸಂಸ್ಕೃತಿಯನ್ನು ಅರಿತ ಇವರ ಸಾಧನೆ ಅವಿಸ್ಮರಣೀಯವೆನಿಸಿದೆ. ಈ ಸಂದರ್ಭದಲ್ಲಿ ಶಾಸನ ಅಧ್ಯಯನದ ಸೂಕ್ಷ್ಮತೆಯನ್ನು ಅರಿತ ಡಾ.ಪಿ.ಬಿ.ದೇಸಾಯಿಯವರು "ಶಾಸನ ಪ್ರಪಂಚದಲ್ಲಿ ಈ ಅಧ್ಯಯನದ ಕಾಲವನ್ನು ತಿಳಿವಿನ ಯುಗ, ಕತ್ತಲೆಯ ಯುಗ, ಸಂಶೋಧನಯುಗಗಳೆಂದು ಮೂರು ಯುಗಗಳನ್ನಾಗಿ ಗುರುತಿಸಿರುವುದು ಶಾಸನಗಳ ಅಧ್ಯಯನದ ಮಹತ್ವವನ್ನು ಸಾರುತ್ತದೆ.[೧] ಮೊದಲಿಗೆ ತಿಳಿವಿನಯುಗದಲ್ಲಿ 'ಪ್ರಾಚೀನ

ಶಾಸನಗಳನ್ನು ಓದಿ ಆ ಶಾಸನದ ಅರ್ಥವಿವರಣೆಯನ್ನು ಮಾಡುವ ಸಮರ್ಥರಾದ ವಿದ್ವಾಂಸರು ಬದುಕಿದ್ದ ಕಾಲಾವಧಿಯನ್ನು ಅವರು ತಿಳಿವಿನಯುಗ' ಎಂದು ಕರೆದಿದ್ದಾರೆ.

ಎರಡನೆಯ ಹಂತದಲ್ಲಿ ಶಾಸನಗಳನ್ನು ಕುರಿತು ವಿದ್ಯಾವಂತರಲ್ಲಿಯೇ ಅರಿವು ಇಲ್ಲದಿರುವ ಕಾಲವನ್ನು ಕತ್ತಲೆಯ ಯುಗ ಎಂದು ಕರೆಯಲಾಗಿದೆ. ಇನ್ನು ಮುಂದಿನ ಯುಗದಲ್ಲಿ ಭಾರತ ದೇಶಕ್ಕೆ ಭೇಟಿಯಿತ್ತ ಬ್ರಿಟಿಷರಾದಿಯಾಗಿ ಪಾಶ್ಚಿಮಾತ್ಯ ವಿದ್ವಾಂಸರು ಸ್ಥಳೀಯವಾಗಿ ಅಸ್ತಿತ್ವದಲ್ಲಿದ್ದ ಸಂಸ್ಕೃತಿ, ಇತಿಹಾಸ ಮತ್ತು ಸಮಾಜ ಹಾಗೂ ಸಾಹಿತ್ಯವನ್ನು ಕಂಡು ಪುಳಕಿತರಾದರು ಮಾತ್ರವಲ್ಲ ಆ ಹಿನ್ನೆಲೆಯಲ್ಲಿ ಅವರು ಅಧ್ಯಯನಶೀಲರಾದರು. ಈ ಹಿನ್ನೆಲೆಯಲ್ಲಿ ಶಾಸನಗಳ ಅಧ್ಯಯನವು ಆರಂಭಗೊಂಡಿತೆನ್ನಬಹುದು.

ಆ ಕಾಲಘಟ್ಟದಲ್ಲಿ ಆಸಕ್ತಿ ಮತ್ತು ಕುತೂಹಲಕ್ಕೆ ಮಾರುಹೋದ ಸ್ಥಳೀಯರು ಅಂದರೆ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ವಿದ್ವಾಂಸರು ಶಾಸನಗಳ ಹುಡುಕಾಟಕ್ಕೆ ತೊಡಗಿದರು. ಆ ಮುಖೇನ ಶಾಸನಗಳನ್ನು ಓದುವುದು, ಅರ್ಥೈಸುವುದು, ಮಾತ್ರವಲ್ಲದೆ ಶಾಸನಗಳನ್ನು ಸಂಗ್ರಹಿಸುವ ಮಹತ್ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ಹಾಗಾಗಿ ಈ ಎಲ್ಲಾ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದ ಕಾಲವನ್ನೆ ಸಂಶೋಧನಯುಗವೆಂದು ಕರೆಯಲಾಯಿತು. ಈ ಯುಗವು ಅಲ್ಪ ಅವಧಿಯದಾಗಿರದೆ ಬಹಳ ದೀರ್ಘವೆನಿಸಿದ ಸುಮಾರು ೧೭೫ ವರ್ಷಗಳ ಕಾಲವನ್ನು ಒಳಗೊಂಡಿತ್ತೆನ್ನುವುದು ಇತಿಹಾಸ. ಇಷ್ಟೊಂದು ಸುದೀರ್ಘ ಅವಧಿಯಲ್ಲಿ ನಡೆದ ಶಾಸನ ಸಂಪಾದನೆ ಹಾಗೂ ಶಾಸನ ಅಧ್ಯಯನದ ಕಾಲಘಟ್ಟವನ್ನು ಡಾ.ಎಂ.ಎಂ.ಕಲಬುರ್ಗಿ ಅವರು ಮೂರು ವಿಭಾಗಗಳನ್ನಾಗಿ ಮಾಡಿಕೊಂಡಿದ್ದಾರೆ.

ಮೊದಲ ಕಾಲಘಟ್ಟದಲ್ಲಿ ಕರ್ನಲ್ ಮೆಕೆಂಝಿಯು ಮೈಸೂರು ಪ್ರದೇಶಕ್ಕೆ ಪರಿವೀಕ್ಷಣಾಧಿಕಾರಿಗಳಾಗಿ ನೇಮಕವಾಗಿ ಬಂದರು. ಇದಕ್ಕೂ ಮೊದಲಿಗೆ ಸೈನ್ಯದಲ್ಲಿ ಸೈನ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಈ ಸಂದರ್ಭದಲ್ಲಿ ಅವರು ಅಧ್ಯಯನ ಮಾಡುತ್ತಿದ್ದ ಭೌಗೋಳಿಕವಾದ ಕಾರ್ಯಚಟುವಟಿಕೆಗಿಂತಲೂ ಭಿನ್ನವಾದ ಸಾಂಸ್ಕೃತಿಕ ಚಟುವಟಿಕೆಗಳು ಗರಿಗೆದರಲಾರಂಭಿಸಿದುವು. ಇದರಿಂದ ವಿಸ್ಮಿತರಾದ ಮೆಕೆಂಝಿಯು ಈ ನೆಲದಲ್ಲಿ ಸಿಕ್ಕುತ್ತಿದ್ದ ವೈವಿಧ್ಯಮಯವಾದ ಪ್ರಾಚೀನ ದಾಖಲೆಗಳನ್ನು ಪಟ್ಟಿ ಮಾಡಿದರು. ಅಂತಹ ದಾಖಲೆಗಳಲ್ಲಿ ಶಾಸನಗಳು ಈತನಿಗೆ ಅತ್ಯಂತ ಪ್ರಮುಖ ವಿಚಾರವಾಗಿ ಕಾಣಿಸಿಕೊಂಡವು. ಅದನ್ನು ಮೆಕೆಂಝಿಯು ದಾಖಲಿಸಿರುವ ಕ್ರಮವೆಂದರೆ "ಹಿಂದುಗಳ ಭೂವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಶಾಸನಗಳು ಮತ್ತು ತಾಮ್ರಪಟಗಳ ಸ್ವರೂಪ ಮತ್ತು ಉಪಯೋಗವಿರುವ ಸುಮಾರು ೩೦೦೦ಕ್ಕಿಂತ ಹೆಚ್ಚಿನ ಬರಹಗಳನ್ನು ಕ್ರಿ.ಶ ೧೮೦೦ರಿಂದ ಈಚೆಗೆ ಸಂಗ್ರಹಿಸಿ ಸಂಪಾದಿಸಿರುವುದಾಗಿ ಹೇಳಿಕೊಂಡಿದ್ದಾನೆ. ಇಲ್ಲಿಂಯುವರೆವಿಗೂ ಇಂತಹ ಶಾಸನಗಳ ವಿಚಾರವಾಗಿ ಯಾರು ಗಮನಹರಿಸಿರಲಿಲ್ಲವೆಂದೂ, ಆದರೆ ಈ ಪ್ರಾಚೀನ ಅಮೂಲ್ಯ ವಸ್ತುಗಳಾದ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ಪ್ರಾಮುಖ್ಯತೆ ಈ ನಾಡಿನಲ್ಲಿ ಬದುಕಿದ್ದ ಪ್ರಾಚೀನ ಜನರ

ರೀತಿ ನೀತಿಗಳನ್ನು ಇವು ಪ್ರತಿಬಿಂಬಿಸುತ್ತವೆ ಎಂಬ ಅಂಶವನ್ನು ಜನರಿಗೆ ಮನದಟ್ಟಾಗುವಂತೆ ತಿಳಿಸಿಕೊಟ್ಟರು."[೨]

ಅಂದರೆ ಶಾಸನಗಳು ರಾಜರ ಆಳ್ವಿಕೆಯ ಸಂದರ್ಭದಲ್ಲಿ ಪ್ರಚಲಿತದಲ್ಲಿದ್ದ ಪ್ರಮುಖ ದಾಖಲೆಗಳೆನಿಸಿದ್ದವು. ಆದರೆ ಅವುಗಳ ಸಂಪಾದನೆ ಮತ್ತು ಅಧ್ಯಯನ ನಡೆದಿರಲಿಲ್ಲವಷ್ಟೇ. ಈ ನಿಟ್ಟಿನಲ್ಲಿ ಭಾರತದಾದ್ಯಂತ ಶಾಸನಗಳನ್ನು ಬರೆಯುವ ಪದ್ಧತಿಯು ಪ್ರಾಚೀನ ಕಾಲದಿಂದಲೂ ಅಸ್ತಿತ್ವದಲ್ಲಿತ್ತು ಎಂಬ ಅಂಶ ಬೆಳಕಿಗೆ ಬಂತು. ಇದರಿಂದ ಒಂದು ಪ್ರದೇಶದ ಸಂಸ್ಕೃತಿಯ ಅನಾವರಣವಾಯಿತು. ಇದುವರೆವಿಗೂ ಈ ಪ್ರದೇಶದಲ್ಲಿ ಕ್ರಿ.ಪೂ.೩ನೇ ಶತಮಾನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಮೌರ್ಯ ಸಾಮ್ರಾಜ್ಯಾಧಿಪತಿ ದೇವನಾಂಪ್ರಿಯ ಪ್ರಿಯದರ್ಶಿ ಅಶೋಕನ ಶಾಸನಗಳು ಕರ್ನಾಟಕದಾದ್ಯಂತ ದೊರೆತಿರುವುದನ್ನು ಕಾಣಬಹುದು. ಈ ಮೇಲ್ಕಂಡ ಬೆಳವಣಿಗೆಗಳ ಹಿನ್ನೆಲೆಯನ್ನು ಅವಲೋಕಿಸಿದರೆ ಕರ್ನಾಟಕದಲ್ಲಿ ಶಾಸನಗಳ ಅಧಿಕೃತ ಸಂಪಾದನೆ ಮತ್ತು ಅಧ್ಯಯನ ಕಾರ್ಯವು ಕ್ರಿ.ಶ.೧೭೯೧ ರಲ್ಲಿ ಪ್ರಾರಂಭವಾಯಿತೆನ್ನಬಹುದು. ಕರ್ನಲ್ ಮೆಕೆಂಝಿಯವರಿಗೆ ಶಾಸನಗಳ ಬಗೆಗೆ ಆಸಕ್ತಿ ಬರುವ ಮುನ್ನವೆ ಇದಕ್ಕೆ ಪೂರಕವಾದ ವಾತಾವರಣ ಸಿದ್ಧಗೊಂಡಿತ್ತು. ಸರ್ ವಿಲಿಯಂಜೋನ್ಸ್‌ರು ಈ ನಿಟ್ಟಿನಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದರು. ಜೋನ್ಸ್ ಅವರು ವೃತ್ತಿಯಲ್ಲಿ ನ್ಯಾಯಾಧೀಶರಾಗಿದ್ದರು. ಪ್ರವೃತ್ತಿಯಲ್ಲಿ ಸಂಸ್ಕೃತಿಯ ಹಿತಚಿಂತಕರೆನಿಸಿ ಭಾರತದೇಶದ ಸಂಸ್ಕೃತಿಯ ಅಧ್ಯಯನಕ್ಕಾಗಿಯೇ ಅವರು ಕ್ರಿ.ಶ.೧೯೮೪ರಲ್ಲಿ ಕಲ್ಕತ್ತೆಯಲ್ಲಿ 'ಏಷ್ಯಾಟಿಕ್ ಸೊಸೈಟಿ ಆಫ್ ಬೆಂಗಾಲ್' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯವತಿಯಿಂದ ಕ್ರಿ.ಶ.೧೭೮೯ರಲ್ಲಿ 'ಏಷ್ಯಾಟಿಕ್ ರಿಸರ್ಚಸ್' ಎಂಬ ನಿಯತಕಾಲಿಕವೊಂದನ್ನು ಪ್ರಾರಂಭಿಸಿದರು. ಈ ನಿಯತಕಾಲಿಕದ ಒಂದನೇ ಸಂಪುಟದಲ್ಲಿ ೧೭೯೧ರ ವೇಳೆಗೆ ವಿಜಯನಗರದ ಅರಸರಿಗೆ ಸಂಬಂಧಿಸಿದ ಸಂಸ್ಕೃತ ಭಾಷೆಯ ಶಾಸನವನ್ನು 'ಎ ರಾಯಲ್ ಗ್ರಾಂಟ್ ಆಫ್ ಲ್ಯಾಂಡ್ ಇನ್ ಕರ್ನಾಟಕ' ಎಂಬ ಹೆಸರಿನ ಲೇಖನವನ್ನು (A Royal Grant of Land in Carnataka) ಆಂಗ್ಲಭಾಷೆಯ ಅನುವಾದ ಹಾಗೂ ಟಿಪ್ಪಣಿಯನ್ನು ಪ್ರಕಟಿಸಿದರು. ಇದು ಕಂಚಿಯಲ್ಲಿ ದೊರೆಕಿತೆನ್ನಲಾದ ಸಂಸ್ಕೃತ ಭಾಷೆಯ ಮೊದಲ ತಾಮ್ರಪಟ ಶಾಸನವೆನಿಸಿತು. ತಮಿಳುನಾಡಿನ ಕಂಚಿಯ ದೇವಾಲಯಕ್ಕೆ ದತ್ತಿ ಕೊಟ್ಟಿರುವ ವಿವರವನ್ನು ಈ ಶಾಸನ ಒಳಗೊಂಡಿದೆ. ಈ ಶಾಸನದ ಪ್ರತಿಯನ್ನು ಅಲೆಗ್ಸಾಂಡರ್ ಮ್ಯೂಕ್ಲಿಯೋಲ್ ಅವರು ಸರ್.ವಿಲಿಯಂಜೋನ್ಸ್ ಅವರಿಗೆ ಕಳುಹಿಸಿಕೊಟ್ಟಿದ್ದರು ಎಂಬ ಅಂಶ ಗಮನಾರ್ಹವಾದುದು. ವಿದ್ವಾಂಸರಾದ ಡಾ ಎಂ.ಎಂ.ಕಲಬುರ್ಗಿಯವರು ಇದನ್ನೆ 'ಕರ್ನಾಟಕದ ಪ್ರಕಟಿತ ಪ್ರಥಮ ಶಾಸನ'ವೆಂದು ಗುರುತಿಸಿದ್ದಾರೆ.[೩] ಹೀಗೆ ವಿಲಿಯಂಜೋನ್ಸ್‌ರ ಪ್ರೇರಣೆಯೊಂದಿಗೆ ಆರಂಭಗೊಂಡ ಶಾನಗಳ ಸಂಪಾದನೆ ಮತ್ತು ಅಧ್ಯಯನಕಾರ್ಯವು ಕರ್ನಲ್ ಮೆಕೆಂಝಿಯವರ ನೇತೃತ್ವದಲ್ಲಿ ಯಶಸ್ವಿಯಾಗಿ ಜರುಗಿತೆನ್ನಬಹುದು. ಕರ್ನಲ್ ಮೆಕೆಂಝಿಯವರಾದರೋ

ಟಿಪ್ಪುವಿನ ಅನಂತರದಲ್ಲಿ ಮೈಸೂರು ಪ್ರದೇಶದ ಭೌಗೋಳಿಕ ಪರಿವೀಕ್ಷಣಾಧಿಕಾರಿಯಾಗಿ ಬಂದಿದ್ದ ಇವರಿಗೆ ಶಾಸನ ಮತ್ತು ಶಿಲ್ಪಕ್ಷೇತ್ರದಲ್ಲಿ ಅಭಿರುಚಿ ಇತ್ತು. ಮಾತ್ರವಲ್ಲ ಶಾಸನಗಳು ಮತ್ತು ಹಳೆಯಗ್ರಂಥ ಸಂಪಾದನೆಯ ಕಡೆಗೆ ಲೋಕೋತ್ತರ ಸಂಗ್ರಹ ಕಾರ್ಯದಲ್ಲಿ ಮೆಕೆಂಝಿಗೆ ಬಹುದೊಡ್ಡ ನೆರವು ನೀಡಿದವರೆಂದರೆ ಭಾರತೀಯ ಪಂಡಿತ ಕೆವಲ್ಲಿ ಬೋರಯ್ಯ. ಈತನಲ್ಲಿದ್ದ ಬಹುಭಾಷಾ ಪ್ರಜ್ಞೆ, ತೀಕ್ಷ್ಣಮತಿ ಹಾಗೂ ಆಶುಕವಿಯಾಗಿದ್ದ ಇವನ ನೆರವು ಇಲ್ಲದಿದ್ದರೆ ಮೆಕೆಂಝಿಯು ಇಂತಹ ಶ್ಲಾಘನೆಗೆ ಒಳಗಾಗುತ್ತಿರಲಿಲ್ಲ. ಆದರೆ ಈತನ ಕಾರ್ಯ ಅಧಿಕಾರಿಯ (ಮೆಕೆಂಝಿಯ) ಹೆಸರಿನಲ್ಲಿ ಮುಳುಗಿ ಹೋಯಿತು ಎಂದೆನಿಸುತ್ತದೆ. ಹಾಗಾಗಿ ಮೆಕೆಂಝಿಯು ಕೆವಲ್ಲಿ ಬೋರಯ್ಯನನ್ನು ಕುರಿತು ಹೇಳಿದ ಮಾತು ಇದಕ್ಕೆ ಇಂಬು ನೀಡುತ್ತದೆ. '(When he deciphered the Halakannada Characters, inscribed on the tablet found at Dodare, which is now deposited in the Museum of the Asiatic Society, his master was highly gratified and put his name on it) ಎಂಬ ಮಾತನ್ನು ಅವಲೋಕಿಸಿದರೆ ಕನ್ನಡ ಶಾಸನವನ್ನು ಮೊತ್ತಮೊದಲು ಓದಿದ ಕೀರ್ತಿ ಕೆವಲ್ಲಿ ಬೋರಯ್ಯನಿಗೆ ಸಲ್ಲುವಂತೆ ತೋರುತ್ತದೆ.'

ಈತನ ಹೆಗ್ಗಳಿಕೆಯನ್ನು ಕುರಿತು ಹೇಳುವುದಾದರೆ ೧೮೦೭ರ ಏಷಿಯಾಟಿಕ್ ರಿಸರ್ಚಸ್ ಪತ್ರಿಕೆಯ ಒಂಬತ್ತನೆಯ ಸಂಪುಟದಲ್ಲಿ ಶ್ರವಣಬೆಳ್ಗೊಳಕ್ಕೆ ಸಂಬಂಧಿಸಿದ ಬುಕ್ಕರಾಯನ ಧರ್ಮಶಾಸನವನ್ನು ಪ್ರಕಟಿಸಿದನು. ಪ್ರಾಯಶಃ ಇದೇ ಪ್ರಪ್ರಥಮ ಕನ್ನಡ ಭಾಷೆಯ ಸಂಪಾದಿತ ಪ್ರಕಟಿತ ಶಾಸನವೆಂಬ ಕೀರ್ತಿಗೆ ಭಾಜನವಾಯಿತು ಎಂದೆನಿಸುತ್ತದೆ. ಇದಕ್ಕೆ ಪೂರಕವಾದ ಅಂಶವೊಂದು ಈ ಹೇಳಿಕೆಗೆ ಇಂಬು ನೀಡುತ್ತದೆ. ಮೆಕೆಂಝಿಯು ಎಸಿಯಾಟಿಕ್ ಸೊಸೈಟಿಗೆ ಕಳುಹಿಸಲಾದ ಬುಕ್ಕರಾಯನ ಶಾಸನವನ್ನು ಕುರಿತು' Ancient Sculpture and Insription at Sravana goody near madarasee (Characters un known) ಎಂದು ಶಾಸನದ ಚಿತ್ರದ ಕೆಳಗೆ ಬರೆದು ಪ್ರಕಟಿಸಿರುತ್ತಾನೆ. ಆದರೆ ಈ ಶಾಸನವನ್ನು ಪಂಡಿತನಾದ ಕೆವಲ್ಲಿ ಬೋರಯ್ಯನು ಓದಲು ಸಮರ್ಥನಿದ್ದನು ಎನ್ನುವುದಕ್ಕೆ ಪೂರಕ ಆಧಾರ ಈ ಹೇಳಿಕೆಯಿಂದ ದೊರಕುತ್ತದೆ. Information collected from Swamy at mudgere and translated for Mackenzie by cavelly Boria, Brahman ಎಂಬ ಒಕ್ಕಣೆಯನ್ನು ಅವಲೋಕಿಸಿದಾಗ ಈ ಮಾತು ಮನದಟ್ಟಾಗುತ್ತದೆ. ಈ ಶಾಸನದ ಮಹತ್ವವೆಂದರೆ ಬುಕ್ಕರಾಯನು ತನ್ನ ಆಳ್ವಿಕೆಯ ಸಮಯದಲ್ಲಿ ಉಂಟಾದ ಜೈನರು ಮತ್ತು ವೈಷ್ಣವರ ನಡುವಿನ ವಿವಾದವನ್ನು ಬಗೆಹರಿಸುವ ವಿವರವು ಪ್ರಸ್ತುತ ಶಾಸನದಲ್ಲಿ ದಾಖಲಿಸಲಾಗಿದೆ. ಈ ಶಾಸನವು ೧೮೦೭ರಲ್ಲಿ ಪ್ರಕಟಗೊಂಡ ಕನ್ನಡಭಾಷೆಯ ಸಂಪಾದಿತ ಪ್ರಥಮ ಶಾನವೆಂಬ ಹೆಗ್ಗಳಿಕೆಗೆ ಕಾರಣವಾಗಿದೆ. ಇನ್ನೊಂದು ಮಹತ್ವದ ವಿಷಯವೆಂದರೆ ಇದೇ ಸಂಪುಟದಲ್ಲಿ ಕೋಲ್‌ಬ್ರುಕ್ ಎಂಬ ವಿದ್ವಾಂಸ ಶಾಸನದ ಮಹತ್ವವನ್ನು

ಕುರಿತು ಉಲ್ಲೇಖ ಮಾಡುವ ಸಂದರ್ಭದಲ್ಲಿ ಹೇಳಿರುವ ಮಾತು ಗಮನಾರ್ಹವೆನಿಸುತ್ತದೆ. "In the Scarcity of ancient history of the Hindu srace importance is Jartly attached to all genuine monuments and especially inscriptions on stone and metal which are occasionally discovered through various accidents' ಎಂದು ವಿವರಿಸಿ ಮೆಕೆಂಝಿಯು ಏಷಿಯಾಟಿಕ್ ಸೊಸೈಟಿಗೆ ಕಳುಹಿಸಿದ ಶಾಸನಗಳಲ್ಲಿ ಎರಡು ತಾಮ್ರಶಾಸನಗಳು ವಿಜಯನಗರದ ಆಳ್ವಿಕೆಗೆ ಸಂಬಂಧಿಸಿದ್ದಾಗಿದೆ ಎಂಬುದಾಗಿ ಅನುವಾದಿಸಿದ್ದಾರೆ.[೫]

ಈ ನಡುವೆ ಕ್ರಿ.ಶ.೧೮೨೧ರಲ್ಲಿ ಆಗಮಿಸಿದ ಸರ್. ಜಾನ್ ಮಾಲ್‌ಕಮ್ ಎಂಬುವವರು ಭಾರತದ ಪ್ರಾಚೀನ ಶಾಸನಗಳನ್ನು ಕುರಿತು ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸುತ್ತಾರೆ. ಶಾಸನ ಸಂಪತ್ತು ಮಹತ್ವವಾದುದೆಂದು ಮೌಂಟ್ ಸ್ಟುಯರ್ಟ್ ಎಲ್ವಿನ್‌ಸ್ಟನ್ ಅವರಿಗೆ ಪತ್ರ ಬರೆಯುತ್ತಾರೆ. ಆ ಪತ್ರದ ಔಚಿತ್ಯವನ್ನರಿತ ಎಲ್ವಿನ್‌ಸ್ಟನ್ ಅವರು ಬೇರೆ ಬೇರೆ ಜಿಲ್ಲೆಗಳ ಅಧಿಕಾರಿಗಳಿಗೆ ಪತ್ರ ಬರೆಯುವ ಮುಖೇನ ಶಾಸನಗಳ ಸಂಗ್ರಹದ ಪರಿಚಯಾತ್ಮಕ ವಿಚಾರಗಳನ್ನು ತಿಳಿಸಿಕೊಡುತ್ತಾರೆ. ಈ ಪತ್ರದ ಫಲಶ್ರುತಿಯೆಂಬಂತೆ 'ಬೆಯ್ಲಿ' ಎಂಬ ವಿದ್ವಾಂಸನು ಥಾಣದಿಂದ ಕೆಲವು ತಾಮ್ರಪಟಗಳನ್ನು ಸಂಗ್ರಹಿಸಿ ಕಳುಹಿಸಿಕೊಡುತ್ತಾರೆ. ಅಲ್ಲದೆ ಈ ವೇಳೆಗೆ ಕನ್ನಡನಾಡಿನಿಂದಲೂ ೧೪ ಶಾಸನಗಳ ಪ್ರತಿಗಳು ಬರುತ್ತವೆ. ಹೀಗೆ ಸಂಗ್ರಹಿಸಲಾದ ಶಾಸನಗಳ ಪ್ರತಿಗಳನ್ನು ಎಲ್ವಿನ್‌ಸ್ಟನ್‌ರು ಮುಂಬೈ ಸರ್ಕಾರದ ಕಾರ್ಯದರ್ಶಿಯಾಗಿದ್ದ ಹೆನ್ರಿವೆಥನ್ ಅವರಿಗೆ ಕಳುಹಿಸಿಕೊಟ್ಟಿರುತ್ತಾರೆ. ಅವುಗಳನ್ನು ಪರಿಶೀಲಿಸಿ ಅಧ್ಯಯನ ಮಾಡಿದ ಹೆನ್ರಿವೆಥನ್ ಅವರು ೧೨ ಶಾಸನಗಳನ್ನು ಕುರಿತು ಸಾರಾಂಶ ಸಹಿತವಾದ ವಿಸ್ತಾರವಾದ ಲೇಖನವೊಂದನ್ನು ಕ್ರಿ.ಶ. ೧೮೩೫ರಲ್ಲಿ ಪ್ರಕಟಿಸಿರುವುದನ್ನು ಗಮನಿಸಬಹುದಾಗಿದೆ.

ಈ ಲೇಖನವನ್ನು ಅಧ್ಯಯನ ಮಾಡಿದ ಪ್ರೊ.ವಿಲ್ಸನ್ ಇವುಗಳನ್ನು ಕುರಿತು ಅಲ್ಲಿಯೇ ಕುರಿತು ಟಿಪ್ಪಣಿ ಬರೆದಿರುವುದನ್ನು 'Journal of the Royal Asiatic Society' ಯಿಂದ ಪ್ರಕಟಿಸಲಾದ ಎರಡು. ಮೂರು, ನಾಲ್ಕು, ಐದನೇ ಸಂಪುಟಗಳಲ್ಲಿ ಶಾಸನ ಪಾಠ ಸಹಿತ ಭಾಷಾಂತರಗಳನ್ನು ವೆಥೆನ್ ನೀಡಿರುವುದನ್ನು ಉಲ್ಲೇಖಿಸಬಹುದಾಗಿದೆ.[೬]

ಕ್ರಿ.ಶ.೧೮೩೭ರಲ್ಲಿ ಪ್ರಕಟವಾದ ಏಷಿಯಾಟಿಕ್ ಸೊಸ್ಯಟಿಯ ಆರನೇ ಸಂಪುಟವಿದೆ. ಅದರಲ್ಲಿ ವೆಂಕಟಬೋರಯ್ಯನು ಕಳುಹಿಸಿದ ಒಂದು ಶಾಸನದ ನಕಲು ಮತ್ತು ಸಾರಾಂಶಸಹಿತ ವಿವರಗಳನ್ನು ಜೇಮ್ಸ್ ಪ್ರಿನ್ಸೆಪ್ ಪ್ರಕಟಿಸಿದ್ದಾರೆ. ಹೀಗೆ ಕನ್ನಡ ಶಾಸನಗಳ ಸಂಪಾದನೆಗೆ ಮತ್ತು ಅಧ್ಯಯನ ಕಾರ್ಯದಲ್ಲಿ ಹಲವು ವಿದ್ವಾಂಸರು ಮಹತ್ತರ ಕಾಣಿಕೆ ನೀಡಿರುವುದನ್ನು ಗಮನಿಸಬಹುದಾಗಿದೆ. ಅದರಲ್ಲೂ ಕ್ರಿ.ಶ.೧೮೧೭ರ ಅವಧಿಯಲ್ಲಿ ಕರ್ನಲ್ ಮೆಕೆಂಝಿಯವರು ಮಾಡಿದ ಸಾರ್ಥಕ ಸೇವೆ

ಗಮನಾರ್ಹವೆನಿಸುತ್ತದೆ. ಸುಮಾರು ೩೦೦ ಶಾಸನಗಳನ್ನು ಈ ವೇಳೆಗಾಗಲೇ ಸಂಗ್ರಹಿಸಿದ್ದರು. ಮುಂದೆ ಕ್ರಿ.ಶ. ೧೮೨೧ರ ವೇಳೆಗೆ ಅವರು ಸಂಗ್ರಹ ಮಾಡಲಾದ ಶಾಸನಗಳ ಸಂಖ್ಯೆ ೬೦೦೦ಕ್ಕೆ ಮುಟ್ಟುತ್ತದೆ. ಇವುಗಳಲ್ಲಿ ಬಹುಪಾಲು ಶೇ.೯೮ರಷ್ಟು ಶಾಸನಗಳು ಕರ್ನಾಟಕಕ್ಕೆ ಸಂಬಂಧಿಸಿದ ಶಾಸನಗಳು ಎಂಬುದು ಉಲ್ಲೇಖನೀಯ. ಈ ಅಲ್ಪ ಅವಧಿಯಲ್ಲಿ ಸಾಕಷ್ಟು ಶಾಸನಗಳನ್ನು ಸಂಗ್ರಹಿಸಿದ ಹೆಗ್ಗಳಿಕೆಗೆ ಕರ್ನಲ್ ಮೆಕೆಂಝಿ ಪಾತ್ರರಾಗುತ್ತಾರೆ. ಇದಕ್ಕೆ ಪೂರಕವಾಗಿ ಕೆವೆಲ್ಲಿ ವೆಂಕಟಬೋರಯ್ಯ, ಬ್ರೌನ್ಸ್, ಕೋಲ್‌ಬ್ರುಕ್, ಹೆನ್ರಿ ವೆಥನ್, ವಿಲ್ಸನ್ ಅವರು ಕನ್ನಡ ಶಾಸನಗಳ ಸಂಪಾದನೆ ಮತ್ತು ಪ್ರಕಟಣೆಗೆ ತೋರಿದ ಆಸಕ್ತಿ ಅನುಕರಣೀಯ. ಈ ಹಿನ್ನೆಲೆಯಲ್ಲಿ ಅವುಗಳನ್ನು ಪ್ರಚುರಪಡಿಸಿದ ರಾಯಲ್ ಏಷಿಯಾಟಿಕ್ ರಿಸರ್ಚ್ ಸೊಸೈಟಿ ಹಾಗೂ ರಾಂಯಲ್ ಏಷಿಂಯಾಟಿಕ್ ಸೊಸೈಟಿಂಯ ಪಾತ್ರ ಬಹುಮುಖ್ಯವಾದುದಾಗಿದೆ.

ಶಾಸನಗಳ ಸಂಪಾದನೆಯ ಚರಿತ್ರೆಯಲ್ಲಿ ಎರಡನೆಯ ಘಟ್ಟವೆಂದರೆ ಅದು ಸರ್.ವಾಲ್ಟರ್ ಇಲಿಯಟ್ ಯುಗ. ಇವನ ಕಾಲಘಟ್ಟ ಕ್ರಿ.ಶ.೧೮೩೭-೧೮೭೦ರವರೆಗೆ. ಇಲಿಯಟ್‌ನು ಮದ್ರಾಸ್‌ನಲ್ಲಿ ಸಿವಿಲ್ ಸರ್ವಿಸಸ್ ಅಧಿಕಾರಿಯಾಗಿದ್ದನು. ಈತನು ಕನ್ನಡ ಶಾಸನಗಳ ಸಂಪಾದನೆ ಮತ್ತು ಅಧ್ಯಯನ ಕಾರ್ಯದಲ್ಲಿ ಗಣನೀಯ ಸೇವೆಯನ್ನು ಸಲ್ಲಿಸಿರುತ್ತಾನೆ. ಇವನ ಕಾಲದಲ್ಲಿ ಶಾಸನಗಳನ್ನು ವ್ಯವಸ್ಥಿತವಾಗಿ ಸಂಪಾದಿಸುವ ಮತ್ತು ಅಭ್ಯಾಸಮಾಡುವ ಕ್ರಮ ಆರಂಭವಾಯಿತು. ಅದು ಮುಂಬೈ ಕರ್ನಾಟಕ, ನಿಜಾಂ ಕರ್ನಾಟಕದ ಪಶ್ಚಿಮ ಭಾಗ ಹಾಗೂ ಹಳೆಯ ಮೈಸೂರು ಪ್ರದೇಶದ ಉತ್ತರಭಾಗದಲ್ಲಿ ಈತನು ಸಂಪಾದಿಸಲಾದ ಒಟ್ಟು ಶಾಸನಗಳ ಸಂಖ್ಯೆ ೧೩೦೦ ಎನ್ನಲಾಗಿದೆ. ಈ ಶಾಸನಗಳಲ್ಲಿ ಪ್ರಮುಖವೆನಿಸಿರುವ ೫೯೫ ಶಾಸನಗಳನ್ನು ಪ್ರತ್ಯೇಕಿಸಿ 'ಕರ್ನಾಟಕ್ ದೇಶ್ ಇನ್‌ಸ್ಕ್ರಿಪ್ಷನ್ಸ್' ಎನ್ನುವ ಹೆಸರಿನ ನಾಲ್ಕು ಕೈ ಬರಹದ ಪ್ರತಿಗಳನ್ನು ಸಿದ್ಧಪಡಿಸಿದನು. ಕನ್ನಡನಾಡಿನ ಈ ಶಾಸನಗಳನ್ನು ಆಧರಿಸಿ ಇಲಿಯಟ್ ಇವರು ಕನ್ನಡ ರಾಜಮನೆತನಗಳಲ್ಲಿ ಪ್ರಸಿದ್ಧರೆನಿಸಿದ ಕದಂಬರು, ಚಾಲುಕ್ಯರು ಮುಂತಾದ ರಾಜವಂಶಗಳ ಇತಿಹಾಸವನ್ನು ಕಟ್ಟುವಲ್ಲಿ ಪ್ರಯತ್ನಿಸಿದರು. ಜೇಮ್ಸ್ ಪ್ರಿನ್ಸೆಪ್ ಎನ್ನುವ ವಿದ್ವಾಂಸರು ಪ್ರಾಚೀನ ಭಾರತೀಯ ಲಿಪಿಗಳ ಸಹಾಯದಿಂದ ಹತ್ತನೆಯ ಶತಮಾನದ ಕನ್ನಡ ಶಾಸನಗಳನ್ನು ಸಂಪಾದಿಸಿ ಓದಿದರು. ಈ ದಿಸೆಯಲ್ಲಿ ತಾವು ಅರ್ಥೈಸಲಾದ ಶಾಸನಗಳ ಸಾರಾಂಶವನ್ನು ಪ್ರಕಟಪಡಿಸಿದರು.

ಕ್ರಿ.ಶ. ೧೮೩೭ 'ಜರ್ನಲ್ ಆಫ್ ದಿ ಏಷಿಯಾಟಿಕ್ ಸೊಸೈಟಿ ಆಫ್ ಬೆಂಗಾಲ್'ನ ಆರನೇ ಸಂಪುಟದಲ್ಲಿ ೧೧ನೇ ಶತಮಾನಕ್ಕೆ ಸೇರಿತ್ತೆನ್ನಲಾದ ಕನ್ನಡ ಶಾಸನವೊಂದನ್ನು ಇಲಿಯಟ್ ಅವರು ಸಂಪಾದಿಸಿ ಪ್ರಕಟಿಸಿದರು. ಈ ನಿಟ್ಟಿನಲ್ಲಿ ವಿಲಿಯಂ ಹೆನ್ರಿ ವೆಥನ್ ಎನ್ನುವ ವಿದ್ವಾಂಸರು ಬೆಳಗಾವಿಯಲ್ಲಿ ದೊರೆತ ಕೆಲವು ಪ್ರಮುಖ ಶಾಸನಗಳನ್ನು ಕ್ರಿ.ಶ.೧೮೩೯ರಲ್ಲಿ ಪ್ರಕಟಿಸಿದರು. ಈ ಲೇಖನವು ವಿಸ್ತಾರವೆನಿಸಿದ್ದು ಇದು ಪೂರ್ವದ

ಹಳಗನ್ನಡ ಭಾಷೆಯಲ್ಲಿ ರಚಿಸಲಾದ ಕೆಲವು ಜೈನ ಶಾಸನಗಳು ಹಾಗೂ ತಾಮ್ರಪಟಗಳನ್ನು ಅನುವಾದಿಸಿ ದೇವನಾಗರಿ ಲಿಪಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಅಲ್ಲದೆ ಇಲಿಯಟ್ ಅವರು ಭಾರತೀಯ ಸಂಸ್ಕೃತಿಯ ಬಗೆಗೆ ತಿಳಿದುಕೊಳ್ಳುವ ಸಲುವಾಗಿ ಅಪಾರ ಪ್ರಮಾಣದ ಶ್ರಮ ವಿನಿಯೋಗ ಮಾಡಿರುವುದು ಭಾರತೀಯ ಚರಿತ್ರೆಯ ದೃಷ್ಟಿಯಿಂದ ಮಹತ್ವಪೂರ್ಣ ಬೆಳವಣಿಗೆಯೇ ಸರಿ. ಇವರ ಪ್ರಮುಖ ಲೇಖನಗಳಲ್ಲಿ ಒಂದಾದ 'Hindu Inscription' ಎನ್ನುವ ಲೇಖನದಲ್ಲಿ ಪ್ರಾಚೀನ ಕರ್ನಾಟಕದ ಐತಿಹಾಸಿಕ ಮಹತ್ವವನ್ನು ಸಾರುವ ಕದಂಬರು, ಚಾಲುಕ್ಯರನ್ನೊಳಗೊಂಡ ಪ್ರಮುಖ ರಾಜಮನೆತನಗಳ ಐತಿಹಾಸಿಕ ಮತ್ತು ಸಾಂಸ್ಕೃತಿಕ ಮಹತ್ವದ ವಿಚಾರಗಳನ್ನು ಅನಾವರಣಗೊಳಿಸಿದ್ದಾರೆ.

ಈ ಅವಧಿಯಲ್ಲಿಯೇ ಮೇಜರ್ಸ್ ಡಿಕನ್ಸ್ ಎನ್ನುವವರು ಸುಮಾರು ೬೦ ಶಾಸನಗಳ ಚಿತ್ರಗಳನ್ನು ಸಂಗ್ರಹಿಸಿದರು. ಈ ಶಾಸನಗಳು ಬೆಳಗಾವಿ, ಹರಿಹರ ಮತ್ತು ಚಿತ್ರದುರ್ಗ ಪ್ರದೇಶಗಳಿಗೆ ಸಂಬಂಧಿಸಿದ ಮಹತ್ವದ ದಾಖಲೆಗಳೆನಿಸಿವೆ. ಈ ಶಾಸನಗಳನ್ನು ಕ್ರಿ.ಶ.೧೮೬೫ರಲ್ಲಿ ಮೈಸೂರು ಸರಕಾರವು ಪ್ರಕಟಪಡಿಸಿರುವುದು ಸಂಪಾದನಾ ಕ್ಷೇತ್ರದಲ್ಲಿ ಮಹತ್ವದ ಬೆಳವಣಿಗೆ ಎನಿಸಿತು. ಈ ನಿಟ್ಟಿನಲ್ಲಿ ಇನ್ನು ಹಲವು ಪಾಶ್ಚಿಮಾತ್ಯ ವಿದ್ವಾಂಸರುಗಳು ಶಾಸನಗಳ ಸಂಪಾದನೆ ಮತ್ತು ಪ್ರಕಟಣೆ ಕಾರ್ಯದಲ್ಲಿ ಪ್ರಮುಖರೆನಿಸಿದ್ದಾರೆ. ಅವರುಗಳಲ್ಲಿ ಡಾ.ಪಿಗು, ಕರ್ನಲ್‌ಬ್ರನ್ಸ್, ಹೋಪ್, ಲ್ಯಾಸೆನ್ ಇವರುಗಳ ಸೇವೆ ಅವಿಸ್ಮಣೀಯವೆನಿಸುತ್ತದೆ. ಈ ಎರಡು ಕಾಲಘಟ್ಟಗಳಲ್ಲಿ ಶಾಸನಗಳ ಸಾರವನ್ನು ಭಾರತದ್ಯಾದಂತ ಪಸರಿಸಿದ ಏಷಿಯಾಟಿಕ್ ರಿಸರ್ಚ್‌ಸ್ ಜನರಲ್ ಆಫ್ ದಿ ರಾಯಲ್ ಏಷಿಯಾಟಿಕ್ ಸೊಸೈಟಿ ಹಾಗೂ ಜನರಲ್ ಆಫ್ ಏಷಿಯಾಟಿಕ್ ಸೊಸ್ಯಟಿ ಆಫ್ ಬೆಂಗಾಲ್ ಮತ್ತು ಮದ್ರಾಸ್ ಜನರಲ್ ದಿ ಲಿಟರೇಚರ್ ಅಂಡ್ ಸೈನ್ಸ್ ಮುಂತಾದವು ನಿರ್ಣಾಯುಕ ಪಾತ್ರವನ್ನು ನಿರ್ವಹಿಸಿರುವುದನ್ನು ಮನಗಾಣಬಹುದಾಗಿದೆ.

ಶಾಸನಗಳ ಸಂಪಾದನೆ ಮತ್ತು ಅಧ್ಯಯನ ಕ್ಷೇತ್ರದಲ್ಲಿ ಪ್ರಮುಖಪಾತ್ರ ವಹಿಸಿರುವ ಶ್ರೇಷ್ಠ ವಿದ್ವಾಂಸರಲ್ಲಿ ಜೆ.ಎಫ್.ಫ್ಲೀಟ್ ಮತ್ತು ಬೆಂಜಮಿನ್ ಲೂಯಿರೈಸ್ ಅವರು ಅಶ್ವಿನಿ ದೇವತೆಗಳೆಂದೇ ಪ್ರಸಿದ್ಧಿ ಪಡೆದಿದ್ದಾರೆ. ಶಾಸನ ಕ್ಷೇತ್ರದಲ್ಲಿ ಇವರದು ಅವಿಸ್ಮರಣೀಯವಾದ ಸೇವೆಯೆನಿಸಿದೆ. ಇವರುಗಳಲ್ಲಿ ಜೆ.ಎಫ್ ಫ್ಲೀಟ್ ಎಂದೇ ಖ್ಯಾತಿಯಾದ ಇವರ ಪೂರ್ಣಹೆಸರು 'ಜಾನ್ ಫೇತಮಲ್ ಫ್ಲೀಟ್' ಹಾಗೂ ಬಿ.ಎಲ್.ರೈಸ್ ಎಂದೇ ಜನಜನಿತರಾದ ಇವರ ಪೂರ್ಣ ಹೆಸರು 'ಬೆಂಝಿಮಿನ್ ಲೂಯಿ ರೈಸ್'. ಇವರೀರ್ವರು ಕರ್ನಾಟಕದ ಶಾಸನ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು. ಇವರ ಕಾರಣದಿಂದ ಕನ್ನಡ ಶಾಸನಗಳ ಕುರಿತ ವ್ಯವಸ್ಥಿತ ಅಧ್ಯಯನ ಆರಂಭಗೊಂಡಿತು.

ಡಾ.ಫ್ಲೀಟ್‌ರು ಕ್ರಿ.ಶ.೧೮೬೫ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್‌ಗೆ ಆಯ್ಕೆಯಾಗಿ ಕ್ರಿಶ ೧೮೬೭ರಲ್ಲಿ ಮುಂಬೈ ಸರ್ಕಾರದ ಕಂದಾಯ ಇಲಾಖೆಯಲ್ಲಿ ನೌಕರಿಗೆ ಸೇರಿದರು.

ಅವರು ಸುಮಾರು ೩೦ ವರ್ಷಗಳವರೆಗೆ ವಿವಿಧ ಹುದ್ದೆಗಳಲ್ಲಿ ಕರ್ತವ್ಯವನ್ನು ನಿರ್ವಹಿಸಿದರು. ಈ ಅವಧಿಯಲ್ಲಿ ತಮ್ಮ ವೃತ್ತಿಯ ಜೊತೆ ಜೊತೆಯಲ್ಲಿಯೇ ಕನ್ನಡ, ಸಂಸ್ಕೃತ ಮತ್ತು ಮರಾಠಿ ಮುಂತಾದ ಭಾಷೆಗಳಿಗೆ ಅಪೂರ್ವ ಸೇವೆಯನ್ನು ದಾಖಲಿಸಿದ್ದಾರೆ. ಶಾಸನಾಧ್ಯಯನಕ್ಕೆ ಸಂಬಂಧಿಸಿದಂತೆ ಅವರ ಕಾರ್ಯಯೋಜನೆ ವೈಶಾಲ್ಯವಾದುದು. ಅಲ್ಲದೆ ಶಾಸನ ಸಂಗ್ರಹ ಕಾರ್ಯದಲ್ಲಿ ಪ್ರತಿಯೊಂದು ಶಾಸನ ಸಂಪಾದನಾ ಸಂದರ್ಭದಲ್ಲಿಯೂ ಹತ್ತು ಹಲವು ರೀತಿಯ ಟಿಪ್ಪಣಿಗಳನ್ನು ಮಾಡಿಕೊಡುವ ಮೂಲಕ ಹಲವು ಐತಿಹಾಸಿಕ ಘಟನೆಗಳ ಮೇಲೆ ತಮ್ಮ ಅಭಿಪ್ರಾಯದೊಂದಿಗೆ ಸತ್ಯವನ್ನು ಅನಾವರಣಗೊಳಿಸಿದ್ದಾರೆ. ಶಾಸನ ಕ್ಷೇತ್ರದ ಹಲವು ಲೇಖನಗಳನ್ನು ಪ್ರಕಟಿಸಿದ 'ಇಂಡಿಯನ್ ಆ್ಯಂಟಿಕ್ವರಿ' ಎಂಬ ಪತ್ರಿಕೆಯು ಕ್ರಿ.ಶ.೧೮೭೨ರಲ್ಲಿ ಪ್ರಾರಂಭವಾಯಿತು. ಆ ಪತ್ರಿಕೆಯು ಭಾರತದೇಶ ಮಾತ್ರವಲ್ಲದೆ, ದೇಶ ವಿದೇಶಗಳ ಸಂಶೋಧಕರ ಲೇಖನಗಳನ್ನು ಪ್ರಕಟಿಸಿತು. ಸುಮಾರು ೬೨ ಸಂಪುಟಗಳನ್ನು ಪ್ರಕಟಿಸಿ ಈ ಪತ್ರಿಕೆಯು ಶಾಸನಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದೆ. ಈ ಪತ್ರಿಕೆಗೆ ಮೊದಲ ಸಂಪಾದಕರಾಗಿದ್ದರುವ ಡಾ. ಜೇಮ್ಸ್‌ಬರ್ಗೆಸ್. ಈ ಪತ್ರಿಕೆಗೆ ಫ್ಲೀಟ್‌ರು ಸಹ ಹಲವು ವಿದ್ವತ್ಪೂರ್ಣವಾದ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಿರುವುದನ್ನು ಕಾಣಬಹುದು.[೭]

ಅವುಗಳಲ್ಲಿ –

೧. ಮುಂಬೈ ಪ್ರಾಂತ್ಯದ ಕನ್ನಡ ಜಿಲ್ಲೆಗಳ ರಾಜಮನೆತನಗಳು(೧೮೯೬) ಈ ಗ್ರಂಥದ ರಚನೆಯಲ್ಲಿ ಅವರು ಹಲವಾರು ಶಾಸನಗಳ ಆಧಾರವನ್ನು ಪಡೆದಿದ್ದಾರೆ.
೨. ಮೊದಲಿನ ಗುಪ್ತರಾಜರು ಮತ್ತು ಅವರ ಉತ್ತರಾಧಿಕಾರಿಗಳ ಶಾಸನಗಳು(೧೮೮೮)
೩. ಪಾಲಿ, ಸಂಸ್ಕೃತ ಮತ್ತು ಹಳೆಗನ್ನಡ ಶಾಸನಗಳು
೪. ಭಾರತೀಯ ಶಾಸನಶಾಸ್ತ್ರ(೧೯೦೭) ಫ್ಲೀಟ್ ರ ಈ ಕಾರ್ಯ ಚಟುವಟಿಕೆಯ ಹಿಂದೆ ಪ್ರೊ.ಕೀಲ್‌ಹಾರ್ನ್ ಅವರ ಪಾತ್ರ ಬಹಳ ಮಹತ್ವದ್ದೆನಿಸಿದೆ. ಇವುಗಳೇ ಅಲ್ಲದೆ ಇದೇ ಕಾಲಘಟ್ಟದಲ್ಲಿ 'ಎಪಿಗ್ರಾಫಿಯ ಇಂಡಿಕಾ' ಪತ್ರಿಕೆಯು ಆರಂಭಗೊಂಡಿತು. ಈ ಪತ್ರಿಕೆಯಲ್ಲಿ ಫ್ಲೀಟ್ ಮತ್ತು ಬಿ.ಎಲ್.ರೈಸ್ ಅವರು ಒಂದೊಂದು ಪತ್ರಿಕೆಯನ್ನು ಪ್ರಕಟಿಸಿರುತ್ತಾರೆ. ಅವರುಗಳಲ್ಲಿ ಫ್ಲೀಟ್‌ರದು 'Some records of the Rastrakuta kings of malakhed' ಎನ್ನುವ ಶೀರ್ಷಿಕೆಯ ಅಡಿಯಲ್ಲಿ ಸುಮಾರು ೨೦ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿರುವುದು ಗಮನಾರ್ಹ. ಇದಲ್ಲದೆ ನಾಲ್ಕನೆಯ ಸಂಪುಟದಲ್ಲಿ ಡಾ.ಬರ್ಗೆಸ್ ಅವರ ಸಂಪಾದಕತ್ವದಲ್ಲಿ 'Sanskrit and old canarese Inscriptions' ಎಂಬ ಶಿರೋನಾಮೆಯ ಮೂಲಕ ಒಟ್ಟು ೧೯೬ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದ ಹೆಗ್ಗಳಿಕೆ ಇವರದಾಗಿದೆ.[೮] ಇದೇ ಸುಮಾರಿಗೆ ಕಾಶಿನಾಥ್ ತ್ರಿಂಬಕ್ ತೆಲಂಗ

ಎನ್ನುವ ವಿದ್ವಾಂಸರು ಕದಂಬರ ಕೆಲವು ತಾಮ್ರಶಾಸನಗಳನ್ನು ೧೮೭೬ರಲ್ಲಿ ಪ್ರಕಟಿಸಿರುತ್ತಾರೆ.

ಶಾಸನಗಳ ವಿಚಾರವನ್ನು ಪ್ರಸ್ತಾಪಿಸುವಾಗ ನೆನಪಿಸಲೇಬೇಕಾದ ಮತ್ತೊಂದು ಹೆಸರೇ ಬಿ.ಎಲ್.ರೈಸ್ ಅವರದು. ಇವರ ಕಾಲಾವಧಿಯಲ್ಲಿ ಅಂದರೆ ೧೮೭೯ರಲ್ಲಿ "Mysore Inscriptions" ಪ್ರಕಟಗೊಂಡಿತು. ಇದರಲ್ಲಿ ಮೇಜರ್ ಡಿಕ್ಸನ್ ಅವರು ಸಂಗ್ರಹಿಸಿ ಪ್ರಕಟಿಸಿರುವ ಶಾಸನಗಳು ಒಳಗೊಂಡಿವೆ. ಇದಷ್ಟೇ ಅಲ್ಲದೆ ೧೮೮೬ರಲ್ಲಿ ರೈಸ್ ಅವರಿಂದ ಪ್ರಕಟವಾದ 'Coorg Inscriptions' ಎಂಬುದನ್ನು 'Epigraphia Carnatica'ದ ಮೊದಲ ಸಂಪುಟದಲ್ಲಿ ಪ್ರಕಟಗೊಂಡಿರುವುದನ್ನು ಕಾಣಬಹುದು. ಮುಂದೆ ಇವರ ಶಾಸನ ಸಂಪಾದನೆಯ ಕೆಲಸ ನಿರಂತರವಾಗಿ ನಡೆದಿರುವುದಕ್ಕೆ ಹಲವು ಸಂಪುಟಗಳು ಸಾಕ್ಷಿಯೆನಿಸಿವೆ, ಮಾತ್ರವಲ್ಲ ಅವರ ಸಾಧನೆಯ ಶಿಖರಗಳಂತಿವೆ.

ಅವುಗಳಲ್ಲಿ –

EC 11	–	ಶ್ರವಣಬಳಗೊಳ(೧೮೮೯)
EC 111-1	–	ಮೈಸೂರು ಜಿಲ್ಲೆ(೧೮೯೪)
EC 1V-ii	–	ಮೈಸೂರು ಜಿಲ್ಲೆ(೧೮೯೮)
EC V-1	–	ಹಾಸನ ಜಿಲ್ಲೆ–ಪ್ರಸ್ತಾವನೆ, ರೋಮನ್ ಲಿಪಿಪಾಠ ಭಾಷಾಂತರ(೧೯೦೨)
EC V-ii	–	ಹಾಸನ ಜಿಲ್ಲೆ–ಶಾಸನಗಳ ಕನ್ನಡ ಪಾಠ(೧೯೦೨)
EC V1	–	ಕಡೂರ ಜಿಲ್ಲೆ(೧೯೦೨)
EC V11-1	–	ಶಿವಮೊಗ್ಗ ಜಿಲ್ಲೆ(೧೯೦೨)
EC V111-ii	–	ಶಿವಮೊಗ್ಗ ಜಿಲ್ಲೆ(೧೯೦೪)
EC 1X	–	ಬೆಂಗಳೂರು ಜಿಲ್ಲೆ(೧೯೦೫)
EC X- ii	–	ಕೋಲಾರಜಿಲ್ಲೆ– ಪ್ರಸ್ತಾವನೆ, ರೋಮನ್ ಲಿಪಿಪಾಠ ಭಾಷಾಂತರ (೧೯೦೫)
EC Xii	–	ಕೋಲಾರ ಜಿಲ್ಲೆ –ಶಾಸನಗಳ ಕನ್ನಡ ಪಾಠ(೧೯೦೫)
EC XI	–	ಚಿತ್ರದುರ್ಗ ಜಿಲ್ಲೆ(೧೯೦೩)
EC XII	–	ತುಮಕೂರು ಜಿಲ್ಲೆ (೧೯೦೪)

ಈ ಮೇಲ್ಕಂಡ ಸಂಪುಟಗಳು ಅನಾವರಣಗೊಂಡಿರುವುದನ್ನು ಗಮನಿಸಬಹುದಾಗಿದೆ.[೯]

ಬಿ.ಎಲ್.ರೈಸ್ ಅವರು ಮೈಸೂರಿನ ಪುರಾತತ್ವ ಇಲಾಖೆಯ ಪ್ರಥಮ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಹೊರತರಲಾದ ಈ ಎಲ್ಲಾ ಒಟ್ಟು ಶಾಸನಗಳು ಸುಮಾರು ೮೮೬೯ ಶಾಸನಗಳೆಂದರೆ ಕೇಳುಗರಿಗೆ ಮೈರೋಮಾಂಚನವಾಗದೇ ಇರದು. ಇಷ್ಟೊಂದು ಸಂಖ್ಯೆಯ ಶಾಸನಗಳನ್ನು ಗುರುತಿಸುವುದೇ ಕಷ್ಟವಾದ ಸಂದರ್ಭದಲ್ಲಿ ಅವುಗಳನ್ನು ಗುರುತಿಸಿ ಸಂಪಾದಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ ರೈಸ್ ಅವರ ಸಾಧನೆ ಅನುಕರಣೀಯ ಮಾತ್ರವಲ್ಲ ಅವಿಸ್ಮರಣೀಯವೂ ಎನಿಸಿದೆ.

ಕರ್ನಾಟಕದ ದಕ್ಷಿಣಭಾಗದ ತುಂಗಭದ್ರೆಯ ಪರಿಸರವನ್ನೊಳ ಗೊಂಡ ಬಹುಪಾಲು ಶಾಸನಗಳನ್ನು ವ್ಯವಸ್ಥಿತವಾಗಿ ಜಿಲ್ಲಾವಾರು ಸಂಪುಟಗಳ ರೂಪದಲ್ಲಿ ಪ್ರಕಟಿಸಿರುವುದು ಬಿ.ಎಲ್.ರೈಸ್ ಅವರ ಕಾರ್ಯದಕ್ಷತೆಗೆ ಸಾಕ್ಷಿಯೆನಿಸಿದೆ. ಇವರ ಮತ್ತೊಂದು ವೈಶಿಷ್ಟ್ಯವೆಂದರೆ ಕೇವಲ ಶಾಸನಗಳ ಸಂಪಾದನೆ ಮಾತ್ರವಲ್ಲದೆ ಅದಕ್ಕೆ ತಕ್ಕಂತಹ ವ್ಯವಸ್ಥಿತವೂ ವಿಸ್ತಾರವೂ ಆದ ಪ್ರಸ್ತಾವನೆ ಪ್ರತಿಯೊಂದು ಸಂಪುಟಕ್ಕೂ ಅದರದೇ ಆದ ಸುಧೀರ್ಘ ಪ್ರಸ್ತಾವನೆಯನ್ನು ನೀಡಿರುವುದು ಅಧ್ಯಯನಶೀಲರಿಗೆ ಮಾತ್ರವಲ್ಲದೆ ಕನ್ನಡ ಶಾಸನಕ್ಷೇತ್ರಕ್ಕೆ ರೈಸ್ ಅವರು ಸಲ್ಲಿಸಿರುವ ಮಹತ್ವದ ಕೊಡುಗೆಯೆನಿಸಿದೆ. ಶಾಸನಗಳಿಗೆ ಸಂಬಂಧಿಸಿದ ದೀರ್ಘ ಪ್ರಸ್ತಾವನೆ, ಶಾಸನಗಳ ರೋಮನ್ ಲಿಪಿ, ಇಂಗ್ಲೀಷ್ ಭಾಷಾಂತರ, ಮೂಲ ಪಾಠ ಹೀಗೆ ವಿವಿಧ ಭಾಗಗಳನ್ನಾಗಿ ಮಾಡಿಕೊಂಡ ಕ್ರಮಬದ್ಧ ಅಧ್ಯಯನ ಇದಾಗಿದೆ.

ಒಟ್ಟಿನಲ್ಲಿ ಶಾಸನ ಸಂಪಾದನಾ ಕ್ಷೇತ್ರವನ್ನು ಶ್ರೀಮಂತಗೊಳಿಸುವ ಮೂಲಕ ಭಾರತೀಯ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟುವಲ್ಲಿ ಪ್ರಮುಖ ಕಾರಣ ಕರ್ತವ್ಯರೆನಿಸಿರುವ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿದ್ವಾಂಸರ ಸಾಧನೆಗಳು ಉಲ್ಲೇಖಾರ್ಹವೆನಿಸಿವೆ. ಈ ನಿಟ್ಟಿನಲ್ಲಿ ಸಾಗಿಬಂದ ಶಾಸನಗಳ ಸಂಗ್ರಹ ಮಾತ್ರವಲ್ಲದೆ ಸಂಪಾದನಾ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದುದು ಪಂಡಿತರ ಪಾಂಡಿತ್ಯಕ್ಕೆ ಹಿಡಿದ ಕನ್ನಡಿಯಂತಿದೆ. ಈ ನಿಟ್ಟಿನಲ್ಲಿ ವಿದ್ವಾಂಸರ ಸೇವೆಯಷ್ಟೇ ಜಾಹಿರಾತುಗಳ ಕಾಣ್ಕೆಯು ಸಹ ವೈಶಿಷ್ಟ್ಯ ಪೂರ್ಣವೆನಿಸಿದೆ. ಅದರಲ್ಲೂ ಬಿ.ಎಲ್.ರೈಸ್ ಅವರು ಸಂಪಾದಿಸಿ ಪ್ರಕಟಿಸಿರುವ "Mysore Gazetter' ಮತ್ತು 'Mysore and Coorg from Inscriptions' ಗ್ರಂಥಗಳು ಹಾಗೂ ಫ್ಲೀಟ್‌ರು ಸಂಪಾದಿಸಿ ಪ್ರಕಟಿಸಿರುವ 'The Dyonastics of the kanarese Districts' (Bambay Gazetteer-1-ii) ಮತ್ತು Epigraphy' (Imperiol Gazetter of India-11).

ಒಟ್ಟಾರೆ ಹೇಳುವುದಾದರೆ ಫ್ಲೀಟ್ ಮತ್ತು ರೈಸ್‌ರು ಕನ್ನಡ ಶಾಸನ ಪ್ರಪಂಚವನ್ನು ಉಜ್ವಲವಾಗಿ ಬೆಳಗಿಸಿದರು. ಇವರ ಸಾಲಿಗೆ ಸಲ್ಲುವ ಕೆಲಸವನ್ನು ನಿರ್ವಹಿಸಿದ ಹಲವು ಪ್ರಮುಖರಲ್ಲಿ ಮೋರೆಸ್, ಬಾರ್ನೆಟ್, ಕೀಲಹಾರ್ನ್ ಮೊದಲಾದವರು

ಶಾಸನಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿರುವುದನ್ನು ಉಲ್ಲೇಖಿಸಬಹುದು. ಪಾಶ್ಚಿಮಾತ್ಯ ದೇಶದಿಂದ ಪೌರ್ವಾತ್ಯ ದೇಶಕ್ಕೆ ಬಂದವರೆನಿಸಿದರೂ ತಮ್ಮ ಅಮೂಲ್ಯ ಸೇವೆಯ ಮೂಲಕ ಕನ್ನಡ ಶಾಸನ ಮತ್ತು ಸಾಹಿತ್ಯಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದರು. ಈ ದಿಸೆಯಲ್ಲಿ ಕನ್ನಡ ಮಾತ್ರವಲ್ಲದೆ ಇಡೀ ಭಾರತೀಯ ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಆ ಕ್ರೈಸ್ತ ವಿದ್ವಾಂಸರ ಸಾಧನೆಗಳನ್ನು ಶ್ಲಾಘಿಸಲೇಬೇಕು.[೧೦]

ಅನಂತರದ ದಿನಗಳಲ್ಲಿ ಪಾಶ್ಚಿಮಾತ್ಯ ವಿದ್ವಾಂಸರ ಮಾರ್ಗದರ್ಶನ ದೊರಕಿದ್ದ ದೇಶೀಯ ವಿದ್ವಾಂಸರು ಕನ್ನಡ ಶಾಸನಕ್ಷೇತ್ರಕ್ಕೆ ಅಪಾರ ಕಾಣ್ಕೆಯನ್ನು ನೀಡಿರುತ್ತಾರೆ. ಅಂತಹ ವಿದ್ವಾಂಸರಲ್ಲಿ ೧೮೦೭ರ ಕಾಲಘಟ್ಟದಲ್ಲಿ ಡಾ.ಭಾವುದಾಜಿ ಎನ್ನುವವರು ಕದಂಬರ ಕೆಲವು ತಾಮ್ರಪಟ ಶಾಸನಗಳನ್ನು ಸಂಗ್ರಹಿಸಿ ಅವುಗಳನ್ನು ಕುರಿತು ವಿವೇಚಿಸಿರುವುದನ್ನು ಕಾಣಬಹುದಾಗಿದೆ. ಕ್ರಿ.ಶ.೧೮೪೫ರ ವೇಳೆಗೆ ಬಾಲಗಂಗಾಧರಶಾಸ್ತ್ರಿ ಅವರು ಕೊಲ್ಲಾಪುರ ಮಾತ್ರವಲ್ಲದೆ ಆ ಪ್ರದೇಶದ ಸುತ್ತಮುತ್ತಲು ಲಭ್ಯವೆನಿಸಿರುವ ದೇವನಾಗರಿ ಮತ್ತು ಹಳಗನ್ನಡ ಭಾಷೆಯ ಏಳು ಪ್ರಾಚೀನ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿದರು. ಹಾಗೆಯೇ ಕ್ರಿ.ಶ.೧೮೭೬ರಲ್ಲಿ ಶ್ರೀಕಾಶಿನಾಥ ತ್ರಿಂಬಕ್ ತೆಲಂಗ್ ಎನ್ನುವ ವಿದ್ವಾಂಸರು ಕದಂಬರ ಕೆಲವು ತಾಮ್ರ ಶಾಸನಗಳನ್ನು ಸಂಗ್ರಹಿಸುವ ಕಾರ್ಯವನ್ನು ಕೈಗೊಂಡರು. ಈ ನಡುವೆ ಇವರಲ್ಲದೆ ಆರ್.ನರಸಿಂಹಾಚಾರ್ ಅವರು ಬಿ.ಎಲ್.ರೈಸ್ ಅವರಿಗೆ ಸಹಾಯಕರಾಗಿ ಏಳು ವರ್ಷಗಳ ಕಾಲ ಕಾರ್ಯನಿರ್ವಹಿಸಿ ಕ್ರಿ.ಶ.೧೯೦೬ ವೇಳೆಗೆ ಪುರಾತತ್ವ ಇಲಾಖೆಯ ನಿರ್ದೇಶಕರಾಗಿ ೧೯೨೨ ರಂದು ನಿವೃತ್ತರಾದರು. ಇವರು ತಮ್ಮ ಅಧಿಕಾರಾವಧಿಯಲ್ಲಿ ವ್ಯಾಕರಣ, ಕಾವ್ಯ, ಛಂದಸ್ಸು, ಶಾಸನ ಮತ್ತು ಇತಿಹಾಸ ಮುಂತಾದ ವಿಷಯಗಳಲ್ಲಿ ಪರಿಣಿತರಾಗಿದ್ದರು. ತತ್ಪರಿಣಾಮವಾಗಿ ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್‌ನ ಹೆಸರಿನಲ್ಲಿ ಸುಮಾರು ೧೬ ವರ್ಷಗಳ ಕಾಲ ವರದಿಗಳನ್ನು ಪ್ರಕಟಿಸಿದ ಎಪಿಗ್ರಾಫಿಯ ಕರ್ನಾಟಕ-೧೧ ನ್ನು ಇವರು ಪರಿಷ್ಕರಣ ಮಾಡಿ ಪ್ರಕಟಿಸಿದರು. ಇವರ ಪಾಂಡಿತ್ಯದ ಪ್ರತಿಫಲವೆಂಬಂತೆ 'ಶಾಸನ ಪದ್ಯ ಮಂಜರಿ', 'ಗಂಗರ ಚರಿತ್ರೆ', 'ಬೇಲೂರು ಸೋಮನಾಥಪುರ' ಅಲ್ಲದೆ 'ದೊಡ್ಡಗದ್ದವಳ್ಳಿಯ ಹೊಯ್ಸಳ ದೇವಸ್ಥಾನ' ಮುಂತಾದವು ಇವರ ಅಮೂಲ್ಯ ಕೃತಿಗಳೆನಿಸಿರುವುದು ವಿಶೇಷ.[೧೧] ಆರ್. ನರಸಿಂಹಾಚಾರ್ ಅವರು ಪುರಾತತ್ವ ಇಲಾಖೆಯ ನಿರ್ದೇಶಕರಾಗಿ ನಿವೃತ್ತರಾದ ಬಳಿಕ ಆ ಹುದ್ದೇಗೇರಿದವರು ಡಾ.ಎಂ.ಎಚ್.ಕೃಷ್ಣ ಇವರು ಸಹ ಎಪಿಗ್ರಾಫಿಯ ಕರ್ನಾಟಿಕವನ್ನು ಸಂಪಾದಿಸುವ ಕಾರ್ಯದಲ್ಲಿ ನಿರತರಾಗಿ ಹತ್ತು ಹಲವು ಅಮೂಲ್ಯ ಕೃತಿಗಳನ್ನು ಹೊರ ತಂದರು. ಅವುಗಳಲ್ಲಿ

EC -XI11 - ಎ.ಕೆ ವರೆಗೆ ಪದಸೂಚಿ(೧೯೩೪)

EC –X1V - ಮೈಸೂರು ಜಿಲ್ಲೆಯ ಅನುಬಂಧ(೧೯೪೩)

EC –XV – ಹಾಸನ ಜಿಲ್ಲೆಯ ಅನುಬಂಧ(೧೯೪೩)

EC –XV1 – ತುಮಕೂರು ಜಿಲ್ಲೆಯ ಅನುಬಂಧ(೧೯೫೮)

ಇವರ ಮಹತ್ವದ ಮತ್ತೊಂದು ಕೆಲಸವೆಂದರೆ ಕನ್ನಡ ಭಾಷೆಯ ಪ್ರಾಚೀನತೆಯನ್ನು ಅಧಿಕೃತವಾಗಿ ಹೇಳುವ ಹಲ್ಮಿಡಿ ಶಾಸನವನ್ನು ಪ್ರಕಟಿದುದು ಇವರ ಹೆಗ್ಗಳಿಕೆಯೆನಿಸಿದೆ. ಇವರ ಅನಂತರ ಶಾಸನಗಳ ಸಂಪಾದನಾ ಕಾರ್ಯವನ್ನು ಮುಂದುವರೆಸಿದವರು ನಿರ್ದೇಶಕರಾದ ನೀಲಕಂತಶಾಸ್ತ್ರಿಗಳು. ಅವರ ಅನಂತರ ಶ್ರೀ ಶೇಷಾದ್ರಿ ಅವರು EC–XV[೧೧] ಕೋಲಾರ ಜಿಲ್ಲೆಯ ಅನುಬಂಧವನ್ನು ಪ್ರಕಟಿಸಲಾಯಿತು. ಇದೇ ವೇಳೆಗೆ 'ಆರ್ಕಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ' ಇಲಾಖೆಯವರು ದಕ್ಷಿಣ ಭಾರತದ ಶಾಸನಗಳನ್ನು 'ಸೌತ್ ಇಂಡಿಯನ್ ಇನ್ಸ್ಕ್ರಿಪ್ಸನ್ಸ್' ಹೆಸರಿನಲ್ಲಿ ಇಪ್ಪತ್ತು ಸಂಪುಟಗಳನ್ನು ಪ್ರಕಟಿಸಿರುವುದು ಇವರ ಗಮನಾರ್ಹ ಸಾಧನೆಯಾಗಿದೆ.

ಹೀಗೆ ಸಾಗಿ ಬಂದ ಶಾಸನಗಳ ಸಂಪಾದನೆ ಕಾರ್ಯ ಮುಂದುವರಿಯಿತು. ಆ ನಿಟ್ಟಿನಲ್ಲಿ ೧೯೩೯ ರಂದು ಧಾರವಾಡದಲ್ಲಿ ಕನ್ನಡ ಸಂಶೋಧನ ಸಂಸ್ಥೆ ಸ್ಥಾಪನೆಗೊಂಡಿತು. ಆ ಮೂಲಕ ಆರು ಸಂಪುಟಗಳನ್ನು ಹೊರತರಲಾಗಿದ್ದು ಮೊದಲ ನಾಲ್ಕು ಸಂಪುಟಗಳನ್ನು ಶ್ರೀ ಪಂಚಮುಖಿಯವರು ಸಂಪಾದಿಸಿದ್ದಾರೆ. ಐದು, ಆರನೆಯ ಸಂಪುಟಗಳನ್ನು ಡಾ.ಬಿ.ಆರ್.ಗೋಪಾಲ ಅವರು ಸಂಪಾದಿಸಿ ಪ್ರಕಟಿಸಿರುವುದು ಶಾಸನ ಕ್ಷೇತ್ರದಲ್ಲಾದ ಮಹತ್ವದ ಮೈಲುಗಲ್ಲೆನಿಸಿತು.

ಶಾಸನ ಸಂಪಾದನಾ ಕ್ಷೇತ್ರದಲ್ಲಿ ಮತ್ತೊಂದು ವೈಶಿಷ್ಟ್ಯವೆಂದರೆ ಕರ್ನಾಟಕವಲ್ಲದೆ ಹೈದರಾಬಾದ್‌ನ ಪುರಾತತ್ವ ಇಲಾಖೆಯವರು ಆಗಾಗ ಕನ್ನಡ ಶಾಸನಗಳನ್ನು ಪ್ರಕಟಿಸುತ್ತಿರುವುದು ಗಮನಾರ್ಹ. 'ತೆಲಂಗಾಣ ಶಾಸನಮುಲು ಹೆಸರಿನ' ಈ ಸಂಪುಟಗಳು ಗಾತ್ರದಲ್ಲಿ ಸಣ್ಣದಾಗಿದ್ದರೂ, ಕನ್ನಡ ಶಾಸನಗಳನ್ನು ಒಳಗೊಂಡಿರುವ ಮಹತ್ವದ ಸಂಪುಟಗಳೆನಿಸಿರುವುದು ಉಲ್ಲೇಖಾರ್ಹವೆನಿಸಿದೆ.[೧೨] ಹಂಪಿ ಕನ್ನಡ ವಿಶ್ವವಿದ್ಯಾನಿಲಯವು ತಮಿಳುನಾಡಿನ ಕನ್ನಡ ಶಾಸನಗಳು, ಮಹಾರಾಷ್ಟ್ರದ ಕನ್ನಡ ಶಾಸನಗಳು, ಆಂಧ್ರಪ್ರದೇಶದ ಕನ್ನಡ ಶಾಸನಗಳು ಎಂಬ ಮೂರು ಸಂಪುಟಗಳನ್ನು ಸಂಪಾದಿಸಿ ಪ್ರಕಟಿಸಲಾಗಿದೆ. ಅಲ್ಲದೆ ಬಾಗಲಕೋಟೆ, ಬಳ್ಳಾರಿ, ಕೊಪ್ಪಳ, ಬೀದರ್, ರಾಯುಚೂರು ಜಿಲ್ಲೆಗಳ ಜೊತೆಗೆ ಹಂಪಿಯು ಶಾಸನ ಸಂಪುಟಗಳು ಪ್ರಕಟವಾಗಿರುವುದನ್ನು ಕಾಣಬಹುದು. ಅಲ್ಲದೆ ಭಾರತ ಸರ್ಕಾರದ ಶಾಸನ ಇಲಾಖೆಯಿಂದ ಪ್ರಕಟವಾಗುತ್ತಿರುವ ಸೌತ್ ಇಂಡಿಯನ್ ಇನ್ಸ್ಕ್ರಿಫ್ಷನ್ (೧೧) ಸಂಪುಟಗಳಲ್ಲಿಯೂ ಸಹ ಕರ್ನಾಟಕದ ಹಲವು ಶಾಸನಗಳ ಸಂಪಾದನಾಕಾರ್ಯ ನಿರಂತರವಾಗಿ ನಡೆದಿರುವುದನ್ನು ಗಮನಿಸಬಹುದಾಗಿದೆ.

ಹೀಗೆ ಸರ್ಕಾರದ ಇಲಾಖೆಯ ವತಿಯಿಂದಲ್ಲದೆ ವೈಯಕ್ತಿಕ ಸಂಪುಟಗಳಲ್ಲಿಯೂ ಶಾಸನಗಳ ಸಂಪಾದನಾಕಾರ್ಯ ನಡೆದಿರುವುದು ಗಮನಾರ್ಹ. ಈ ನಿಟ್ಟಿನಲ್ಲಿ ಪ್ರೊ.ಕುಂದಣಗಾರ ಅವರ 'ಇನ್ಸ್ಕ್ರಿಪ್ಸನ್ ಇನ್ ನಾರ್ಥರ್ನ್ ಕರ್ನಾಟಕ್ ಅಂಡ್

ಕೊಲ್ಲಾಪುರ್ ಸ್ಟೇಟ್' ಮತ್ತು ಪಿ.ಬಿ.ದೇಸಾಯಿ ಅವರ 'ಶಾಸನ ಪರಿಚಯ' ಮತ್ತು ೫೩ ಶಾಸನಗಳನ್ನೊಳಗೊಂಡ 'ಜೈನಿಸಮ್ ಇನ್ ಇಂಡಿಯಾ ಸಮ್ ಜೈನ ಅಂಡ್ ಎಫಿಗ್ರಾಫ್ಸ್' ಮಹತ್ವವಾದವುಗಳೆನಿಸಿವೆ. ಈ ಸಾಲಿಗೆ ಸೇರುವ ಶ್ರೀನಿವಾಸರಿತ್ತಿ ಅವರು 'ಇನ್ಸ್‌ಸ್ಕ್ರಿಪ್ಸನ್ಸ್ ಫ್ರಮ್ ನಾಂದೇಡ್ ಡಿಸ್ಟ್ರಿಕ್ಟ್' ಎಂಬ ಸಂಪುಟವನ್ನು ಪ್ರಕಟಿಸಿದ್ದಾರೆ. ಡಾ.ಷ.ಶೆಟ್ಟರ್ ಅವರು ತಮ್ಮ ಪ್ರಬಂಧದ ಅನುಬಂಧದಲ್ಲಿ ಶ್ರವಣಬೆಳಗೊಳಕ್ಕೆ ಸಂಬಂಧಿಸಿದ ೩೬ ಹೊಸ ಶಾಸನಗಳನ್ನು ಸಂಪಾದಿಸಿ ಪ್ರಕಟಿಸಿರುವುದು ಮಹತ್ವದ ಬೆಳವಣಿಗೆಯೆನಿಸಿದೆ.

ಅಲ್ಲದೆ ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ಸಾಧನೆ, ಕನ್ನಡನುಡಿ, ಕನ್ನಡಸಾಹಿತ್ಯ ಪರಿಷತ್ಪತ್ರಿಕೆ, ಇತಿಹಾಸದರ್ಶನಲೋಚನ, ಶಾಸನ ಅಧ್ಯಯನ, ಎಫಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, 'ಕ್ವಾರ್ಟರ್ಲೀ ಜರ್ನಲ್ ಆಫ್ ಮಿಥಿಕ್ ಸೋಸೈಟಿ ಆಫ್ ಇಂಡಿಯಾ' ಮುಂತಾದ ನಿಯತಕಾಲಿಕೆಗಳಲ್ಲಿಯೂ ಸಹ ಶಾಸನಗಳು ಸಂಪಾದಿತವಾಗಿ ಪ್ರಕಟವಾಗುತ್ತಿರುವುದು ಶಾಸನ ಸಂಪಾದನಾ ಕ್ಷೇತ್ರದಲ್ಲಾದ ಉತ್ತಮ ಬೆಳವಣಿಗೆಯೆನಿಸಿದೆ. ಈ ರೀತಿ ಕರ್ನಾಟಕದಾದ್ಯಂತ ಶಾಸನಗಳ ಸಂಪಾದನೆ ಮತ್ತು ಪ್ರಕಟಣಾ ಕಾರ್ಯ ಯಶಸ್ವಿಯಾಗಿ ನಡೆಯುತ್ತಿರುವುದು ಶ್ಲಾಘನೀಯ.

ಅಡಿ ಟಿಪ್ಪಣಿಗಳು :

೧. ಡಾ.ಎಸ್.ಎಂ.ಹಿರೇಮಠ : ಶಾಸನಾಧ್ಯಯನ : ಪುಟ-೪
೨. ಡಾ.ಎಸ್.ಎಂ.ಹಿರೇಮಠ : ಶಾಸನಾಧ್ಯಯನ : ಪುಟ -೫
೩. ಡಾ.ಎಸ್.ಎಂ ಹಿರೇಮಠ : ಶಾಸನಾಧ್ಯಯನ : ಪುಟ -೫
೪. ಡಾ.ಎಂ.ಎಂ.ಕಲಬುರ್ಗಿ ಮಾರ್ಗ ೨ : ಪುಟ-೨
೫. Journal of the Royal Asiatic Society of great Britan and irelond Vol-1(1834)Page-144.
೬. ಡಾ.ಎಂ.ಎಂ.ಕಲಬುರ್ಗಿ : ಮಾರ್ಗ : ಪುಟ-೨೮೦
೭. ಡಾ.ಹಿರೇಮಠ : ಶಾಸನಾಧ್ಯಯನ : ಪುಟ- ೭
೮. ಡಾ.ಎಂ.ಎಂ.ಕಲಬುರ್ಗಿ : ಮಾರ್ಗ ೨ : ಪುಟ-೨೮೨.
೯. ಡಾ.ಎಂ.ಎಂ.ಕಲಬುರ್ಗಿ : ಮಾರ್ಗ ೨ : ಪುಟ-೨೮೩.
೧೦. ಡಾ.ಎಂ.ಎಂ.ಕಲಬುರ್ಗಿ : ಪುಟ-೨೮೧
೧೧. ಡಾ.ಎಂ.ಎಂ.ಕಲಬುರ್ಗಿ : ಮಾರ್ಗ-೨ : ಪುಟ-೨೮೧
೧೨. ಡಾ.ಎಸ್.ಎಂ.ಹಿರೇಮಠ : ಶಾಸನಾಧ್ಯಯನ : ಪುಟ-೮

ಆಕರ ಗ್ರಂಥಗಳು

೧. ಡಾ.ಎಂ.ಎಂ. ಕಲಬುರ್ಗಿ : ಮಾರ್ಗ-೨
೨. ಕೆ.ವಿ.ರಮೇಶ್ : ಕನ್ನಡಶಾಸನ ಸಮೀಕ್ಷೆ
೩. ಪ್ರೊ.ಚಿದಾನಂದಮೂರ್ತಿ : ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ
೪. ಪ್ರಬುದ್ಧ ಕರ್ನಾಟಕದ ಸಂಪುಟಗಳು.

ಸರ್ವಜ್ಞನ ವಚನಗಳಲ್ಲಿ ಹೆಣ್ಣು

– ಡಾ. ಬಾಳಪ್ಪ .ಎ.ಬಿ

ತೆಲುಗಿನ ವೇಮನ, ತಮಿಳಿನ ತಿರುವಳ್ಳುವರ್ ಇವರಿಗೆ ಸರಿಸಮನಾಗಿ ಉದಯಿಸಿದ 'ಸರ್ವರೊಳಗೊಂದೊಂದು ನುಡಿಗಲಿತು ವಿದ್ಯೆಯ ಪರ್ವತವೇ ಆದ ಸರ್ವಜ್ಞ'ನು ಕನ್ನಡ ಸಾರಸ್ವತಲೋಕದಲ್ಲಿ 'ತ್ರಿಪದಿಯ ಬ್ರಹ್ಮ'ನೆಂದೇ ಚಿರಪರಿಚಿತ. ಈತನ ವಚನಗಳು ಸಮಾಜಕ್ಕೆ ಉಣಬಡಿಸಿದ ನೀತಿಯುತ ಸಂದೇಶಗಳು ಮತ್ತು ಮೂರು ಸಾಲಿನ ಪದ್ಯಗಳಲ್ಲಿ ಮೂರು ಲೋಕಗಳನ್ನೇ ಕಾಣಿಸುವ ಸತ್ಯ ಮತ್ತು ಸತ್ವವುಳ್ಳವುಗಳಾಗಿವೆ. ನೇರನುಡಿ, ನಿಷ್ಠುರತೆಗಳೇ ಮೈವೆತ್ತಂತೆ ಕಾಣುವ ಈತನ ವಚನಗಳಲ್ಲಿ 'ಅಧರಕ್ಕೆ ಕಹಿಯಾದರೂ ಉದರಕ್ಕೆ ಸಿಹಿ' ಎಂಬಂತೆ ಸಾಮಾಜಿಕ ರೋಗಗಳಿಗೆ ಸಿದ್ಧೌಷಧಿಗಳೇ ಆಗಿರುವುದು ವಿಶೇಷ. ಒಳಿತು ಕೆಡುಕಿನ ಆಂತರಿಕ ಮಂಥನದಿಂದ ಹಚ್ಚಿದ ದಿವ್ಯಜ್ಯೋತಿಗಳೇ ಸರ್ವಜ್ಞನ ವಚನಗಳಾಗಿವೆ.

ಜಗತ್ತಿನಲ್ಲಿ ಹೆಣ್ಣು ಕುಟುಂಬದ, ಸಾಂಸಾರಿಕ ಬಂಧನದ ಕಣ್ಣು. ತನ್ನ ತಾನರಿತು ನಡೆಯುವ ಸತಿಯಿದ್ದರೆ ಆ ಮನೆಯೇ ನಂದಗೋಕುಲ. ಪತಿಯೇ ಪರದೈವವೆಂದು ನಂಬಿ ನಡೆದ ಹೆಣ್ಣುಗಳ ಬದುಕು ಭಾರತೀಯ ಸಂಸ್ಕೃತಿಯಲ್ಲಿ ಪಾವನವಾಗಿರುವುದಕ್ಕೆ ಸಾಕ್ಷಿಯೂ ಲಭ್ಯ, ಕುಟುಂಬಕ್ಕೆ ಭೂಷಣಪ್ರಾಯಳಾದ ಹೆಣ್ಣನ್ನು ಕುರಿತು ಸರ್ವಜ್ಞ ತನ್ನ ವಚನಗಳಲ್ಲಿ ಹೆಣ್ಣಿಂದಲೇ ಸಕಲವೂ ಎಂಬಂತೆ ವರ್ಣಿಸಿದ್ದಾನೆ.

ಹೆಣ್ಣಿಂದಲೆ ಇಹವು ಹೆಣ್ಣಿಂದಲೆ ಪರವು
ಹೆಣ್ಣಿಂದಲೆ ಸಕಲ ಸಂಪದವು ಹೆಣ್ಣೊಲ್ಲ
ದಣ್ಣಗಳು ಯಾರು ಸರ್ವಜ್ಞ ॥

ಹೆಣ್ಣು ಇಹಲೋಕದ ಸೃಷ್ಟಿಗೆ ಕಾರಣಕರ್ತಳಾಗಿದ್ದಾಳೆ. ಪರಲೋಕದ ಸೌಖ್ಯಕ್ಕೂ ಪ್ರೇರಕ ಮಾತ್ರವಲ್ಲ ಪೋಷಕಳೂ ಹೌದು. ಅವಳಿಂದ ಲಭ್ಯವಾಗುವ ಸಕಲ ಸಂಪತ್ತಗಳು ಪುರುಷನ ಉತ್ತರೋತ್ತರ ಬದುಕಿಗೆ ನೆಲೆಗಾಣಿಸಬಲ್ಲವು. ಇಂತಹ ಹೆಣ್ಣನ್ನು ಬೇಡವೆನ್ನುವ ಅಣ್ಣಗಳು ಯಾರಾದರೂ ಇದ್ದಾರೆಯೇ ಎಂದು ಉದ್ಘೋಷಿಸುತ್ತಾನೆ ಸರ್ವಜ್ಞ

ಪಲ್ಲಕ್ಕಿಯನೇರಿದವರೆಲ್ಲಿಂದ ಬಂದಿಹರು
ನೆಲ್ಲಕ್ಕಿಯಂತ ಸುಲಿವಲ್ಲ ಹಿರಿಯರು
ನಲ್ಲಳಿಂದಲ್ಲೆ ಸರ್ವಜ್ಞ ॥

ಚತರಂಗ ಬಲ, ಪರಿವಾರ, ಪತಾಕೆಗಳೊಡನೆ ಪಲ್ಲಕ್ಕಿಯನ್ನು ಹತ್ತಿ ಮೆರವಣಿಗೆಯಲ್ಲಿ ಸಾಗುವ ರಾಜರುಗಳೂ, ಭತ್ತದ ಮೇಲ್ಪದರವನ್ನು ತೆಗೆದಾಗ ಕಾಣಿಸುವ ನೆಲ್ಲಕ್ಕಿಯಂತಹ ಹಲ್ಲನ್ನು ಹೊಂದಿರುವ ನಮ್ಮ ಹಿರಿಯರೆಲ್ಲರೂ ಸ್ತ್ರೀಯ ಗರ್ಭದಿಂದಲೇ ಬಂದವರಾಗಿದ್ದಾರೆ. ಇಡೀ ಜೀವಸಂಕುಲ ಸೃಷ್ಟಿಯಾಗುವುದು ಪ್ರಕೃತಿಮಾತೆಯಿಂದ. ಆದ್ದರಿಂದ ಸ್ತ್ರೀ ಮುಖೇನ ಸೃಷ್ಟಿಯ ರಹಸ್ಯವನ್ನು ಭೇದಿಸಿದ್ದಾನೆ. ಶಿವನು ತನ್ನ ಸತಿಯ ಮೇಲಿನ ವ್ಯಾಮೋಹದಿಂದ ಅರ್ಧನಾರೀಶ್ವರ ಅವತಾರವೆತ್ತಿ ಅರ್ಧಾಂಗಿಯಾಗಿ ಹೆಣ್ಣನ್ನು ಗುರುತಿಸುವಂತೆ ಮಾಡಿದ್ದಾನೆ. ಇದು ಅರ್ಧನಾರೀಶ್ವರ ಪರಿಕಲ್ಪನೆ ನಾಂದಿಯಾಗಿದೆ. ಸತಿಯ ಮನಸ್ಸನ್ನು ಗೆಲ್ಲಲು ಪುರುಷರು ಏನೆಲ್ಲಾ ಸಾಹಸ ಕ್ರಿಯೆಗಳನ್ನೂ ತ್ಯಾಗಗಳನ್ನೂ ಮಾಡಬೇಕಾದೀತೆಂಬುದು ಸರ್ವ ವಿದಿತ.

ಕಾಮನಪುರದಿಪ್ಪ ಆ ಮಹಾಕೆರೆಯೊಳು
ಹೇಮಾ ಹೇಮಿಗಳು ಮುಳುಗಿರಲು ಉಳಿದವರ
ನೇಮವೇನೆಂದ ಸರ್ವಜ್ಞ ॥

ಕಾಮನ ಪುರದೊಳಗಿರುವ ಒಂದು ಕೆರೆ ಸ್ತ್ರೀ. ಮನ್ಮಥನ ಊರಿಗೆ ಜಲನಿಧಿಯಂತೆಯೇ ಸೌಂದರ್ಯದ ತವನಿಧಿ. ಅಂಗಜನ ಊರ ನಿವಾಸಿಗಳೆಲ್ಲರ ಕಾಮದಾಹವನ್ನು ತಣಿಸುತ್ತಲೇ ಆ ಊರ ಸೌಂದರ್ಯವನ್ನು ಅಧಿಕಗೊಳಿಸಿದ್ದಾಳೆ. ಅಂತಹ ಹೆಣ್ಣಿನ ಚೆಲುವಿಗೆ ಘಟಾಘಟಿಗಳೇ ಮರುಳಾಗಿರುವಾಗ ಉಳಿದ ಮನುಷ್ಯರ ಪಾಡೇನು ಎಂದು ಸರ್ವಜ್ಞನೇ ನಿಬ್ಬೆರಗಾಗಿದ್ದಾನೆ.

ಹಣವು ದೊರೆತರೆ ಲೇಸು ಋಣವು ತೀರಿದರೆ ಲೇಸು
ಗಣಿಕೆಯ ತೊರೆಯೆ ನೆರೆಲೇಸು ಸತಿಯಿರಲಿ
ಗುಣವತಿಯೆ ಲೇಸು ಸರ್ವಜ್ಞ ॥

ಶ್ರಮವಹಿಸಿ ಹಣವನ್ನು ಗಳಿಸುವಂತೆ, ಯಾವ್ಯಾವುದೋ ಕಾರಣಗಳಿಗೆ ಮಾಡಿದ ಸಾಲವನ್ನು ತೀರಿಸಿ ಋಣ ಮುಕ್ತರಾಗುವಂತೆ, ಮನೆಯಲ್ಲಿ ಹೆಂಡತಿಯಿದ್ದೋ ಅಥವಾ ಅವಳಿಲ್ಲದೆಯೋ ಗಣಿಕೆಯ ಸಹವಾಸವನ್ನು ಮಾಡಿದ್ದರೆ ಅವಳನ್ನು ತ್ಯಜಿಸುವುದು ಎಷ್ಟು ಮುಖ್ಯವೋ ಹಾಗೆಯೇ ಗುಣವಂತಳಾದ ಹೆಂಡತಿಯು ಲಭ್ಯವಾಗುವುದೂ ಅಷ್ಟೇ ಮುಖ್ಯ. ಒಳ್ಳೆಯ ಮನೆ, ಒಳ್ಳೆಯ ಹೆಂಡತಿ, ಒಳ್ಳೆಯ ಮಕ್ಕಳನ್ನು ಪಡೆಯುವುದಕ್ಕೆ ಪುರುಷನಾದವನು ಪುಣ್ಯ ಮಾಡಿರಲೇಬೇಕೆಂಬುದಕ್ಕೆ ಸಾಕ್ಷೀಪ್ರಜ್ಞೆಯಂತಿದೆ ಮೇಲಿನ ವಚನ.

ಸುಣ್ಣವಿಲ್ಲದ ವೀಳ್ಯ ಬಣ್ಣವಿಲ್ಲದ ಮದುವೆ
ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ
ಎಣ್ಣೆ ಹೊಯ್ದಂತೆ ಸರ್ವಜ್ಞ ॥

ತಾಂಬೂಲಕ್ಕೆ ಎಲೆ ಅಡಕೆಯಂತೆಯೇ ಅವುಗಳ ರುಚಿ ಒಂದಷ್ಟು ಘಾಟು ಹೆಚ್ಚಿಸಲು ಸುಣ್ಣವೂ ಕೂಡ ಪ್ರಮುಖವಾದುದು. ಅದಿಲ್ಲದೆ ನಾಲಗೆಗೆ ಬಣ್ಣ ಬರದು. ಮದುವೆಯ ಮನೆಯಲ್ಲಿ ಬಣ್ಣ ಬಣ್ಣದ ವಸ್ತ್ರಗಳು, ರಂಗುರಂಗಿ ರಂಗೋಲಿಗಳು, ಓಕುಳಿಗಳು, ವರ್ಣರಂಜಿತ ಹೂಗಳು ಇದ್ದಾಗ ಮಾತ್ರ ಮದುವೆಯು ಮನಮೋಹಕ ಮತ್ತು ರಂಜನೀಯವಾಗಿರುತ್ತದೆ. ಹೆಣ್ಣಿಲ್ಲದೆ ಗಂಡು ಬದುಕಿದರೂ ಅಪೂರ್ಣವೆನಿಸದಿರದು. ಅದಕ್ಕೆ ಸರ್ವಜ್ಞನು ಹೆಣ್ಣಿಲ್ಲದೆ ಗಂಡಿನ ಜೀವನವು ಮರಳರಾಶಿಯ ಮೇಲೆ ಎಣ್ಣೆಯನ್ನು ಹೊಯ್ದರೆ ಹೇಗೆ ವ್ಯರ್ಥವೋ ಹಾಗೇ ನಿರರ್ಥಕವಾಗುತ್ತದೆ. ಗಂಡು ಹೆಣ್ಣು ಎಂಬ ಎರಡು ಗಾಲಿಗಳು ಸಂಸಾರ ರಥಕ್ಕೆ ಇರಲೇಬೇಕು. ಒಂದನ್ನು ಬಿಟ್ಟು ಮತ್ತೊಂದು ಇರಲಾರದು. ಹಾಗೇನಾದರೂ ಇದ್ದರೆ ಹೆಣ್ಣಿಗಾಗಲಿ, ಗಂಡಿಗಾಗಲಿ ಅಪೂರ್ಣ ಬದುಕಾಗುತ್ತದೆ.

> ಕಾಳದೋಲೆಯನಿಟ್ಟು ಬೇಳೆಮಣಿಯನು ಕಟ್ಟಿ
> ವೇಳೆಯನು ಅರಿತು ನಡೆವವಳು ದೊರಕುವುದು
> ಶೂಲಿಯಾ ಕರುಣ ಸರ್ವಜ್ಞ ॥

ಹೆಣ್ಣು ಎಂದಿಗೂ ಆಭರಣಪ್ರಿಯಳೇ, ಆದರೂ ದೈಹಿಕ ಸೌಂದರ್ಯಕ್ಕಿಂತ ಆತ್ಮ ಸೌಂದರ್ಯಕ್ಕೆ ಪ್ರಾಧಾನ್ಯತೆ ನೀಡುವವಳಾಗಿರಬೇಕು. ಅವಳು ನಿರಾಭರಣ ಸುಂದರಿಯಾಗಿದ್ದರೆ ಬಲು ಚೆನ್ನ. ಅದಕ್ಕೆ ಬೇಕಾದುದು ಮುತ್ತೈದೆತನವನ್ನು ಹೆಚ್ಚಿಸುವ ಕರಿಮಣಿಸರ, ಕೈಬಳೆ, ಕಾಲುಂಗುರ, ಹಣೆಗೆ ತಿಲಕ, ಕಿವಿಯೋಲೆಗಳಿಂದ ಅವಳಂದವು ಅಧಿಕವೇ ಹೊರತು ಇಂದಿನ ಮಹಿಳೆಯರು ಏರಿಸಿಕೊಳ್ಳುವ ತೊಲೆಗಟ್ಟಲೆ ಬಂಗಾರದಿಂದಲ್ಲ. ನಿರಾಭರಣದಲ್ಲಿಯೇ ಸಂತೋಷವನ್ನು ಕಾಣಬೇಕು. ತಾನು ಮಾಡಿದ ಅಡುಗೆಯನ್ನು ಪ್ರೀತಿಯಿಂದ ಗಂಡ ಮಕ್ಕಳಿಗೆ ಬಡಿಸಿ ನಂತರ ಮಿಕ್ಕುಳಿದುದನ್ನು ಊಟ ಮಾಡುವುದೇ ಸತಿಧರ್ಮವೆಂದು ಬಗೆದರೆ ಸಾಂಸಾರಿಕ ಬದುಕು ನೆಮ್ಮದಿಯ ತಾಣವಾಗುತ್ತದೆ. ಅದಿಲ್ಲದಿದ್ದರೆ ಏನಿದ್ದು ಏನು ಪ್ರಯೋಜನ?. ಇಂತಹ ತ್ಯಾಗಶೀಲಳು ದೊರೆಯುವುದೂ ಶಿವನ ಕರುಣೆ ಮತ್ತು ಪೂರ್ವಜನ್ಮದ ಸುಕೃತದ ಫಲವಾಗಿದೆ.

ಒಟ್ಟಾರೆಯಾಗಿ ಸರ್ವಜ್ಞನ ವಚನಗಳಲ್ಲಿ ಹೆಣ್ಣನ್ನು ಕುರಿತಂತೆ ಹಲವಾರು ವಚನಗಳಿದ್ದು ದಯಾಪರಳೂ, ತ್ಯಾಗಶೀಲೆಯೂ, 'ಗೃಹಿಣಿ ಗೃಹಮುಚ್ಯತೇ' ಎಂಬಂತಿರುವ ಪ್ರೀತಿ ವಿಶ್ವಾಸದಿಂದ ಗಂಡ ಮನೆ ಮಕ್ಕಳು ಬಂಧು ಬಳಗವೆಂದು ಆಲೋಚಿಸುತ್ತಾ ತನ್ನ ಬದುಕಿಗೆ ಕೊಟ್ಟ ಮನೆಗೂ ತಂದ ಮನೆಗೂ ಕಳಂಕ ಬರದಂತೆ ನಡೆದುಕೊಳ್ಳುವುದೇ ಒಂದು ತಪಸ್ಸೆಂದು ಬಗೆದು ನಡೆದರೆ, ಆ ರೀತಿಯಲ್ಲಿ ನಡೆಯಲು ಬೇಕಾಗುವ ಸಂಸ್ಕಾರ, ಕ್ರಮವರಿತ ಶಿಕ್ಷಣ, ಹದಗೆಡಿಸದ ಗೃಹಕೃತ್ಯಗಳು, ಶೀಲಕ್ಕೆ ಸರಿಸಾಟಿಯಾದುದು ಮತ್ತೊಂದು ಗುಣವಿಲ್ಲವೆಂದು ಅರಿತು ನಡೆಯುವ ಹೆಣ್ಣಿನ ಬದುಕೇ ಸೊಗಸಾದುದು ಎಂಬುದನ್ನು ಸರ್ವಜ್ಞ ಲೋಕವಿದಿತವಾಗುವಂತೆ ಮನಮುಟ್ಟುವಂತೆ ಅರ್ಥೈಸಿದ್ದಾನೆ.

ಬುಡಕಟ್ಟು ಸಮುದಾಯದ ಮೌಖಿಕ ಸಾಹಿತ್ಯದಲ್ಲಿ ಕ್ಯಾತಪ್ಪದೈವದ ಬಾಹುಳ್ಯತೆ

– ಡಾ. ಚಿತ್ತಯ್ಯ ಕೆ.

ಪೂರ್ವಿಕರ ಸಂಸ್ಕೃತಿಯ ಪರಿಪೂರ್ಣ ಸ್ವರೂಪವನ್ನು ಅರಿಯಬೇಕಾದರೆ ಸಮಷ್ಟಿ ಮನಸ್ಸಿನ ನೇರ ಅಭಿವ್ಯಕ್ತಿಯ ಜನಪದ ಸಾಹಿತ್ಯಕ್ಕೇ ಬರಬೇಕು. ಜನಪದಧರ್ಮದ ಎಳೆ–ಎಳೆಗಳನ್ನು, ಸಂಸ್ಕೃತಿಯ ಅಮೂಲ್ಯವಾದ ಹೆಜ್ಜೆಗಳ ಗುರುತುಗಳನ್ನು ಮೌಖಿಕ ಸಾಹಿತ್ಯದಲ್ಲಿ ಕಾಣಬಹುದು. ಬುಡಕಟ್ಟು ಸಮುದಾಯದಲ್ಲಿ ಉತ್ಕೃಷ್ಟವಾಗಿ ಬೆಳೆದಿರುವ ಜನಪದ ಕಥನಗಳು, ಗೀತೆ, ಲಾವಣಿ, ಗಾದೆ, ಒಗಟು ಮೊದಲಾದ ಹಲವು ಸಾಹಿತ್ಯಿಕ ಪ್ರಕಾರಗಳು ನಾಡಿನ ಜನತೆಯ ಸಂಸ್ಕೃತಿಯ ಸತ್ಯದ ಸ್ವರೂಪವನ್ನು ಅಭಿವ್ಯಕ್ತಿಗೊಳಿಸುತ್ತವೆ. ಜೀವನದಲ್ಲಿ ಶ್ರದ್ಧೆ, ಪರಸ್ಪರರಲ್ಲಿ ಪ್ರೇಮ, ಸಹಾನುಭೂತಿ, ತ್ಯಾಗ ಹಾಗೂ ಪ್ರಕೃತಿಯೊಳಗಿನ ಸಂಬಂಧಗಳು ಅನ್ಯೋನ್ಯವಾಗಿ ಅಭಿವ್ಯಕ್ತಿವಾಗಿರುವುದನ್ನು ಇಲ್ಲಿ ಕಾಣಬಹುದು.

ಜನಪದದ ಬದುಕಿನಲ್ಲಿ ನಿತ್ಯವೂ ಕಾಣುವಂತಹ ಪ್ರಕೃತಿಶಕ್ತಿಯನ್ನು ಅಪಾರ ನಂಬಿಕೆಯಿಂದ ಅದನ್ನು ದೈವತ್ವಕ್ಕೆ ಏರಿಸಲಾಯಿತು. ಅದರಲ್ಲಿ ಮುಖ್ಯವಾಗಿ ಬೆಟ್ಟ-ಗುಡ್ಡ ಕಾಡುಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯದವರು, ಇಂಥ ವಿಸ್ಮಯವಾದ ನಿಸರ್ಗವನ್ನು ಕಂಡು ಮುಖಾಮುಖಿ ಸಂಘರ್ಷಕ್ಕೆ ಇಳಿಯದೆ, ಹೊಂದಾಣಿಕೆ ಮಾಡಿಕೊಳ್ಳಲು ಆರಾಧನೆಗೆ ಮೊದಲು ಮಾಡಿದರು. ದುಷ್ಟಶಕ್ತಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮಾರಿ, ಮಸಣಿ, ದೆವ್ವ, ಮೊದಲಾದುವುಗಳನ್ನು ಕಲ್ಪಿಸಿಕೊಳ್ಳಲಾಯಿತು. ಈ ಹಿನ್ನಲೆಯಲ್ಲಿ ದೈವರಾಧನೆ ಜೀವನದ ಅವಿಭಾಜ್ಯ ಅಂಗವಾಗಿ ಬೆಳೆಯಿತು. ದೇವರನ್ನು ಒಲಿಸಿಕೊಳ್ಳಲು, ದೇವರ ಪ್ರಾರ್ಥನೆ, ವರ್ಣನೆಗಳ ಸಾಹಿತ್ಯ ಕಥನಗಳು ರೂಪುಗೊಂಡವು. ದೈವಾರಾಧನೆಗೆ ಸಂಬಂಧಿಸಿದಂತೆ, ಧಾರ್ಮಿಕ ಆಚರಣೆ, ನಂಬಿಕೆ, ಸಂಪ್ರದಾಯಗಳು, ಸಾಮಾಜಿಕ ಜೀವನದಲ್ಲಿ ಅಚ್ಚಳಿಯದೆ ನೆಲೆಸಿದವು. ತಾವು ನಂಬಿದ ದೇವ–ದೇವತೆಗಳನ್ನು ತಮ್ಮೊಂದಿಗೆ ಬದುಕಿದ, ತಮ್ಮ ಸಮುದಾಯದ ಬಗ್ಗೆ ಹೋರಾಡಿದ ವ್ಯಕ್ತಿಗಳನ್ನು ಕುರಿತಂತೆ ಕಟ್ಟಿದ ಹಾಡು, ಸೃಷ್ಟಿಗೊಂಡ ಪುರಾಣಗಳು, ಕಲ್ಪನಾ ವೈಖರಿಯಿಂದ ಮೂಡಿದ ಕಥೆಗಳು ಜನಪದ ಸಾಹಿತ್ಯವನ್ನು ಮತ್ತಷ್ಟು ಸಮೃದ್ಧಗೊಳಿಸಿವೆ.

ಚಿತ್ರದುರ್ಗ, ಬಳ್ಳಾರಿ ಹಾಗೂ ತುಮಕೂರು ಸೇರಿದಂತೆ ಮಧ್ಯಕರ್ನಾಟಕ ಭಾಗದಲ್ಲಿ ಅತಿದಟ್ಟವಾಗಿ ನೆಲೆಸಿರುವ ಮ್ಯಾಸಬೇಡರು, ಕಾಡುಗೊಲ್ಲರು ತಮ್ಮ ಬುಡಕಟ್ಟು ಸಂಸ್ಕೃತಿಯಿಂದ ಜೀವಂತ ಜಾನಪದ ಕಣಜವಾಗಿದ್ದಾರೆ. ಇದರೊಂದಿಗೆ ಆ ಸಮುದಾಯಗಳೊಂದಿಗೆ ನೆಲೆಸಿರುವ ಒಕ್ಕಲಿಗರು, ಆದಿ ಕರ್ನಾಟಕ ಜನಾಂಗದವರ ಆಚಾರ-ವಿಚಾರಗಳು, ಸಂಪ್ರದಾಯಗಳು ಜನಪದ ಸಾಹಿತ್ಯಕ್ಕೆ ಸಮೃದ್ಧ ಕಾಣಿಕೆ ನೀಡಿವೆ. ಅದರಲ್ಲಿ ಕಾಡುಗೊಲ್ಲರು ಕ್ಯಾತಪ್ಪನನ್ನು ಕುರಿತಂತೆ ಜನಪದ ಕಥೆ, ಗೀತೆ, ಗಗ್ಗರ ಪದಗಳನ್ನು ಕಟ್ಟಿ ಹಾಡುತ್ತಾರೆ.

ಕಾಡುಗೊಲ್ಲರು ಪಶುಪಾಲನೆಯ ಜೊತೆಗೆ ಕುರಿ ಸಾಕಾಣಿಕೆ ವೃತ್ತಿಯನ್ನು ಕೈಗೊಂಡಿರುವಂಥದ್ದು ವಿಶೇಷವಾದ ಸಂಗತಿಯಾಗಿದೆ. ಮ್ಯಾಸಬೇಡರಲ್ಲಿ ಪಶುಪಾಲನ ಸಂಸ್ಕೃತಿ ದಟ್ಟವಾಗಿದೆ. ಇವರ ಸಾಂಸ್ಕೃತಿಕ ವೀರರಾದ ಗಾದ್ರಿಪಾಲನಾಯಕ, ಜಗಲೂರು ಪಾಪನಾಯಕರ ಬಗೆಗಿನ ಸಾಹಿತ್ಯ ಕಂಡು ಬರುತ್ತದೆ. ಕಾಡುಗೊಲ್ಲರ ಸಾಂಸ್ಕೃತಿಕ ವೀರರಾದ ಜುಂಜಪ್ಪ, ಎತ್ತಪ್ಪ, ಚಿತ್ತಯ್ಯ, ಕಾಟಯ್ಯ, ವೀರಚಿಕ್ಕಣ್ಣ, ಹಂದಿ ಸಿರಿಯಣ್ಣ ಹಾಗೂ ಕ್ಯಾತಪ್ಪನನ್ನು ಕುರಿತ ಮೌಖಿಕ ಸಾಹಿತ್ಯ ಮ್ಯಾಸಬೇಡರಗಿಂತ ವಿಪುಲವಾಗಿ ಬೆಳೆದಿರುವುದನ್ನು ಸಂಶೋಧನೆ ಮೂಲಕ ಗುರುತಿಸಲು ಸಾಧ್ಯವಿದೆ. ಇಲ್ಲಿ ಈ ಎರಡು ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ವೀರರನ್ನು ಕುರಿತ ಸಾಹಿತ್ಯದ ಬಗೆಗೆ ಅರ್ಥೈಸುವುದು ಅಪ್ರಸ್ತುತ ಎನಿಸುತ್ತದೆ. ಆದರೆ ಪಶುಪಾಲಕ ಹಾಗೂ ಕುರಿಗಾಹಿಗಳಾದ ಕಾಡುಗೊಲ್ಲರಲ್ಲಿ ಸಾಂಸ್ಕೃತಿಕ ವೀರ ಕ್ಯಾತಪ್ಪನನ್ನು ಕುರಿತ ಮೌಖಿಕ ಸಾಹಿತ್ಯ ತಿಳಿದುಬರುತ್ತದೆ. ಅದರಂತೆ ಈ ಭಾಗದ ಕೆಳವರ್ಗದ ಜನರಲ್ಲಿಯೂ ಸ್ವಲ್ಪಮಟ್ಟಿನ ಜನಪದ ಸಾಹಿತ್ಯ ಕಂಡು ಬರುತ್ತದೆ.

ಸಾಂಸ್ಕೃತಿಕ ವೀರ ಹಾಗೂ ಪವಾಡ ಪುರುಷ ಕ್ಯಾತಪ್ಪ ದೈವವನ್ನು ಕುರಿತ ಜನಪದ ಸಾಹಿತ್ಯ ಮಧ್ಯಕರ್ನಾಟಕದ ಕೆಲ ಭಾಗದಲ್ಲಿ ಕಂಡುಬರುತ್ತದೆ. ಕ್ಯಾತಪ್ಪ ದೈವವನ್ನು ಕುರಿತ ಪವಾಡ ಕತೆಗಳು, ಗಗ್ಗರ ಹಾಗೂ ಗಣೆ ಪದಗಳು ಇಲ್ಲಿನ ಜನಪದರ ಬದುಕಿನಲ್ಲಿ ಬೆರೆತು ಹೋಗಿವೆ. ಕ್ಯಾತಪ್ಪ ದೈವ ಆರಾಧನೆ ಬಗೆಗಿನ ಗೀತೆಗಳಲ್ಲಿ ಕಾವ್ಯಾಂಶ ಅಷ್ಟಾಗಿ ಕಾಣುವುದಿಲ್ಲ; ಹೆಚ್ಚಾಗಿ ದೇವರ ವರ್ಣನೆಯೇ ಕಂಡು ಬರುತ್ತದೆ. ಅಲ್ಲದೆ ಪುನರುಕ್ತಿಯೂ ಸಾಮಾನ್ಯವಾಗಿದೆ. ಅನೇಕ ಸಂದರ್ಭಗಳಲ್ಲಿ ಜನಪದಗೀತೆಗಳು, ಗಗ್ಗರ ಪದಗಳು ಹಾಗೂ ಗಣೆಪದಗಳ ಹಾಡಿನ ರೂಪ ಒಂದೇ ದಾಟಿಯಲ್ಲಿರುತ್ತದೆ. ಇಲ್ಲಿನ ದೇವರ ಬಗೆಗಿನ ಆತ್ಮೀಯತೆ, ಭಯ, ಭಕ್ತಿ ಗಣನೀಯವಾಗಿರುತ್ತದೆ, ಹಾಡುಗಳಲ್ಲಿ ಮನುಷ್ಯ ಸ್ವಾಭಾವಗಳನ್ನು ದೇವರಿಗೆ ಅನ್ವಯಿಸಿ ಹಾಡುತ್ತಾ ಇರುವುದು ಕಂಡುಬರುತ್ತದೆ. ದೇವರ ಹಾಡನ್ನು ಸ್ತ್ರೀಯರು ಹೆಚ್ಚಾಗಿ ಹಾಡುತ್ತಾರಾದರೂ ಪುರುಷರು ಹಬ್ಬ-ಹರಿದಿನ ಹಾಗೂ ಜಾತ್ರೆ ಉತ್ಸವಗಳಲ್ಲಿ ಹಾಡುತ್ತಾರೆ.

ಸಾಮಾನ್ಯವಾಗಿ ಕಂಡು ಬರುವ ಜನಪದ ಸಾಹಿತ್ಯ ಪ್ರಕಾರದಲ್ಲಿ ಈ ಕೆಳಗಿನ ಪ್ರತಿಯೊಂದು ಘಟನೆಗಳನ್ನು ಒಳಗೊಂಡಿದೆ.

- ❖ ಕ್ಯಾತಪ್ಪ ರೆಡ್ಡಿ ಸಮುದಾಯದ ಹೇಮರೆಡ್ಡಿ ಮತ್ತು ಭೀಮರೆಡ್ಡಿ ಒಲಿದದ್ದು
- ❖ ರೆಡ್ಡಿಗಳ ಸಂಪತ್ತು ನಾಶ ಮಾಡಿದ್ದು.
- ❖ ದನಗಳ ಪವಾಡ ಮಾಡಿದ್ದು.
- ❖ ದುರುಗದ ದೊರೆಗಳನ್ನು ನಾಶಪಡಿಸಿದ್ದು.
- ❖ ಹುರುಳಿ ಕೈ ತೊಳೆದು ದೇವರಿಗೆ ಕಂಕಣ ಕಟ್ಟುವುದು.
- ❖ ಗುಡಿಕಟ್ಟಿನ ಭಕ್ತಾದಿಗಳಿಗೆ ಸಾರು ಕೊಡುವುದು.
- ❖ ಬಂಜಗೆರೆ, ಕ್ಯಾತಗೊಂಡನಹಳ್ಳಿ ಗ್ರಾಮದ ದೇವರುಗಳ ಆಚರಣೆ.
- ❖ ಎಲ್ಲಾ ಗುಡಿಕಟ್ಟುಗಳಲ್ಲಿ ಹುರುಳಿ ಕೈ ತೊಳೆಯುವುದು.
- ❖ ದೇವರ(ಪೂಜೆ) ಮರವನ್ನು ಕಡಿದು ಪುರ್ಲೆಹಳ್ಳಿಯ ಜಾತ್ರಾ ಸ್ಥಳವಾದ ವಸತಿ ದಿಬ್ಬದಲ್ಲಿಡುವುದು.
- ❖ ಕಳ್ಳೆಮುಳ್ಳು ಕಡಿದು ಸಂಗ್ರಹಿಸುವುದು.
- ❖ ಚನ್ನಮ್ಮನಾಗತಿಹಳ್ಳಿಯ ಕ್ಯಾತೇದೇವರ ದೇವಸ್ಥಾನದ ಸುತ್ತಲೂ ಕಳ್ಳೆಬೇಲಿ, ಜೂಜಿನ ಕಳ್ಳೆ
- ❖ ಎರೆದಕಳ್ಳೆ, ತುಗ್ಗಲಿ ಮೋರುಗಳನ್ನು ವಸತಿ ದಿಬ್ಬಕ್ಕೆ ಜಮಾಯಿಸುವುದು.
- ❖ ಎರೆದಕಳ್ಳೆ, ಕಾರೆಕಳ್ಳೆ, ಕವಳಿಕಳ್ಳೆ, ಜಾಲಿಕಳ್ಳೆ, ಬಾರೆಕಳ್ಳೆ, ಬಂದ್ರೆಸೊಪ್ಪು, ತುಗ್ಗಲಿಮೋರುಗಳಿಂದ ಗುಡಿಕಟ್ಟಿ ಕಳಶ ಸ್ಥಾಪನೆ ಮಾಡುವುದು.
- ❖ ಕ್ಯಾತಪ್ಪ ಮಾಡಿದ ಪಾವಡ
- ❖ ಬಂಜಗೆರೆ ವೀರಣ್ಣ, ಬತವಿನ ದೇವರು, ಈರಬಡಕ್ಕ, ಕ್ಯಾತಗೊಂಡನಹಳ್ಳಿ ಕದರಿ ನರಸಿಂಹ, ಟಿ.ಎನ್.ಕೋಟೆ ಕೊಂಡದ ಚಿತ್ತಮ್ಮ, ಕೋಣದದೇವರು ಮತ್ತು ಆಂದ್ರಪ್ರದೇಶದ ಅಯ್ಯಗಾರ್ಲಹಳ್ಳಿ ತಾಳಿದೇವರು ಚನ್ನಮ್ಮನಾಗತಿಹಳ್ಳಿ ಕ್ಯಾತೆದೇವರ ದೇವಸ್ಥಾನಕ್ಕೆ ಬಂದು ಸೇರುವುದು.
- ❖ ಅಕ್ಕಮ್ಮನ ದೇವಸ್ಥಾನದ ಬಳಿ ಮಜ್ಜನಬಾವಿ, ಗಂಗಾಪೂಜೆ
- ❖ ವಸತಿ ದಿಬ್ಬದ ಕಳ್ಳೆಮುಳ್ಳಿನ ಗುಡಿಯಲ್ಲಿ ಪೆಟ್ಟಿಗೆ ದೇವರುಗಳ ಪ್ರತಿಷ್ಠಾಪನೆ
- ❖ ಹುತ್ತದ ಪೂಜೆ, ಕೊಣದ, ಏಳು ಮಂದಿ ಅಕ್ಕಮ್ಮಗಳು, ಆವಿನ ಗೂಡು ಮತ್ತು ಕರವಿನಗೂಡಿನ ಪೂಜೆ
- ❖ ಗುಡಿ ಮುಂದೆ ನವಣೆ ಅನ್ನ ನೈವೇದ್ಯ ದಾಸೋಹದ ಮೂಲಕ ನವಣೆ ವ್ರತ ವಿಸರ್ಜನೆ
- ❖ ಜಾತ್ರೆಯಲ್ಲಿ ಭಕ್ತಾಧಿಗಳಿಂದ ಪೂಜಾ ಖರ್ಚು-ವೆಚ್ಚ ಸ್ವೀಕರಿಸುವುದು, ಕಳಶ ಕೀಳುವುದು.

❖ ಪರಿವಾರದ ದೇವರುಗಳು ಚನ್ನಮ್ಮನಾಗತಿಹಳ್ಳಿ ಕ್ಯಾತೇದೇವರ ಮೆರವಣಿಗೆ
❖ ದೇವರುಗಳು ಆಯಾ ಸ್ಥಳಗಳಿಗೆ ಹಿಂದಿರುಗುವುದು.
❖ ಹುರುಳಿಧಾನ್ಯ ನೈವೇದ್ಯ, ಕಂಕಣ ವಿಸರ್ಜನೆ
❖ ಮಹಾ ಮಂಗಳಾರತಿ, ಪ್ರಸಾದ ಸ್ವೀಕಾರ.

ಕ್ಯಾತಪ್ಪನನ್ನು ಕುರಿತ ಜನಪದ ಕಥನ ಗೀತೆಗಳು ಕಾಡುಗೊಲ್ಲರಲ್ಲಿ ಮಾತ್ರ ಅತಿ ಹೆಚ್ಚಾಗಿ ಕಂಡುಬರುತ್ತವೆ. ಕ್ಯಾತಪ್ಪನನ್ನು ಕುರಿತ ಜನಪದ ಕಾವ್ಯಗಳನ್ನು ಅಂಬಳಿಕೆ ಹಿರಿಯಣ್ಣ (ಕಾಡುಗೊಲ್ಲರ ಜನಪದ ಗೀತೆಗಳು) ಮತ್ತು ಕೃಷ್ಣಮೂರ್ತಿ ಹನೂರು (ಮ್ಯಾಸಬೇಡರ ಸಂಸ್ಕೃತಿ ಅಧ್ಯಯನ). ಮೈತ್ರಿ ಕೆ.ಎಂ ಅವರು (ಕೃಷ್ಣಗೊಲ್ಲರ ಕಥನ ಕಾವ್ಯ) ಕೇವಲ ಕಾಡುಗೊಲ್ಲರಿಂದ ಮಾತ್ರ ಸಂಗ್ರಹಿಸಿದ್ದಾರೆ. ನಾನು ಕ್ಷೇತ್ರಕಾರ್ಯದಲ್ಲಿ ಕಾಡುಗೊಲ್ಲರು ಸೇರಿದಂತೆ ಇತರೆ ಬೇರೆ, ಬೇರೆ ಸಮುದಾಯಗಳಿಂದ ಕ್ಯಾತಪ್ಪನನ್ನು ಕುರಿತ ಜನಪದ ಕಥನ ಗೀತೆಗಳನ್ನು ಸಂಗ್ರಹಿಸಿದ್ದೇನೆ. ಮೊದಲಿನ ಸಂಗ್ರಹಕ್ಕೂ ಈಗಿನ ಸಂಗ್ರಹದ ಗೀತೆಗಳಿಗೆ ಅಲ್ಪ ಸ್ವಲ್ಪ ವ್ಯತ್ಯಾಸ ಕಂಡು ಬಂದರೂ, ಹೇಳಿಕೊಳ್ಳುವಂತ ರೀತಿಯಲ್ಲಿ ಇರುವುದಿಲ್ಲ. ಆದರೆ ಇತ್ತೀಚೆಗೆ ಜನಪ್ರಿಯ ಗೀತೆಗಳ ಭರಾಟೆಯಿಂದ ಜನಪದ ಗೀತೆಗಳು ಜಾಳು ಜಾಳಾಗಿ ಜನಪದರಲ್ಲಿ ಅಭಿವ್ಯಕ್ತಿಯ ಮರುರೂಪ ಪಡೆಯುತ್ತಿವೆ.

ಜನಪದ ಕಾವ್ಯಗಳು ತ್ರಿಪದಿಯ ರೂಪದಲ್ಲಿದ್ದು, ಕ್ಯಾತಪ್ಪನ ಪವಾಡ ಹಾಗೂ ಚಿತ್ರದುರ್ಗ ಪರಿಸರದ ಕಾರ್ಯವೈಖರಿ, ಕ್ಯಾತಪ್ಪನ ಸಂಪ್ರದಾಯ, ನಂಬಿಕೆ, ಆಚರಣೆಗಳನ್ನು ಕುರಿತವುಗಳಾಗಿವೆ. ಅದರಂತೆ ಜಾತ್ರೆಯಲ್ಲಿ ಆಯಾಗಾರರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಆದ್ದರಿಂದ ಜನಪದ ಗೀತೆಗಳಲ್ಲಿ ಅಲ್ಲಲ್ಲಿ ಆಯಾಗಾರರ ಕುರಿತ ಅಂಶಗಳು ಸಿಗುತ್ತವೆ. ಸುಮಾರು ಮೂರು ನೂರಕ್ಕೂ ಹೆಚ್ಚು ತ್ರಿಪದಿಗಳು ಕ್ಯಾತಪ್ಪನನ್ನು ಕುರಿತಂತೆ ಕಂಡುಬರುತ್ತವೆ.

"ಎದ್ದೋನೆ ನೆನದೇವು
ಮುದ್ದು ನಿಂಗಣ್ಣಾನ ದೊಡ್ಡ ಕಂಪಳದ
ವಡಿಯಾನ ತಂದಾನ್ನ ತಾನ
ನಿಂಗಣ್ಣನ ಹೂ ಅರಳ್ಳೊತ್ತೀಲಿ
ನೇನದೇವು ತಂದನ್ನ ತಾನ
ಹದಿಮೂರು ಗುಡಿಕಟ್ಟಿನ
ಲಚ್ಚಾಣಪುರಕೆ ನಡೆದಾನು ತಂದಾನ್ನ ತಾನ"
ಲಚ್ಚಾಣಪುರವೆಂಬ ದೊಡ್ಡ ಗ್ರಾಮದಾಗೆ
ಹೇಮಾರೆಡ್ಡೆರು ಸಾವುಕಾರ್ರು ತಂದಾನ್ನ ತಾನ"

ಬೊಮ್ಮಣ್ಣ ಒಂದು ದಿನ ದನಗಳನ್ನು ಮೇಯಲು ಬಿಟ್ಟು ತಾನು ಜಾಲಿಮರದ ನೆರಳಲ್ಲಿ ಕಂಬಳಿ ಹಾಸಿ ಸುಖ ನಿದ್ರೆ ಮಾಡುತ್ತಿದ್ದಾಗ ನಿಂಗಣ್ಣ ಕರೆದ. ಬೊಮ್ಮಣ್ಣ

ಯಾರಿರಬಹುದೆಂದು ನೋಡಿ ಅವನ ಹತ್ತಿರಕ್ಕೆ ಹೋದ. ಅವನಿಗೆ ರೆಡ್ಡಿಗಳ ಮನೆಯಿಂದ ದನಗಳನ್ನು ಹೊಡೆಯಲು ನಿಂಗಣ್ಣ ತಿಳಿಸಿದಾಗ.

"ಉಂಬಾಕೆ ಇಕ್ಕವರೆ ಕಂಬಳಿ ಕೊಟ್ಟವರೆ
ಉಂಡ ಮನಿಗೆ ಎರಡು ಬಗಿಲಾರೆ"

ಎಂದು ದನ ಹೊಡೆಯಲು ನಿರಾಕರಿಸಿದಾಗ ನಿಂಗಣ್ಣ ಅಂಡ ಉಂಡನ ಮಾಡಿ ದಂಡೆ ಕೊರಳಿಗೆ ಹಾಕಿ ದನಗಳನ್ನು ದುರುಗದ ಮಕನಾಗಿ ಹೊಡೆದ. ಜನಪದ ಕಥೆಯಲ್ಲಿ ಬರುವಂತೆ ಇಲ್ಲಿಯೂ ಕೂಡಾ ಕ್ಯಾತಪ್ಪ ಲಚ್ಚಾಣ(ಕಲ್ಯಾಣ)ಮರದ ಹೇಮರೆಡ್ಡಿ ಮತ್ತು ಭೀಮಾರೆಡ್ಡಿಗಳ ಮನೆಯಿಂದ ದನಗಾಹಿ ಪರಮಭಕ್ತ ಬೊಮ್ಮಣ್ಣನೊಂದಿಗೆ ದನಗಳನ್ನು ಹೊಡೆದುಕೊಂಡು ಪುರ್ಲೆಹಳ್ಳಿಯ ವಸತಿದಿಬ್ಬಕ್ಕೆ ಬಂದು ನೆಲೆಸುತ್ತಾನೆ.

ಬೊಮ್ಮಣ್ಣನು ತನ್ನ ಅಸಹಾಯಕತೆ ಹೇಳಿಕೊಂಡರೂ ಸಹ ಅವನ ಭಕ್ತಿಗೆ ಮೆಚ್ಚಿದ ನಿಂಗಣ್ಣ ಉಳ್ಳಿ ನವಣೆಯನ್ನೇ ಸ್ವೀಕರಿಸಿ, ಬಿಂದಿಗೆಯಲ್ಲಿ ಹಾಲುಕೊಟ್ಟ. ಆದ್ದರಿಂದ ಇಂದಿಗೂ ಅಡವಿಗೊಲ್ಲರು ಉಳ್ಳಿಬತವನ್ನು ಬಹಳ ಕಟ್ಟುನಿಟ್ಟಾಗಿ ಮಾಡುವುದುಂಟು.

"ಅರತಿದ್ದು ನನಗಿರಲಿ ಮರೆತಿದ್ದು ನನಗಿರಲಿ
ಸರ್ವೇ ತಪ್ಪುಗಳು ನನಗಿರಲಿ ಅಂದ
ನಿಂಗಣ್ಣ ಬಲಗೈಲಿ ಬಾಸೆ ಕೊಟ್ಟ"

ಬೊಮ್ಮಣ್ಣನಿಗೆ ಬಲಗೈಲಿ ಬಾಸೆ ಕೊಟ್ಟು ವಸತಿ ದಿಬ್ಬದಲ್ಲಿ ಐಕ್ಯನಾಗುತ್ತಾನೆ. ಹಾಗೆ ಪವಾಡದ ಮೂಲಕ ಹುಲ್ಲುಗಾವಲುಗಳನ್ನು ನಿರ್ಮಾಣ ಮಾಡುವುದು, ರೆಡ್ಡಿಗಳು ದನಗಳನ್ನು ಹುಡುಕಿಕೊಂಡು ಬಂದಾಗ ಕರಿಯಾವನ್ನು ಬಿಳಿದನಗಳನ್ನಾಗಿ ಮಾಡುವುದು, ಬಳ್ಳಾರಿ ತುರುಕರ ವೃದ್ಧ ವೇಷದಲ್ಲಿ ಕಾಣಿಸಿಕೊಳ್ಳುವುದು ಮತ್ತು ಆವಿನಗೂಡು ಮತ್ತು ಕರವಿನಗೂಡುಗಳನ್ನು ಕಟ್ಟುವುದು, ನವಣೆ ಕುಟ್ಟುವುದು, ಕಳ್ಳೆ ಮುಳ್ಳಿನಗುಡಿ ನಿರ್ಮಾಣ ಮತ್ತು ಕಳಶ ಪ್ರತಿಷ್ಠಾಪನೆ ಮಾಡುವ ಮತ್ತು ಕೀಳುವ ಸಂದರ್ಭವನ್ನು ಜನಪದರು ತುಂಬಾ ಭಾವಾವೇಷದಿಂದ ಕಟ್ಟಿ ಹಾಡುವುದು ಕಂಡು ಬರುತ್ತದೆ.

"ಕಳ್ಳೆಗುಳ ಕಡುದಾರೆ ಮುಳ್ಳುಗಳ ಬಡುದಾರೆ
ಸಣ್ಣಾ ಕುರಿಕೇಯ ನೆಡೆವೋರು-ದಿನ್ನೇಲಿ
ಅಪ್ಪಯ್ಯಗು ಬೆರಗು ತಿರಿವ್ಯಾರೆ.
ಲಿಂಗಾನ ಗುಡಿಸುತ್ತ ಬಂಗಾರದ ಬಸುವಣ್ಣ
ತುಂಬು ವಾರೇಯ ಧಾರೆ ಹಲಗೇಯ
ಗುಡಿಯಾಗಿರುವ ಲಿಂಗನೆ
ನೀವು ಕೇಳಿರೆ ಸಿವನ್ಮಡಿಯ"

ಮಾನವನ ವರ್ತನೆಗಳು ಕಾಲಕ್ಕೆ ತಕ್ಕಂತೆ ಬದಲಾವಣೆ ಆಗುತ್ತಾ ಇದ್ದರೂ, ಅವನ ಅಂತರ್ಯದಲ್ಲಿ ಮೂಡಿದ ಮೌಢ್ಯತೆಯನ್ನು ಬಿಟ್ಟು ಬರಲು ಕಷ್ಟವಾಗುತ್ತದೆ. ಅದು ಈ ಗೀತೆಗಳಲ್ಲಿ ಮೂಡಿಬಂದಿದೆ. ಭಾರತೀಯ ಸಂಸ್ಕೃತಿಯಲ್ಲಿ ಮೇಲು-ಕೀಳು ಒಂದು ಅಂಟುರೋಗ, ಬೆನ್ನುಬಿಡದೆ ಹಿಂಬಾಲಿಸಿರುವಂಥದ್ದು. ಇದು ಸಮಾನತೆ

ಸಾರಿದ ವ್ಯಕ್ತಿಗಳನ್ನೂ ತಟ್ಟದೆ ಬಿಟ್ಟಿಲ್ಲ. ಹಗಲು, ಇರುಳೆನ್ನದೆ ಭಕ್ತ ಬೊಮ್ಮಣ್ಣನೊಂದಿಗೆ ಕಾಡಡವಿಯಲ್ಲಿ ದನಗಳನ್ನು ಮೇಯಿಸಲು ಕ್ಯಾತಪ್ಪ ಅವನ ಏಳಿಗೆಗಾಗಿ ಶ್ರಮಿಸುತ್ತಾನೆ. ಅವನಿಗೆ ನೀತಿ, ಧರ್ಮಮಾರ್ಗವನ್ನು ಬೋಧಿಸಿದ ಕ್ಯಾತಪ್ಪ ದನಗಳನ್ನು ಬಿಟ್ಟು ಬಹುದೂರ ಹೋಗಲು ಪ್ರಯತ್ನಿಸುತ್ತಾನೆ.

"ಹಾಲು ಕಂಬೀ ಮೇಲೆ ತಾ ಬಂದ ನಿಂಗಣ್ಣ
ತಾಮೂರದ ಸೆಂಬು ಬಲಗೈಲಿ–ಕನ್ನರ ಬಂಡೆ
ದಿಕ್ಕೊಳ್ಳೆಡೆಯ ನೆಲೆಗೊಂಡ
ಬಾಳೆಕಾಯಿ ವೂವ ಚಂದ
ಕೇತಪ್ಪನ ಗುಡಿ ಚಂದ"

ಕ್ಯಾತಪ್ಪ ಸಾಂಕೇತಿಕವಾಗಿ ನೆಲೆಗೊಂಡಿರುವ ಪರಿಸರದಲ್ಲಿ ಜನರ ಜೀವನ ಮಳೆ–ಬೆಳೆ ಸಮೃದ್ಧಿಯಿಂದ ಕೂಡಿರುವಂಥದ್ದು, ಕ್ಯಾತಪ್ಪ ನೆಲೆಗೊಂಡಿರುವ ಸ್ಥಳ ಮತ್ತು ಜಾತ್ರೆ ನೆಡೆಯುವ ಸ್ಥಳದ ಕಳ್ಳೆ ಮುಳ್ಳಿನ ಗುಡಿ ಕುರಿತ ಗೀತೆಗಳು ಅದ್ಭುತವಾಗಿ ವರ್ಣಿತವಾಗಿವೆ.

'ಅಕ್ಕಗಳು ಏಳೀರಿ ಮುತ್ತು ಸರಗೊಳ್ಳೀರಿ
ಲೆಕ್ಕವಿಲ್ಲುದ ತಾಳಿ ಕೊರುಳೋರು–ಅಕ್ಕಮಗಳು
ಅಕ್ಕಗಳು ಎದ್ದು ಕೊಣಲೂದಿ
ಅಕ್ಕುಗಳು ಆಡ್ಯಾರೆ ಆಲಾದ ಮರುದಡಿಯ
ಕೆಕ್ಕೋಲು ಒಯ್ದೆ ಕರಿಯಾಲದ–ಮರಡಿಯ
ಅಕ್ಕುಗಳೇ ಸಿಕ್ಕ ಒಡುದಾರೆ."

(ಹಿರಿಯಣ್ಣ.ಕಾ.ಗೊ.ಜ.ಗೀ.ಪು ೯೦)

ವಸತಿ ದಿಬ್ಬದ ಕರವಿನಗೂಡು, ಆವಿನಗೂಡು, ಮಜ್ಜನ (ಅಕ್ಕುಗಳ) ಬಾವಿ, ಹೊಳೆಪೂಜೆ ಬಗೆಗಿನ ವರ್ಣನೆಯನ್ನು ಕುರಿತು ಹಾಗೂ ಕ್ಯಾತಪ್ಪನನ್ನು ವಿವಿಧ ರೀತಿಯಲ್ಲಿ ಆರಾಧನೆಗೆ ಒಳಪಡಿಸುತ್ತಿರುವ ಲಿಂಗಗಳ ಆಕಾರದ ಕಲ್ಲುಗಳನ್ನು ಕುರಿತು ಭಕ್ತಿ ಪೂರ್ವಕವಾಗಿ ಕಾವ್ಯಗಳನ್ನು ಕಟ್ಟಲಾಗಿದೆ.

ಜನಪದರು ಹಬ್ಬ–ಜಾತ್ರೆಗಳಲ್ಲಿ ಅತೀ ಉತ್ಸಾಹದಿಂದ ಕ್ಯಾತಪ್ಪನನ್ನು ಕುರಿತಂತೆ ಸಂಪ್ರದಾಯನಿಷ್ಠ ಗೀತೆಗಳನ್ನು ಹಾಡುತ್ತಾರೆ. ದೈವ ಸ್ವರೂಪಿಯಾದ ಕ್ಯಾತಪ್ಪನನ್ನು ತಮ್ಮವನನ್ನಾಗಿ ಮಾಡಿಕೊಂಡು ಹೊಗಳುತ್ತಾ ಭಾವಾವೇಶದಲ್ಲಿ ಮುಳುಗಿ ಆನಂದ ಪಡುವಂತಹ ಸಂದರ್ಭವೇ ಜಾತ್ರೆಯಾಗಿದೆ. ಕ್ಯಾತಪ್ಪನ ಭಯ, ಭಕ್ತಿನಿಷ್ಠೆಗೆ ಪ್ರೇರಕವಾದ ಉತ್ಸವದ ವರ್ಣನೆಯನ್ನು ಭಾವನಾತ್ಮಕವಾಗಿ ಹಾಡುತ್ತಾರೆ. ಜಾತ್ರೆಯಲ್ಲಿ "ಕಳ್ಳೆಮುಳ್ಳಿನ ಗುಡಿ ಮೇಲೆ ಕಳಶ ಏರಿಸುವ ಮತ್ತು ಕೀಳುವ ರೋಚಕ ಕ್ರಿಯೆ ಅತಿ ಶ್ರೇಷ್ಠವಾಗಿರುತ್ತದೆ. ಪೆಟ್ಟಿಗೆ ದೇವರುಗಳ ಮೇಲೆ ಮಂಡಕ್ಕಿ, ವಿಳ್ಯೇದೆಲೆ, ಕಡಲೆಕಾಯಿ, ಇತರೆ ಧಾನ್ಯಗಳನ್ನು ಎಸೆಯುವ, ಆರತಿ ಮಾಡುವ ಮೊದಲಾದುವುಗಳನ್ನು ಈ ಕಾವ್ಯಗಳಲ್ಲಿ ಪ್ರಸ್ತಾಪಿಸಿದ್ದಾರೆ.

ಸಂಪ್ರದಾಯದ ಚೌಕಟ್ಟಿನೊಳಗೆ ರಚನೆಚೂದಂತಹ ಹಲವು ಗೀತೆಗಳಲ್ಲಿ ಹರಕೆಗಳನ್ನು ಕುರಿತ ಅಂಶಗಳನ್ನು ಕಾಣಬಹುದು.

"ಹಾಲು ಅನ್ನವ ಕೊಡುವೆ ತೂಗಾ ಮಂಚವ ಕೊಡುವೆ
ನೀವು ಮೂರ್ತಿಂಗಳಾ ಬತುಗಳೇ ಹಿಡಿದಾರೆ
ನಾ ನಿಮುಗೆ ಜೋಳಿಗೆ ಹೊನ್ನ ಕೊಡುವೇನು"

ಇಂತಹ ನಂಬಿಕೆ, ಸಂಪ್ರದಾಯ-ಆಚರಣೆಗಳು ಜನಪದವನ್ನು ಬಿಗಿಮುಷ್ಠಿಯಲ್ಲಿ ಬಂಧಿಸಿವೆ. ಈ ಸಂಪ್ರದಾಯಗಳಿಗೆ ಕಟಿಬದ್ಧರಾಗಿ ಬದುಕುವ ಕಾಡುಗೊಲ್ಲರು ವಾರದ ಆಚರಣೆಗಳನ್ನು ಚಾಚು ತಪ್ಪದೆ ನೇಮನಿಷ್ಠರಾಗಿ ಆಚರಿಸುತ್ತಾರೆ. ಸಾಮಾನ್ಯವಾಗಿ ಮನುಷ್ಯನಿಗೆ ಸಾವು-ನೋವುಗಳು ಸಂಭವಿಸುವ ಸಂದರ್ಭದಲ್ಲಿ ಅವರ ನೋವು ನಲಿವೆಗೆ ಸ್ಪಂದಿಸುವಂಥಹವರೆಂದರೆ, ಅವರು ನಂಬಿಕೊಂಡಿರುವ ದೈವ-ದೇವತೆಗಳು, ಮಳೆ ಬಾರದಿರುವಾಗ, ಮನೆಯಲ್ಲಿ ಮಕ್ಕಳು ಮರಿಗಳಿಗೆ, ಹಸು, ಕರುಗಳಿಗೆ ಯಾವುದೇ ಅನಾಹುತ ಸಂಭವಿಸಿದರೂ, ದೇವರ ಮೊರೆ ಹೋಗುತ್ತಾರೆ. ದೇವರ ಮೊರೆಯಿಂದ ಸಕಾಲಕ್ಕೆ ಪರಿಹಾರ ಸಿಕ್ಕರೆ ಮಾಡಿಕೊಂಡ ಹರಕೆಯನ್ನು ತೀರಿಸಲು ನೇಮಬದ್ಧರಾಗಿ ಅವರ ಕುಟುಂಬದ ಸದಸ್ಯರೆಲ್ಲರೂ ಭಾಗವಹಿಸುತ್ತಾರೆ. ಜಾತ್ರೆಯಲ್ಲಿ ಇಂತಹ ಹರಕೆ, ಸಂಪ್ರದಾಯಗಳಿಗೇನು ಕಡಿಮೆಯೇ, ಜನರು ಹೊತ್ತು ತರುವ ಹರಕೆಗಳು ಹಲವಾರು. ಅವುಗಳನ್ನು ಕಟ್ಟಿ ಹಾಡುವುದು ಕೂಡಾ ಮಹತ್ವದ್ದಾಗಿರುತ್ತದೆ.

'ಕಂಡುಗದ ಜಡಿಯೋನು ಕಂಡೇವೇರಿ ಮ್ಯಾಲೆ
ಕಂಡುಗದ ಈಬೂತಿ ದರಿಸೋನು-ನಿಂಗಣ್ಣ
ಕಂಡೇವಕ್ಕಳ ಗುಡಿಯಾಗೆ ತಂದನ್ನ ತಾನ'

ಹೀಗೆ ನಾನಾ ಬಗೆಯಿಂದ ಕ್ಯಾತಪ್ಪನ ಸ್ವರೂಪ ಮತ್ತು ಆತನ ಪವಾಡದ ಮಹಿಮೆಯನ್ನು ಹೊಗಳುವ ರೀತಿಯಲ್ಲಿ ಹಾಡುತ್ತಾ ತಮ್ಮ ಲೌಕಿಕ ಜೀವನಕ್ಕೆ ಸಮೀಪಿಸುವ ರೀತಿಯಲ್ಲೂ ಭಕ್ತಿಯಿಂದ ಹಾಡುತ್ತಾರೆ. ಹಾಗೆಯೇ ಕೋಲಾಟದ ಪದಗಳಲ್ಲಿ, ಭಜನೆ ಪದಗಳಲ್ಲಿ ಕೂಡಾ ಇದೇ ತರಹದ ವಸ್ತು ಸಾಹಿತ್ಯ ಕಂಡುಬರುತ್ತದೆ. ಹಬ್ಬ, ಉತ್ಸವಗಳಲ್ಲಿ ಉರುಮೆ (ವಾಲಗ) ನುಡಿಸುವಾಗ ಒಬ್ಬನೆ ದೇವರ ಬಗೆಗಿನ ಗಗ್ಗರ (ಕಗ್ಗ) ಪದಗಳನ್ನು ಏರು ಧ್ವನಿಯಲ್ಲಿ ಹಾಡುತ್ತಾನೆ. ಅದನ್ನು ಆಲಿಸಿದ ಭಕ್ತರು ಕೇಕೆ ಹಾಕಿ ವಾಲಗದ ದನಿಗೆ ಹೆಜ್ಜೆ ಹಾಕುತ್ತ ಕುಣಿಯುತ್ತಿರುತ್ತಾರೆ. ಈ ಹಾಡುಗಳಲ್ಲಿ ದೇವರ ಸಾಹಸ, ಪವಾಡಗಳು ನಿರೂಪಿತವಾಗಿರುವುದನ್ನು ಕಾಣಬಹುದು. ಹೆಣ್ಣು ಮಕ್ಕಳು ದೇವರ ಬಗೆಗಿನ ಸೋಬಾನೆ ಪದಗಳನ್ನು ಒಬ್ಬರೆ ಹಾಡುವುದಿಲ್ಲ. ಕನಿಷ್ಠ ನಾಲ್ಕೈದು ಜನ ಗುಂಪು ಕಟ್ಟಿಕೊಂಡು ಹಾಡುತ್ತಾರೆ. ಇಲ್ಲಿ ಹಿಮ್ಮೇಳ-ಮುಮ್ಮೇಳಗಾರರು ಇರಲೇಬೇಕು. ಇಲ್ಲಿ ರಾಗಕ್ಕಿಂತ ಸಾಹಿತ್ಯಕ್ಕೆ ಹೆಚ್ಚಿನ ಹೊತ್ತು ನೀಡುತ್ತಾರೆ. ಸಾಂಸ್ಕೃತಿಕ ವೀರರ ಕಾವ್ಯಗಳನ್ನು ಸ್ತ್ರೀಯರು ಹಾಗೂ ಪುರುಷರೂ ಹಾಡುವುದುಂಟು. ದೈವವನ್ನು ಮತ್ತು ಪರಂಪರೆಯ ನಡೆವಳಿಕೆಯನ್ನು ಪವಿತ್ರ ಭಾವನೆಯಿಂದ ಕಾಣುವ ಅವರು ತಮ್ಮ ಮೌಖಿಕ ಸಂಪ್ರದಾಯದಲ್ಲಿ ಬಹು ದೊಡ್ಡ ಕಾವ್ಯಪರಂಪರೆಯೊಂದನ್ನು

ಬೆಳೆಸಿಕೊಂಡು ಬಂದಿದ್ದಾರೆ. ಕೇತಪ್ಪನ ಕುರಿತ ಈ ಮಹಾಕಾವ್ಯ ಅವರ ಪಶುಪಾಲಕ ಜೀವನದ ಇತಿಹಾಸವನ್ನು ನಿರೂಪಿಸುವುದರ ಜೊತೆಗೆ ಅವರ ದೈವಗಳ ಕುರಿತ ಇತಿಹಾಸವನ್ನು ನಿರೂಪಿಸುತ್ತದೆ.

ಕ್ಯಾತಪ್ಪನ ಕಾವ್ಯ ಇಲ್ಲಿ ಪ್ರಾತಿನಿಧಿಕ ಎಂದು ಭಾವಿಸಿ ಈ ಕಥೆಯನ್ನು ನಿರೂಪಿಸುತ್ತೇನೆ. ಆದರೆ ಅವರ ಕಥೆಯಲ್ಲಿ ಕೇತಪ್ಪನ ಕಾವ್ಯವಲ್ಲದೆ, ಬೋಮಣ್ಣನ ಕಾವ್ಯ, ಎತ್ತಪ್ಪ, ಜುಂಜಪ್ಪ, ಚಿತ್ತಯ್ಯ, ಕಾಟಯ್ಯ ಮುಂತಾದ ಆರಾಧ್ಯ ದೈವಗಳ ಕಾವ್ಯಗಳು ಅತ್ಯಂತ ವೈವಿಧ್ಯಮಯವಾಗಿ ರೂಪಿತವಾಗಿವೆ. ಈ ಕಾವ್ಯಗಳಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ. ತಮ್ಮ ದೇವರಿಗಾಗಿ ಕರಿಯಣ್ಣ ನಡೆಸುವ ಹೋರಾಟ ಸಮುದಾಯದ ಪರವಾಗಿದ್ದು ವಿಶೇಷವಾಗಿ ಗಮನ ಸೆಳೆಯುತ್ತದೆ. ದುರ್ಗದ ಕಡೆಯಿಂದ ಭರಮಣ್ಣನಾಯಕನ ದಂಡು ಗೊಲ್ಲರಹಟ್ಟಿ ಕಡೆಗೆ ಬರುತ್ತದೆ. ಆಗ ಕರಿಯಣ್ಣ ದೇವರನ್ನು ಹೊತ್ತುಕೊಂಡು ಹಟ್ಟಿಯಿಂದಾಚೆಗೆ ಓಡುತ್ತಾನೆ. ದಾರಿಯಲ್ಲಿ ಬೇಡರು–ತುರುಕರು ಇದಿರಾಗುತ್ತಾರೆ. ಅತ್ತದರಿ–ಇತ್ತಪುಲಿ ಎಂಬಂತಾಗುತ್ತದೆ. ಕರಿಯಣ್ಣನಿಗೆ ದಿಕ್ಕೇ ತೋಚದಂತಾಗುತ್ತದೆ. ಜೀವದಾಸೆ ಬಿಟ್ಟು ತುರುಕರೊಂದಿಗೆ ಕಾದಾಟ ನಡೆಸುತ್ತಾನೆ.

‘ಒಬ್ಬನೆ ಕರಿಯಣ್ಣ ದಿಬ್ಬಗುಂಟ ಬರುವಾಗ
ಕಬ್ಬಕ್ಕಿ ಹಿಂಡೇ ಕವಿದಾವೆ–ಕರಿಯಣ್ಣ
ಒಬ್ಬನೆ ಕಾದಿ ಮಡಿದಾನು’

ತುರುಕರು ಈರಣ್ಣನ ಮೇಲೆರಗಿ ಅವನನ್ನು ಈಡಾಡಿದ ಸನ್ನಿವೇಶ ತುರುಕರ ಸೈನ್ಯದ ಅಮಾನವೀಯ ವರ್ತನೆಗೆ ಸಾಕ್ಷಿಯಾಗಿದೆ.

‘ಈರಣ್ಣ ಮಡುದಾತಾವು ನೀರುಪಲ್ಲಟವಾಗಿ
ನೀರೆಂದು ಕುಡಿದಾರು ರೈತಾವ
ಅಪ್ಪ ಮಡುದಾತಾನ ತುಪ್ಪಾಪಲ್ಲಟದಲ್ಲಿ
ಅಪು ಕರಿಯಣ್ಣಾ ಮಡುದಲ್ಲಿ – ತುರುಕಾರು
ತುಪ್ಪೆಂದು ಕುಡಿದಾರೆ ರಯಿತಾವ’

ತುರುಕರು ಕ್ಯಾತಪ್ಪ ದೇವರನ್ನು ಸೆರೆಹಿಡಿದು ದುರ್ಗಕ್ಕೆ ಕೊಂಡೊಯ್ದ ಸಂದರ್ಭದಲ್ಲಿ ಹಟ್ಟಿಗೊಲ್ಲರು ತಮ್ಮ ದೇವರುಗಳನ್ನು ಬಿಟ್ಟುಕೊಡಬೇಕೆಂದು ಪರಿಪರಿಯಾಗಿ ಬೇಡುತ್ತಾರೆ. ಎತ್ತುಗಳು ಕೊಟ್ಟೇವು, ಮುತ್ತುಗಳ ಕೊಟ್ಟೇವು ನಮ್ಮ ದೇವರ ನೀವು ಕೊಡಿರಣ್ಣ ಎಂದು ಅಂಗಲಾಚುತ್ತಾರೆ. ಆಗ ಗೊಲ್ಲರ ಆಕ್ರಂದನಕ್ಕೆ ಸೈನಿಕರು ಸೊಪ್ಪು ಹಾಕದೆ ಮುಂದೆ ಹೋಗುತ್ತಾರೆ. ಆಗ ಗೊಲ್ಲರು ತುರುಕರಿಗೆ ಹಿಡಿ ಶಾಪಹಾಕುವುದರ ಮೂಲಕ ತಮ್ಮ ಅಸಹಾಯಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾರೆ.

‘ಎತ್ತುಗಳ ಸೆರೆಹೊಯ್ದು ಎಮ್ಮೆಗಳ ಸೆರೆಹೊಯ್ದು
ಅಪ್ಪಾನಿಂಗಣ್ಣಾನ ಸೆರೆಹೊಯ್ದು–ತುರುಕಾರ
ಸುಪ್ಪತ್ತಿಗೆ ಇಂದೇ ಉರಿಯಾಲಿ
ಏಳಗಾಲ ಪುತ್ರಮ್ಮಗೆ ಸಿಡಿಲೇ ಬಡಿಯಾಲಿ
ಮೈಯಾಗಳ ಮುತ್ತಿನ ವೊನ್ನಾ ಕಳಸ ಸಿಡಿಯಾಲಿ’

ಇಲ್ಲಿ ಮುಸ್ಲಿಮರು ಗೊಲ್ಲರ ಹಟ್ಟಿಯೊಂದನ್ನು ಲೂಟಿ ಮಾಡಿರಬಹುದಾದ ಸನ್ನಿವೇಶವನ್ನು ಚಿತ್ರಿಸುತ್ತದೆ. ಚಿತ್ರದುರ್ಗ ಪಟ್ಟಣವನ್ನು ವಶಪಡಿಸಿಕೊಳ್ಳಲು ಹೈದರಾಲಿ ತನ್ನ ಸೈನ್ಯ ಸಮೇತ ಬಂದು ದುರ್ಗದ ಕೋಟೆ ಮುಂದೆ ಆರು ತಿಂಗಳು ಬೀಡುಬಿಟ್ಟ ಬಗ್ಗೆ ಚರಿತ್ರೆ ತಿಳಿಸುತ್ತದೆ. ಆಗ ಸಿಪಾಯಿಗಳು ಆಹಾರಕ್ಕಾಗಿ ಸುತ್ತ ಮುತ್ತಲ ಗ್ರಾಮಗಳ ಮೇಲೆ ದಾಳಿ ಇಟ್ಟಿರಬೇಕು.ಇಂತಹ ಘಟನೆಯೊಂದರ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಕಥೆ ಇದು ಎನಿಸುತ್ತದೆ ಎಂಬುದು ಡಾ.ಕೃಷ್ಣಮೂರ್ತಿ ಹನೂರು ಅವರ ಅಭಿಪ್ರಾಯವಾಗಿದೆ.

ಈ ಸಮುದಾಯದ ಕಾವ್ಯಗಳಲ್ಲಿ ಹುದುಗಿರುವ ಶಾಪಗಳು, ಕಂಟಕಗಳು, ಅಂಟುಮುಂಟು, ಮತಾಂತರ, ಪಾವಿತ್ರ್ಯನಾಶ, ದೇವರಿಗೋಸ್ಕರ ತ್ಯಾಗ, ಪವಾಡಗಳು, ನಿರಾಕರಣ-ಸ್ವೀಕರಣ, ಬಹಿಷ್ಕಾರ ಶುದ್ಧೀಕರಣ, ವ್ರತ ನಿಷೇಧ, ಕಣಿ ಭವಿಷ್ಯ, ಮಾಟ ಮಂತ್ರ ಈ ಮೊದಲಾದ ಆಶಯಗಳ ನೆಲೆಗಟ್ಟಿನಲ್ಲೂ ಧಾರ್ಮಿಕ ಸಂಘರ್ಷವನ್ನು ಕಂಡುಕೊಳ್ಳಲಾಗಿದೆ. ಶಾಪಗಳು ಧಾರ್ಮಿಕ ಸ್ವರೂಪವನ್ನು ಪಡೆದುಕೊಂಡಿವೆ. ಈ ಮಾದರಿಯ ಶಾಪಗಳ ಉಲ್ಲೇಖ ಕ್ಯಾತಪ್ಪನ ಕಾವ್ಯಗಳಲ್ಲಿ ಕಂಡುಬರುತ್ತದೆ.

ದೇವರು ಮತ್ತು ದನಗಳೇ ಅವರ ಸರ್ವಸ್ವ. ಅವೇ ಅವರ ಮೂಲ ದೈವಗಳು. ಆದ್ದರಿಂದ ಅವರು ತಮ್ಮ ದನಕರುಗಳಿಗೆ ನೀಡಿರುವ ಪ್ರಾಧಾನ್ಯತೆ ಮುಂತಾದ ಅಂಶಗಳು ಮೌಖಿಕ ಕಾವ್ಯಗಳಲ್ಲಿ ಕಂಡುಬರುತ್ತವೆ. ಆರಾಧ್ಯ ದೈವಾದ ಕ್ಯಾತಪ್ಪ, ಶ್ರೀಮಂತರಾದ ರೆಡ್ಡಿಗಳ ಸರ್ವ ಸಂಪತ್ತನ್ನು ನಾಶ ಮಾಡುವುದಲ್ಲದೆ, ಅವರಲ್ಲಿನ ದುರಹಂಕಾರವನ್ನು ಕಡಿಮೆ ಮಾಡುತ್ತಾನೆ. ಮತ್ತು ಕ್ಯಾತಪ್ಪ ಅವನೊಬ್ಬ ದನಗಾಹಿ ಎಂಬಂತೆ ಕಂಡು ಬಂದರೂ ಅವನಲ್ಲಿನ ಛಲ, ಆತ್ಮವಿಶ್ವಾಸ ಹಾಗೂ ತಾಳ್ಮೆ ಮತ್ತು ಪಶುಪಾಲನೆ ವೃತ್ತಿಯಲ್ಲಿನ ಪ್ರಾಮಾಣಿಕತೆ ಇವು ಆತನನ್ನು ನಾಯಕನನ್ನಾಗಿಸಿವೆ ಎಂಬಂತಹ ಅಂಶಗಳು ತಾವುಗಳು ಕಟ್ಟಿಕೊಂಡಿರುವ ಸೃಷ್ಟಿ ಪುರಾಣಗಳಲ್ಲಿ ಉಲ್ಲೇಖಿತವಾಗಿವೆ. ನಂಬಿಕೆ, ಸಂಪ್ರದಾಯ, ಆಚರಣೆಗಳು ಜನಪದರನ್ನು ಬಿಗಿಮುಷ್ಠಿಯಲ್ಲಿ ಹಿಡಿದಿವೆ. ಈ ಸಂಪ್ರದಾಯಗಳಿಗೆ ಕಟಿಬದ್ಧರಾಗಿ ಬದುಕುತ್ತಾರೆ. ವಾರದ ಆಚರಣೆಗಳನ್ನು ಚಾಚು ತಪ್ಪದೇ ಆಚರಿಸುತ್ತಾರೆ. ಮನುಷ್ಯನಿಗೆ ಸಾವು-ನೋವು ಸಂಭವಿಸುವ ಸಂದರ್ಭದಲ್ಲಿ ಅವರ ನೋವಿಗೆ ಸ್ಪಂದಿಸುವಂತವರೆಂದರೆ ಅವರು ನಂಬಿಕೊಂಡು ಬಂದಿರುವ ದೇವರು ಮಾತ್ರವೇ ಎನ್ನುವುದು ಇವರ ಪ್ರಬಲ ವಿಶ್ವಾಸ. ಮಳೆ ಬರಲಿ, ಮನೆಯಲ್ಲಿನ ಮಕ್ಕಳು ಮರಿಗಳಿಗೆ, ಹಸು ಕರುಗಳಿಗೆ ಹೀಗೆ ಯಾವುದೇ ಅನಾಹುತ ಸಂಭವಿಸಿದರೂ, ದೇವರ ಮೊರೆ ಹೋಗುತ್ತಾರೆ. ದೇವರ ಮೊರೆಯಿಂದ ಸಕಾಲಕ್ಕೆ ಪರಿಹಾರ ಸಿಕ್ಕರೆ ಮಾಡಿಕೊಂಡ ಹರಕೆಯನ್ನು ತೀರಿಸಲು ಬದ್ದರಾಗಿರುತ್ತಾರೆ.

ಒಟ್ಟಿನಲ್ಲಿ ಕ್ಯಾತಪ್ಪ ಈ ಬುಡಕಟ್ಟಿನ ಜನರೊಂದಿಗೆ ಬೆರೆತುಕೊಂಡಿರುವುದನ್ನು ಇಡೀ ಜನಪದ ಸಾಹಿತ್ಯದ ಉದ್ದಕ್ಕೂ ನೋಡುತ್ತೇವೆ. ಬುಡಕಟ್ಟು ಜನರ ಸಂಸ್ಕೃತಿಗಾಗಿ ಹೋರಾಟ ಮಾಡಿದ ಸಾಂಸ್ಕೃತಿಕ ವೀರರನ್ನನ್ನಾಗಿ ಗುರುತಿಸಿಕೊಳ್ಳಲಾಗಿದೆ. ಕ್ಯಾತಪ್ಪನ

ಕುರಿತಂತೆ ಕಥೆ, ಗೀತೆ, ಐತಿಹ್ಯ ಬಯಲುಸೀಮೆಯ ಪ್ರದೇಶದಲ್ಲಿ ಮನೆ ಮಾತಾಗಿ ಬೆಳೆದು ಬಂದಿವೆ. ಅವು ಇಂದಿಗೂ ಮುಂದುವರೆದುಕೊಂಡು ಬರುತ್ತಿವೆ ಎನ್ನುವುದೇ ಕುತೂಹಲಕರ ಸಂಗತಿ.

ಪರಾಮರ್ಶನ ಗ್ರಂಥಗಳು :

೧. ಡಾ.ಕೃಷ್ಣಮೂರ್ತಿ ಹನೂರು : ಕತ್ತಲ ದಾರಿ ದೂರ, ಕಸಾಪ, ಬೆಂಗಳೂರು
೨. ಡಾ.ಅಂಬಳಿಕೆ ಹಿರಿಯಣ್ಣ : ಕಾಡುಗೊಲ್ಲರ ಜನಪದ ಗೀತೆಗಳು
೩. ಡಾ.ಕೃಷ್ಣಮೂರ್ತಿ ಹನೂರು : ಜನಪದ ವೀರಗೀತೆಗಳು
೪. ಡಾ. ಮೈತ್ರಿ.ಕೆ.ಎಂ : ಕೃಷ್ಣಗೊಲ್ಲರ-ಕಾವ್ಯ
೫. ಡಾ.ಕೃಷ್ಣಮೂರ್ತಿ ಹನೂರು : ಜನಪದ ವೀರಗೀತೆಗಳು
೬. ಮಲ್ಲಿಕಾರ್ಜುನ.ಕೆ.ಎಂ : ಕಾಡುಗೊಲ್ಲರ ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ.
೭. ಲಕ್ಷ್ಮಣ್ ತೆಲಗಾವಿ : ಚಿತ್ರದುರ್ಗದ ರಾಜಾ ಬಿಚ್ಚುಗತ್ತಿ ಭರಮಣ್ಣನಾಯಕ
೮. ಡಾ.ಮೀರಾಸಾಬಿಹಳ್ಳಿ ಶಿವಣ್ಣ.ಪಿ.ಬಿ : ಕಾಡುಗೊಲ್ಲರ ಸಂಸ್ಕೃತಿ.
೯. ಗೌಡ ಕೆಂಜೆಡೆಯಪ್ಪ : ಕ್ಯಾತಗೊಂಡನಹಳ್ಳಿ, ಚಳ್ಳಕೆರೆ ತಾಲ್ಲೂಕು
೧೦. ಡಾ.ತೀ.ನಂ.ಶಂಕರನಾರಾಯಣ : ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು.
೧೧. ರಾಮದಾಸರೆಡ್ಡಿ ಎಸ್.ಜಿ : ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ.

ಸೀದ್ರೆಗೊಲರ್ಲು ಅಥವಾ ಬೆಕ್ಕಿನ ಬಾಯಿ ತೊಳೆದ ಗೊಲ್ಲರು : ಒಂದು ವಿಶ್ಲೇಷಣೆ

– ಡಾ. ಎಸ್. ಶಿವಣ್ಣ ಬೆಳವಾಡಿ

ಧಾರ್ಮಿಕ ಆಚರಣೆಗಳಲ್ಲಿ ಕಟ್ಟುನಿಟ್ಟಿನ ನಿಯಮ ಪಾಲಿಸುತ್ತಿರುವ ಸಮುದಾಯಗಳಲ್ಲಿ ಕಾಡುಗೊಲ್ಲ ಜನಾಂಗ ಪ್ರಮುಖವಾದುದಾಗಿದೆ. ದನ ಕಾಯುವುದು, ಕುರಿಕಾಯುವುದು ಕಾಡುಗೊಲ್ಲರ ಕಸುಬಾಗಿದ್ದರೂ ದೇವತಾಕಾರ್ಯಗಳೇ ಅವರುಗಳಲ್ಲಿ ಎದ್ದುಕಾಣುವ ಆಚರಣೆಗಳಾಗಿವೆ. ಉಳಿದ ಯಾವ ಸಮುದಾಯವೂ ಕಾಡುಗೊಲ್ಲರಷ್ಟು ದೇವರನ್ನು ನಂಬಿರಲಾರರು. ಹಾಗೆ ನೋಡಿದರೆ ಬೇರೆ ಸಮುದಾಯದವರುಗಳು ಕೂಡ ಕಾಡುಗೊಲ್ಲರ ದೈವಗಳನ್ನೇ ಭಕ್ತಿಯಿಂದ ಪೂಜಿಸುವುದು ವಿಶೇಷವಾಗಿದೆ. ಇದು ಕಾಡುಗೊಲ್ಲರಲ್ಲಿರುವ ದೇವರ ಬಗೆಗಿನ ಭಕ್ತಿ, ಶ್ರದ್ಧೆ ನಂಬಿಕೆಗಳಿಗೂ ಸಾಕ್ಷಿಯಾಗುತ್ತದೆ. ದೇವತಾಕಾರ್ಯದ ಸಂದರ್ಭದಲ್ಲಿ ಯಾವುದೇ ರೀತಿಯಿಂದಲೂ ಒಂದು ಸಣ್ಣತಪ್ಪು ಸಂಭವಿಸದ ರೀತಿಯಲ್ಲಿ ಎಚ್ಚರಿಕೆ ವಹಿಸುವುದನ್ನು ಈ ಜನಾಂಗದವರಲ್ಲಿ ಕಾಣುತ್ತೇವೆ.

ಇದಕ್ಕೊಂದು ಉದಾಹರಣೆಯಾಗಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಬ್ಯಾಡರಹಳ್ಳಿ, ಗೊಲ್ಲರಹಟ್ಟಿಯಲ್ಲಿ ಸೀದ್ರೆಗೊಲ್ಲರು ಅಥವಾ ಬೆಕ್ಕಿನ ಬಾಯಿ ತೊಳೆದ ಗೊಲ್ಲರು ಎಂದು ಒಂದು ಮನೆತನದವರನ್ನು ಕರೆಯುವ ವಾಡಿಕೆಯಿದೆ.

'ಸೀದ್ರೆಗೊಲ್ಲರು' ಅಥವಾ 'ಬೆಕ್ಕಿನ ಬಾಯಿ ತೊಳೆದ ಗೊಲ್ಲರು' ಎನ್ನುವುದು ಕಾಡುಗೊಲ್ಲರಲ್ಲಿ ಇರುವ ಒಂದು ಬೆಡಗಲ್ಲ; ಬ್ಯಾಡರಹಳ್ಳಿಯಲ್ಲಿರುವ ಕರಡೇರ ಗೊಲ್ಲರ ಒಂದು ಮನೆತನಕ್ಕೆ ಬಂದಿರುವ ಹೆಸರಷ್ಟೇ. ಈ ಹೆಸರು ಬರಲು ಮೂಲ ಕಾರಣವೇನೆಂದರೆ ತಮ್ಮ ಹಟ್ಟಿಯ ದೈವವಾದ ತಿಮ್ಮಪ್ಪನಿಗೆ ಶನಿವಾರದ ದಿನ 'ತುಪ್ಪದ ದೀಪ' ವನ್ನೇ ಹಚ್ಚುವುದು. ಅದು ಶುಕ್ರವಾರ ವಾರದ ದನಗಳಿಂದ (ದೇವರಿಗೆ ಮೀಸಲಿಟ್ಟ ಹಸುಗಳಿಂದ) ಹಾಲು ಕರೆದು ಹೆಪ್ಪಾಕಿ, ಮೊಸರು ಕಡೆದು, ಬೆಣ್ಣೆ ತೆಗೆದು, ತುಪ್ಪ ಕಾಯಿಸಿ, ಆ ತುಪ್ಪವನ್ನು ದೇವರ ದೀಪಕ್ಕೆ ಹಾಕಿ ಹಚ್ಚುತ್ತಾರೆ. ಬೇರೆ ಯಾವುದೇ ರೀತಿಯ ತುಪ್ಪ ಅಥವಾ ಎಣ್ಣೆಯ ಬಳಕೆ ತಿಮ್ಮಪ್ಪನ ದೀಪಕ್ಕೆ ನಿಷೇಧವಾಗಿರುತ್ತದೆ. ದೇವರ ದೀಪಕ್ಕೆ ಬಳಸುವುದರಿಂದ ತುಪ್ಪ ತಯಾರಿಸುವವರು ತುಂಬಾ ಕಟ್ಟು-

ನಿಟ್ಟಿನಿಂದ ಇರುತ್ತಾರೆ. ಅಂದರೆ ಹಸುಗಳಿಂದ ಹಾಲು ಕರೆಯುವಾಗಿನಿಂದ ಹಿಡಿದು ತುಪ್ಪ ಕಾಯಿಸಿ ದೀಪಕ್ಕೆ ಬಿಡುವವರೆಗೂ ಬಾಯಿಗೆ ಬಟ್ಟೆಕಟ್ಟಿಕೊಂಡೇ ಇರಬೇಕು. ಯಾವ ಕಾರಣಕ್ಕೂ ಯಾರೊಂದಿಗೂ ಆ ಸಂದರ್ಭದಲ್ಲಿ ಮಾತುಕತೆಗೆ ತೊಡಗಬಾರದು. ಒಂದು ಪಕ್ಷ ತುಪ್ಪ ಕಾಯಿಸುವಾಗ ಏನಾದರು ಬೇಕಾದರೆ ಕೈ ಸನ್ನೆಯಿಂದಲೇ ಕೇಳಿ ಪಡೆಯಬೇಕು. ಏಕೆಂದರೆ ಬಾಯಿ ತೆಗೆದರೆ ಬಾಯಿಯೊಳಗಿನ ಎಂಜಲು ತುಪ್ಪಕ್ಕೆ ತಾಗಿ ಎಂಜಲು ಮೈಲಿಗೆಯಾಗುವುದು ಎನ್ನುವ ಉದ್ದೇಶದಿಂದಾಗಿ ಬಾಯಿಗೆ ಬಟ್ಟೆ ಕಟ್ಟಿಕೊಂಡೇ ತುಪ್ಪ ಕಾಯಿಸುತ್ತಾರೆ. ಒಂದು ಸಾರಿ ಹೀಗೆ ತುಪ್ಪ ಕಾಯಿಸಿ ದೇವರ ದೀಪಕ್ಕೆ ಬಿಡೋ ಮುನ್ನ ಒಂದು ಬೆಕ್ಕು ತುಪ್ಪದಗಡಿಗೆಗೆ ಬಾಯಾಕಿತಂತೆ, ಆಗ ತುಪ್ಪ ಕಾಯಿಸುತ್ತಿದ್ದ ವ್ಯಕ್ತಿ ಆ ಬೆಕ್ಕನ್ನು ಅಟ್ಟಿಸಿಕೊಂಡು ಹೋಗಿ ಸುಮಾರು ಹದಿನೈದು ಕಿ.ಮೀ ದೂರದಲ್ಲಿರುವ ವೇಣುಕಲ್ಲುಗುಡ್ಡದಲ್ಲಿ ಬೆಕ್ಕನ್ನು ಅಡ್ಡಗಟ್ಟಿ ಹಿಡಿದು ಅದರ ಬಾಯನ್ನು ತೊಳೆದಿದ್ದನಂತೆ ಅಂದರೆ ದೇವರ ದೀಪದ ತುಪ್ಪ ಮುಟ್ಟಿದ ಬಾಯಿಂದ ಆ ಬೆಕ್ಕು ಮತ್ತೇನಾದರೂ ಮುಟ್ಟಿದರೆ ಎಂಜಲಾಗುವುದು, ತುಪ್ಪ ಬಿನ್ನವಾಗುವುದು ಎನ್ನುವ ಕಾರಣಕ್ಕಾಗಿ ತುಪ್ಪದ ದೀಪ ಹಚ್ಚಿ ಮಂಗಳಾರತಿ ಮಾಡಿದ ಪೂಜಾರಿಯ ಪಾದವನ್ನು ಕೂಡ, ತೊಳೆದುಕೊಂಡಾದ ಮೇಲೆ ಭಕ್ತಾದಿಗಳು ಮುಟ್ಟಿ ನಮಸ್ಕರಿಸುವುದು. ಏಕೆಂದರೆ ಪಾದದಲ್ಲಿ ತುಪ್ಪ ಇರುತ್ತದೆ ಎನ್ನುವ ಕಾರಣದಿಂದಾಗಿ. ತುಪ್ಪ ಮುಟ್ಟಿದ ಬೆಕ್ಕಿನ ಬಾಯಿ ತೊಳೆದ ವ್ಯಕ್ತಿಯ ವಂಶಸ್ಥರನ್ನು ಬೆಕ್ಕಿನ ಬಾಯಿ ತೊಳೆದಿದ್ದರಿಂದಾಗಿ ಸೀದ್ರೆಗೊಲ್ಲರು ಇವರುಗಳೆಂದು ಅವರ ಮನೆತನಕ್ಕೆ ನಿಂತ ಹೆಸರಾಗಿದೆ. ಸೀದ್ರೆ ಅಂದರೆ ಅಂಟು ಮುಟ್ಟಿನಲ್ಲಿ ಅಚ್ಚುಕಟ್ಟು ಸ್ವಭಾವದ ಜನರು ಎಂಬರ್ಥದಲ್ಲಿ ಬಳಸಲಾಗಿದೆ. ಪೂಜಾಕಾರ್ಯದಲ್ಲೂ ಈ ಜನಾಂಗದ ರೀತಿಯೇ ವಿಶೇಷವಾದುದು. ಪೂರ್ವಿಕರ ಪೂಜಾಪರಿಕರಗಳನ್ನೇ ಬಳಸುತ್ತಾರೆ. ಹಾಗೆ ಎಷ್ಟೋಕಡೆ ಆ ಪರಿಕರಗಳೇ ದೈವವಾಗಿ ಪೂಜಿಸಿಕೊಳ್ಳುತ್ತಿವೆ. ಪಲ್ಲಾರ ಮಾಡುತ್ತಿದ್ದಗೂಡೆ ಪುಟ್ಟಗೂಡೆ ತಿಮ್ಮಪ್ಪನಾಗಿ, ದೇವರಿಗೆ ಹಾಕುತ್ತಿದ್ದ ಮಂಚ ಮಂಚದ ತಿಮ್ಮಣ್ಣನಾಗಿ ರೂಪಗೊಂಡಿವೆ. ಹಾಗೆ ಬಹುಪಾಲು ಆ ಜನಾಂಗದ ಪೂಜಾರಿಗಳು ಕಾಯಕನಿಷ್ಠರು, ಕಾಲವಾದ ನಂತರ ದೈವಗಳಾಗಿ ಕಾಣ ಬರುತ್ತಾರೆ. ಒಟ್ಟಾರೆ ಪೂಜಾ ವಿಧಿ-ವಿಧಾನ ನಿಯಮಗಳಲ್ಲಿ ತನ್ನದೇ ಆದ ವಿಶಿಷ್ಟತೆ ಉಳಿಸಿಕೊಂಡು ಬಂದಿರುವ ಜನಾಂಗಗಳಲ್ಲಿ 'ಕಾಡುಗೊಲ್ಲರು' ವಿಶೇಷಿತರಾಗಿ ಕಂಡು ಬರುತ್ತಾರೆ. ಕಟ್ಟುನಿಟ್ಟಿನಲ್ಲಿ ಸದಾ ತಮ್ಮನ್ನು ಮುಡುಪಿಟ್ಟುಕೊಂಡು ಬದುಕಿದ್ದವರು; ಬದುಕುತ್ತಿರುವವರು ಬುಡಕಟ್ಟು ಸಂಸ್ಕೃತಿಯ ಕಾಡುಗೊಲ್ಲ ಜನಾಂಗದವರು. ಇವುಗಳೆಲ್ಲ ಅವರವರ ನಂಬಿಕೆ -ಸಂಪ್ರದಾಯಗಳಿಗೆ ಸಂಬಂಧಿಸಿದ ವಿಚಾರಗಳಾಗಿವೆ. ಹಾಗೆ ಇಂತಹ ಬುಡಕಟ್ಟಿನ ಜನರು ಕೆಳಸ್ತರದಲ್ಲಿ ಬದುಕುವ ಜನಾಂಗದವರುಗಳೇ ಆಗಿರುತ್ತಾರೆ. ಅವರುಗಳು ತಮ್ಮದೇ ಆದ ರೀತಿ, ನೀತಿ, ಸಂಸ್ಕೃತಿಗಳಿಂದ ಜೀವಿಸುತ್ತಿದ್ದರು. ಮಾನವೀಯ ಲಕ್ಷಣಗಳನ್ನು ಒಳಗೊಂಡೆ ಬದುಕುತ್ತಿರುವುದು ಗಮನಾರ್ಹ ಸಂಗತಿ.

ಕನ್ನಡ ಮತ್ತು ಡಾ. ರಾಜ್

– ಶ್ರೀ ಯರಿಯಪ್ಪ ಬೆಳಗುರ್ಕಿ

ಕನ್ನಡ ಸಾರಸ್ವತಲೋಕಕ್ಕೆ ಒಂದು ಬಹುಮುಖ್ಯ ಪರಂಪರೆ ಇದೆ. ಕನ್ನಡಕ್ಕೆ ಬುನಾದಿ ಹಾಕಿದವರು ಅನೇಕ ಧೀಮಂತ ನಾಯಕರಿದ್ದಾರೆ. ಕನ್ನಡ ಭಾಷೆಗೆ ಶಕ್ತಿಯನ್ನು ತುಂಬುವಲ್ಲಿ ಕರ್ನಾಟಕದ ಭವ್ಯ ಪರಂಪರೆಯ ಇತಿಹಾಸವನ್ನು ಮತ್ತು ಸಂಸ್ಕೃತಿಯನ್ನು ಮರುಕಟ್ಟುವಲ್ಲಿ ಪ್ರಧಾನ ಪಾತ್ರ ವಹಿಸಿದವರಲ್ಲಿ ಮೇರು ನಟ ಡಾ.ರಾಜ್‌ಕುಮಾರ್ ಒಬ್ಬರು. ಕನ್ನಡದ ಮನಸ್ಸು, ಕನ್ನಡದ ವಾತಾವರಣವನ್ನು ನಿರ್ಮಾಣ ಮಾಡಿ ಚಿತ್ರರಂಗದ ಮೂಲಕ ಸಮಾಜವನ್ನು ಪರಿವರ್ತಿಸಿದ ಕೀರ್ತಿ ಆಧುನಿಕ ಕನ್ನಡದ ಕುವರ ಡಾ.ರಾಜ್ ಅವರಿಗೆ ಸಲ್ಲುತ್ತದೆ.

ಡಾ.ರಾಜ್ ಕಲೆ ಮತ್ತು ಅಭಿನಯ

ಡಾ. ರಾಜ್ ಅವರ ಕಲೆಗೆ ಮನಸೋಲದವರೇ ಇಲ್ಲವೆನ್ನಬಹುದು. ಅವರ ಮನೋಜ್ಞ ಅಭಿನಯದಿಂದ ಅನೇಕ ಅಭಿಮಾನಿ ದೇವರುಗಳನ್ನು ಸೃಷ್ಟಿಸಿ ಜನ ಸಾಮಾನ್ಯರಲ್ಲಿ ನೆಲೆ ನಿಂತವರು. ಸುಮಾರು ೨೦೦ ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಕನ್ನಡದ ಗಟ್ಟಿತನವನ್ನು ಭದ್ರಗೊಳಿಸಿದರು. ಕಲಾವಿದ ಅಳಿಯಬಹುದು, ಆದರೆ ಕಲೆ ಅಳಿಯುವುದಿಲ್ಲ. ಡಾ.ರಾಜ್ ಅವರ ಕಲೆ ಅಜರಾಮರ. ಕಲಾವಿದನಿಗೆ ತನ್ನದೇ ಆದ ಜವಾಬ್ದಾರಿ ಇರುತ್ತದೆ. ಅಂತಹ ಸರ್ವ ಕಲೆಯನ್ನು ರೂಢಿಸಿಕೊಂಡವರು.

ಓ ಕಬ್ಬಿಗನೆ, ನಿನ್ನೊಳಿಹ ಕಲೆಗೆ ಶಕ್ತಿಯಿದೆ.
ಜಡವ ಚೇತನಗೊಳಿಪ ದಿವ್ಯತರ ಮುಕ್ತಿಯಿದೆ.
ಮನುಜರಿಗೆ ಸೊಗಮೀವ ಕರ್ತವ್ಯವೊಂದೆ
ನಿನ್ನದೆಂದರಿಯದಿರು; ನಿನ್ನಕಲೆಯಿಂದೆ
ನೂರಾರು ಆತ್ಮಗಳು ಜಡತನದ ಬಲೆಯಿಂದೆ
ಬಿಡುಗಡೆಯ ಹೊಂದುವವು (ಕಲಾ ತಪಸ್ವಿ)

– ಕುವೆಂಪು

ಎಂಬಂತೆ ಡಾ.ರಾಜ್ ಅವರ ಕಲೆಯ ಸಾಮಾಜಿಕ ಜವಾಬ್ದಾರಿಯನ್ನು ಇಲ್ಲಿ ಸ್ಮರಿಸಬಹುದು. ಸಿನಿಮಾ ಎಂಬ ಮಾಂತ್ರಿಕಲೋಕದ ಮೋಜಿನ ಪರದೆಯ ಮೇಲೆ ಪೌರಾಣಿಕ, ಸಾಮಾಜಿಕ, ಭಕ್ತಿಪ್ರಧಾನ ಚಿತ್ರಗಳನ್ನು ಅಚ್ಚ ಕನ್ನಡದಲ್ಲಿ ನಟಿಸಿ, ಕನ್ನಡದ ಭಕ್ತಿಭಾವವನ್ನು ಪಸರಿಸಿದವರು ಡಾ.ರಾಜಕುಮಾರ್. ಭಕ್ತಿ, ಪತ್ತೇದಾರಿ, ನಾಯಕ, ಖಳನಾಯಕ, ಹಾಸ್ಯ ಮತ್ತು ದುಃಖಭರಿತ ಯಾವುದೇ ಪಾತ್ರಗಳನ್ನು ನೀಡಿದರೂ ನಿರ್ಭಯವಾಗಿ ಅಭಿನಯಿಸಿ ಕಥೆಗೆ ಜೀವ ತುಂಬಿದವರು. ಸಮಾಜದ ಬದಲಾವಣೆಗಾಗಿ ನಿರ್ದಾಕ್ಷಿಣ್ಯವಾದ ನಿಲುವುಗಳನ್ನು ಸಿನಿಮಾಗಳಲ್ಲಿ ಬಿಂಬಿಸುತ್ತಾ, ವಾಸ್ತವದ ಬದುಕಿನ ಸತ್ಯಗಳನ್ನು ಜನಸಾಮಾನ್ಯರಿಗೆ ಹಾಡಿನ ಮೂಲಕ ಮನವರಿಕೆ ಮಾಡಿಕೊಡುತ್ತಾ, ಶ್ರಮ ಸಂಸ್ಕೃತಿಯ ತಳಹದಿಯನ್ನು ಎತ್ತಿ ಹೇಳುತ್ತಾ 'ಸಾವಿರ ಜನುಮದ ಪುಣ್ಯದ ಫಲವೋ ನಾನೀ ನಾಡಲಿ ಜನಿಸಿರುವೆ' ಎಂದಿದ್ದಾರೆ. ಸಮಾಕಾಲೀನ ಸಿನಿಮಾಗಳಲ್ಲಿ ನಟಿಸಿ ಎಲ್ಲದಕ್ಕೂ ಸೈ ಎಂದು ಕಳಶಪ್ರಾಯರಾಗಿ ವಿಜೃಂಭಿಸಿದರು. ಅವರ ಸಂಗೀತದ ರಾಗ, ಆಲಾಪನೆ ಗ್ರಾಮೀಣರನ್ನೂ ಕೈಬೀಸಿ ಕರೆಯಿತು. ಅವರಿಗೆ ಹಾಡಲು ಬರುತ್ತಿದ್ದರೂ ಎಂದೂ ಹಾಡುತ್ತೇನೆ ಎಂದು ಅಹಂ ತೋರಲಿಲ್ಲ. ೧೯೫೦ ರ ದಶಕದಲ್ಲಿ ವೃತ್ತಿ ರಂಗಭೂಮಿಯಿಂದ ಬಂದು, ೧೯೫೪ರಲ್ಲಿ 'ಬೇಡರ ಕಣ್ಣಪ್ಪ' ಸಿನಿಮಾದ ಮೂಲಕ ಸಿನಿಮಾಲೋಕ ಪ್ರವೇಶಿಸಿ, ೨೦೦೧ರ ಶಬ್ದವೇದಿ ಸಿನೆಮಾದವರೆಗೂ ಕೇವಲ ಕನ್ನಡ ಭಾಷೆಯಲ್ಲಿ ಮಾತ್ರ ನಟಿಸಿದ ಕನ್ನಡಿಗರಾಗಿದ್ದಾರೆ.

ಕನ್ನಡದ ಉಪಭಾಷೆಗಳಿಗೆ ಧ್ವನಿಯಾದದ್ದು

ಕನ್ನಡಕ್ಕೆ ಒಂದು ಭಾಷಾಶುದ್ಧಿಯನ್ನು ತಂದುಕೊಟ್ಟವರು ಡಾ.ರಾಜಕುಮಾರ ಎನ್ನುವುದರಲ್ಲಿ ಎರಡು ಮಾತಿಲ್ಲ. ಸಿನಿಮಾಗಳ ಮೂಲಕ ಕನ್ನಡ ಭಾಷೆಗೊಂದು ಹೊಸ ಆಯಾಮವನ್ನು ನೀಡಿದರು. ಬೀದರ್‌ನಿಂದ ಮೈಸೂರಿನವರೆಗೆ ಅರ್ಥವಾಗುವಂತೆ ಮತ್ತು ಪ್ರಾದೇಶಿಕವಾಗಿರುವ ಕನ್ನಡದ ಬೇರೆ ಬೇರೆ ಭಾಷಿಕ ರೂಪಗಳನ್ನು ಸಿನಿಮಾಗಳಲ್ಲಿ ರಾಜಕುಮಾರರಂತೆ ಮಾತನಾಡುವ ಮಾಂತ್ರಿಕರು ಇನ್ನಾರು ಇಲ್ಲ. ಕನ್ನಡದ ಜನರೊಂದಿಗೆ ಅವರು ಇಟ್ಟುಕೊಂಡಿರುವ ಸಾಂಸ್ಕೃತಿಕ ಸಂಬಂಧ ಅಷ್ಟೆ ಮಹತ್ವದ್ದು. ಕನ್ನಡದ ಉಪಭಾಷೆಗೆ ಜೀವ ತುಂಬಿದರು. ಸಿನಿಮಾಗಳಲ್ಲಿ ಜನರಿಗೆ ಸಾತ್ವಿಕ ಗುಣಗಳನ್ನು ಹೇಳುವುದರೊಂದಿಗೆ, ನುಡಿದಂತೆ ನಡೆದರು ಕೂಡ.

ಗೋಕಾಕ್ ಚಳುವಳಿ ಮತ್ತು ಡಾ.ರಾಜ್

ಕನ್ನಡ ಭಾಷೆ, ಶಿಕ್ಷಣ ಹಾಗೂ ಕನ್ನಡ ಸಾರ್ವಭೌಮತ್ವ ಹೊಂದಬೇಕೆಂದು ೧೯೮೦ರ ದಶಕದಲ್ಲಿ ಗೋಕಾಕ ಚಳುವಳಿಯಲ್ಲಿ ಭಾಗವಹಿಸಿ ಕನ್ನಡದ ಚಳುವಳಿಗೆ ಧುಮುಕಿ ಕನ್ನಡಕ್ಕಾಗಿ ಕೈ ಎತ್ತಿದಾಗ ಸರಕಾರಕ್ಕೆ ನಡುಕ ಉಂಟಾಯಿತು. ಕನ್ನಡನಾಡಿನ ಜನರನ್ನು ಪ್ರಜ್ಞಾವಂತರನ್ನಾಗಿ ಮಾಡಿ ಅವರ ಭಾಷೆಯ ಬಗೆಗೆ ಅಭಿಮಾನದ ಬೀಜವನ್ನು ಬಿತ್ತಿದವರು. ೧೯೮೧ರಲ್ಲಿ ಕನ್ನಡವನ್ನು ಪ್ರಾಥಮಿಕ ಶಿಕ್ಷಣದಲ್ಲಿ ಕಡ್ಡಾಯಗೊಳಿಸಬೇಕೆಂದು

ಕರ್ನಾಟಕ ರಾಜ್ಯಾದ್ಯಂತ ಹೋರಾಟಗಳು ತೀವ್ರಗೊಂಡಿದ್ದವು. ಇದರ ನೇತೃತ್ವವನ್ನು ಪಾಟೀಲ್ ಪುಟ್ಟಪ್ಪ, ಚಂದ್ರಶೇಖರ ಪಾಟೀಲ್ ವಹಿಸಿದ್ದರು. ಅವರ ಜೊತೆಗೆ ಡಾ. ರಾಜಕುಮಾರ ಅವರು ಚಳುವಳಿಗೆ ಧುಮಿಕಿದ್ದು ಒಂದು ಐತಿಹಾಸಿಕ ಸಂಗತಿ. ಅಪಾರ ಅಭಿಮಾನಿಗಳನ್ನು ಹೊಂದಿದ್ದ ರಾಜ್‌ಕುಮಾರ್ ರಾಜ್ಯಾದ್ಯಾಂತ ಪ್ರತಿಭಟನೆಗೆ ಶಕ್ತಿ ತುಂಬಿದರು.

ಡಾ. ರಾಜಕುಮಾರ ವ್ಯಕ್ತಿತ್ವ

ಡಾ. ರಾಜ್ ಅವರ ವೃತ್ತಿ ಬಗೆಗಿನ ಶ್ರದ್ಧೆ, ಬತ್ತದ ಉತ್ಸಾಹ, ಹಸನ್ಮುಖೀಭಾವ, ಮೌಲ್ಯಾಧಾರಿತ ಬದುಕು, ಸರಳ ಜೀವನ ಅದರೊಂದಿಗೆ ಕನ್ನಡ ಪ್ರೇಮ, ಅವರ ಅಸಮಾನ್ಯ ವ್ಯಕ್ತಿತ್ವ ಇವೆಲ್ಲವುಗಳು ಕನ್ನಡದ ಆರಾಧ್ಯ ದೈವವನ್ನಾಗಿಸಿದವು. ಅತ್ಯಂತ ಸರಳ ವ್ಯಕ್ತಿತ್ವದ, ಉತ್ತಮ ಅಭಿರುಚಿಯುಳ್ಳ ಆದರ್ಶ ವ್ಯಕ್ತಿತ್ವ ಅವರದ್ದಾಗಿದೆ. ಜಗತ್ತಿನಲ್ಲಿ ಇಂತಹ ಒಬ್ಬ ಕಲಾವಿದ, ಮೇರುನಟ ಇದ್ದ ಎಂಬುದೇ ಆಶ್ಚರ್ಯದ ಸಂಗತಿ. 'ಯಾವ ಜನ್ಮದ ನಂಟೋ ಗೊತ್ತಿಲ್ಲ ನಾನು ಸಹೋದರಿಯಾಗಿದ್ದು ನನ್ನ ಅದೃಷ್ಟವೇ ಸರಿ, ಅವನ ಕೃತಜ್ಞತೆಯ ಮಾತುಗಳು, ಅವನ ಸಂಯಮ, ತಾಳ್ಮೆ ನನಗೆ ತುಂಬಾ ಇಷ್ಟ' ಎಂದು ಡಾ.ರಾಜ್ ಅವರ ಸಹೋದರಿ ಎಸ್.ಪಿ.ನಾಗಮ್ಮ ಅವರು ಹೇಳುವ ಮಾತುಗಳು ಗಮನಾರ್ಹ. (ಡಾ.ರಾಜಕುಮಾರ ಸಮಗ್ರ ಚರಿತ್ರೆ) ಅವರ ವ್ಯಕ್ತಿತ್ವವೇ ಅವರನ್ನು ಶ್ರೀಮಂತವಾಗಿಸಿದ್ದು ಎಂದರೆ ತಪ್ಪಾಗಲಾರದು. ಡಾ.ರಾಜ್ ಅವರು ತಮಗೆ ತಾವೇ ಅಪೂರ್ವ ಕಲಾಕೃತಿಯಾಗಿ ಬೆಳೆದು ನಿಂತವರು. ಡಾ.ರಾಜಕುಮಾರ್ ಅವರ ಬಗೆಗೆ ಇತ್ತೀಚೆಗೆ ೨೦೧೬-೧೭ರಲ್ಲಿ ದೊಡ್ಡ ಹುಲ್ಲೂರು ರುಕ್ಕೋಜಿ ಅವರು 'ಡಾ.ರಾಜಕುಮಾರ್ ಸಮಗ್ರ ಚರಿತ್ರೆ' ಎಂಬ ಎರಡು ಸಂಪುಟಗಳನ್ನು ಹೊರ ತಂದಿದ್ದಾರೆ. ಇದು ಕನ್ನಡಕ್ಕೊಂದು ಅಮೂಲ್ಯ ಕೊಡುಗೆಯೂ ಆಗಿದೆ. ಕನ್ನಡ ನಾಡಿನ ಸಾಂಸ್ಕೃತಿಕ ಪರಂಪರೆಗೆ ಡಾ.ರಾಜ್ ಅವರು ನೀಡಿರುವ ಕೊಡುಗೆ ಅಪಾರವಾದದ್ದು. ತೆರೆಮರೆಯಲ್ಲಿದ್ದುಕೊಂಡು ಕನ್ನಡತನವನ್ನು ಜನಮಾನಸದಲ್ಲಿ ಬೇರೂರುವಂತೆ ಮಾಡಿದರು. ಇಂದಿನ ಸರ್ಕಾರಗಳು ಕನ್ನಡದ ಭಾಷೆ, ನಾಡು ನುಡಿಗಾಗಿ ಕೋಟ್ಯಾಂತರ ಖರ್ಚು ಮಾಡಿ ನಾಡಿನ ರಕ್ಷಣೆಗಾಗಿ ಹಗಲಿರುಳು ಶ್ರಮಿಸುತ್ತಿವೆ. ಅಂತೆಯೇ ಇಂದಿನ ಪ್ರಜ್ಞಾವಂತ ನಾಗರಿಕರು, ಯುವಕರು, ಮಹಿಳೆಯರು ಡಾ.ರಾಜ್ ಅವರ ಆದರ್ಶವನ್ನು ರೂಢಿಸಿಕೊಳ್ಳಬೇಕಾಗಿದೆ.

ಆತ್ಮ ಬಲಿದಾನ – ಸಾಂಸ್ಕೃತಿಕ ನೋಟ

– ಡಾ. ಶಿವಕುಮಾರ್ ಕಂಪ್ಲಿ

'ಭಾರತೀಯರಿಗೆ ಇತಿಹಾಸದ ಅರಿವಿಲ್ಲ' ಎಂಬ ಹೇಳಿಕೆಯನ್ನು ಗಮನಿಸುವಾಗಲೇ ನಮ್ಮ ಕಣ್ಣೆದುರು ಇತಿಹಾಸದ ಅರಿವೇ ವರ್ತಮಾನದ ಬೆಳಕು. ಇತಿಹಾಸದ ಅರಿವಿಲ್ಲದೆ ಭವಿಷ್ಯ ರೂಪಗೊಳ್ಳದು ಎಂಬ ಡಾ.ಅಂಬೇಡ್ಕರರ ಸಾಲುಗಳು ಎದುರು ಬಂದು ನಿಲ್ಲುತ್ತವೆ. ಇತಿಹಾಸ ಎಂದರೇನು? ಇತಿಹಾಸ ತೆರೆದುಕೊಳ್ಳುತ್ತಿರುವ ರೀತಿ ಯಾವುದು? ಎಂಬ ಪ್ರಶ್ನೆಗಳೂ ನಮ್ಮೆದುರು ಗತದ ಇತಿಹಾಸವನ್ನ ಕೆದಕುವಂತೆ ಮಾಡುತ್ತವೆ. "ಒಂದು ನಾಡಿನ ಇತಿಹಾಸವೆಂದರೆ ಆ ನಾಡನ್ನು ಕಾಲದಿಂದ ಕಾಲಕ್ಕೆ ಆಳಿದ ರಾಜರ ಇತಿಹಾಸ" ಎಂಬ ಭಾವನೆಯೇ ಸಾಮಾನ್ಯರೊಳಗೆ ವಿಸ್ತಿರಿಸಿಕೊಂಡಿದೆ. ಈ ಹೇಳಿಕೆಯನ್ನೇ ಗಟ್ಟಿಗೊಳಿಸುವಂತೆ ಶಾಲಾ ಕಾಲೇಜುಗಳ ಚರಿತ್ರೆಯ ಪಠ್ಯಗಳಿವೆ. ಇವುಗಳನ್ನೇ ನಮ್ಮ ವಿದ್ಯಾರ್ಥಿಗಳು ಸಮಗ್ರ ಕರ್ನಾಟಕ ಇತಿಹಾಸವೆಂತಲೂ, ಭಾರತದ ಇತಿಹಾಸವೆಂತಲೂ ಅರಿಯುತ್ತಿದ್ದಾರೆ. ಹೊಸಬಗೆಯ ಶೋಧಕರು ಇವುಗಳನ್ನು ಅಪೂರ್ಣ ಇತಿಹಾಸಗಳೆಂತಲೂ, ವಿಸ್ಮೃತಿಗಳ ಇತಿಹಾಸಗಳೆಂತಲೂ ಕರೆಯುತ್ತಿದ್ದಾರೆ ಕಾರಣ ನಮ್ಮ ರಾಜರ ಕಥನಗಳ ಒಳಗೆ ರಾಣಿಯರ ಕಥನಗಳು ಮಾಯವಾಗಿವೆ. ಪ್ರಧಾನರ ಕಥನಗಳ ಒಳಗೆ ಸಾಮಾನ್ಯರ ಸಂಕಥನಗಳು ಮಸುಕಾಗಿವೆ. ಒಂದು ನಾಡು ಎಂದರೆ 'ಪ್ರಭು' ಮಾತ್ರವಲ್ಲ, ಪ್ರಭುವಿನ ಅಖಂಡ ಶಕ್ತಿಯ ಮೂಲವಾದ 'ಜನ' ಸಮೂಹಗಳೂ ಅಷ್ಟೇ ಪ್ರಧಾನ. ಪ್ರಭು ಕೇಂದ್ರಿತವಾದ ಕೋಟೆಗಳ, ರಣಭೂಮಿಗಳ ಹಲವು ಸವಾಲು ಮತ್ತು ಸಾಹಸಗಳ ಶಕ್ತಿಯೇ ಈ ಅಲಕ್ಷಿತ ಜನಸಮೂಹ. ಈ ನೆಲೆಯಲ್ಲಿ ನಾಡಿನ ಇತಿಹಾಸವೆಂದರೆ, ನಾಡ ಜನತೆಯ ಬದುಕು, ಬಲಿದಾನವೆಂಬಂತಿದೆ.

ಜನರ ಧರ್ಮ, ಕಲೆ, ಇತ್ಯಾದಿಗಳ ಏಕಮುಖೀ ಚಿತ್ರಣಗಳು ಇತಿಹಾಸವನ್ನ ಒಂದೆಡೆ ವರ್ಗ ಪ್ರಧಾನವಾಗಿ ಕಂಡರೆ ಮತ್ತೊಂದೆಡೆ ಲಿಂಗತಾರತಮ್ಯವಾಗಿ ನಿರೂಪಿಸಿಕೊಂಡಿದೆ. ಈ ಸರಳ ವಿಭಜನೆಗಳನ್ನು ಸೀಳಲೆಂದೋ ಬಹುಮುಖಿ ಕಥನಗಳನ್ನು ನೆನಪಿಸಲೆಂದೋ ಇಂದು ಜನ ಇತಿಹಾಸಗಳು, ಪ್ರಾದೇಶಿಕ ಇತಿಹಾಸಗಳು ಚಲಾವಣೆಗೆ ಬರುತ್ತಿವೆ.

ಚರಿತ್ರೆಯನ್ನ ಕುರಿತಂತೆ ಫ್ರೆಡರಿಕ್ ಎಂಗಲ್ಸ್‌ನ ಅಪೂರ್ವ ನೋಟವೊಂದಿದೆ 'ಚರಿತ್ರೆ ಅಗೋಚರ ಬಿಂದುವೊಂದರಿಂದ ತನ್ನ ಪಯಣವನ್ನು ಆರಂಭಿಸಿ ಅದರ ಸುತ್ತ ನಿಧಾನಕ್ಕೆ ಚಲಿಸುತ್ತದೆ, ಆದರೆ ಅದರ ವೃತ್ತಗಳು ಹಿಗ್ಗುತ್ತಾ ಹೋಗುತ್ತವೆ. ಅದರ ಚಲನೆ ಬಿರುಸಾಗಿ ಚೇತೋಹಾರಿಯಾಗುತ್ತಲೇ ದೇದೀಪ್ಯಮಾನವಾದ ಉಲ್ಕೆಯಂತೆ, ನಕ್ಷತ್ರದಿಂದ ನಕ್ಷತ್ರಕ್ಕೆ ಜಿಗಿಯುತ್ತದೆ. ಈ ಜಿಗಿತ ಆಗಾಗ ತಾನು ಈ ಹಿಂದೆ ಸುತ್ತಿದ ವರ್ತುಲಗಳನ್ನ ಸೀಳುತ್ತ ಬ್ರಹ್ಮಾಂಡವನ್ನು ಮುಟ್ಟೇಬಿಟ್ಟಿತೇನೋ ಅನ್ನುವ ಹಾಗಿರುತ್ತದೆ'. ನಮ್ಮೆದುರು ಚರಿತ್ರೆ ಪುರುಷರ ಸಮಬಲದಂತಿರುವ ಮಹಿಳೆಯರನ್ನು ಅಲಕ್ಷಿಸಿದೆ. ಸಾಮಾನ್ಯ ಸಿಪಾಯಿಗಳ, ಶ್ರಮಿಕರ ಸಾಧನೆಗಳನ್ನು, ಸಾಹಸ ಬಲಿದಾನಗಳನ್ನು ಮರೆಯಾಗಿಸಿದೆ. ಪಟ್ಟಣಗಳಾಚೆಗಿನ ಕಾಡು, ಗುಡ್ಡಗಾಡು ಜನರ ಅಮೂಲ್ಯ ಬದುಕುಗಳನ್ನು ಕೈ ಬಿಟ್ಟಿದೆ. ರಾಜಕೀಯ ಮತ್ತು ಧಾರ್ಮಿಕ ಸಂಘರ್ಷಗಳನ್ನೇ ಬಿಂಬಿಸುವ ನಮ್ಮ ಪಠ್ಯ ಕೇಂದ್ರಿತ ಚರಿತ್ರೆಗಳು ಮತಧರ್ಮ ಮತ್ತು ಪುರುಷ ಪ್ರಾಧಾನ್ಯತೆಯನ್ನೇ ಹೊತ್ತುಕೊಂಡಿವೆ. ಈ ಚರಿತೆಗಳನ್ನು ಮಹಿಳಾ ನೆಲೆಯಲ್ಲಿ ನೋಡಿದರೆ ಸ್ತ್ರೀ ಚಿತ್ರಣ ಕಂಡುಬರುವುದು ತುಂಡು ತುಂಡು ರೂಪಗಳಲ್ಲಿ. ಅಲೆಮಾರಿ ಮಾನವ ಕೃಷಿಯಿಂದಾಗಿ ನಾಗರಿಕನೆನಿಸಲು ಸಾಧ್ಯವಾಯಿತು. ಅಂತಹ ಕೃಷಿಯ ಶೋಧಕಳೇ ಸ್ತ್ರೀಯೆಂಬ ಸತ್ಯವು ಈ ಪ್ರಧಾನವೆನ್ನುವ ಚರಿತ್ರೆಗಳಲ್ಲಿ ಮಾಸಿಹೋಗಿದೆ. ಪುರುಷ ಪ್ರಧಾನ ಚರಿತ್ರೆಯಲ್ಲಿ ಸ್ತ್ರೀಯು ಮನೋರಂಜನೆಯ ಮತ್ತು ಅಲಂಕಾರಿಕ ಕಲೆಯ ಆವರಣಗಳಲ್ಲಿ ಮಾತ್ರ ಇಣುಕಿದ್ದಾಳೆ. 'ಸುಪುತ್ರೋ ಕುಲದೀಪಕಃ' ಎಂಬ ಕನಸು ಕಾಣುತ್ತ ಪುತ್ರ ಕಾಮೇಷ್ಟಿಯಾಗಮಾಡುತ್ತಾ ಹೊರಟ ಪುರುಷನಿಷ್ಠ ಸಮಾಜವು ಸ್ತ್ರೀಯನ್ನು ಪಾತಿವ್ರತ್ಯದ ಹೆಸರಿನಲ್ಲಿ ದಾಸಿಯನ್ನಾಗಿ ಮಾಡಿದೆ. ತಳವರ್ಗದ ಮಹಿಳೆಯರಂತೂ ದೈವಗಳ ಮತ್ತು ಪ್ರಭುಗಳ ಸೆರಗಿನೊಳಗೆ ಮಾರಾಟದ ಸರಕಂತಾಗಿದ್ದಾರೆ. ದೇವದಾಸಿಯರು, ಪಾತರದವರು, ನೃತ್ಯಗಾತಿಯರು ಎಂದೆಲ್ಲಾ ಶೃಂಗಾರದ ಪಲುಕಿನಂತೆ ತಮ್ಮ ನೃತ್ಯ ನಟನೆಗಳಿಂದ ಅರಮನೆ, ಗುರುಮನೆಗಳಲ್ಲದೆ ದೇವರ ಪ್ರಾಂಗಣಗಳಲ್ಲೂ (ರಂಗಭೋಗ) ಹಲವು ಬಗೆಯ ವಿಲಾಸಗಳ ರೂಪಕದಂತೆ ಪರಂಪರೆಯ ಉದ್ದಕ್ಕೂ ಸಾಗಿಬಂದಿದ್ದಾರೆ. ಪುರುಷ ಚರಿತ್ರೆಯು ತೀರಾ ಸರಳವಾಗಿ ಹೆಣ್ಣನ್ನು ತಾಯಿ, ರಕ್ಕಸಿ ಹಾಗೂ ಸುಂದರಿಯ ರೂಪಗಳಲ್ಲೇ ನೋಡಿದೆ. ಪುರುಷನನ್ನು ತ್ಯಾಗಿಯಾಗಿ, ವೀರನಾಗಿ, ವಿರಾಗಿಯಾಗಿ ಕಾಣಿಸುವಲ್ಲಿ ಸ್ತ್ರೀ ಮಹತ್ತರ ಪಾತ್ರ ವಹಿಸಿದರೂ ಆತನ ಚರಿತ್ರೆಯಲ್ಲಿ ಆಕೆಯ ಈ ವಿವರಗಳು ಉಲ್ಲೇಖ ಗೊಂಡಿರುವುದೇ ವಿರಳ.

> 'ಕೆರೆಯಂ ಕಟ್ಟಿಸು ಬಾವಿಯಂ ಸಮೆಸು, ದೇವಾಗಾರಮಂ ಮಾಡಿಸ
> ಜ್ಜೆರೆಯೊಳ್ ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯ್ ನಂಬಿದ
> ರ್ಗ್ಗೆರೆ ವೆಟ್ಟಾಗಿರು ಶಿಷ್ಟರಂ ಪೊರೆಯನುತ್ತಿಂತೆಲ್ಲವಂ ಪಿಂದೆ ತಾ
> ಯೆರೆದಶ್ವಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ'

ವಿಜಯ ನಗರ ಕಾಲದ ಪ್ರೌಢದೇವರಾಯನ ಕಾಲದ ಈ ಶಾಸನವು ಲಕ್ಷ್ಮೀಧರನ ತಾಯಿ ಕೆರೆಯನ್ನ ಕಟ್ಟಿಸು, ದೇವಾಲಯಗಳನ್ನು ನಿರ್ಮಿಸು, ಕಷ್ಟದಲ್ಲಿ ಸಿಕ್ಕಿದ ಅನಾಥರನ್ನು

ಬಿಡಿಸು, ಗೆಳೆಯರಿಗೆ ಆಸರೆಯಾಗಿರು, ಒಳ್ಳೆಯವರನ್ನು ಕಾಪಾಡು ಎಂದು ಬೋಧಿಸಿದ್ದಾಳೆ. ಲಿಪಿಯಿರುವ ವೀರಗಲ್ಲುಗಳಂತೆ ಲಿಪಿಯಿರದ ವೀರಗಲ್ಲುಗಳಲ್ಲಿಯೂ ಈ ರೀತಿ ಮುಂದುವರೆದಿದೆ. ವೀರಗಲ್ಲುಗಳು ಮೂರು ಅಥವಾ ಐದು ಹಂತಗಳಿದ್ದು ಕೆಳಗಿನಿಂದ ಮೇಲಕ್ಕೆ ಅವುಗಳ ವಿವರಗಳಿರುತ್ತವೆ. ಕೆಳಭಾಗದಲ್ಲಿ ಹೋರಾಡುವ ಚಿತ್ರ ಎರಡನೆಯ ಭಾಗದಲ್ಲಿ ಅಪ್ಸರ ಸ್ತ್ರೀಯರು ವೀರನನ್ನು ದೇವಲೋಕಕ್ಕೆ ಕೊಂಡೊಯ್ಯುವ ಚಿತ್ರ ಮೂರನೆ ಭಾಗವು ದೈವ ಸಾನಿಧ್ಯದಲ್ಲಿ ನೆಲೆಗೊಂಡ ವೀರನಿಂದ ಕೂಡಿರುತ್ತದೆ. ಈ ಚಿತ್ರವನ್ನೇ ಮೆರುಗು ಗೊಳಿಸುವಂತೆ ಅಂದಿನ ಯುದ್ಧೋನ್ಮಾದಿ ಶ್ಲೋಕವೂ ಕಾಣುತ್ತದೆ.

'ಜಿತೇನ ಲಭ್ಯತೇ ಲಕ್ಷ್ಮೀಃ ಮೃತೇನಾಪಿ ಸುರಾಂಗನಾ
ಕ್ಷಣವಿಧ್ವಂಸಿನಿ ಕಾಯೇ ಕಾ ಚಿಂತಾ ಮರಣೇ ರಣೇ'

ಗೆದ್ದರೆ ರಾಜಲಕ್ಷ್ಮಿಯೆಂಬ ಸಂಪತ್ತು, ಮಡಿದರೆ ಸ್ವರ್ಗಸುಖದ ಸುರಕನ್ನಿಕೆ ಇರುವಾಗ ಕ್ಷಣದಲ್ಲೇ ಬೀಳುವ ಈ ಕಾಯ ಮತ್ತು ಕಾಳಗಕ್ಕೂ ಚಿಂತಿಸುವುದೇಕೆ? ಎಂಬ ಆದರ್ಶದ ಕನಸುಗಾರಿಕೆ ವೀರರನ್ನು ಬಲಿದಾನಕ್ಕೆ ಪ್ರೋತ್ಸಾಹಿಸುತಿತ್ತು. ಯುದ್ಧದಲ್ಲಿ ಭಾಗವಹಿಸುವ ಸೈನಿಕರು ಕೂಡಾ ಅಂದಿನ ರಾತ್ರಿ ತಮ್ಮ ಪತ್ನಿಯರೆದುರು 'ನಾಳೆ ನಾ ಯುದ್ಧದಲ್ಲಿ ಮಡಿದರೆ ನೇರವಾಗಿ ಸ್ವರ್ಗಕ್ಕೆ ಹೋಗುವೆ ಅಪ್ಸರೆಯರೊಡನೆ ಇರುವೆನೆಂದು ತಮ್ಮ ಪತ್ನಿಯರನ್ನು ಛೇಡಿಸಿದರೆ ಅವರ ಪತ್ನಿಯರು ನಾವು ನಿಮಗೂ ಮೊದಲು ಸತಿಯಾಗಿ ಸ್ವರ್ಗದಲ್ಲಿ ನಿಮ್ಮನ್ನು ಸ್ವಾಗತಿಸಲು ಕಾದಿರುತ್ತೇವೆ ಎಂಬ ಮಾತುಗಳು 'ಬಲಿದಾನ' ನಮ್ಮ ಜನಕ್ಕೆ ಸಹಜ ಪರಂಪರೆಯಂತಾಗಿತ್ತು ಎನಿಸುತ್ತದೆ. ನಾಡಿಗಾಗಿ, ನಾಡಿನ ಸಂಪತ್ತಿನ ರಕ್ಷಣೆಗಾಗಿ ಮತ್ತು ನಾಡಿನ ನಾರಿಯರ ರಕ್ಷಣೆಗಾಗಿ ಆತ್ಮಾರ್ಪಣೆಗಯ್ಯುವ ಉದಾಹಣೆಗಳ ಜೊತೆ ಜೊತೆಗೇ ಧರ್ಮಕ್ಕಾಗಿ, ಪ್ರಜಾ ಸೌಖ್ಯಕ್ಕಾಗಿ, ಆಶ್ರಯದಾತರ ಸುಖಕ್ಕಾಗಿ ಬಲಿದಾನಗಳಾದ ಉದಾಹರಣೆಗಳನ್ನೇ ಇತಿಹಾಸ ಒಡಲಲ್ಲಿರಿಸಿಕೊಂಡಿದೆ. ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು ಇಂತಹ ಸಾಂಸ್ಕೃತಿಕ ಚಹರೆಗಳನ್ನು ಸಾರುವಂತೆ ಹಳ್ಳಿ ಹಳ್ಳಿಗಳ ಅಂಗೈಗಳಲ್ಲಿ ಆತುಕೊಂಡಿವೆ. 'ದೇಹತ್ಯಾಗ' ಎಂಬ ಪದವು ವೀರೋಚಿತ ಯುದ್ಧಕ್ಕೆ ಮಾತ್ರ ಸಂಬಂಧಿಸಿಲ್ಲ. ಮೋಕ್ಷಾಪೇಕ್ಷೆಗೆ, ಉತ್ಕಟವಾದ ಸ್ವಾಮಿನಿಷ್ಠೆಗೆ, ಕುಲನಿಷ್ಠೆಗೆ ಉದಾಹರಣೆ–ಯಂತೆಯೂ ಕಂಡುಬರುತ್ತವೆ. ಗಂಗಾ, ಯಮುನಾ, ತುಂಗಾ ನದಿಗಳು ಅಶಕ್ತರ, ಅಸಮರ್ಥರ, ಮೋಕ್ಷಾರ್ಥಿಗಳ ಹಾಗೂ ಮಹಾಪಾತಕಿಗಳಿಗೆ ನೀಡಿದ ಶಿಕ್ಷೆಗಳನ್ನ ಹೊತ್ತು ಹೊರಟಂತೆ ಕಾಣುತ್ತವೆ. ಮಥುರಾ, ಪ್ರಯಾಗ, ಶ್ರೀಶೈಲದ ಕೇಂದ್ರಗಳು ತಮ್ಮ ಧಾರ್ಮಿಕ ಬೆಳಕಿನಾಚೆಗೆ ದೇಹ ಸಿದ್ಧಿ ಮತ್ತು ದೇಹತ್ಯಾಗಗಳನ್ನು ಸಾರುವ ಕೇಂದ್ರಗಳಂತೆಯೂ ಕಾಣುತ್ತವೆ. ಸಂತಾನಕ್ಕಾಗಿ, ಊರಕೋಟೆ ನಿಲ್ಲಲಿಕ್ಕಾಗಿ, ಊರುಗಳ ಕೆರೆಯ ಒಡ್ಡು ನಿಲ್ಲಲಿಕ್ಕಾಗಿ ಬಲಿಯಾಗುವ ಸಿಡಿದಲೆಯಾಗುವ, ಆತ್ಮಾಹುತಿಯಾಗುವ ಉಲ್ಲೇಖಗಳು ಪ್ರಾದೇಶಿಕ ಚರಿತ್ರೆಗಳ ಉಡಿ ತುಂಬಿಕೊಂಡತಿವೆ. ಸಮಾಧಿಗಳೆಂದೂ, ಸ್ಮಾರಕಗಳೆಂದೂ, ಗುಡಿಗಳೆಂದೂ

ಪೂಜಿಸಲ್ಪಡುವ ಇಂತಹ ಬಲಿದಾನಗಳು ಧಾರ್ಮಿಕ ಕಥನಗಳನ್ನೂ ಲೌಕಿಕ ಕಥನಗಳನ್ನೂ ಒಟ್ಟಿಗೇ ಬೆಸೆದುಕೊಂಡಂತೆ ಕಾಣುತ್ತವೆ.

ವೀರಗಲ್ಲುಗಳು, ಸಹಗಮನ, ಅನುಗಮನ, ವೇಳವಾಳಿಗಳು, ಜೋಳವಾಳಿಗಳು, ಗರುಡರು, ಕೀಳ್ಗುಂಟೆಗಳು ಎಂದೆಲ್ಲಾ ಚರಿತ್ರೆಕಾರರು ಇವನ್ನ ಕರೆಯುತ್ತಾರೆ. ಜೋಳವಾಳಿ ಅನ್ನದ ಋಣವನ್ನು ಸೂಚಿಸಿದರೆ, ವೇಳವಾಳಿ ಅಥವಾ ವೇಳೆಗೊಳ್ಳು ಎಂಬುದು ಒಡೆಯನ ಜೊತೆಗೇ ಆತ್ಮಾರ್ಪಣೆ ಮಾಡಿಕೊಳ್ಳಲು ಸಿದ್ಧರಾಗಿದ್ದವರ ಕಥನಗಳನ್ನು ಸೂಚಿಸುತ್ತವೆ. ಇಲ್ಲಿ ಪ್ರಭುನಿಷ್ಠರು ತಮ್ಮ ಪ್ರಭು ಸತ್ತರೆ ಒಬ್ಬ ಪುರುಷನು ಮಾತ್ರವಲ್ಲ ಅವನ ಜೊತೆಯಲ್ಲಿಯೇ ಹೆಂಡತಿ, ತಾಯಿ, ಸೋದರಿಯರು, ಮಂತ್ರಿಗಳು ದಾಸಿಯರು, ಪ್ರಾಣತ್ಯಾಗಕ್ಕೆ ಸಿದ್ಧರಾಗುತ್ತಿದ್ದರು. ಅಗ್ನಿ ಪ್ರವೇಶ ಮಾಡುವ, ಉಳಿದವರ ಕತ್ತು ಕತ್ತರಿಸಿ ಕೊನೆಗೆ ತನ್ನ ಕತ್ತು ಕತ್ತರಿಸಿಕೊಳ್ಳುವ, ಇರಿದು ಕೊಳ್ಳುವ, ಬೆನ್ನಿನ ಚರ್ಮ ಸುಲಿಸಿಕೊಳ್ಳುವ ಬಗೆ ಬಗೆಯ ಸಾವುಗಳಿದ್ದವು. ತಮ್ಮ ಎಡಗಾಲಿಗೆ ಗಂಡು ಪೆಂಡೇರ ಎಂಬ ಕಡಗ ತೊಟ್ಟು ಒಡೆಯನಿಗಾಗಿಯೇ ಪ್ರಾಣ ಮೀಸಲಿಟ್ಟ ಗರುಡರು ಯುದ್ಧಾರಂಭಕ್ಕೂ ಮೊದಲು ರಾಜ ಪಡೆಗಳನ್ನ ಯುದ್ಧೋಮ್ನತ್ತರಾಗಿಸಲು, ರಕ್ಕಸರನ್ನಾಗಿಸಲು ಊರ ಅಗಸಿ ಬಾಗಿಲುಗಳ ಬಳಿ ರಣಕೇಕೆ ಹಾಕಿ ತಮ್ಮ ತಮ್ಮ ಕತ್ತು ಕತ್ತರಿಸಿಕೊಂಡು ಸೈನಿಕ ಪಡೆಗಳು ಮುನ್ನುಗ್ಗುವಂತೆ ಮಾಡುತ್ತಿದ್ದರು. ರಾಜ ಸತ್ತ ಸುದ್ದಿ ತಿಳಿದೊಡನೆಯೇ ತಲೆಗೆ ಮುಂದಲೆಯಾಗಿ ಸಿಡಿದಲೆಯನ್ನು ಕೊಡುತಿದ್ದವರು ಲೆಂಕರು. ಲೆಂಕರೊಂದಿಗೆ ಲೆಂಕಿಯರೂ ಇರುತ್ತಿದ್ದರು. ರಾಜರಿಗೆ ಅಥವಾ ಒಡೆಯರಿಗೆ ಪ್ರಾಣಾರ್ಪಣೆ ಮಾಡಲು ಕಾದ ತಳ ಸಮುದಾಯಗಳೇ ಕೀಳ್ಗುಂಟೆಗಳು ಇವರನ್ನು ರಾಜ ಸೇವಕರೆಂದೂ ತೊತ್ತುಗಳೆಂದೂ, ಪ್ರೇಮಾಲಯಸುತರೆಂದೂ, ಮನೆಮಕ್ಕಳೆಂದೂ ಕರೆಯುತ್ತಾ ಬರಲಾಗಿದೆ. ಮಾದ್ರಿ ಚಿತೆಯ ಸಹಗಮನದ ಕತೆಯಂತೆಯೇ ಮಾಸ್ತಿಕಲ್ಲುಗಳು ಮಾಸ್ತಿಗುಡಿಗಳು, ಒಕ್ಕೈ, ಇಕ್ಕೈ, ವ್ಯಾಸನ ತೋಳಿನ ಕಥನಗಳು ಹೇರಳವಾಗಿವೆ.

ಗುಂಡಮಬ್ಬೆ, ದೇಕಬ್ಬೆಯರ ಕಥನಗಳು ಉಲ್ಲೇಖಗೊಂಡಿರುವಂತೆ ಜನಪದ ಕಥನಗಳಾದ ಮಹಿಳೆಯರ ಚಿತ್ರಗಳು ಚರಿತ್ರೆಗಳಲ್ಲಿ ಏಕೆ ಇಂಬುಗೊಂಡಿಲ್ಲ? ಮೌಖಿಕವು ನಗಣ್ಯವೆಂದು ಕೃಷಿಕ ಕೂಲಿ ಕಾರ್ಮಿಕರ ಬಲಿದಾನಗಳ ಸಾಲುಗಳೇ ಅಮುಖ್ಯವೆಂದು ಅನಾದರಿಸಿದವರ ಸಾಲುಗಳಿಗೆ ಸವಾಲೆಂಬಂತೆ ಜನಪದ ಗಾಯನಗಳಲ್ಲಿ ಇವು ತಮ್ಮ ಬಲಿದಾನಗಳನ್ನು ಪರಂಪರಾಗತವಾಗಿ ಮೆರೆಸುತ್ತಿವೆ.

'ಬಲಿ'ಯಾದರೂ ತಾವು ಚರಿತ್ರೆಯ ಎಳೆಯಾಗದೇ ಉಳಿದ ಈ ಚಹರೆಗಳನ್ನು, ಬಲಿದಾನಗಳ ನಡೆಗಳನ್ನು ಹಾಡುವ ಜನಪದ ಹಾಡುಗಾರ್ತಿಯರೂ ನಿಡುಗಾಲದ ಈ ಬದುಕುಗಳನ್ನು ಉಸಿರಾಡುತ್ತ ನಿಂತ ಪಾಳುಬಿದ್ದ ಕೋಟೆ ಮುರಿದುಬಿದ್ದ ಅರಮನೆಯ ಗೋಡೆಗಳಂತೆ, ನೀರಿಲ್ಲದೆ ತೆರೆದ ಬಯಲಾದ ಕೆರೆಗಳಂತೆ, ಊರ ದೇಗುಲಗಳ ಪಾದಕ್ಕೆ ಬಡಕೊಂಡು ನಿಂತ ಪಳುವಳಿಕೆಗಳಂತೆ ಕಾಣುತ್ತಾರೆ!

ಬೀದರ್ ಜಿಲ್ಲೆಯ 'ಕೋಟಿ ಕಿಲ್ಲದ ಕಥೆ'ಯು ಕೋಟೆಗಾಗಿ ಬಲಿಕೊಟ್ಟ ಸಾಮಾನ್ಯನ ಕಥನವಾಗಿದೆ. ಬಲಿದಾನ ನಿರೀಕ್ಷಿಸದ ಆತನ ಹೆಂಡತಿಯು ಅದನ್ನ ಆರಾಧಿಸದೆ ಹೊತ್ತು ಮೆರೆಸದೆ ಅದಕ್ಕೆ ಕಾರಣರಾದವರನ್ನು 'ದೇವರಿಲ್ಲ ದಿಂಡರಿಲ್ಲ' ಎಂದು ಶಪಿಸುತ್ತಲೇ ತನ್ನ ಸುತ್ತಲ ಪರಿಸರದ ದನಕಾಯುವ ಕುರಿ ಕಾಯುವ ಅಣ್ಣ ತಮ್ಮಂದಿರ ನಿರಾಸಕ್ತಿಯನ್ನು ಅವರ ರಾಸುಗಳು ಸಾಯಲಿ, ಬಡಿಗಿ ಮುರಿಯಲಿ ಎಂದು ಶಪಿಸುತ್ತಾಳೆ. ಇದು ಇಂದಿಗೂ ಮಣ್ಣ ನಂಬಿದ ಅಮಾಯಕ ಹೆಣ್ಣುಗಳ ಶಾಪವೀಯುವ ರೀತಿಯಂತೆಯೇ ಕಾಣಬಲ್ಲದು. ಹಳ್ಳಿಗಳ ಹೆಗಲ ಸುತ್ತುವ ಇಂತಹ ನೂರಾರು ಬೈಗುಳಗಳು ವ್ಯವಸ್ಥೆಯ ವಿರೋಧದ ಅಳಲನ್ನೂ ವ್ಯವಸ್ಥೆಯ ಕಠೋರ ಮನಸ್ಥಿತಿಯನ್ನು ಸಾರುತ್ತವೆ. ಧರಣಿಯಮ್ಮನ ಹಾಡು ಮನೆಯೊಡೆಯನ ಸಾಮಾಜಿಕ ನೀತಿಯನ್ನು ಪ್ರಶ್ನಿಸುವಂತಿದೆ. ನಿಲ್ಲದ ಕೋಟೆಗೆ ಹೇಮರೆಡ್ಡಿ ತನ್ನ ಸೊಸೆ ಧರಣಿಯಮ್ಮನನ್ನು ಬಲಿಕೊಡಲು ತೀರ್ಮಾನಿಸುತ್ತಾನೆ. ಪತ್ನಿ ಮತ್ತು ಮಗಳನ್ನು ಬಲಿಕೊಡಲು ಮನಸ್ಸುಬಾರದ ಆತ ತಂಗಿಯ ಮಗಳನ್ನು ಬಲಿಕೊಡಬಲ್ಲ. ಕೂಸೊಂದಿಗಳಾದರೂ ಆತ ಆ ಸೊಸೆಯನ್ನು ಬಲಿಕೊಡುವ ಮನಸು ಮಾಡುತ್ತಾನೆ. ಇಲ್ಲಿ ಧರಣಿಯಮ್ಮನೂ ತನ್ನ ಹೆಸರಿಗೇ ಸಾಂಕೇತಿಕದಂತೆ ತನ್ನ ಗಂಡನಿಗೆ ತನ್ನ ತಂಗಿಯನ್ನು ಮದುವೆಮಾಡಿಸಲು ಒಪ್ಪಿಸಿ ಬಲಿಯಾಗುವುದು ಗಮನಾರ್ಹ. ಮದುಗದ ಕೆಂಚಮ್ಮನೂ ಹೀಗೆ ತನ್ನ ತಂಗಿಯನ್ನು ಗಂಡನಿಗೆ ಮದುವೆ ಮಾಡಿಸಿ ಬಲಿಯಾಗುತ್ತಾಳೆ.

ಉತ್ತರಾದೇವಿ ಕಥನವು 'ಮಳೆಯ' ಹಾಡಾದರೂ ಅದು ಮಹಿಳೆಯ ಪಾರಂಪರಿಕ ನೋವಿನ ಫಲದ ಹಾಡಂತಿದೆ. ಅತ್ತೆ ಮಾತಿಗೆ ಪ್ರತಿಮಾತನಾಡಿದ ತಪ್ಪಿಗೆ ಗಂಡನಿಂದ ದೂರಾಗಬೇಕಾದ ಆಕೆ ತವರಿಗೆ ಹೋದರೂ ಅಲ್ಲಿ ತನ್ನ ಅವ್ವನಿಗೂ ಅಂತಹುದೇ ಸ್ಥಿತಿ ಒದಗಿರುವುದು ಕಂಡು ಕೆರಳಲಾರದೆ ನೋವುಗಳಲ್ಲಿ ಸಮಾನ ಪಾಲುದಾರರಾದ ಇವರು ತಣ್ಣಗೆ ಗಂಗೆ ಪಾಲಾಗುವ ಕೌರ್ಯ ಕರುಳಿರಿಯುವಂತಿದೆ.

'ಬಪ್ಪಿಂಗ ಬಮ್ಮಿಂಗ' ಕಥನಗೀತೆಯು ತಳವರ್ಗದ ಹೊಲೆಯ ಹೆಣ್ಣೊಬ್ಬಳ ಬಲಿದಾನವನ್ನು ಸಾರುತ್ತದೆ. ಬ್ರಾಹ್ಮಣ ಮತ್ತು ಹೊಲೆಯರವ ಜೂಜಾಡುವುದು ಜೂಜಿನಲ್ಲಿ ಇವರು ತಮ್ಮ ತಂಗಿಯರನ್ನು ಅಡವಿಡುವುದು. ಸೋತವರು ಗೆದ್ದವರಿಗೆ ತಂಗಿಯನ್ನು ಮದುವೆ ಮಾಡಿಕೊಡಬೇಕು ಎಂಬ ಜೂಜಿನ ಶರತ್ತಿಗಾಗಿ ಹೊಲೆಯನ ಹೆಂಡತಿಯಾಗುವ ಅಲ್ಲಿ ಇರಲಾಗದೆ ಇಲ್ಲಿ ಉಳಿಯಲಾಗದೆ ತಣ್ಣಗೆ ಬಾವಿಯ ಹೆಣವಾಗಿ ತೇಲುವ ಕಥನ ಹೆಣ್ಣು ಪದಾರ್ಥದಂತೆ ಬಿಕರಿಯಾಗುವ ಚಿತ್ರದಂತಿದೆ. ಸ್ತ್ರೀ ಮತವನ್ನು ಉತ್ತರಿಸಲಾಗದ ಪ್ರಭುಗಳ ಎದುರು ದ್ರೌಪದಿ ಬದುಕಿ ತೋರಿದರೆ ಅಸ್ಪೃಶ್ಯನೊಂದಿಗೆ ಅದು ಅಸಾಧ್ಯವೆಂದು ತೋರುವಂತೆ ಆ ಕಾಲದ ಕರಾಳ ನಡೆಯನ್ನ ಅದಕ್ಕೆ ಸ್ತ್ರೀಯೂ ಪಾಲುದಾರಳೆನ್ನುವ ರೀತಿಯನ್ನು ಈ ಕಥನ ತೋರುತ್ತದೆ. ಈ ನೆಲೆಯಲ್ಲೇ ಬ್ರಾಹ್ಮಣ ಸ್ತ್ರೀಯರು ಕೆಳವರ್ಗಗಳ ಪುರುಷರನ್ನು ಬಲಿನೀಡಿದ ಅಂತಹ ವಿವಾಹಗಳನ್ನು ಅನುಲೋಮ ವಿವಾಹಗಳೆಂತಲೂ ಕರೆಯಲಾಗಿತ್ತು. ಪುರುಷಕೇಂದ್ರಿತ

ನ್ಯಾಯ ವ್ಯವಸ್ಥೆಯು ಅದಕ್ಕೆ ಉಗ್ರ ಶಿಕ್ಷೆಯನ್ನು ನೀಡುತಿತ್ತು ಎಂಬ ಉದಾಹರಣೆಗಳನ್ನು ನಮ್ಮ 'ವಡ್ಡಾರಾಧನೆ'ಯಾದಿಯಾಗಿ ಅನೇಕ ಪಠ್ಯಗಳ ಉದಾಹರಣೆಯನ್ನು ಗಮನಿಸಬಹುದು.

ಪುರುಷ ಬಲಿದಾನಗಳನ್ನು ಅಧಿಕಾರ ಮತ್ತು ಪ್ರಭುತ್ವ ಕೇಂದ್ರಿತ ಬಲಿದಾನಗಳನ್ನು (ರಾಜಕೀಯ) ತೆಕ್ಕೆಗೆ ತೆಗೆದುಕೊಂಡ ನಮ್ಮ ಚರಿತ್ರೆ ಯಾಕೆ ಸ್ತ್ರೀ ಬಲಿದಾನಗಳನ್ನು (ಧಾರ್ಮಿಕ ಮತ್ತು ಸಾಮಾಜಿಕ) ಮರೆತಿದೆ? ಚರಿತ್ರೆಯ ಒಳಗಿನ ಪುರುಷ (ರಾಜಕೀಯ) ಬಲಿದಾನಗಳು ಅವರೇ ಇಷ್ಟಪಟ್ಟು ಬಲಿದಾನವಾದವು. ಆದರೆ ಜನಪದ ಸ್ತ್ರೀಯರ(ಸಾಮಾಜಿಕ ಮತ್ತು ಧಾರ್ಮಿಕ) ಬಲಿದಾನಗಳು ಆಕೆಯೇ ಇಷ್ಟಪಟ್ಟು ಆಯ್ಕೆ ಮಾಡಿಕೊಂಡವಲ್ಲ. 'ಸಮಾಜ' ಮತ್ತು 'ಮನೆ' ಎಂಬ ವ್ಯವಸ್ಥೆಗಳು ಆಕೆಯನ್ನು ಆದರ್ಶ ಮೌಲ್ಯ ಮತ್ತು ದೈವದ ಹೆಸರಿನಲ್ಲಿ ಬಲವಂತವಾಗಿಯೂ ಬಲಿಯ ಕಡೆ ತಳ್ಳಿವೆ. ಸತಿ ಕೂಡಾ ಮೇಲ್ವರ್ಗ ಮತ್ತು ತಳವರ್ಗಗಳಲ್ಲಿ ಭಿನ್ನ ಚಿತ್ರಗಳನ್ನು ಹೊತ್ತಿದೆ. ಸತಿಯಾದ ಕಲ್ಲುಗಳ ಹಿಂದೆಯೂ ಪ್ರೀತಿಯಂತೆಯೇ ಬಲವಂತದ ನೂಕುವಿಕೆಯೂ ಇರುವುದನ್ನು ಡಾ.ಚಿದಾನಂದಮೂರ್ತಿಯವರು ದಾಖಲಿಸಿದ್ದಾರೆ. ತಳವರ್ಗಗಳಲ್ಲಿ ಸತಿ ಇರಲಿಲ್ಲ ಬದಲಿಗೆ ಬಲಿ ಇತ್ತು. ಇಲ್ಲೂ ಕೂಡ ಕೆರೆಗೆ ಹಾರವಾದವರು ಮೇಲ್ವರ್ಗದ ಕ್ಷತ್ರಿಯ ಸ್ತ್ರೀಯರೇ. ಆಗ ಊರ ಕೆರೆ ನೀರು ಮುಟ್ಟಲು ಅವಕಾಶಗಳಿಲ್ಲದ ತಳವರ್ಗದವರಿಗೆ ಕೋಟೆ ಮತ್ತು ಅರಮನೆ ಗೋಡೆಗಳು ದೇಗುಲದ ಧಾರ್ಮಿಕ ಆವರಣಗಳು ಮಾತ್ರ ಬಗೆ ಬಗೆಯ ಬಲಿಗೆ ನೂಕಿವೆ. ಮಗನ ಸಾವನ್ನು ಅರಗಿಸಿ ಕೊಳ್ಳಲಾರದ ನಮ್ಮ ಮನೆಗಳು ಸೊಸೆಯ ಸಾವನ್ನು ಏಕೆ ಅಲವತ್ತುಕೊಂಡಿಲ್ಲ? ಆ ಕಾಲದಲ್ಲಿ ಸೊಸೆಯ ಸಾವು ಅವರ ಸಾಮಾಜಿಕ ಪ್ರತಿಷ್ಠೆಗಾಗಿ ಬೇಕಿತ್ತು. 'ಕೆಲವು ಸಮಯದಲ್ಲಿ ಸತಿಯರನೇಕರು ಗಂಡ ತೀರಿಕೊಂಡರೆ ಬೆಂಕಿಗೆ ಬೀಳುವ ಆಸೆ ತೋರಿಸುತ್ತಿರಲಿಲ್ಲ. ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದೂ ಉಂಟು. ಅಂತಹವರನ್ನು ಹಿಡಿದುತಂದು ಬಲವಂತವಾಗಿಯಾದರೂ ಬೆಂಕಿಗೆ ತಳ್ಳುತ್ತಿದ್ದುದು ಉಂಟು. ಒಂದು ವೇಳೆ ಬೆಂಕಿಯಿಂದ ತಪ್ಪಿಸಿಕೊಂಡು ಗ್ರಾಮದಲ್ಲಿ ಬದುಕಲು ಇಚ್ಛೆಪಟ್ಟರೆ ಜನರಿಂದ ಅನಾದರ ನಿಂದೆ ಅಗೌರವ, ಬೈಗಳು ತಪ್ಪಿದ್ದಲ್ಲ. ಕೆಲವು ವಿಧವೆಯರು ದೂರದ ಪಟ್ಟಣಗಳ ಕಡೆ ಓಡಿ ನೆಲಸಿ ವೇಶ್ಯೆಯರಾಗಿ ಕಾಲ ಹಾಕುತಿದ್ದದ್ದೂ ಉಂಟು. ಶ್ರೀಮಂತರ ಮನೆಯ ಗೃಹ ಕೃತ್ಯಗಳನ್ನು ಮಾಡಿಕೊಡುವ ದಾಸಿಯಾಗಿ, ಅಕ್ಕಿ, ಅವಲಕ್ಕಿ ಕುಟ್ಟಿ ಮಾರುವವರಾಗಿ ಬದುಕು ಕಳೆಯುತಿದ್ದ ಸಂದರ್ಭವೂ ಇರುತಿತ್ತು' ಎಂದು ಡಾ.ಕೃಷ್ಣಮೂರ್ತಿ ಹನೂರ ಅವರು ಉಲ್ಲೇಖಿಸುತ್ತಾರೆ. ಒಟ್ಟಿನಲ್ಲಿ ಚರಿತ್ರೆಯು ತನಗೆ ಅಗತ್ಯವಾದ (ರಾಜಕೀಯ) 'ಬಲಿ'ಯ ಆದರಣೆಯನ್ನೂ ಅನಗತ್ಯವಾದ (ಸಾಮಾಜಿಕ ಮತ್ತು ಧಾರ್ಮಿಕ) 'ಬಲಿ'ಯ ಅನಾದಾರಣೆಯನ್ನೂ ಅನುಸರಿಸಿದೆ. ಹಾಗೇ ಚರಿತ್ರೆಯು 'ಬಲಿ' ಎಂಬ ಪದಗಳಲ್ಲೇ ಪುರುಷರ ಆಸಕ್ತಿಯನ್ನೂ ಸ್ತ್ರೀಯರ ಅನಾಸಕ್ತಿಯನ್ನೂ ಬಿಂಬಿಸುವ ರೂಪಕಗಳಂತೆ ಕಾಣಿಸಿದೆ.

ಪರಾಮರ್ಶನ ಗ್ರಂಥಗಳು

೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ : ಡಾ.ಎಂ.ಚಿದಾನಂದ ಮೂರ್ತಿ
೨. ಮಾರ್ಗ ಸಂಪುಟ-೨ : ಡಾ.ಎಂ.ಎಂ.ಕಲ್ಬುರ್ಗಿ
೩. ಜನಪದ ಸಾಮಾಜಿಕ ಕಥನ ಗೀತೆಗಳು : ಡಾ.ಶಾಲಿನಿ ರಘುನಾಥ
೪. ಕತ್ತಾಲ ದಾರಿ ದೂರ : ಡಾ.ಕೃಷ್ಣಮೂರ್ತಿ ಹನೂರು
೫. ಸಾಹಿತ್ಯ ಚೈತ್ರ: ಡಾ.ಚನ್ನಕ್ಕ ಪಾವಟೆ

ಸಿರಿಯಜ್ಜಿ ಸಾಹಿತ್ಯ : ಬಂಜೆತನ ಕುರಿತ ಪ್ರತಿಸಾಂಸ್ಕೃತಿಕ ಲೋಕದೃಷ್ಟಿ

– ಡಾ. ಮಂಜಣ್ಣ .ಎಂ

ಚಿತ್ರದುರ್ಗದ ಮೌಖಿಕ ಪರಂಪರೆಯಲ್ಲಿ ವಕ್ತೃಗಳೇ ಅವರ ಅವ್ಯಕ್ತ ಸಾಂಸ್ಕೃತಿಕ ಚರಿತ್ರೆಯನ್ನು ನಿರೂಪಿಸಿ, ಅವರ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಎತ್ತಿ ಹಿಡಿದಿದ್ದಾರೆ. ಅವರಲ್ಲಿ ಅನೇಕರು ಸ್ತುತ್ಯಾರ್ಹರು. ಆದರೆ ಸಿರಿಯಜ್ಜಿ ಈ ವಕ್ತೃಗಳಿಗಿಂತ ಭಿನ್ನ ಸ್ಥಾನದಲ್ಲಿ ನಿಂತು ತನ್ನ ಸ್ಥಾನವನ್ನು ಗಟ್ಟಿಗೊಳಿಸಿಕೊಳ್ಳುವುದಕ್ಕೆ ಅನೇಕ ಕಾರಣಗಳಿವೆ. ಗ್ರಾಮೀಣ ಭಾರತದ ಅಂದರೆ ಚಿತ್ರದುರ್ಗದ ಗ್ರಾಮೀಣ ಮಹಿಳಾಲೋಕದ ಎಲ್ಲ ಬಗೆಯ ಆಕೆಯ ಸಾಂಸ್ಕೃತಿಕ ಸ್ಮೃತಿಕೋಶವು ಮೌಖಿಕತೆಯಲ್ಲಿ ಸೂಕ್ಷ್ಮವಾಗಿ ಬಿಚ್ಚಿಕೊಂಡಿದೆ. ಒಬ್ಬ ಸ್ತ್ರೀಯಾಗಿ ಸಿರಿಯಜ್ಜಿ ಸಮುದಾಯದ ಸಾಂಸ್ಕೃತಿಕ ಆಚರಣೆ, ನಂಬಿಕೆ, ಸಂಪ್ರದಾಯಗಳನ್ನು ತನ್ನಲ್ಲಿ ಅಂತರ್ಗತಗೊಳಿಸಿಕೊಂಡು ತನ್ನ ಕಷ್ಟದ ಬವಣೆಯ ಬದುಕನ್ನು ದಾಖಲಿಸುವ ಪರಿಯೇ ಇತರರಿಗಿಂತ ಭಿನ್ನವಾಗಿ ಒಡಮೂಡುತ್ತದೆ. ಜನಪದ ಮಹಿಳಾಲೋಕದ ತನ್ನೆಲ್ಲಾ ಅಸಹಾಯಕತೆಯನ್ನು ಸೃಜನಶೀಲ ಅಭಿವ್ಯಕ್ತಿಯ ಕಥನದ ಮತ್ತು ಕಾವ್ಯದ ಮಾರ್ಗಗಳಲ್ಲಿ ದೇಶಿ ಸಂವೇದನೆಯಲ್ಲಿ ಕಟ್ಟಿಕೊಳ್ಳುತ್ತಾ ಬಂದಿದ್ದೇ ಆಕೆಯನ್ನು ಜನಪದ ಪರಂಪರೆಯಲ್ಲಿ ವಿಸ್ಮೃತಿಗೆ ಒಳಗಾಗದಂತೆ ಉಳಿಸಿರುವುದು. ಆಕೆ ತನ್ನ ಅಸಹಾಯಕ ಸ್ಥಿತಿಯನ್ನು ತನ್ನ ಮೌಖಿಕ ಪರಂಪರೆಯನ್ನು ಉಳಿಸಿಕೊಳ್ಳಲು ಬಳಸಿಕೊಂಡಿದ್ದಾಳೆ. ತನ್ನ ಮತ್ತು ಸಮುದಾಯದ ಅನುಭವವನ್ನು ಕಥನ ಮಾಡಿ, ಆ ಕಥೆಯ ಒಳಗೆ ಸಾಮಾಜಿಕ, ಸಾಂಸ್ಕೃತಿಕ, ಸಂಕಥನವನ್ನು ಬೆರೆಸಿ ತನ್ನ ಅಂತರಂಗವನ್ನು ದಾಖಲಿಸಿದ್ದಾಳೆ. ತನ್ನ ರೋಷ, ಪ್ರತಿಭಟನೆ, ಅಸಹಾಯಕತೆ, ಕಿಚ್ಚು ಮತ್ತು ತ್ಯಾಗಗಳನ್ನು ತೋರಿಸಲು ಮೌಖಿಕ ಪ್ರಕಾರಗಳನ್ನೇ ಆಯ್ಕೆಮಾಡಿಕೊಂಡಿದ್ದಾಳೆ. ಮೌಖಿಕವಾಗಿ ಆಡಿಕೊಳ್ಳುವ ಈ ಸ್ವಾತಂತ್ರ್ಯ ಅತ್ಯಂತ ಸಂಕೀರ್ಣವಾದ ರೂಪ, ವಿರೂಪಗಳನ್ನೆಲ್ಲಾ ಹಾಡಲು ಅವಕಾಶ ಕೊಟ್ಟಿದೆ. ಅಕ್ಷರದಿಂದ ದೂರವಿದ್ದು, ಶಾಸನಗಳಿಂದ ಆಚೆಯಿದ್ದು, ಬರೆಯುವ ಸಂಸ್ಕೃತಿಗೆ ವಿಮುಖವಾಗಿದ್ದು, ಹೇಳುವ, ಹಾಡುವ, ತೋರುವ, ನೆನಪಿಸುವ ರೀತಿಯಲ್ಲಿ

ತನ್ನನ್ನೇ ಸಂಕೇತ, ಪ್ರತಿಮೆ, ರೂಪಕಗಳಿಗೆ ರೂಪಾಂತರಿಸಿಕೊಂಡು ಒಂದು ಬಗೆಯಲ್ಲಿ ಭಾವಾಂತರಿಸಿಕೊಂಡು ಕಟ್ಟಿರುವ ಕಥನಗಳು ಆಕೆಯ ಸಾಂಸ್ಕೃತಿಕ ಪ್ರತಿಭಟನೆಯ ಸ್ವರೂಪವನ್ನು ತೋರಿಸಿಕೊಡುತ್ತವೆ.

ಸಿರಿಯಜ್ಜಿಯ ಸಾಂಸ್ಕೃತಿಕ ಜಗತ್ತು ವಿಶಿಷ್ಟ ಹಾಗೂ ವಿನೂತನವಾದುದ್ದು. ಕೂಲಿ ಹಾಗೂ ಹಾಡುವ ಸಿರಿಯಜ್ಜಿಯ ಬದುಕು ತನ್ನ ಚಿಂತನೆಗಳಿಗೆ ಪ್ರತಿಮಾತ್ಮಕ ಅಭಿವ್ಯಕ್ತಿಯನ್ನು ರೂಪಿಸುವಾಗ ಸ್ವತಃ ತನ್ನ ಸಾಂಸ್ಕೃತಿಕ ನೆಲೆಯ ದನಿಯ ಧನ್ಯತ್ವವೇ ತನ್ನ ಸುತ್ತಲ ಪರಿಸರವನ್ನು ಸಮಷ್ಟಿ ನೆಲೆಯಲ್ಲಿ ಕಟ್ಟಿಕೊಡುತ್ತಿರುವುದು ವಿಶಿಷ್ಟವಾದುದು. ವ್ಯಕ್ತಿ ನೆಲೆಯಿಂದಲೇ ಸಮಷ್ಟಿತನವನ್ನು ರೂಪಿಸುತ್ತಾ ಸಾಂಸ್ಕೃತಿಕ ಸ್ಮೃತಿಪಟಲವೇ ಸಿರಿಯಜ್ಜಿಯನ್ನು ಇತರರಿಂದ ಪ್ರತ್ಯೇಕಿಸುತ್ತದೆ. ಸಿರಿಯಜ್ಜಿಯು ಎಲ್ಲಾ ಬಗೆಯ ಸಂಕೀರ್ಣತೆಯನ್ನು ಅತ್ಯಂತ ಸರಳವಾಗಿ ನಿರೂಪಿಸುವುದು ವಿಶೇಷ. ಸಿರಿಯಜ್ಜಿಯು ಸ್ತ್ರೀ ಸಂವೇದನೆಯನ್ನು ಪರಿಗ್ರಹಿಸುವ ನೆಲೆಯೇ ವಿಭಿನ್ನವಾಗಿ ಕಾಣುತ್ತದೆ. ಮೇಲು ನೋಟಕ್ಕೆ ಪುರುಷ ವ್ಯವಸ್ಥೆಯನ್ನು ಒಪ್ಪುವಂತೆ ಕಂಡರೂ ಅದರೊಳಗೆ ಪುರುಷ ಮೂಲ ಧೋರಣೆಗಳನ್ನು ತಿರಸ್ಕರಿಸುತ್ತದೆ. ಇಲ್ಲವೇ ಒಪ್ಪಿಕೊಂಡಂತೆ ನಟಿಸಿ ಅದರ ವಿಕಾರವನ್ನು ಹಾಡಿ ಹೊಗಳಿ, ಒಪ್ಪಿಯೇ ವ್ಯಂಗ್ಯ ಮಾಡಿದಂತೆ ಆ ವ್ಯಂಗ್ಯದೊಳಗೇ ಪುರುಷ ಪ್ರಭುತ್ವದ ವಿಕಾರವನ್ನು ಧಿಕ್ಕರಿಸುವ ಎಷ್ಟೋ ವಿವರಗಳು ಆಕೆಯ ಮಹಿಳಾ ಸಂಕಥನಗಳಲ್ಲಿ ಕಂಡು ಬರುತ್ತವೆ.

ಸಾಮಾನ್ಯವಾಗಿ ಮಹಿಳೆಯರ ಅಭಿವ್ಯಕ್ತಿಯ ಸಾಹಿತ್ಯವು ಪ್ರತಿಭಟನೆಯದ್ದಾಗಿದ್ದರೂ ಅದು ಮೌನವನ್ನೇ ತಾಳಿರುತ್ತದೆ. 'ಜನಪದ ಮಹಿಳೆಯರು ಮೌನವನ್ನೇ ಒಂದು ಅದ್ಭುತವಾದ ಪ್ರತಿರೋಧ ವಿಧಾನವನ್ನಾಗಿ ರೂಪಿಸಿಕೊಂಡಿದ್ದಾರೆ'[೭] ಎನ್ನುವ ಮೊಗಳ್ಳಿ ಅವರ ಮಾತು ಸತ್ಯವಾದುದು. ಗುಣಸಾಗರಿ, ಮದಗದ ಕೆಂಚಮ್ಮ ಮುಂತಾದ ಗೀತೆಗಳು ಹಿಂದೆ ಹೇಳಿದ ಎಲ್ಲಾ ಹೇಳಿಕೆಗಳಿಗೆ ಸೂಕ್ತ ಉದಾಹರಣೆಗಳಾಗುತ್ತವೆ. ಚರಿತ್ರೆ ಸಂಸ್ಕೃತಿ ಭಾಷೆಯ ಅಭಿವ್ಯಕ್ತಿಯ ಸಾಧ್ಯತೆಗಳು ಸಿರಿಯಜ್ಜಿಯ ಸೃಜನಶೀಲತೆ ಆಕೆಯ ಅಂತರಂಗದ ಆಶಯ ಕೇಂದ್ರಿತ ಸಾಹಿತ್ಯ, ಚರಿತ್ರೆ, ಸಂಸ್ಕೃತಿಯಲ್ಲಿ ಪಾಲು ಕೇಳುವುದೆ ವಿಚಿತ್ರವಾದುದು. ಸ್ವತಃ ಇಂತೆಲ್ಲವನ್ನು ಗಾಢವಾಗಿ ಪರಂಪರೆಯಲ್ಲಿ ರೂಪಿಸಿಕೊಂಡು ಬಂದಿರುವ ಎಲ್ಲಾ ಅರ್ಹತೆ ಸಿರಿಯಜ್ಜಿಗಿದೆ.

ಒಂದು ಸಂಸ್ಕೃತಿಯ ಆಚಾರ, ವಿಚಾರ, ಮೌಖಿಕ ಸಂವೇದನೆಯು ಆ ಸಮುದಾಯದ ವಕ್ತೃವಿನ ಸೃಜನಶೀಲತೆಯ ಅಭಿವ್ಯಕ್ತಿಯ ಮೂಲ ಕೇಂದ್ರ ನೆಲೆಯಾಗಿರುತ್ತದೆ. ಸಾಹಿತ್ಯದ ಪರಿಕರಗಳೆಲ್ಲವುಗಳ ಹಿಂದೆ ಅದರ ತಾತ್ವಿಕತೆಯು ಪ್ರಧಾನ ಪಾತ್ರ ವಹಿಸುತ್ತದೆ. ಈ ಒತ್ತಡಗಳು ಆ ವಕ್ತೃವಿನ ಮೇಲೆ ಹೇರುವ ಸೃಜನಾತ್ಮಕ ಬಂಧಗಳೆಲ್ಲವೂ ಆ ವ್ಯಕ್ತಿಯನ್ನು ಇತರ ವ್ಯಕ್ತಿಗಳಿಂದ ಪ್ರತ್ಯೇಕಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಬಹು ಸಂಸ್ಕೃತಿಗಳ ನಾಡಾಗಿರುವ ಭಾರತವು ಏಕ ಸಂಸ್ಕೃತಿಯ ಕೇಂದ್ರ ನೆಲೆಯಾಗಿಲ್ಲದಿರುವುದು ಸತ್ಯ. ಆದರೆ ಒಂದೇ ಸಮುದಾಯದೊಳಗಿನ

ವ್ಯಕ್ತಿಗಳ ಸೃಜನಶೀಲತೆಯೂ ಏಕಪ್ರಕಾರವಾಗಿರಲು ಅಸಾಧ್ಯ. ಅವರು ಪರಿಸರಾತ್ಮಕವಾಗಿ ಪಡೆದ ನೋವು-ನಲಿವು, ಕಂಡುಂಡ ಸುಖ-ದುಃಖ, ಒದಗಿ ಬಂದ ಸಂದರ್ಭ-ಸನ್ನಿವೇಶ ಬದುಕಿದ ರೀತಿ ಎಲ್ಲಾ ಪ್ರಕ್ರಿಯೆಗಳೇ ಅವರ ಭಿನ್ನ ಆಲೋಚನೆಗೆ ಕಾರಣವಾಗುತ್ತವೆ ಮತ್ತು ಒಂದು ಸಂಸ್ಕೃತಿಯ ಜೀವನ ಕ್ರಮವನ್ನು ಆ ವ್ಯಕ್ತಿ ಗ್ರಹಿಸಿದ ರೀತಿಯೇ ಪ್ರತ್ಯೇಕತೆಯೊಳಗೆ ಏಕತ್ರಗೊಳಿಸುವುದು ಜನಪದ ಕವಿಯ ಅಸಾಧಾರಣ ಪ್ರತಿಭೆಯ ಧ್ಯೋತಕವಾಗಿದೆ.

ಸಿರಿಯಜ್ಜಿಯ ಕಾವ್ಯ ಪ್ರತಿಭೆಯ ಮೂಲ ನೆಲೆಯಿರುವುದೇ ಈ ಅಂಶಗಳ ಅನನ್ಯತೆಯನ್ನು ಕಟ್ಟಿಕೊಡುವಲ್ಲಿ. ಚಿತ್ರದುರ್ಗ ಜನಪದ ವಕ್ತೃ ಸಮುದಾಯದ ಸಂಸ್ಕೃತಿಯ ಅನನ್ಯ ಪ್ರಾತ್ಯಕ್ಷಿಕತೆಗೆ ಸಂವೇದನಾಶೀಲ ವಿಧಾನಗಳನ್ನ ಸಿರಿಯಜ್ಜಿ ಕಟ್ಟಿಕೊಡುವ ಕ್ರಮವೇ ವಿಶಿಷ್ಟ. ಮಿಥ್ಯತೆಯನ್ನು ನಿರಚನ ಮಾಡಿಕೊಳ್ಳುವಂತಾಗಿರುವುದರಿಂದ ಸಿರಿಯಜ್ಜಿಯು ಮೌಖಿಕದ ಮೂರ್ತಿಶಿಲ್ಪವಾಗಿಯೇ ಕಾಣತೊಡಗುತ್ತಾಳೆ.

ಕಾಡುಗೊಲ್ಲರಲ್ಲಿರುವ ಸಾಹಿತ್ಯ ಶ್ರೀಮಂತಿಕೆ ಸಿರಿಯಜ್ಜಿಗೆ ಸಹಜವಾಗಿಯೇ ದಕ್ಕಿರುವುದನ್ನು ಗುರುತಿಸಬಹುದು. ಕಾಡುಗೊಲ್ಲರ ಸಾಹಿತ್ಯದಲ್ಲಿನ ತ್ರಿಪದಿಯಿಂದ ಹಿಡಿದು ಮಹಾಕಾವ್ಯದವರವಿಗೂ ಸಿರಿಯಜ್ಜಿ ಅನಾಯಾಸವಾಗಿ ಹಾಡುವುದಿದೆ. ಇಂತಹ ಹಾಡುಗಾರಿಕೆ (ಸಾಹಿತ್ಯ ಸೃಷ್ಟಿ) ಪ್ರಯಾಸದಿಂದ ಬಂದುದಾಗಿರದೇ ಸಹಜವಾಗಿಯೇ ಬಂದುದಾಗಿದೆ. ಇದೇ ರೀತಿ ಶಿಷ್ಟ ಕವಿಗಳೂ ಸಹ ಕಾವ್ಯ ಪರಂಪರೆಯನ್ನು ಮುಂದುವರೆಸಿರು ವುದನ್ನು ಕಾಣಬಹುದಾಗಿದೆ. ಪಂಪನು ಹೇಳುವಂತೆ 'ಭಾಜಿಸಲ್ ಬರೆಯುವ ಕೇಳಲ್ ಒಡರ್ಚುದವರಿಗೆ' ಸಿಗುವ ಫಲಗಳನ್ನು ಹೇಳುತ್ತಾನೆ. ಕಾವ್ಯವು ತನ್ನ ಹಿರಿಮೆಯನ್ನು ಗುರುತಿಸಿಕೊಳ್ಳುವುದು ಕವಿಕೇಂದ್ರಿತವಾಗಿ ಅಲ್ಲ; ವಾಚಿಸುವ ಬರೆಯುವುದರ ಜೊತೆಗೆ ಕೇಳುಗರ ಮನೋಭೂಮಿಕೆಯನ್ನು ಅಹ್ಲಾದಗೊಳಿಸಿದಾಗ ಮಾತ್ರವೇ. ಜನಪದ ಕಾವ್ಯ ಯಾವತ್ತೂ ವ್ಯವಸ್ಥಿತ ಪದ ಜೋಡಣಾ ಸಿದ್ಧಮಾದರಿಯ ಕಾವ್ಯವಲ್ಲವೇ ಅಲ್ಲ. ಜನಪದರು ತತ್‌ಕ್ಷಣ ಉದಯಿಸಿದ ಕೆಲವು ಸೊಲ್ಲುಗಳನ್ನು ಅನ್ನುವ ಮೂಲಕ ತಮಗೆ ಅರಿವಿಲ್ಲದಂತೆ ಕಾವ್ಯ ಕಟ್ಟಿ ಸಮುದಾಯಕ್ಕಷ್ಟೇ ಅಲ್ಲ ಇಡೀ ಜಗತ್ತಿಗೆ ಅರ್ಪಿಸಿ ಅದರಿಂದ ತಾವು ಬಿಡುಗಡೆಯಾಗುತ್ತಾರೆ.

ಒಂದು ವಾಸ್ತವವೆಂದರೆ ಯಾರು ಜೀವನದಲ್ಲಿ ಹೆಚ್ಚು ನೊಂದು ಏನನ್ನೂ ಪಡೆದುಕೊಳ್ಳದೆ ಅದನ್ನು ತಮ್ಮ ಕಾವ್ಯದ ಮೂಲಕ ಕಂಡುಕೊಂಡು ಜಗತ್ತಿನಲ್ಲಿ ಗುರುತಿಸಿಕೊಳ್ಳುತ್ತಾರೆ ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ. ಇದು ಶಿಷ್ಟಕ್ಕಿಂತ ಜನಪದ ವಕ್ತೃವಿಗೆ ಹೆಚ್ಚು ಅನ್ವಯವಾಗುತ್ತದೆ. ಈ ಹಿನ್ನೆಲೆಯಲ್ಲಿಯೇ ಅಜ್ಜಿಯನ್ನು ನೋಡುವುದಾದರೆ ಅಜ್ಜಿಯೇನು ಶ್ರೀಮಂತ ಮನೆತನದ ಸಿರಿವಂತಿಕೆಯನ್ನು ಅನುಭವಿಸಿದ ವ್ಯಕ್ತಿಯೇನಲ್ಲ. ಚಿಕ್ಕ ವಯಸ್ಸಿಗೆ ಮದುವೆಯಾಗಿ ಬಹುಬೇಗನೇ ಒಂದಷ್ಟು ಮಕ್ಕಳನ್ನು ಪಡೆದು ಮೂವತ್ತೈದನೆಯ ವಯಸ್ಸಿಗೆ ಗಂಡನನ್ನು ಕಳೆದುಕೊಂಡವಳು. ಇಡೀ ಕುಟುಂಬದ ಹೊಣೆಯನ್ನು ಹೊತ್ತು ನಲುಗಿ ತನ್ನೆಲ್ಲಾ ಕಷ್ಟಗಳಿಗೆ ಮೂರ್ತರೂಪ

ಕೊಟ್ಟವಳು. ಆ ಕಾರಣಕ್ಕೆ ಹೆಣ್ಣಿನ ಜೀವನ ಕುರಿತ ಹಾಡುಗಳನ್ನು ಹಾಡುವಾಗ ಸಿರಿಯಜ್ಜಿ ಭಾವುಕಳಾಗುತ್ತಾಳೆ. ಕಾರಣ ಆ ಪಾತ್ರದ ಮೂಲಧಾತು ಸಿರಿಯಜ್ಜಿಯೇ ಆಗಿರುತ್ತಾಳೆ. ಅಂತಹ ಸಂದರ್ಭದಲ್ಲಿಯೂ ಜನಪದ ವಕ್ತೃ ಕಾಯಕದಿಂದ ಹೊರತಾಗಿರುವುದಿಲ್ಲ. ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಹೇಳಿಕೆ ಅಲೌಕಿಕತೆಗೆ ಹೊರಳಿದರೆ ಮೌಖಿಕ ಕಾವ್ಯಕ್ಕೆ 'ಬಾಳಿನಲ್ಲಿ ದುಡಿಮೆಯೊಂದಿದ್ದರೆ ಗೋಳಿನಲ್ಲಿ ಸುಖಕಂಡಂತೆ' ಎನ್ನುವ ತತ್ವ ಮುಖ್ಯವಾಗುತ್ತದೆ. ಇದೇ ಕಾರಣಕ್ಕೆ ದುಡಿಮೆ ಎನ್ನುವುದನ್ನು ಅವರು ಯಾವತ್ತೂ ಆದರ್ಶವೆಂದು ಒಪ್ಪಿಕೊಳ್ಳುವುದಿಲ್ಲ. ಅವರ ಬದುಕು ಸಾಂಸ್ಕೃತಿಕ ಸಂಬಂಧಗಳೊಂದಿಗೆ ಬೆಸೆದುಕೊಂಡಿರುವುದರಿಂದ ಅದೇ ಆದರ್ಶವಾಗುತ್ತದೆ. ಇದೇ ಆದರ್ಶವು ಅವರೆಲ್ಲಾ ಸಾಮಾಜಿಕ ರಚನೆಯ ಬಂಧುತ್ವವನ್ನು ಕಾಪಿಟ್ಟುಕೊಳ್ಳುವ ನಿಟ್ಟಿನಲ್ಲಿ ಉಳಿದು ಬಂದಿದೆ. ತ್ರಿಪದಿ, ಲಾವಣಿ, ಖಂಡಕಾವ್ಯ ಜನಪದ ಮಹಾಕಾವ್ಯಗಳನ್ನು ಹಾಡುವುದು ಅವರಿಗೆ ಸಾಂಸ್ಕೃತಿಕ ಜವಾಬ್ದಾರಿಯಾಗಿ ಕಂಡುಬರುತ್ತದೆ. ಆ ಮೂಲಕವೇ ನಮಗೆ ಅವರು ಆದರ್ಶ ಆದರಣೀಯ ವ್ಯಕ್ತಿಗಳಾಗುತ್ತಾರೆ.

'ಕುಟ್ಟುವ ಬೀಸುವ ಹಾಡು ಯಾವಾಕಿ ಕಲಿಸಿದಳು' ಎನ್ನುವ ಮಾತನ್ನು ಗಮನಿಸಿದರೆ ಕಾವ್ಯ ಪ್ರಯತ್ನಪೂರ್ವಕವಾಗಿ ಏಕಾಂಗ ಚಿತ್ತದಲ್ಲಿ ಸ್ಥಿತಪ್ರಜ್ಞೆಯಲ್ಲಿ ಕಟ್ಟಿದ್ದಲ್ಲ, ಅದು ಕ್ರಿಯೆಯಲ್ಲಿ ಸಹಜವಾಗಿ ರೂಪಗೊಂಡಿದ್ದು ಎಂಬುದು ವೇದ್ಯವಾಗುತ್ತದೆ. ವಕ್ತೃವಿಗೆ ಸಹಜವಾಗಿ ದಕ್ಕುವ ಈ ಕಾವ್ಯ ಭಾಷೆ ಮತ್ತು ಸಾಮಾಗ್ರಿ ಕ್ರಿಯೆಗಳೊಂದಿಗೆ ಅವರಲ್ಲಿ ಸಾಹಿತ್ಯ ಸೃಷ್ಟಿಗೆ ಕಾರಣವಾಗುತ್ತದೆ ಮತ್ತು ಯಾವುದೇ ರೀತಿಯ ಕಾವ್ಯ ನಿರ್ಬಂಧಗಳು ಇಲ್ಲಿ ಉಪೇಕ್ಷೆಯಿಂದ ಕೂಡಿ ಹಾಡಿದ್ದೇ ರಾಗ, ಹಾಕಿದ್ದೇ ಹೆಜ್ಜೆ ಎನ್ನುವ ರೀತಿಯ ಸಾಹಿತ್ಯ ಹುಟ್ಟುತ್ತದೆ. ಬಗೆ ಬಗೆಯ ಕಾವ್ಯರೂಪಗಳನ್ನು ಪರಂಪರೆಯಿಂದ ಕೇಳಿ ನೆನಪಿಟ್ಟುಕೊಳ್ಳುವ ಮೂಲಕ ಅನುಭವ ಬೆಳೆದಂತೆ ತಮ್ಮದೇ ಅಭಿವ್ಯಕ್ತಿ ಸಾಮರ್ಥ್ಯ ಬೆಳೆಸಿಕೊಂಡು ಮೂಲ ಸಾಂಸ್ಕೃತಿಕ ನೆಲೆಯನ್ನೇ ಮಾದರಿಯಾಗಿಟ್ಟುಕೊಂಡು ಕೊನೆಗೆ ತಾವೇ ಮಾದರಿಗಳಾಗಿ ಬಿಡುತ್ತಾರೆ. ಈ ನಿಟ್ಟಿನಲ್ಲಿಯೇ ಗಮನಿಸುತ್ತಾ ಹೋದರೆ ಸಿರಿಯಜ್ಜಿಯೂ ಸಹ ತನ್ನ ಪರಂಪರೆಯ ನೆರಳಲ್ಲಿಯೇ ಬೆಳೆದು ಸಾಂಸ್ಕೃತಿಕ ಪ್ರತಿನಿಧಿಯಾಗುತ್ತಾಳೆ.

ಮಹಿಳೆಯ ದನಿ ಇಲ್ಲದೆ, ಸಾಹಿತ್ಯವು ಅಪೂರ್ಣವೆನಿಸುತ್ತದೆ. ಜಾನಪದ ಕ್ಷೇತ್ರ ಇದಕ್ಕೆ ಯಾವ ರೀತಿಯಲ್ಲೂ ಹಿಂದೆ ಬಿದ್ದಿಲ್ಲ. ಶ್ರಮ ಜೀವಿಯಾದ ಜನಪದ ಮಹಿಳೆ ಕಾಯಕಕ್ಕೆ ಹೆಚ್ಚು ಒತ್ತುಕೊಟ್ಟಳು. ತನ್ನ ದುಡಿತದಲ್ಲಿ ಸುಖ, ದುಃಖ, ತ್ಯಾಗಗಳನ್ನು ತಾರತಮ್ಯವಿಲ್ಲದೆ ದನಿಯೆತ್ತಿ ಹಾಡಿದ್ದಾಳೆ. ಅವಳ ಬದುಕಿನ ಎಲ್ಲಾ ಪಾಡುಗಳು ಹಾಡುಗಳಾಗಿ ಹೊರಹೊಮ್ಮಿವೆ. ಅವಳು ಹಾಡಿದ ಸಾಹಿತ್ಯವನ್ನು ಗಮನಿಸಿದಾಗ ಅವರ ದಟ್ಟವಾದ ಪ್ರತಿಭೆ ಉನ್ನತವಾದ ಸೃಜನಶೀಲತೆ ಬದುಕಿನಲ್ಲಿ ಇಟ್ಟುಕೊಂಡಿದ್ದ ನಂಬಿಕೆ ಎಲ್ಲವೂ ಗೋಚರವಾಗುತ್ತದೆ. 'ಯಾರಾದರೂ ಭಾರತೀಯ ಮಹಿಳೆಯನ್ನು ಕುರಿತು ಅಧ್ಯಯನ ಮಾಡಬೇಕೆಂದಿದ್ದರೆ ಮತ್ತು ಅವರ ಧ್ವನಿಗಳನ್ನು ಕೇಳಬೇಕೆಂದಿದ್ದರೆ,

ಅವರು ಹೆಂಗಸರು ಹೇಳುವ ಕಥೆಗಳು, ಹಾಡು, ಹಸೆಗಳು, ಒಡಪುಗಳು, ಮತ್ತು ತೋಂಡಿ ಸಂಪ್ರದಾಯದಲ್ಲಿ ಜೀವಂತವಾಗಿ ಉಳಿದುಕೊಂಡಿರುವ ಜಾಣ್ನುಡಿ, ಆಟಗಳು ಮತ್ತು ಜಾನಪದ ಪರಂಪರೆಯ ದೇವತೆಗಳ ಪೌರಾಣಿಕತೆ ಈ ಎಲ್ಲವುಗಳತ್ತ ತಮ್ಮ ಗಮನ ಕೇಂದ್ರಿಕರಿಸಬೇಕಾಗುತ್ತದೆ".[೨] ಶಿಷ್ಟ ಸಾಹಿತ್ಯದಲ್ಲಿನ ಕನ್ನಡ ಸಾಹಿತ್ಯ ಚರಿತ್ರೆಯನ್ನು ಗಮನಿಸಿದರೆ ಕೇವಲ ಕೆಲವೇ ಕೆಲವು ಜನ ಮಾತ್ರ ಮಹಿಳಾ ಕವಯಿತ್ರಿಯರು ಸಿಗುತ್ತಾರೆ.

ಮೌಖಿಕ ಸಾಹಿತ್ಯ ಚರಿತ್ರೆಯನ್ನು ನೋಡಿದಾಗ ಮಹಿಳಾ ದನಿಗಳ ಸಂಕಥನಕಾರ್ತಿಯರ ದಂಡೇ ನಮಗೆ ಲಭ್ಯವಾಗುತ್ತದೆ. ಬಹುಪಾಲು ಮಹಿಳೆಯರಿಂದಲೇ ರಚನೆಯಾದ ಜನಪದ ಸಾಹಿತ್ಯದಲ್ಲಿ ವಿಭಿನ್ನ ರೀತಿಯ ಮಹಿಳೆಯರು ಮತ್ತವರ ಸಂಕಷ್ಟಗಳ ಸಾಹಿತ್ಯ ಲಭ್ಯವಾಗುತ್ತದೆ. ಜನಪದದ ಒಂದೊಂದು ಪ್ರಕಾರವು ಒಂದೊಂದು ಪ್ರಧಾನ ಸಮಸ್ಯೆಯನ್ನು ಹೊಂದಿದೆ. ಇಂತಹ ವೈವಿಧ್ಯಮಯವಾದ ಮಹಿಳಾ ಜಗತ್ತನ್ನು ರೂಪಿಸುವ ಕಾರ್ಯ ಬಹಳ ದಿನಗಳವರೆಗೆ ನಡೆದಿದೆ. ಇಂದು ಜಗತ್ತಿನ ಸಾಂಸ್ಕೃತಿಕ ತಿಳುವಳಿಕೆಗಳಿಂದ ನಿರ್ಲಕ್ಷಿತ ಮಹಿಳಾ ಜಗತ್ತನ್ನು ಶೋಧಿಸುವ ಪ್ರಯತ್ನಗಳು ನಡೆಯುತ್ತಿವೆ ಇದರಿಂದಾಗಿ ಬುಡಕಟ್ಟುಗಳ ಸಾಹಿತ್ಯವನ್ನು ಪರಿಶೀಲಿಸುವುದರ ಮೂಲಕ ಕಳೆದು ಹೋಗಿರುವ ಮಹಿಳಾ ಜಗತ್ತನ್ನು ಕಂಡುಕೊಳ್ಳಲಾಗುತ್ತಿದೆ. ಸಾಂಸ್ಕೃತಿಕ ಚಲನೆಯ ಗತಿಯನ್ನು ಪ್ರಭುತ್ವಕ್ಕೆ ಹೊರತಾಗಿ ಹೆಣ್ತನವನ್ನು ಶೋಧಿಸಬೇಕಾಗಿದೆ. ಈ ಶೋಧನೆ ಸ್ತ್ರೀ ಮೌಲೀಕರಣವನ್ನು ಶ್ರದ್ಧೆಯಿಂದ ಎಚ್ಚರದಿಂದ ಸಮಕಾಲೀನ ಸಂದರ್ಭದ ಅಗತ್ಯದ ಮೂಲಕವಾಗಿ ಒಡೆದು ಕಟ್ಟುವ ಬಗೆಯಾಗಿದೆ.

"ಸ್ವೀಕರಿಸಬೇಕಾಗಿರುವುದು ಅದೇ ಸಂಪೂರ್ಣ ನಿಜವೆಂದು ಅಥವಾ ಸುಳ್ಳೆಂದು ಭಾವಿಸುವ ರೀತಿಯಲ್ಲಿ ಬದಲಾಯಿಸುವ ಈ ರೀತಿಯ ಸಂಗತಿಯನ್ನು ಜನಸಮುದಾಯ ನಿರ್ಮಿಸಿತು ಎನ್ನುವುದರ ಅನ್ವೇಷಣೆಯ ರೂಪದಲ್ಲಿ ಇತಿಹಾಸದ ಶೋಧನೆಯಲ್ಲಿ ಅಧ್ಯಯನಕ್ಕೆ ಘಟನೆಗಳು ಸತ್ಯದ ಶೋಧ ಆಗುವುದಿಲ್ಲ. ಬದಲಾಗಿ ಸಮುದಾಯದ ಮನೋಧರ್ಮ ಯೋಜನೆಗಳು ಅನ್ವೇಷಣೆಯಾಗುತ್ತವೆ".[೩] ಈ ಮಾತುಗಳು ವರ್ತಮಾನ ಕಾಲದ ಬದುಕಿನ ಪ್ರಸ್ತುತಿಯನ್ನು ಕಟ್ಟಿ ಕೊಡುತ್ತವೆ. ಸಾಂಸ್ಕೃತಿಕ ವೀರನಾದ ಜುಂಜಪ್ಪನ ಕಾವ್ಯದಲ್ಲಿ ಚಿನ್ನಮ್ಮ, ಕೆಂಗುರಿ ಮಲ್ಲೇಗೌಡನ ಹೆಂಡತಿ ಹಬ್ಬದ ಸಂದರ್ಭದಲ್ಲಿ ಗಂಡನಾದ ಮಲ್ಲೇಗೌಡನು ದನಗಳನ್ನು ಹೊಡೆದುಕೊಂಡು ಹೋದವನು ಮದುವೆಯಾಗಿ ಹನ್ನೆರಡು ವರ್ಷವಾದರೂ ಮರಳಿಬರಲಿಲ್ಲ. ಈ ಕಾರಣದಿಂದ ಚನ್ನಮ್ಮಳು ಸಂತಾನ ಫಲ ಪಡೆಯಲಾಗುವುದಿಲ್ಲ. ಬಂಜೆ ಎಂಬ ಅಪವಾದಕ್ಕೆ ಗುರಿಯಾಗುತ್ತಾಳೆ. ಜನ ಆಡಿಕೊಳ್ಳಲು ತೊಡಗುತ್ತಾರೆ.

ಆಗಾಲೆ ವುಟ್ಟಾಲಿ ಈಗಾಲೆ ಸಾಯಾಲಿ
ಗೊಡ್ಡೆಂಬ ಸೊಲ್ಲು ಬಿಡಿಸಮ್ಮ । ಗೌರಸಂದ್ರದ
ಕಿಡಿಗಣ್ಣಿ ಕೊಡೆ ನಮಗೆ ಪಲಗಾಳ

ಎಂದು ಬಂಜೆತನವನ್ನು ನೀಗಿಕೊಳ್ಳುವ ಒತ್ತಡವನ್ನು ಅರ್ಥಮಾಡಿಕೊಳ್ಳ ಬೇಕಾಗಿದೆ. ನಂತರದಲ್ಲಿ ಗೌರಸಂದ್ರಮಾರಿ ಹತ್ತಿರ ತನ್ನ ಸಂಕಷ್ಟವನ್ನು ಹೇಳಿಕೊಳ್ಳುತ್ತಾಳೆ.

ಆಳು ರಾಜ್ಯದಾಗೆ ಗೊಡ್ಡಿ ಎಂಬುತ್ತಾರೆ
ಗೊಡ್ಡೆಂಬ ಸೊಲ್ಲು ಬಿಡಿಸಮ್ಮ । ಗೌರಸಂದ್ರದ
ಕಿಡಿಗಣ್ಣಿ ಕೊಡೆ ಪಲಗಾಳು

ಇಂತಹ ಬಂಜೆತನವನ್ನು ದೈವದ ಕೃಪೆಯಿಂದ ಪಡೆಯುವ ಮನೋಭಿಲಾಷೆ ಜನಪದರಲ್ಲಿ ದಟ್ಟವಾಗಿದೆ. ಮಕ್ಕಳ ಫಲ ಮುಂದೆ ಒದಗುವ ಗಂಡಾಂತರಗಳನ್ನು ಪರಿಪರಿಯಾಗಿ ವಿವರಿಸಿದರೂ, ಹಟಮಾಡಿ ಚಿನ್ನಮ್ಮ ಬಂಜೆತನ ನಿವಾರಣೆಗೆ ಪ್ರಾಣವನ್ನು ಕಡೆಗಣಿಸಿ ಸಾವನ್ನು ಸಂತೃಪ್ತಿಯಿಂದ ಸ್ವೀಕರಿಸುತ್ತಾಳೆ. ಶಿವ ಪಾರ್ವತಿಯರು ವೀರಭದ್ರನ ಅಂಶವಿರುವ ವ್ಯಕ್ತಿಯನ್ನು ಚಿನ್ನಮ್ಮಳಿಗೆ ನೀಡುತ್ತಾರೆ. ಚಿನ್ನಮ್ಮ ಕಾಡಿಗೆ ಹೋಗಿ ಗಂಡನ ನೆರಳನ್ನು ಬೀಳಿಸಿಕೊಂಡು ಬರುವುದರ ಮೂಲಕ ಮುಂದೆ ಅಪವಾದವನ್ನು ನಿವಾರಿಸಿಕೊಳ್ಳುವ ಜನಪದರ ದೂರದೃಷ್ಟಿಯನ್ನು ಇಲ್ಲಿ ಕಾಣಬಹುದು.

"ಮೂಗಿನಲಿ ಮುಕ್ಕಣ್ಣ ನಾಲಿಗೇಲಿ ನಾಗೇಂದ್ರ ಚಿನ್ನಿಗ ದೇವರ ಬಟ್ಟ ಕನ್ನಡಿ ಮುಕದ ಓರಿಗೊಡ್ಡ ಆಕಳ ಚಿಕ್ಕರಂಬೆ ಬಾಯಿಗೆ ಮಂಗಳವಾರ ಕೊಡು (ಅರಳೆ ಬುತ್ತಿಗಳನ್ನು) ಒಂದು ವಾರ ಆದ ಮೇಲೆ ನಿನ್ನ ಮನೆಯ ಮುಂದಕ್ಕೆ ಬಂದು ಕಾಲು ಕೆದರಿ ರೆಂಕಿ ತಿರುವುತ್ತೆ. ಅದರ ಪಾದ ತೊಳೆದು ಪನ್ನೀರು ಕುಡಿದು ನೀನು ಸೆರಗೊಡ್ಡಿ ಬೇಡಿದರೆ ಮೂರು ತೆಪ್ಪೆ 'ಬಂಗಾರ' (ಸೆಗಣಿ) ಕೊಡುತ್ತೆ. ಈ ಬಂಗಾರ ಹಾಕಿ ಮಾಳುದ್ದು ಸೊಂಪಾಗಿ ಬೆಳೆದ ಕಿರುಕುಸಾಲೆ ಸೊಪ್ಪು ಬೇಸಿ ಗೋವು ಕಚ್ಚಿ ಬೇವು ಕಚ್ಚಿ ಬೆಳಿಗ್ಗೆ ಊಟಮಾಡು. ಇದರಿಂದ ಅದು ಗಬ್ಬವಾಗುತ್ತೆ. ಆ ವೊತ್ತು ರಾತ್ರೀಗೆ ಚಕಮಕಿ ಕಲ್ಲು ಹೊಡೆದು ಚಿಕ್ಕಕ್ಕಿ–ದೊಡ್ಡಕ್ಕಿಯ ಅದರದ ಅಡುಗೆ ಮಾಡು ಹಾಲು ತುಪ್ಪದಲ್ಲಿ ಪಾಲು ಪಂಚಾಮೃತದ ಅಡುಗೆ ಮಾಡಿ ಜಾಲಿ ಎಲೆ, ಜಂಬಿ ಎಲೆ, ಪತ್ರಾವಳಿ ಮಾಡಿಕೊಂಡು ಬಂಗಾರದ ಗಿಂಡೀಲಿ ನೀರು ತಗಂಡು ಶೃಂಗಾರ ಮಾಡಿಕೊಂಡು ತಯಾರಾಗಿರು ನಾನು ಮಲೆಗೊಂಡನನ್ನು ಹೇಗಾದರೂ ಮಾಡಿ ಕಲ್ಲು ನೀರು ಕರಗುವತ್ತಗೆ ಮನೆಗೆ ಕಳುಸ್ತಿನಿ. ಅವನ ನೆಳ್ಳು ನಿನ್ನ ಮಂಚದ ಮೇಲೆ ಬೀಳುತ್ತೆ ಅವನ್ನ ಉಪಚ್ಹಾರ ಮಾಡು. ಇಲ್ಲದಿದ್ದರೆ ಹನ್ನೆರಡು ವರ್ಷದ ತನಕ ಗಂಡನ ಸಂಪರ್ಕ ಇಲ್ಲದವಳು ಹೇಗೆ ಬಸುರಿಯಾದಳು ಅಂತ ಅಪವಾದ ಬರುತ್ತೆ. ಮಲೆಗೊಂಡನೊಂದಿಗೆ ಒಂದು ರಾತ್ರಿಕಳಿ ಫಲಗಳ ಕೊಡ್ತಿನಿ ಅವನನ್ನ ಹಟ್ಟೀಲಿ ನಾಕುದಿನ ಇಟ್ಕೊ ಎಲ್ಲರ ಕಣ್ಣಿಗೆ ಬೀಳಲಿ ಎಂಬ ಹಿತನುಡಿಗಳನ್ನು ಚಿನ್ನಮ್ಮ ಕೇಳಿ ಸಮಧಾನಗೊಳ್ಳುವ ಭಾವವಿರೇಚನವು ಇಲ್ಲಿ ಗಮನ ಸೆಳೆಯುತ್ತದೆ."[೪] ಸಾಮಾಜಿಕ

ಎಚ್ಚರಿಕೆಯನ್ನು ಇಲ್ಲಿ ಗಮನಿಸಬಹುದು. ಅಪವಾದವೆನ್ನುವುದನ್ನು ತುಂಬಾ ಸರಳ ರೀತಿಯಲ್ಲಿ ನಿವಾರಿಸುವ ಜನಪದರ ದೂರದೃಷ್ಟಿತ್ವ ಸಮಾಜ ಕಂಟಕವಾಗಿರದೆ, ಸಮಾಜ ಸ್ವಾಸ್ಥ್ಯವನ್ನು ಕಾಪಾಡುವುದು ಕಂಡು ಬರುತ್ತದೆ.

ಮುಂದೆ ಚಿನ್ನಮ್ಮ ಪಡೆದ ಮಕ್ಕಳ ಭಾಗ್ಯದಲ್ಲಿ ಮೂರು ಗಂಡಿನ ಹಿಂದೆ ಕೇಡು ಮಾರಿಯಾಗಿ ಹೆಣ್ಣು ಹುಟ್ಟುತ್ತಾಳೆ. ಮುಂದೆ ಕೊಡಬಾರದ ಕಷ್ಟಗಳನ್ನು ಅನುಭವಿಸುತ್ತಿಯಾ? ಎಂದು ಹೇಳಿದರೂ ತಾಯಿ ಕರಳು ಒಪ್ಪದೆ, ಮುಂದೆ ಬರುವ ಸಂಕಷ್ಟಗಳನ್ನು ಎದುರಿಸಲು ಸಿದ್ಧವಾಗುತ್ತಾಳೆ. ಜೊತೆಗೆ ಹೆಣ್ಣು ಮಗುವನ್ನು ಉಳಿಸಿಕೊಳ್ಳುವಲ್ಲಿನ ಮಾತೃ ಹೃದಯದ ಮಿಡಿತವನ್ನು ಇಲ್ಲಿ ಗಮನಿಸಬಹುದು "ಚಿನ್ನಮ್ಮ ಮಾತೃತ್ವದ ಬನಿಯಾಗುತ್ತಾಳೆ. ಬಡತನದ ಕಷ್ಟ ವೈಧವ್ಯದ ನೋವನ್ನು ಸ್ವೀಕರಿಸಲು ಸಿದ್ಧವಾಗುತ್ತಾಳೆಯೇ ಹೊರತು ತನ್ನ ಶಿಶುವನ್ನು ಕೊಲ್ಲುವ ಕ್ರೌರ್ಯವನ್ನು ಒಪ್ಪಿಕೊಳ್ಳವುದಿಲ್ಲ"[೨] ಎನ್ನುವ ಮಾತುಗಳನ್ನು ಒಪ್ಪಬಹುದಾಗಿದೆ. ವಾಸ್ತವವಾಗಿ ಗಮನಿಸಿದರೆ ಇಲ್ಲಿ ಮಹಿಳೆಯರ ದೋಷದಿಂದಲ್ಲದೇ ಪುರುಷ ದೂರವಾದ ಪ್ರಸಂಗದಿಂದ ಬಹಳ ಕಾಲ ಗಂಡನು ಹತ್ತಿರವಿಲ್ಲದಿರುವಿಕೆ ಬಂಜೆಯಾಗಲು ಕಾರಣವಾಗತ್ತವೆ. ಈ ಅಂಶಗಳನ್ನು ಸಾಮಾಜಿಕವಾಗಿ ಗಮನಿಸಬೇಕಾಗುತ್ತದೆ.

ಮತ್ತೊಂದು ಪಾಠಾಂತರದಲ್ಲಿ (ಚಲುವರಾಜು ಸಂಪಾದಿಸಿರುವ ಜುಂಜಪ್ಪನ ಕಾವ್ಯದಲ್ಲಿ) ಚಿನ್ನಮ್ಮ ಬಂಜೆತನ ನಿವಾರಣೆಗೆ ಮೂರು ಗಂಡುಮಕ್ಕಳನ್ನು ಪಡೆದು ತನ್ನ ಆಸೆಯಂತೆ ಒಂದು ಹೆಣ್ಣು ಮಗುವನ್ನು ನೀಡುವಂತೆ ಬಯಸುತ್ತಾಳೆ. ಪಾರ್ವತಿಯ ಪ್ರೇರಣೆಯಂತೆ ಶಿಶುವನ್ನು ಬೇಡುತ್ತಾಳೆ.

ಸ್ವಾಮಿ
ಹತ್ತು ಜನ ಬರೀ ಗಂಡು ಮಕ್ಕಳುಟ್ಟಿದರೂ
ಬಂಜೆ ಎಂಬ ಸೊಲ್ಲು ಇಂಗಾದಿಲ್ಲ
ಹತ್ತು ಜನ ಬರೀ ಹೆಣ್ಣು ಮಕ್ಕಳು ಹುಟ್ಟಿದರೂ
ಬಂಜೆಂಬ ಸೊಲ್ಲು ಇಂಗಾದಿಲ್ಲ

ಹೆಣ್ಣಾಗಿ ಪಾರ್ವತಿ ಹೇಳಿದ ಮಾತುಗಳಲ್ಲಿ ಮಹತ್ವದ ಅಂಶವಿದೆ. ಕಾರಣ ಗಂಡು ಪಡೆದರೆ ಮುಕ್ತಿ ಎಂಬ ಮನಸ್ಸುಗಳಿಗೆ ಗಂಡು ಹೆಣ್ಣೆಂಬ ಭೇದ ಭಾವವನ್ನು ತೊಡೆದು ಹಾಕುವುದರ ಮೂಲಕ ಲಿಂಗ ಸಮಾನತೆಯನ್ನು ಕಾಣುವ ದೃಷ್ಟಿ ಇಲ್ಲಿ ಕಂಡುಬರುತ್ತದೆ. "ಬುಡಕಟ್ಟು ಕಾವ್ಯದಲ್ಲಿ ಬರುವ ಮಹಿಳೆಯರು ಬಂಜೆತನವನ್ನು ಮತ್ತು ಅದರ ಕ್ರೌರ್ಯತೆಯ ಅನುಭವಗಳನ್ನು ಅನುಭವಿಸಿದ್ದಾರೆ. ಹಾಗೆಯೇ ಬಂಜೆತನಕ್ಕೆ ಕಾರಣವಾಗುವ ಸತ್ಯ ಸಂಗತಿಗಳನ್ನು ಗುರುತಿಸಿಕೊಳ್ಳುತ್ತಾ, ದೈವ ಸ್ವರೂಪದ ವ್ಯವಸ್ಥೆಯ ಜೊತೆಗೂಡಿ ಮಕ್ಕಳನ್ನು ಪಡೆಯುತ್ತಾರೆ"[೬] ಎಂಬ ಮಾತನ್ನು ಒಪ್ಪಬಹುದು.

ಭಾರತೀಯ ಸಮಾಜದಲ್ಲಿ ಶೀಲದ ಬಗ್ಗೆ ವ್ಯವಸ್ಥಿತ ಕಟ್ಟಳೆಗಳಿವೆ. ಅಂತೆಯೇ ಧಾರ್ಮಿಕ ನಿರ್ಬಂಧಗಳಿವೆ. ಆದಿವಾಸಿ ಬುಡಕಟ್ಟುಗಳಲ್ಲಿ ಅನಿರ್ಬಂಧಿತ ಲೈಂಗಿಕ

ಸಂಬಂಧಗಳನ್ನು ಕಾಣಬಹುದು ನಂತರದ ಕಾಲಘಟ್ಟದಲ್ಲಿ ಅನಿರ್ಬಂಧಿತ ಲೈಂಗಿಕ ಸಂಬಂಧವನ್ನು ನೀಡಿ ಪವಿತ್ರ ಕಲ್ಪನೆ ಮೂಡಿ ಬಂದಿರಬೇಕು.[೨] ಸ್ವಚ್ಛಂದವಾದ ಲೈಂಗಿಕ ಸಂಬಂಧಗಳು ಆಸ್ತಿಯೊಂದಿಗೆ ತಳುಕುಹಾಕಿಕೊಂಡು ಮಾತೃಮೂಲೀಯ ವ್ಯವಸ್ಥೆ ಪಿತೃಪ್ರಧಾನ ವ್ಯವಸ್ಥೆಯಾಗಿ ಮಾರ್ಪಟ್ಟಿರಬೇಕು.

ಪರಾಮರ್ಶನ ಗ್ರಂಥಗಳು:

೧. ಮೊಗಳ್ಳಿ ಗಣೇಶ್ : ದೇಶಿ
೨. ಗಾಯತ್ರಿ ನಾವಡ : ಮಹಿಳಾ ಸಂಕಂಥನ
೩. ಮೀರಾಸಾಬಿಹಳ್ಳಿ ಶಿವಣ್ಣ : ಕಾಡುಗೊಲ್ಲ ಬುಡಕಟ್ಟು ವೀರರು
೪. ಎಂ.ಎಸ್.ಮುತ್ತಯ್ಯ : ಕನ್ನಡ ಜನಪದ ಕಾವ್ಯಗಳಲ್ಲಿ ಸಾಂಸ್ಕೃತಿಕ ಸಂಘರ್ಷ
೫. ಹಿ.ಚಿ.ಬೋರಲಿಂಗಯ್ಯ : ಬುಡಕಟ್ಟು ದೈವಾರಾಧನೆ
೬. ಜನಪದ ವೀರಗೀತೆಗಳು : ಸಂ.ಕೃಷ್ಣಮೂರ್ತಿ ಹನೂರು
೭. ಜುಂಜಪ್ಪನ ಕಾವ್ಯ : ಸಂ.ಚಲುವರಾಜು
೮. ಸಾವಿರದ ಸಿರಿಬೆಳಗು : ಸಂ.ಕೃಷ್ಣಮೂರ್ತಿ ಹನೂರು

ಮಲೆಗಳಲ್ಲಿ ಮದುಮಗಳು – ಗುತ್ತಿಯ ಜಗತ್ತು

– ಡಾ. ಮಂಜುನಾಥ ಪಾಳ್ಯ

ಕಾದಂಬರಿ ಪ್ರಕಾರವೆಂಬುದು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹತ್ವದ ಪ್ರಕಾರವಾಗಿದೆ. ಪಾಶ್ಚಿಮಾತ್ಯ ಸಾಹಿತ್ಯದ ಪ್ರೇರಣೆಗಳಿಂದ ಮೂಡಿಬಂದರೂ ದೇಸೀಯವಾಗಿ ಕನ್ನಡ ಸಂಸ್ಕೃತಿಯು – ಅನ್ಯ ಸಂಸ್ಕೃತಿಗಳೊಂದಿಗೆ ನಡೆಸಿದ ಅನುಸಂಧಾನ ಪ್ರಕ್ರಿಯೆಯಾಗಿ ಮೂಡಿಬೆಳೆದಿದೆ. ಇಲ್ಲಿನ ಸಾಮಾಜಿಕ ವಾಸ್ತವಗಳೊಂದಿಗೆ ನಡೆದಿರಬಹುದಾದ ಎಲ್ಲ ರೀತಿಯ ಬದಲಾವಣೆಗಳಿಗೆ ಮುಖಾಮುಖಿಯಾಗುತ್ತಾ ಸೃಜನಶೀಲ ಅಭಿವ್ಯಕ್ತಿ ಮಾರ್ಗದಲ್ಲಿ ವಿಶಿಷ್ಟವಾದ ಪ್ರಕಾರವಾಗಿ ಉಳಿದು ಬಂದಿದೆ. ಕುವೆಂಪು ಇಪ್ಪತ್ತನೇ ಶತಮಾನದ ಕನ್ನಡದ ಬಹುದೊಡ್ಡ ಲೇಖಕರು. ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿಯೂ ಕೃಷಿ ಮಾಡಿದ ಇವರು ಕಾವ್ಯ, ಕಾದಂಬರಿ, ಸಣ್ಣಕಥೆ, ನಾಟಕ, ವಿಮರ್ಶೆ, ಕಾವ್ಯ ಮೀಮಾಂಸೆ, ಜೀವನ ಚರಿತ್ರೆ ಮತ್ತು ವೈಚಾರಿಕ ಸಾಹಿತ್ಯಕ್ಕೆ ಕುವೆಂಪು ಅವರು ನೀಡಿರುವ ಕೊಡುಗೆ ಬಹುಮುಖ್ಯವಾದುದು. 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎಂಬ ಎರಡು ಬೃಹತ್ ಕಾದಂಬರಿಗಳನ್ನು ಬರೆದಿದ್ದಾರೆ. ಇವು ಗುಣ, ಗಾತ್ರ, ಮೌಲ್ಯಗಳೆಲ್ಲವುಗಳಲ್ಲೂ ಮಹತ್ತನ್ನು ಸಾಧಿಸಿದ ಕನ್ನಡದ ಪ್ರಮುಖ ಕಾದಂಬರಿಗಳಾಗಿವೆ.

ಕನ್ನಡ ಕಾದಂಬರಿಲೋಕದ ಪ್ರಸಿದ್ಧ ಕೃತಿಗಳಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು ಒಂದು. ಇಲ್ಲಿ ಮೂಡಿಬಂದಿರುವ ಬದುಕು ಮಲೆನಾಡಿಗೆ ಸಂಬಂಧಿಸಿದ್ದು, ಪ್ರಾದೇಶಿಕ ಪರಿಮಿತಿಗೆ ಒಳಪಡದೆ ಒಟ್ಟು ಜೀವನ ದೃಷ್ಟಿಯನ್ನು ದರ್ಶಿಸುವ ಮಹತ್ವದ ಕಾದಂಬರಿ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದಲ್ಲಿ ಕುವೆಂಪು ಓದುಗರಿಗೆ ಹೀಗೆ ಸೂಚನೆ ಕೊಟ್ಟಿದ್ದಾರೆ. 'ಇಲ್ಲಿ ಯಾರೂ ಮುಖ್ಯವಲ್ಲ; ಯಾರೂ ಅಮುಖ್ಯವಲ್ಲ; ಯಾವುದೂ ಯಃಕಶ್ಚಿತವಲ್ಲ'. ಇದು ಮೇಲು ಕೀಳುಗಳನ್ನು ಒಪ್ಪದ ಅವರ ಸಮಾನತೆಯ ದೃಷ್ಟಿಗೆ ಸಾಕ್ಷಿಯಾಗಿದೆ. ಮುಂದುವರಿದು ಕುವೆಂಪು ಅವರೇ ಸೂಚಿಸಿದಂತೆ 'ಇಲ್ಲಿ ಎಲ್ಲಕ್ಕೂ ಇದೆ ಅರ್ಥ ಯಾವುದೂ ಅಲ್ಲ ವ್ಯರ್ಥ; ನೀರೆಲ್ಲವೂ ತೀರ್ಥ!' ಎಂಬ ಚಿಂತನಾ ಕ್ರಮದಲ್ಲಿ ಕಾಣುವ ಧೋರಣೆ ಸಮಗ್ರವಾದ ಜೀವನದೃಷ್ಟಿಯೇ ಆಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಶೀರ್ಷಿಕೆಯೇ ಸೂಚಿಸುವಂತೆ 'ಮಲೆಗಳ ಮಗಳು' ಮದುವಣಗಿತ್ತಿ ಎಂಬುದಾಗಿ ಚಿನ್ನಮ್ಮನಿಗೆ ಸಂಬಂಧಿಸಿ ಹೇಳಬಹುದಾದರೂ ಕಾದಂಬರಿ ಕಾವ್ಯಾತ್ಮಕವಾದ ಸಂಕೇತ ಪ್ರತಿಮೆಗಳ ಜಗತ್ತನ್ನೇ ಆವರಿಸಿದ್ದು ಅದಕ್ಕೆ ನೇರವಾಗಿ ಪ್ರಕೃತಿಯು ಪ್ರೇರಕಶಕ್ತಿಯಾಗಿ ನಿಂತಿದೆ. ಇಲ್ಲಿ ಬರುವ ಹುಲಿಕಲ್ಲು ಬೆಟ್ಟ ಪ್ರಕೃತಿಯ ಒಂದು ಭಾಗವಾಗಿರುವಂತೆಯೇ ಪ್ರಣಯ ಕಥೆಗೆ ಪ್ರಧಾನ ನೆಲೆಯಾಗಿಯೂ ಕಾದಂಬರಿಯಲ್ಲಿ ಪ್ರಕಟವಾಗುತ್ತದೆ. ಇಲ್ಲಿನ ಪಾತ್ರಗಳಾದ ಗುತ್ತಿ, ನಾಗಕ್ಕ, ನಾಗತ್ತೆ, ಚಿನ್ನಮ್ಮ, ಪೀಂಚಲು, ಐತ, ತಿಮ್ಮಿ, ಬೆಟ್ಟಳ್ಳಿಯ ಹೊಲೆಯರು ಇವರೆಲ್ಲ ತಮ್ಮ ಕಾಮನೆಗಳನ್ನು ಹೊತ್ತುಕೊಂಡು ಹುಲಿಕಲ್ಲುಬೆಟ್ಟಕ್ಕೆ ಬರುತ್ತಾರೆ ಹೋಗುತ್ತಾರೆ. ಕಾದಂಬರಿಯಲ್ಲಿ ಗುತ್ತಿ ತಿಮ್ಮಿಯನ್ನು ಹಾರಿಸಿಕೊಂಡು ಬಂದು ಇದೇ ಬೆಟ್ಟದ ನೆತ್ತಿಯಲ್ಲಿ ರಾತ್ರಿಯನ್ನು ಕಳೆಯುತ್ತಾನೆ. ನಂತರ ಮುಕುಂದಯ್ಯ ಚಿನ್ನಮ್ಮಳೊಡನೆ ಇಲ್ಲಿಗೆ ಬರುತ್ತಾನೆ. ಅದೇ ರೀತಿ ಐತ ಪೀಂಚಲು ಇವರುಗಳ ಪ್ರಣಯವೂ ಇಲ್ಲಿ ನಡೆಯುತ್ತದೆ. ಹೀಗೆ ಗಂಡು-ಹೆಣ್ಣುಗಳ ಪ್ರಣಯ ವೃತ್ತಾಂತದಲ್ಲಿ ಹುಲಿಕಲ್ ಬೆಟ್ಟವೂ ಸೇರಿಕೊಂಡು ಸಾಗುತ್ತಿರುತ್ತದೆ. ಇಲ್ಲಿನ ಕಥೆಗೆ ಸುತ್ತಲಿನ ಗುಡ್ಡ, ಬೆಟ್ಟ, ನದಿ, ಹೊಂಡ, ಸೂರ್ಯನ ಬೆಳಕು, ರಾತ್ರಿಯ ಕತ್ತಲು ಹಿನ್ನೆಲೆಯಾಗಿ ಸಾಕ್ಷೀಭೂತವಾಗಿ ಕಾಣುತ್ತವೆ. ಪ್ರಕೃತಿಯ ರಮಣೀಯತೆ, ಚೆಲುವು, ಇವುಗಳ ನಡುವೆಯೇ ರುದ್ರ ಭಯಾನಕ ಸ್ವರೂಪಗಳು ವ್ಯಕ್ತವಾಗಿವೆ. ಕಾದಂಬರಿಯ ಉದ್ದಕ್ಕೂ ಮಳೆ ಬರುವ ಹಲವು ಸನ್ನಿವೇಶಗಳು ಕಾಣುತ್ತವೆ. ಮಳೆ ಬರುತ್ತಿರುವಾಗಲೇ ಅನೇಕ ವಿಶಿಷ್ಟ ಘಟನೆಗಳು ಸಂಭವಿಸುತ್ತವೆ. ಆರಂಭದಲ್ಲಿನ ಗುತ್ತಿಯ ಪ್ರಯಾಣ, ದೊಡ್ಡಣ್ಣ ಹೆಗ್ಗಡೆಯ ಶವಸಂಸ್ಕಾರ, ಚಿನ್ನಮ್ಮನ ಅಪಹರಣ, ನಾಯಿ ಹುಲಿಯನ ಕಣ್ಮರೆ, ಗುತ್ತಿಯ ದೇಶಾಂತರ ಮುಂತಾದ ಹಲವು ಸಂಗತಿಗಳು ಮಳೆಯ ಸಂದರ್ಭದಲ್ಲಿ ನಡೆಯುತ್ತದೆ. ಪ್ರಕೃತಿ ಮತ್ತು ಜೀವನಸಂಗಾತಿಗಳು ವಿಸ್ತೃತವಾಗಿ ಒಂದನ್ನೊಂದು ಆವರಿಸಿಕೊಂಡಿವೆ.

ಜಾತಿಮೂಲವಾದ ಸಾಮಾಜಿಕ ಬದುಕಿನ ವಿವರಗಳು, ವರ್ಗಾಧಾರಿತವಾದ ವ್ಯತ್ಯಾಸಗಳು ಮತ್ತು ಸಾಂಸ್ಕೃತಿಕವಾಗಿ ಕಂಡುಬರುವ ಸಂಕೀರ್ಣ ಸ್ವರೂಪಗಳ ಅನಾವರಣ ಈ ಕಾದಂಬರಿಯಲ್ಲಿದೆ. ಜಮೀನ್ದಾರಿ ವ್ಯವಸ್ಥೆಯಲ್ಲಿನ ಎಲ್ಲ ಸಂಗತಿಗಳಿಗೆ ಬೆಳಕು ಕೊಟ್ಟಿರುವ ಈ ಕಾದಂಬರಿ ಜಾತಿ, ಧರ್ಮ, ವರ್ಗ, ನೀತಿ, ನ್ಯಾಯ, ಸರ್ಕಾರ ಇವುಗಳ ನಿಜದರ್ಶನಗಳು ಇಲ್ಲಿವೆ. ಈ ರೀತಿ ಸಾವಯವ ಸಂಬಂಧವನ್ನು ಪಡೆದಿರುವ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಅನೇಕ ಉಪಕಥೆಗಳ ಮಾಲೆಯಾಗಿ ಮೂಡಿಬಂದಿದ್ದು, ಹಲವಾರು ಬಿಕ್ಕಟ್ಟುಗಳ ಚಿತ್ರಣವನ್ನು ಒಳಗೊಂಡಿದೆ. ಇಲ್ಲಿ ಬರುವ ಮುಕುಂದಯ್ಯ, ಗುತ್ತಿ, ವೆಂಕಪ್ಪನಾಯಕ, ದೇವಯ್ಯ, ಸೆಟ್ಟರ ಕಾವೇರಿ, ಐತ, ಚೀಂಕ್ರ ಇವರೆಲ್ಲರೂ ಒಂದಲ್ಲ ಒಂದು ಇಕ್ಕಟ್ಟುಗಳಲ್ಲಿ ಸಿಲುಕಿರುತ್ತಾರೆ. ಮತೀಯ ಮೌಢ್ಯಗಳ ವಿರುದ್ಧ ಕ್ರಾಂತಿಯ ಕಹಳೆಯನ್ನೂದುವ ಕುವೆಂಪು ವೈಚಾರಿಕತೆ ಆರ್ಥಿಕವಾಗಿ

ಭೂಮಾಲೀಕವರ್ಗದ ದಮನಕಾರೀ ಪ್ರವೃತ್ತಿಗಳ ಮೇಲಾಟವನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ.

'ಮಲೆಗಳಲ್ಲಿ ಮದುಮಗಳು' ಸಿಂಭಾವಿ ಭರಮೈಹೆಗ್ಗಡೆಯವರ ಆಳು ನಾಯಿಗುತ್ತಿ ಯಾವುದೋ ಕಾರ್ಯಾರ್ಥವಾಗಿ ಸನ್ನದ್ಧನಾಗಿ ಹೊರಡುತ್ತಿರುವ ಸಂದರ್ಭದಿಂದ ಆರಂಭವಾಗುತ್ತದೆ. ಕಾದಂಬರಿ ಚಿತ್ರಿಸುತ್ತಿರುವ 'ಪ್ರಪಂಚ'ದ ಒಳಗಿನವನೇ ಆದ, ಸಮಾಜದ ಕೀಳುಸ್ತರಕ್ಕೆ ಸೇರಿದ, ಬೌದ್ಧಿಕವಾಗಿ ಕೆಳಮಟ್ಟದವನಾದ ನಾಯಿಗುತ್ತಿಯ ಪ್ರಯಾಣದಿಂದ ಆರಂಭವಾಗುತ್ತದೆ. ಕಾದಂಬರಿ ಆರಂಭವಾಗುವುದಕ್ಕಿಂತ ಮೊದಲು 'ಓದುಗರಿಗೆ' ಎಂದು ಕೊಡಲಾಗಿರುವ ಸೂಚನೆಗಳು, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ದೃಷ್ಟಿ ಏನೆಂದು ಸ್ಪಷ್ಟ ಮಾಡುತ್ತವೆ. ಗುತ್ತಿ, ಮರಾಟೆಮಂಜ, ಹುಲಿಯ– ಇವು ಕಾದಂಬರಿಯ ಮೊದಲ ಅಧ್ಯಾಯದಲ್ಲಿ ಬರುವ ಪಾತ್ರಗಳು. ಕಾದಂಬರಿಯ ಕ್ರಿಯೆ, ಕೇವಲ ಮೂರು ಪಾತ್ರಗಳಿಂದ ಆರಂಭವಾಗಿ ಚಿಕ್ಕ ತೊರೆಯಾಗಿ ಹುಟ್ಟಿ ಮುಂದೆ ಹರಿಯುತ್ತಾ ಅನೇಕ ಹಳ್ಳಗಳನ್ನು ತನ್ನೊಳಗೆ ಸೇರಿಸಿಕೊಳ್ಳುತ್ತಾ ದೊಡ್ಡ ಪ್ರವಾಹವಾಗಿ ಗಂಭೀರವಾಗಿ ಹರಿಯುವ ಮಹಾನದಿಯಂತೆ ಮುಂದಿನ ಅಧ್ಯಾಯಗಳಲ್ಲಿ ಸಮೃದ್ಧವಾದ ಜೀವನದ ವಿವರಗಳಲ್ಲಿ ತನ್ನೊಳಕ್ಕೆ ಸೇರಿಸಿಕೊಳ್ಳುತ್ತ ಹರಹುಗೊಳ್ಳುತ್ತಾ ಹೋಗುತ್ತದೆ.

ಸಿಂಬಾವಿಯ ಹೊಲೆಯರ ಗುತ್ತಿ ಭರಮೈ ಹೆಗ್ಗಡೆಯವರ ರಹಸ್ಯಪತ್ರವನ್ನು ಹಳೇಮನೆ ಸುಬ್ಬಯ್ಯ ಹೆಗ್ಗಡೆಯವರಿಗೆ ಮುಟ್ಟಿಸಲು ಹೊರಡುತ್ತಾನೆ. ಸಿಂಬಾವಿಯಿಂದ ಕೇವಲ ಹತ್ತಾರು ಮೈಲು ದೂರದ ಹಳೇಮನೆ ತಲುಪಲು 'ಹುಲಿಕಲ್ಲು' ಗುಡ್ಡದ ನೆತ್ತಿಗೆ ಆತ ಏರಿ ನಂತರ ಇಳಿಯಬೇಕು. ಅದಕ್ಕೂ ಮೊದಲು ಸಿಗುವ ಲಕ್ಕುಂದ ಮೇಗರವಳ್ಳಿಗಳನ್ನು ಆತ ಬಳಸಿ ಹೋಗಬೇಕು. ಮೊದಲ ನೋಟಕ್ಕೆ ಕೇವಲ ಸಾಧಾರಣವಾಗಿ ಕಾಣಿಸುವ ಆತನ ಪ್ರಯಾಣ ಬರುಬರುತ್ತಾ ಅಸಾಧಾರಣವಾಗಿ ಪರಿಣಮಿಸುತ್ತದೆ. ಗುತ್ತಿ ಸೀತೂರು ಗುಡ್ಡಕ್ಕೆ ಏರಲು ಮೊದಲು ಮಾಡಿದಾಗಲೆ ಬೈಗುಗಪ್ಪಿನೊಂದಿಗೆ ಮುಗಿಲುಗಪ್ಪು ಮುಸುಕಿ ಮಿಣುಕು ಹುಳುಗಳ ಮಿನುಗು ಕಾಣತೊಡಗಿತ್ತು. ಜೀರುಂಡೆಗಳ ಕೂಗು ಕಿವಿಗೆ ಚಿಟ್ಟುಹಿಡಿಸುತ್ತಿತ್ತು. ಮಳೆಗಾಲದ ಪ್ರಾರಂಭದ ಸಮಯವಾಗಿದ್ದರೂ ಮಲೆನಾಡು ಭಯಂಕರವಾಗಿದ್ದ ಸಿಂಬಾವಿ, ಸೀತೂರು, ಲಕ್ಕುಂದ ಈ ಕಡೆಗಳಲ್ಲಿ ಇಂಬಳದ ಕಾಟವೂ ಹೆಚ್ಚಿಗೆ ಶುರು ಆಗಿತ್ತು. ಗುತ್ತಿ ಅಲ್ಲಲ್ಲಿಯೆ ನಿಂತು ಕಣ್ಣಿಗೆ ಕಂಡ ಇಂಬಳಗಳನ್ನು ಕಾಲಿನಿಂದ ಕಿತ್ತೊಗೆಯುತ್ತಾ ಅದೇ ಕೈಯಲ್ಲಿಯೆ ಜೇಬಿನಿಂದ ಎಲೆ ಅಡಿಕೆ ಸುಣ್ಣ ಹೊಗೆಸೊಪ್ಪುಗಳನ್ನು ತೆಗೆದು ಬಾಯಿಗೆ ಹಾಕಿಕೊಳ್ಳುತ್ತಾ, ಕುಳ್ಳಗಾಲುಗಳನ್ನು ಬಿರಬಿರನೆ ಬೀಸಿಬೀಸಿ ಹಾಕುತ್ತಾ ಸೀತೂರು ಗುಡ್ಡದ ಹುಳುವಿಡಿದ ಕಾಲುದಾರಿಯಲ್ಲಿ ಮುಂಬರಿದನು. ಕತ್ತಲೆ ಬರುಬರುತ್ತಾ ದಟ್ಟವಾಯ್ತು. ಜೀರ್ದುಂಬಿಗಳ ಜಿರುದನಿ ಘೋರವಾಯ್ತು. ತಾನು ನಡೆಯುತ್ತಿದ್ದ ಹಾದಿಯಾಗಲಿ ತನ್ನ ಕಾಲುಗಳಾಗಲಿ ನೆತ್ತರು ಹೀರುತ್ತಿದ್ದ ಇಂಬಳಗಳಾಗಲಿ ಒಂದಿನಿತೂ ಕಾಣಿಸುವಂತಿರಲಿಲ್ಲ. ಗುತ್ತಿ

ಅಂದಾಜಿನ ಮೇಲೆ ಕಾಲು ಹಾಕುತ್ತಿದ್ದನು. ನಾಗರಿಕರಿಗೆ ಭೀಕರವಾಗಿ ಕಾಣುವ ವರ್ಷಾಕಾಲದ ಆ ಭಯಂಕರ ಪರ್ವತಾರಣ್ಯದ ರುದ್ರ ಪ್ರಕೃತಿ ಅವನಿಗೆ ಬಹುಕಾಲದ ಪರಿಚಯದಿಂದ ಸಾಧಾರಣವಾಗಿತ್ತು. ಅವನೂ ಪ್ರಕೃತಿಯ ಒಂದಂಶವಾಗಿದ್ದು ಬೆಟ್ಟದಲ್ಲಿ ಬಂಡೆಯಂತೆ ಕಾಡಿನಲ್ಲಿ ಮರದಂತೆ ಅದರ ಒಂದಂಗವಾಗಿದ್ದನು. ಮಳೆ ಬಂದು ಹಳ್ಳದಲ್ಲಿ ನೆರೆ ಹೆಚ್ಚಾದಾಗ ಗುತ್ತಿ ಲಕ್ಕುಂದದ ಸೇಸನಾಯ್ಕನ ಮನೆಯಲ್ಲಿ ತಂಗುತ್ತಾನೆ. ಇಲ್ಲಿ ಆತನಿಗೆ ಸಿಗುವ ಮಾಂಸದ ತುಂಡು ಕಡುಬಿನ ಊಟ, ಬಗನೆ ಕಳ್ಳಿನ ರುಚಿ, ಸಂಜೆ ಹೊತ್ತಿನಲ್ಲಿ ಹಸಿದು ಬಂದ ಅತಿಥಿಗೆ ಮಲೆನಾಡಿನಲ್ಲಿ ದೊರೆಯಬಹುದಾದ ಆತಿಥ್ಯಕ್ಕೆ ನಿದರ್ಶನವಾಗುತ್ತದೆ. ಲಕ್ಕುಂದವನ್ನು ಬಿಟ್ಟ ಗುತ್ತಿ ಮುಂಜಾವದಲ್ಲಿ ಮೇಗರವಳ್ಳಿ ತಲುಪಿ ಕಣ್ಣಾ ಪಂಡಿತರೊಡನೆ ಮಾತುಕತೆ ನಡೆಸಿ ತನ್ನ ಮಾವನ ಮಗಳು ಬೆಟ್ಟಳ್ಳಿಯ ತಿಮ್ಮಿ ತನಗೇ ಒಲಿಯುವಂತೆ 'ಅಂತ್ರ' ಮಾಡಿಸಿ ಕಟ್ಟಿಕೊಳ್ಳುತ್ತಾನೆ. ಬಿಸಿಲೇರುತ್ತಿರುವಂತೆ, ಗುತ್ತಿ ಹುಲಿಕಲ್ಲು ನೆತ್ತಿಯನ್ನು ಏರತೊಡಗುತ್ತಾನೆ. ಸಿಂಬಾವಿಯಿಂದಲೂ, ಹಿಂಬಾಲಿಸಿ ಬಂದ ಗುತ್ತಿಯ ನಾಯಿ 'ಹುಲಿಯ' ತನ್ನ ಒಡೆಯನನ್ನು ಹಿಂಬಾಲಿಸಿ ಬರುತ್ತದೆ. ಇಲ್ಲಿ ಬರುವ ಗುತ್ತಿಯ ನಾಯಿ 'ಹುಲಿಯ' ಕೇವಲ ನಾಯಿ ಆಗಿರದೆ ಗುತ್ತಿಯ ಅತ್ಯಂತ ನಿಕಟವರ್ತಿ ಗೆಳೆಯನಂತೆ ವರ್ತಿಸುತ್ತದೆ. ಅದು ಇಲ್ಲಿ ನಿಸರ್ಗದ ಸಂಕೇತವೂ ಹೌದು. ಆತನ ಪ್ರಯಾಣದ ಅರಂಭದಲ್ಲೇ ನಾಯಿ ಅವನನ್ನು ಹಿಂಬಾಲಿಸುವುದರಿಂದ ಗುತ್ತಿಯ ಸಾಹಸಕಾರ್ಯಕ್ಕೆ ನಿಸರ್ಗದ ಬೆಂಬಲ ಇರುವುದೆಂಬುದು ಸಾಂಕೇತಿಕವಾಗಿ ತಿಳಿಯುತ್ತದೆ.

ಪತ್ರ ತಲುಪಿಸಲು ಹೊರಟಿರುವ ಗುತ್ತಿ ಕೇವಲ ಸ್ವಾಮಿ ಕಾರ್ಯಕ್ಕೆ ಹೊರಟಿರದೆ ಸ್ವಕಾರ್ಯಕ್ಕೆ ಹೊರಟಿರುವುದು ಅವನ ಪ್ರಯಾಣದ ದೀರ್ಘತೆಯಲ್ಲಿ ಅರಿವಾಗುತ್ತದೆ. ಹುಲಿಕಲ್ಲು ಗುಡ್ಡದ ಕಾಡು ಸಾಮಾನ್ಯವಾದುದಲ್ಲ. ಮುಗಿಲು ಚುಂಬಿಸುವ ಕಾಡುಜಾತಿಯ ನಾನಾ ಮರಗಳು ಅದರ ಮೈ ತುಂಬಿಕೊಂಡಿವೆ. ಜೊತೆಗೆ ಬೆತ್ತದ ಹಿಂಡಿಲು, ವಾಟೆಯ ಹಿಂಡಿಲು, ಬಿದಿರ ಹಿಂಡಿಲು, ಗುರಗಿ ಹಳು ಎಲ್ಲ ಕಡೆಯೂ ಕಿಕ್ಕಿರಿದು ಬೆಳೆದಿದ್ದು, ಕ್ರೂರ ಮೃಗಗಳ ಆವಾಸಕ್ಕೆ ಹೆಸರುವಾಸಿಯಾಗಿದೆ. ದೊಡ್ಡ ಬೇಟೆಯಾಡುವ ಜನ ಕೂಡ ಏನಿದ್ದರೂ ತಮ್ಮ ಬೇಟೆಯನ್ನು ಹುಲಿ ಕಲ್ಲು ಗುಡ್ಡದ ಬುಡದ ಕೆಳಗೆ ನಡೆಸುವವರೇ ಹೊರತು, ಅಪ್ಪಿ-ತಪ್ಪಿಯೂ, ಯಾರೂ ಗುಡ್ಡವನ್ನು ಹತ್ತುವವರಲ್ಲ. ಬಾಡಿನ ರುಚಿಗಾಗಿ ತೀರಾ ಬಯಸಿ, ಜೀವದ ಹಂಗು ತೊರೆದು, ವರ್ಷದಲ್ಲಿ ಒಂದು ಅಥವಾ ಎರಡು ಬಾರಿ ಮಾತ್ರ, ನೂರ-ನೂರೈವತ್ತು ಜನ ಒಟ್ಟಾಗಿ ಹುಲಿಕಲ್ಲು ಗುಡ್ಡವನ್ನು ಬೇಟೆಗಾಗಿ ಹತ್ತುತ್ತಿದ್ದದ್ದುಂಟು. ಇಂತಹ ದುರ್ಗಮವೂ, ನಿರ್ಜನವೂ ಆದ ಹುಲಿಕಲ್ಲು ಗುಡ್ಡದ ದಟ್ಟ ಪೊದೆಗಳಲ್ಲಿ ಗುತ್ತಿ ದೃಢ ಚಿತ್ತನಾಗಿ ಹೊರಡುವುದನ್ನು ನೋಡಿದಾಗ ಗುತ್ತಿಯ ಕಾರ್ಯ ಅಸಾಧಾರಣವಾದದ್ದು, ಪ್ರಾಣಾತಂಕವಾದದ್ದು ಎಂಬ ಅರಿವು ನಮಗಾಗುತ್ತದೆ.

ಗುತ್ತಿ ಹುಲಿಕಲ್ಲು ಗುಡ್ಡ ಏರಿ ಇಳಿದು ಕೋಣೂರನ್ನು ದಾಟುವಷ್ಟರಲ್ಲಿ ಕಾದಂಬರಿಯ ಸುಮಾರು ೨೦೦ ಪುಟಗಳು ಪಕ್ಕಕ್ಕೆ ಜರುಗಿರುತ್ತವೆ. ಗುತ್ತಿಯ ಪ್ರಯಾಣದ ತೀವ್ರತೆಯಲ್ಲಿ ಕಾದಂಬರಿಯ ಭೂಮಿಕೆ ಪದರು ಪದರಾಗಿ ಬಿಚ್ಚಿಕೊಳ್ಳುತ್ತದೆ. ಸಿಂಬಾವಿ, ಹಳೇ ಮನೆಗಳ ಪರಸ್ಪರ ಸಂಬಂಧ ಹೂವಳ್ಳಿ ವೆಂಕಟಪ್ಪನಾಯಕನ ಕೂಡಿಕೆಯ ತರಾತುರಿ ಆತನ ಮಗಳು ಚಿನ್ನಮ್ಮ, ಕೋಣೂರು ರಂಗಪ್ಪಗೌಡರ ತಮ್ಮ ಮುಕುಂದಯ್ಯ ಇವರುಗಳಲ್ಲಿ ಬಾಲ್ಯದಿಂದಲೂ ಬೆಳೆದುಬಂದ ನಿಷ್ಕಾಮ ಪ್ರೇಮ. ಅ ಪ್ರೇಮದ ಕತೆಗೆ ಹುಳಿ ಹಿಂಡಲು ಬೆಳೆಯುತ್ತಿರುವ ಸಿಂಬಾವಿ ಭರಮೈ ಹೆಗ್ಗಡೆಯವರ ಮರುಮದುವೆಯ ಪ್ರಸ್ತಾಪ, ಅದೆಲ್ಲಕ್ಕಿಂತಲೂ ಹೆಚ್ಚಾಗಿ ಗುತ್ತಿಯ ಹೃದಯ ಸಿಗಿಯುತ್ತಿರುವ ಬೆಟ್ಟಳ್ಳಿ ಕಲ್ಲಯ್ಯಗೌಡರ ಕಟುಧೋರಣೆ ತಿಮ್ಮಿಯನ್ನು ಗುತ್ತಿಗೆ ಕೊಡುವ ಬದಲು ತಮ್ಮ ಆಳಾದ ಹೊಲೆಯ ಬಚ್ಚನಿಗೆ ಕೊಡಿಸಲು ಮಾಡಿರುವ ಕಟ್ಟಾಜ್ಞೆ ಈ ಎಲ್ಲಾ ಘಟನೆಗಳೂ ಒಂದೊಂದಾಗಿ ಮೂಡಿಬಂದು ಕಾದಂಬರಿಯ ವಿಸ್ತಾರವಾದ ಹರವಿನ ಓಟಕ್ಕೆ ಓದುಗನನ್ನು ಸಿದ್ಧಗೊಳಿಸುತ್ತವೆ. ಕಾದಂಬರಿಯ ಮೊದಲ ಮೂರೊಂದರ ಘಟ್ಟ ಓದುಗನಿಗೆ ಕಥೆಯ ಗಾಢತೆಯನ್ನು, ತೀವ್ರತೆಯ ಬಿಸಿಯನ್ನೂ ತಲುಪಿಸಿ ಮೈರೋಮಾಂಚನಗೊಳ್ಳುವಂತೆ ಮಾಡುತ್ತದೆ. ಹನಿ ಹನಿಗೂಡಿ, ಹಳ್ಳವಾಗಿ ಹರಿದು, ಅಂತಹ ನಾಲ್ಕಾರು ಹಳ್ಳಗಳು ಒಟ್ಟಾಗಿ ಒಂದೆಡೆ ಕೂಡಿದಾಗ ಥಟ್ಟನೆ ಹೆಚ್ಚುವ ಪ್ರವಾಹದ ಗತಿಯಂತೆ ಕತೆಯ ಓಟ ಹೆಚ್ಚುತ್ತದೆ.

'ಮಲೆಗಳಲ್ಲಿ ಮದುಮಗಳು' ಸುದೀರ್ಘವೂ ಅನರ್ಘ್ಯವೂ ಆದ ಕಾದಂಬರಿಗಳಲ್ಲಿ ಒಂದಾಗಿದೆ. ತನ್ನ ವಿಶಾಲ ಕ್ಷೇತ್ರದಲ್ಲಿ ಅತ್ಯಂತ ಸಾಂಪ್ರದಾಯಿಕವಾಗಿ ರೂಪಿಸಿಕೊಂಡು, ಓದುಗರ ಮೈಮನಗಳನ್ನು ರೋಮಾಂಚನಗೊಳಿಸುತ್ತದೆ. 'ಗುತ್ತಿ' ಬೆಟ್ಟಳ್ಳಿಯ ಕಲ್ಲಯ್ಯಗೌಡರ ಜೀತದಾಳು ದೊಡ್ಡಬೀರನ ಮಗಳು ತಿಮ್ಮಿಯನ್ನು ಪ್ರೀತಿಸುತ್ತಾನೆ. ತಿಮ್ಮಿಯೂ ಇವನನ್ನು ಇಷ್ಟಪಡುತ್ತಾಳೆ. ಆದರೆ ಪ್ರೀತಿಯ ಈ ಬಂಧ ಕೈಗೂಡುವಂತಿಲ್ಲ. ಗುತ್ತಿ–ತಿಮ್ಮಿ ಬೇರೆ ಬೇರೆ ಊರುಗಳ ಒಕ್ಕಲಿಗರ ಜೀತದಾಳುಗಳಾಗಿರುವುದೇ ಇಲ್ಲಿನ ಸಮಸ್ಯೆ. ತಿಮ್ಮಿಯನ್ನು ಗುತ್ತಿಗೆ ಮದುವೆ ಮಾಡಿಕೊಟ್ಟರೆ ತಮ್ಮ ಗದ್ದೆಯ ಕೆಲಸದ ಒಂದು ಆಳು ನಷ್ಟವಾಗುವುದಲ್ಲ ಎಂಬುದು ಕಲ್ಲಯ್ಯಗೌಡರ ಸಿಟ್ಟಿಗೆ ಕಾರಣ. ಈ ಅನಾಹುತ ತಪ್ಪಿಸಬೇಕೆಂದೇ ದೊಡ್ಡಬೀರನಿಗೆ ಬೈದು, ಬುದ್ಧಿಹೇಳಿ ತನ್ನಲ್ಲಿ ಆಳಾಗಿರುವ ಹೊಲೆಯರ ಬಚ್ಚನಿಗೆ ತಿಮ್ಮಿಯನ್ನು ಕೊಡುವಂತೆ ಆತನನ್ನು ಒಪ್ಪಿಸಿರುತ್ತಾರೆ. ಹೀಗೆ ಮಾಡುವುದರಿಂದ ತಮ್ಮ ಒಕ್ಕಲಿನ ಆಳು ತಮ್ಮಲ್ಲಿಯೇ ಉಳಿಯುತ್ತದೆಂಬುದು ಅವರ ಉಪಾಯ. ಆದರೆ ಇವರ ಉಪಾಯವನ್ನು ಬುಡಮೇಲು ಮಾಡುವ ಗುತ್ತಿ ಹಳೇ ಮನೆ ಸುಬ್ಬಯ್ಯ ಹೆಗ್ಗಡೆಯವರಿಗೆ ತನ್ನ ಒಡೆಯನ ಪತ್ರ ತಲುಪಿಸಿ, ಬೆಟ್ಟಳ್ಳಿಯ ತಿಮ್ಮಿಯನ್ನು ಅತ್ತೆಯ ಸಹಾಯದಿಂದ ಹಾರಿಸಿಕೊಂಡು ಬರುತ್ತಾನೆ. ಇಡೀ ಕಾದಂಬರಿಯಲ್ಲಿ ಅತ್ಯಂತ ರೋಮಾಂಚಕಾರಿ ಘಟನೆಯೆಂದರೆ ಗುತ್ತಿ, ತಿಮ್ಮಿಯನ್ನು ಕತ್ತಲಿನಲ್ಲಿ ಹಾರಿಸಿಕೊಂಡು ಹುಲಿಕಲ್ಲು ನೆತ್ತಿಯನ್ನು ಹತ್ತುವ ಸನ್ನಿವೇಶ. ಕಷ್ಟಪಟ್ಟು

ತಿಮ್ಮಿಯನ್ನು ಹಾರಿಸಿಕೊಂಡು ಬಂದರೂ ಗುತ್ತಿಗೆ ತಿಮ್ಮಿ ದೊರೆಯುವುದು ಕೇವಲ ಎರಡು ದಿನ ಮಾತ್ರ. ಕಲ್ಲಯ್ಯಗೌಡರು ಒಡ್ಡಿದ ಮೋಸದ ಬಲೆಗೆ ಗುತ್ತಿ ಅನಿವಾರ್ಯವಾಗಿ ಬೀಳುತ್ತಾನೆ. ತಿಮ್ಮಿಯನ್ನು ನಾಲ್ಕುದಿನದ ಮಟ್ಟಿಗೆ ಕರೆದೊಯ್ಯಲು ಬಂದ ಆಕೆಯ ತಾಯಿ ಮತ್ತು ಸಂಗಡಿಗರೊಡನೆ ತಿಮ್ಮಿಯನ್ನು ಕಳಿಸಲೇಬೇಕಾಗಿ ಬರುತ್ತದೆ. ಬಚ್ಚನಿಗೆ ತಿಮ್ಮಿಯನ್ನು ಪುನಃ ಬಲವಂತದಿಂದ ಮದುವೆ ಮಾಡಲು ಈ ರೀತಿ ಕರೆಸಿಕೊಂಡಿದ್ದಾರೆ ಎನ್ನುವುದು ಬಚ್ಚನಿಗೂ ಹೊಳೆಯುವುದಿಲ್ಲ.

ಈ ಮಧ್ಯೆ ಕಳುವಿನ ವಿಷಯಕ್ಕಾಗಿ ಗುತ್ತಿ ಕರಿಮೀನು ಸಾಬಿಗೆ ಹೊಡೆದಾಟ ನಡೆಯುತ್ತದೆ. ಹೊಡೆದಾಟದಲ್ಲಿ ಸಾಬಿಯ ಕೈ ಕತ್ತರಿಸಿ ಆಸ್ಪತ್ರೆಗೆ ಸೇರುತ್ತಾನೆ. 'ಖೂನಿ ಕೇಸು' ಎಂದು ಹೆದರಿ ಪೋಲೀಸರ ವಶವಾಗಲು ಒಪ್ಪದೆ, ಸಿಂಬಾವಿ ಗೌಡರ ಮಾತಿನಂತೆ ಹಳುವಿನಲ್ಲಿ ತಲೆ ತಪ್ಪಿಸಿಕೊಂಡು ತಿರುಗುತ್ತಾನೆ ಗುತ್ತಿ. ಈ ಸಂದರ್ಭದಲ್ಲಿಯೇ ಬಚ್ಚನಿಗೆ ತಿಮ್ಮಿಯನ್ನು ಒತ್ತಾಯದಿಂದ ಮದುವೆ ಮಾಡಿಸುವ ಕೆಲಸಕ್ಕೆ ಕಲ್ಲಯ್ಯಗೌಡರು ಕೈಹಾಕುತ್ತಾರೆ. ಆಗಲೇ ಒಂದು ಬಾರಿ ಮದುವೆಯಾಗಿ, ಹಲವುಬಾರಿ ಸುಖ ಅನುಭವಿಸಿದ್ದ ತಿಮ್ಮಿ ಈ ದುರ್ಘಟನೆಯಿಂದ ತಪ್ಪಿಸಿಕೊಂಡು ಕತ್ತಲಿನಲ್ಲಿ ಕೋಣೂರಿನ ಗೌಡರ ಕೆಲಸದ ಆಳಾದ ಪೀಂಚಲುವಿನ ಗುಡಾರ ಸೇರುತ್ತಾಳೆ. ಇತ್ತ ಪೊಲೀಸರ ಕಣ್ಣು ತಪ್ಪಿಸಿ ಹಳುವಿನಲ್ಲಿ ತಿರುಗುತ್ತಿದ್ದ ಗುತ್ತಿ ಐತನೊಂದಿಗೆ ಅನಿರೀಕ್ಷಿತ ಭೇಟಿಯಾಗಿ ಆತನ ಗುಡಾರದ ಆಶ್ರಯ ಪಡೆಯುತ್ತಾನೆ. ಯಾರೊಂದಿಗೆ ಸುಖ ಪಡುವುದಕ್ಕೋಸ್ಕರ ಪೋಲೀಸರ ಕಣ್ಣು ತಪ್ಪಿಸಿ ಹಲವಾರು ದಿನಗಳಿಂದ ಪೊದೆಗಳಲ್ಲಿ ಅಡಗಿದ್ದನೊ, ಅಂತಹವನಿಗೆ ಆ ಹೊತ್ತಿನಲ್ಲಿ ಅದೇ ಗುಡಿಸಲಿನಲ್ಲಿ ಅವಳೇ ದೊರೆಯುತ್ತಾಳೆ! ಎಂಥಾ ಪುಣ್ಯ ತನ್ನ ಹೆಂಡತಿ ತಿಮ್ಮಿ ಸಿಕ್ಕಿದರೆ ಸಾಕು. ಯಾರು ಕಾಣದ ಸೀಮೆಗೆ, ದೂರ ಓಡಿಹೋಗಿ ಸ್ವಲ್ಪದಿನ ಕಣ್ಮರೆಯಾಗಿ ಇದ್ದುಬಿಡುತ್ತೇನೆ ಎನ್ನುವ ಗುತ್ತಿ, ಮುಕುಂದಯ್ಯನಿಗೆ ಸಹಾಯ ಮಾಡಲು ಅ ಸಂದಿಗ್ಧತೆಯಲ್ಲೂ ಒಪ್ಪಿಕೊಳ್ಳುತ್ತಾನೆ. ಮದುವೆ ಮನೆಯಿಂದ ಮದುಮಗಳು ಚಿನ್ನಮ್ಮನನ್ನು ಕಳ್ಳತನದಲ್ಲಿ ಸಾಗಿಸಿಕೊಂಡು ಬರಲು ಹಳುವನ್ನು ಕೆತ್ತಿ ರಸ್ತೆ ಮಾಡುತ್ತಾನೆ. ಇಷ್ಟಕ್ಕೆಲ್ಲಾ ಮುಕುಂದಯ್ಯ ಪೋಲೀಸರಿಂದ ತನ್ನನ್ನು ರಕ್ಷಿಸುತ್ತೇನೆಂದು ಕೊಟ್ಟಿರುವ ಭರವಸೆಯೇ ಕಾರಣ.

ಚಿನ್ನಮ್ಮನನ್ನು ಮುಕುಂದಯ್ಯನನ್ನು ಒಂದುಗೂಡಿಸಿದ ಗುತ್ತಿ ತಿಮ್ಮಿ ತಮ್ಮ 'ಹುಲಿಯ'ನ ಜೊತೆಯಲ್ಲಿ ಆ ಸೀಮೆ ತೊರೆದು ಹೊರಟು ಬಿಡುತ್ತಾರೆ. ಜಡಿ ಹಿಡಿದ ಮಳೆಯಲ್ಲಿ, ತುಂಬು ಪ್ರವಾಹದಿಂದ ಭೋರ್ಗರೆಯುತ್ತಾ ತುಂಗೆ ಹರಿಯುತ್ತಿದ್ದಾಳೆ. ಎದೆ ನಡುಗಿಸುವ ಆ ಹೊಳೆಯನ್ನು ದೋಣಿಯಲ್ಲಿ ದಾಟಿದರೆ ಸೈ, ಮತ್ತೊಂದು ಪ್ರಾಂತವನ್ನು ಸೇರಿದ ಹಾಗೆ. ಪೋಲೀಸರ ಕಣ್ಣುತಪ್ಪಿಸಿ, ತನ್ನ ನೆನವು ಮರೆಯಾಗುವವರೆಗೆ, ಚಂದ್ರೇಗೌಡರ ಜೀತದಾಳುಗಳಾಗಿ ತಾನೂ ತಿಮ್ಮಿಯೂ ನೆಮ್ಮದಿಯಿಂದ ಇರಬಹುದು ಎಂದುಕೊಳ್ಳುತ್ತಾನೆ ಗುತ್ತಿ. ತುಂಬು ಹೊಳೆಯಲ್ಲಿ, ಗುತ್ತಿ–ತಿಮ್ಮಿ ಮತ್ತು ಇತರೆಯವರನ್ನು ಮಾತ್ರ ದೋಣಿಯವನು ಕೂರಿಸಿಕೊಳ್ಳುತ್ತಾನೆ. ಗುತ್ತಿ ಎಷ್ಟೇ ಅಂಗಲಾಚಿ ಬೇಡಿದರೂ

ಆತನ ಹುಲಿಯನನ್ನು ದೋಣಿಯಲ್ಲಿ ಕೂರಿಸಲು ದೋಣಿಯವನು ಒಪ್ಪುವುದಿಲ್ಲ. ಹೊಳೆ ದಾಟಿ ಬೇರೆ ಸೀಮೆ ಸೇರದೆ ಗುತ್ತಿಗೆ ಬೇರೆ ದಾರಿಯಿಲ್ಲ. ಆದರೆ ತನ್ನ ಪ್ರಾಣವೇ ಆದ ಸ್ವಾಮಿನಿಷ್ಠ ಹುಲಿಯನನ್ನು, ಕುರ್ಕನೊಂದಿಗೆ ಹೋರಾಡಿ ಮೈಮಾಂಸ ಕಳೆದುಕೊಂಡಿದ್ದ ಹುಲಿಯನನ್ನು, ಯಾವಾಗಲೂ ತನ್ನ ಹಿಂಬಾಲಕನಾಗಿ, ಹುಳುವಿನಲ್ಲಿ ಒಂಟಿಯಾಗಿ ಸಂಚರಿಸುವಾಗ ಪ್ರಾಣ ರಕ್ಷಕನಾಗಿ ಬರುತ್ತಿದ್ದ ಹುಲಿಯನನ್ನು, ನದಿಯ ಆಚೆಯ ದಡದಲ್ಲಿ ನಿಲ್ಲಿಸಿ ದೋಣಿ ಹೊರಟೇ ಬಿಡುತ್ತದೆ. ಗುತ್ತಿಯ ಕರುಳು ಕತ್ತರಿಸಿ ಬಂದಂತೆ ಆಗಿ ಬಿಗಿದ ಗಂಟಲಿನಿಂದ ಕೂಗಿ ಕೊಳ್ಳುತ್ತಾನೆ. 'ಹೋಗು ಹುಲಿಯ ಕೇರಿ ಸೇರಿಕೋ' ಎಂದು. ಗುತ್ತಿ ಹುಲಿಯನನ್ನು ತೊರೆದು ಹೊರಟರೂ, ಹುಲಿಯ. ನಾಯಿ ತುಂಬ ಪ್ರವಾಹದಲ್ಲಿ ಒಮ್ಮೆ ನೋಡಿ, ಭೋರ್ಗರತೆವನ್ನು ಕೇಳಿಸಿಕೊಂಡು, ಸೆಳೆತದಿಂದ ಹರಿವ ನೀರಿಗೆ ಧುಮ್ಮಿಕ್ಕಿಯೇ ಬಿಡುತ್ತದೆ. ಈಜಿ, ಈಜಿ ದೋಣಿ ಹತ್ತಿರಕ್ಕೆ ಬಂದ ತನ್ನ ಹುಲಿಯನನ್ನು ರಕ್ಷಿಸಲು ಗುತ್ತಿ ತನ್ನ ಬಟ್ಟೆಯನ್ನು ಬಿಚ್ಚಿ ಎಸೆಯುತ್ತಾನೆ. ಅವನ ಎಸೆಯುವ ರಭಸಕ್ಕೆ ದೋಣಿ ವಾಲುತ್ತದೆ. ಪ್ರವಾಹದ ಮಧ್ಯಪ್ರಾಣ ಹಿಡಿದಿಟ್ಟುಕೊಂಡು ದೋಣಿಯಲ್ಲಿ ಕುಳಿತಿದ್ದ ಹತ್ತಾರು ಭೀತ ವಾಣಿಗಳು ಕೂಗಿಕೊಳ್ಳುತ್ತವೆ.

"ತೆಗೆದಿದ್ದಲ್ಲೋ ಲೌಡಿ ಮಗನೆ, ಕೂತುಗೋತಿಯೋ ಇಲ್ಲೋ ಸುಮ್ನೆ".

"ನಮ್ಮನ್ನೆಲ್ಲಾ ಹೊಳಿಗೆ ಹಾಕ್ತಾನಲ್ಲೋ, ಹೊದೆದು ಕೂರಿಸ್ರೋ ಹೊಲೆ ಸೂಳೆ ಮಗನ್ನ".

"ಏ ಹುಡುಗೀ, ಅವನ ಹೆಂಡ್ತೀ, ಹಿಡಿದು ಕೂರ್ಸೇ ನಿನ್ನ ಗಂಡನ್ನಾ".

"ಆಯಸ್ಸು ಕೂಡಿದೋರ ಸಂಗಡ ದೋಣಿಗೆ ಹತ್ತಿದ್ರೆ ಆಳಿಗೊಂದು ಗುಟುಕು ನೀರಂತೆ".

"ಈ ಬೋಳಿಮಗನ್ನ ದೋಣಿ ಹತ್ತಿಸಿದ್ದೆ ತಪ್ಪಾಯ್ತು, ಅವನ್ನ ನಾಯಿ ಜೊತೆಗೆ ಅವನ್ನೂ ಕಳಿಸ್ರೋ"

"ಮುಂಡೆ ಮಗನಿಗೆ ಹೆಂಡ್ತೀನೂ ಬೇಡಾಗದೆ ಅಂತ ಕಾಣ್ತೆ, ಬಿದ್ದು ಸಾಯ್ತಾನೆ ನೀರಿಗೆ".

ಅಷ್ಟು ಜನಗಳ ಕೂಗಿಗೆ ಹೆದರಿ ಗುತ್ತಿ ತಣ್ಣಗಾದಾಗ, ಈಜಲಾಗದೆ ಪ್ರವಾಹದ ಹೊಡೆತಕ್ಕೆ ತತ್ತರಿಸಿದ ಹುಲಿಯನ ಜೀವವು ನೀರಿನ ಮಧ್ಯೆ ನೀರಿನಂತೆಯೇ ತಣ್ಣಗಾಗಿ ಹೋಗುತ್ತದೆ. ಇಡೀ ಕಾದಂಬರಿಯಲ್ಲಿಯೇ ಈ ಘಟ್ಟ ಕರುಣ, ಭೀಭತ್ಸರಸಗಳ ಮಹಾಪೂರವಾಗಿದೆ. ಪ್ರಾಣ ಸಂಗಾತಿ ತಿಮ್ಮಿಯನ್ನು ಪಡೆಯಲು ತನ್ನ ಮತ್ತೋರ್ವ ಪ್ರಾಣ ಸಖನಂತಿದ್ದ ಹುಲಿಯನನ್ನು ಗುತ್ತಿ ಬಲಿಕೊಡುವುದು ಓದುಗರ ಕರುಳು ಮಿಡಿಯುವಂತೆ ಮಾಡಿದೆ.

ಮದುಮಗಳು ಕಾದಂಬರಿಯಲ್ಲಿ ಬಂಧತಂತುವಾಗಿ ನಾಯಿಗುತ್ತಿಯ ಪಾತ್ರ ಬರುತ್ತದೆ. ಕಾದಂಬರಿಯ ಹಂದರ ಅರಳಿಕೊಳ್ಳಲು ನಿಂತ ಊರುಗೋಲು ಆತ. ಸಿಂಬಾವಿ

ಲಕ್ಕುಂದ ಮೇಗರವಳ್ಳಿ ಹಳೆಮನೆ ಕಾಡುಹಾದಿ ಕೋಣೂರು ಬೆಟ್ಟಳ್ಳಿ ಈ ಪ್ರಯಾಣ ಗುತ್ತಿಯ ಮೂಲಕ ಅಭಿವ್ಯಕ್ತಗೊಳ್ಳಬೇಕಾದ ಆ ಪಾತ್ರಕ್ಕೆ ತಕ್ಕ ಅನುಭವದ ಅಭಿವ್ಯಕ್ತಿಯೂ ಆಗುತ್ತದೆ, ಇಡೀ ಕಾದಂಬರಿಯ ಧಾಟಿ ಧೋರಣೆಗಳಿಗೆ ಸಂಕೇತವೂ ಆಗುತ್ತದೆ. ಕಥಾ ಬೆಳವಣಿಗೆಗೆ ಇರುವ ವಿನ್ಯಾಸವೂ ಆಗುತ್ತದೆ. ಕಥಾವಲಯದೊಳಕ್ಕೆ ಭಿನ್ನವ್ಯಕ್ತಿಗಳ, ಭಿನ್ನ ಪರಿಸರಗಳ ಪ್ರವೇಶಕ್ಕೆ ಹಾಗೂ ಕಥಾಕ್ರಿಯೆಯ ಚಾಲನೆಗೆ ಗುತ್ತಿ ಚುಂಬಕ ಕಿಡಿಯಾಗುತ್ತಾನೆ. ಅವನು ಹೆಜ್ಜೆ ಊರಿನ ತಳದ ಸುತ್ತ ಕಥೆ ಪಲ್ಲವಿಸಿಕೊಂಡು ಹೋಗುತ್ತದೆ. ಕಥಾಸರಣಿಯ ಕೂಡು ಎಳೆಯಾಗಿ ಹೊಲೆಯ ಜೀತದಾಳು ಗುತ್ತಿಯನ್ನೇ ಬಳಸಿಕೊಂಡಿರುವುದರಲ್ಲೂ ಧ್ವನಿಬಸಿರಿನ ಕಲಾವಂತಿಕೆಯಿದೆ; ಸಮಾಜ ವ್ಯವಸ್ಥೆಯ ಎಲ್ಲ ಸ್ತರಗಳಲ್ಲಿಯೂ ತನ್ನ ಇರವನ್ನು ಚಾಚಿಕೊಳ್ಳಬಲ್ಲ ಶಕ್ತಿ ಆಸ್ತರದ ಪಾತ್ರವೊಂದಕ್ಕೆ ಮಾತ್ರ ಇದೆ ಎಂಬ ವ್ಯಾವಹಾರಿಕ ದೃಷ್ಟಿ; ಜೊತೆಗೆ 'ಬೆಟ್ಟದಲ್ಲಿ ಬಂಡೆಯಂತೆ ಕಾಡಿನಲ್ಲಿ ಮರದಂತೆ' ಪ್ರಕೃತಿಯ ಒಂದಂಶವೇ ಆಗಿರುವ ಗುತ್ತಿ ಕಾದಂಬರಿಯ ಮೇಲ್ಮುಖಗಮನ ಪ್ರಯತ್ನದ ದಾರ್ಶನಿಕ ಪ್ರಜ್ಞೆಗೆ ಸಾಂಕೇತಿಕವಾಗಿರುವುದು ಔಚಿತ್ಯವೆನಿಸುತ್ತದೆ. ಇಲ್ಲಿ ಒಂದು ಪಾತ್ರದ ಮೂಲಕ ಕತೆ ತನ್ನ ಹರಹನ್ನು ಹಿಗ್ಗಿಸಿಕೊಳ್ಳುತ್ತ, ಕ್ರಿಯೆಗೆ ಒಂದು ಚೌಕಟ್ಟನ್ನು ನಿರ್ಮಿಸಿಕೊಂಡರೂ, ಆ ಪಾತ್ರ ಪ್ರಮುಖವೂ ಆಗದೆ, ಅಮುಖ್ಯವೂ ಆಗದೆ ನಿಲ್ಲುವುದು ಒಂದು ವಿನೂತನ ವಿನ್ಯಾಸ. ಮೊದಲಿನಿಂದ ಕೊನೆಯವರೆಗೆ ಕಾದಂಬರಿಯ ಉದ್ದಗಲಕ್ಕೆ ಮೈಚಾಚಿ ನಿಂತ ವ್ಯಾಸರೇಖೆಯಾಗಿಲ್ಲ ಗುತ್ತಿ. ಆರಂಭ ಅಧ್ಯಾಯಗಳಲ್ಲಿ ಪೂರ್ಣ ಪ್ರಮಾಣದಲ್ಲಿ ನಿಶ್ಚಿತವಾಗಿ ಚಿತ್ರಿತಗೊಂಡು ಕಾದಂಬರಿಯ ಕೊನೆಯವರೆಗೆ ವಾಚಕಪ್ರಜ್ಞೆಯಲ್ಲಿ ಬೇರುಬಿಡುವ ಗುತ್ತಿ, ಅನಂತರದ ಬೆಳವಣಿಗೆಯಲ್ಲಿ ಹಿಂದುಹಿಂದಕ್ಕೆ ಸರಿದು ಹೊಳೆದಾಟ ಇಲ್ಲವಾಗುತ್ತಾನೆ. ಆದರೂ ಕೊನೆಮುಟ್ಟದ ಕಥೆ ಮುಂದುವರಿಯುತ್ತದೆ. ಮೊದಲು ಅಚ್ಚೊತ್ತಿ ನಿಲ್ಲುವ ಗುತ್ತಿಯ ಗಟ್ಟಬಣ್ಣದ ಹಾಸಿನ ಮೇಲೆ ಮೂಡುವ ಭಿನ್ನ ಪ್ರಮಾಣದ ವರ್ಣಸಂಯೋಜನೆಯ ಇತರ ಪಾತ್ರಗಳ ವೃತ್ತಿಪ್ರವೃತ್ತಿಗಳು ಸ್ಫುಟಗೊಳ್ಳುತ್ತಾ ಹೋಗುತ್ತವೆ.ಹೀಗೆ ಗುತ್ತಿ ವಿನ್ಯಾಸದ ದೃಷ್ಟಿ ಯಿಂದ ಮುಖ್ಯವಾದರೂ ಆ ಪಾತ್ರವೇ ಕೇಂದ್ರದ ಪ್ರಜ್ಞೆಯಲ್ಲ ಎಂಬುದನ್ನು ಮರೆಯಬಾರದು. ಕಾದಂಬರಿಯ ಕ್ರಿಯೆಗೆ ಸಂಬಂಧವೇ ಇಲ್ಲದ ಕಾಗಿನಹಳ್ಳಿಗೆ ಹೋಗಿ ಪರಕೀಯನಾಗುತ್ತಾನೆ, ಆಮೇಲೆ ತುಂಗಾನದಿಯನ್ನು ದಾಟಿದ ಮೇಲೆ, ಹುಲಿಯು ಹೊಳೆಯಲ್ಲಿ ಕೊಚ್ಚಿಹೋದಂತೆ, ಅವನ ನೆನಪೂ ಜನರಿಂದ ಮಾಯವಾಗುತ್ತದೆ. ಹೆಂಡತಿಗಿಂತ ಹೆಚ್ಚು ಪ್ರೀತಿಸುವ ನಾಯಿಯನ್ನು ಹೊಳೆಯಲ್ಲಿ ಮುಳುಗಿಸಿ ದೇಶಾಂತರ ಹೋಗುವ ನಾಯಿಗುತ್ತಿಗೆ ಯಾವ ಪ್ರಜ್ಞೆಯೂ ಇಲ್ಲ. ಅವನು ಒಳ್ಳೆಯವನಲ್ಲ, ದುಷ್ಟನೂ ಅಲ್ಲ, ಸ್ನೇಹಪರನಲ್ಲ, ಸಾಮಾಜಿಕನಲ್ಲ, ಅವನು ನಾಯಿಗುತ್ತಿ. ಕಾದಂಬರಿಯ ಮೂಲಬಿಂದು ಗುತ್ತಿಯಲ್ಲ ಎಂಬುದನ್ನು ಧ್ವನಿಸುತ್ತವೆ. ತಂತ್ರದ ಒಂದು ಅಂಗವಾಗಿ ಒಂದು ಕಥಾವಲಯಕ್ಕೆ ಸೇರುವ ಪರಿಸರ ಹಾಗೂ ವ್ಯಕ್ತಿಗಳು ಕಥಾಮೈಯನ್ನು ತುಂಬಿಕೊಂಡೊಡನೆಯೆ ಗುತ್ತಿಯ ಪ್ರಯಾಣ ಮುಗಿಯುತ್ತದೆ.

ಕಥಾಶರೀರ ಆ ವೇಳೆಗೆ ಬಿಟ್ಟುಕೊಂಡ ಅನೇಕ ಕವಲುಗಳೊಂದರಲ್ಲಿ ಗುತ್ತಿಯೂ ಐಕ್ಯನಾಗಿ ಕ್ರಿಯಾಶೀಲನಾಗಿ ಕೊನೆಗೆ ಮಾಯವಾಗುತ್ತಾನೆ. ಆದರೂ ಅನೇಕ ಕವಲು ಕಥೆಗಳಾಗಿ, ಪ್ರತಿಯೊಂದರ ಆಂತರಂಗಿಕ ಹಾಗೂ ಪಾರಸ್ಪರಿಕ ಅವಿರತ ಸಂಘರ್ಷಗಳ ಸಹಿತ ಕಾದಂಬರಿ ಮುಂದುವರಿಯುತ್ತದೆ. ಇಡೀ ಕಾದಂಬರಿಯ ಬಂಧದ ದೃಷ್ಟಿಯಿಂದ ಒಂದು ನಿರ್ದಿಷ್ಟ ಕಥಾನಕ್ಕೆ ಇಲ್ಲದಿರುವುದರಿಂದ ನಿರೀಕ್ಷಿತ ಕೊನೆಯೂ ಇಲ್ಲದಂತಾಗಿ ಬಿಡುತ್ತದೆ. ಎಲ್ಲಂದರಲ್ಲಿ ಕೊನೆಗೊಳಿಸಬಹುದಾದ ಸಾಧ್ಯತೆ ಕಾಣುತ್ತದೆ; ಜೊತೆಗೆ, ಅನಂತವಾಗಿ ಸಾಗಬಲ್ಲ ಸಮಸ್ಥಿತಿಯನ್ನು ಉಳಿಸಿಕೊಳ್ಳುತ್ತದೆ. "ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ, ಕೊನೆ ಮುಟ್ಟುವುದೂ ಇಲ್ಲ".

ಪರಾಮರ್ಶನ ಗ್ರಂಥ :

೧. ಯು.ಆರ್. ಅನಂತಮೂರ್ತಿ : 'ಪ್ರಜ್ಞೆ ಮತ್ತು ಪರಿಸರ'.
೨. ಎಂ.ಜಿ. ಕೃಷ್ಣಮೂರ್ತಿ : 'ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು'.
೩. ಗಿರಡ್ಡಿ ಗೋವಿಂದರಾಜ : 'ಮನ್ವಂತರ' ೭ (ವಿಚಾರ ಸಂಕಿರಣ ವಿಶೇಷಾಂಕ) ಕಾದಂಬರಿಯಲ್ಲಿ ವೈಚಾರಿಕತೆ.
೪. ಎಂ.ಜಿ. ಕೃಷ್ಣಮೂರ್ತಿ : 'ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು'.
೫. ಪ್ರೊ.ಎಲ್.ಎಸ್. ಶೇಷಗಿರಿರಾವ್ : 'ಹೊಸಗನ್ನಡ ಸಾಹಿತ್ಯ ಚರಿತ್ರೆ',
೬. ಕೀರ್ತಿನಾಥ ಕುರ್ತಕೋಟಿ: 'ನೂರು ಮರ ನೂರು ಸ್ವರ'-ಕುವೆಂಪುವರ ಕಾದಂಬರಿಗಳು.
೭. ಸುಮತೀಂದ್ರ ನಾಡಿಗ : 'ವಿಮರ್ಶೆಯ ದಾರಿಯಲ್ಲಿ'.
೮. ಡಾ. ಗಿರಡ್ಡಿ ಗೋವಿಂದರಾಜ : 'ಸಮಗ್ರ ವಿಮರ್ಶೆ'.
೯. ಡಾ. ಸುರೇಶ ಪಾಟೀಲ : 'ಕಾದಂಬರಿ ಮೀಮಾಂಸೆ'.
೧೦. ಪ್ರೊ. ಅರವಿಂದ ಮಾಲಗತ್ತಿ : 'ಕುವೆಂಪು ಕೃತಿ ವಿಮರ್ಶೆ' ಮಲೆಗಳಲ್ಲಿ ಮದುಮಗಳು; (ಪ್ರ.ಸಂ)-ಎಚ್.ಎಂ.ಚನ್ನಯ್ಯ.

ಸಾಹಿತ್ಯಲೋಕದಲ್ಲಿ ಮಿಂಚಿ ಮರೆಯಾದ ಮಹಾಚೇತನ: ಕೊಡಗಿನ ಗೌರಮ್ಮ

– ಡಾ. ಲಾವಣ್ಯ ಸಿ.ಪಿ.

ಇಪ್ಪತ್ತನೆಯ ಶತಮಾನದ ಮೂವತ್ತನೇ ದಶಕವೆಂದರೆ ಸ್ತ್ರೀ ಲೋಕದ ಕಥೆಗಳು ಅವರೆಗಿನ ಪೌರಾಣಿಕತೆಯ ಜಡತೆಯನ್ನು ಕೊಡವಿ ಹೊಸಹುಟ್ಟು ಪಡೆಯುತ್ತಿದ್ದ ದಶಕ ಎನ್ನಬೇಕು. ಲೇಖಕಿಯರು ಮಹಿಳೆಯರ ಭವ ಭಾವಲೋಕದ ಬದುಕನ್ನು ಕೌಟುಂಬಿಕ ಸಾಮಾಜಿಕ ನೋವು ನಲಿವು ಸಮಸ್ಯೆಗಳನ್ನು ಕಥಾರೂಪದಲ್ಲಿ ಕಾಣಿಸಿದ ಹಾಗೂ ಹೆಚ್ಚು ಇಹಪರವಾಗಿಸಿದ ಅವಧಿ ಎಂದರೆ ತಪ್ಪಾಗಲಾರದು. ಶ್ಯಾಮಲಾ ಬೆಳಗಾಂವಕರ್ ಮತ್ತು ಸರಸ್ವತಿಬಾಯಿ ರಾಜವಾಡೆ ಇವರೊಂದಿಗೆ ಕೊಡಗಿನ ಗೌರಮ್ಮನವರು ಕನ್ನಡ ಕಥಾ ಸಾಹಿತ್ಯದ ಮೊದಲ ತಲೆಮಾರಿನ ಪ್ರಮುಖ ಲೇಖಕಿಯರಾಗಿ ಹೊಮ್ಮಿದ ಕಾಲವದು. ಅದರಲ್ಲೂ ಕೊಡಗಿನ ಗೌರಮ್ಮನವರು ಆ ಕಾಲದಲ್ಲಿ ಕನ್ನಡ ಸಾಹಿತ್ಯಲೋಕದಲ್ಲಿ ಸಣ್ಣ ಕಥೆಗಳ ಛಾಪನ್ನು ಬಹಳ ಅಚ್ಚುಕಟ್ಟಾಗಿ ಒತ್ತಿ ಹೋದ ಕನ್ನಡದ ಕಥೆಗಾರ್ತಿ ಎಂದರೆ ಉತ್ಪ್ರೇಕ್ಷೆಯಲ್ಲ.

ಗೌರಮ್ಮನವರ ವ್ಯಕ್ತಿತ್ವ:

ಕೊಡಗನ್ನು ಸಾಹಿತ್ಯಲೋಕದಲ್ಲಿ ಗುರುತಿಸುವಂತೆ ಮಾಡಿದ ಮಹಿಳೆ ಗೌರಮ್ಮನವರು. ಇವರು ೧೯೧೨ ಮಾರ್ಚ್ ೩ ರಂದು ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನಲ್ಲಿ ಹವ್ಯಕ ಬ್ರಾಹ್ಮಣ ಮನೆತನದವರಾದ ಶ್ರೀ ರಾಮಯ್ಯ ಮತ್ತು ಶ್ರೀಮತಿ ನಂಜಕ್ಕ ದಂಪತಿಯರ ಪುತ್ರಿಯಾಗಿ ಜನಿಸಿದರು. ಮಡಿಕೇರಿಯ ಶಾಲೆಯಲ್ಲಿ ವಿದ್ಯಾಭ್ಯಾಸ. ೧೯೨೮ ರಲ್ಲಿ ಅವರ ಬಳಗದಲ್ಲೇ ಒಬ್ಬರಾದ ಬಿ.ಟಿ.ಗೋಪಾಲಕೃಷ್ಣ ಅವರೊಂದಿಗೆ ವಿವಾಹವಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಶ್ರೀ.ಬಿ.ಟಿ.ಗೋಪಾಲಕೃಷ್ಣ ಅವರು ಸೋಮವಾರಪೇಟೆಯ ಒಂದು ಕಾಫೀ ತೋಟದಲ್ಲಿ ಮ್ಯಾನೇಜರ್ ಆಗಿದ್ದರು. ೧೯೩೧ ರಲ್ಲಿ ಗೌರಮ್ಮನವರು ಗಂಡು ಮಗುವಿಗೆ ಜನ್ಮ ನೀಡಿದರು. ಗೌರಮ್ಮನವರು ತಮ್ಮ ಮಗನಿಗೆ 'ವಸಂತ' ಎಂದು ನಾಮಕರಣ ಮಾಡಿದ್ದರು. ಗೌರಮ್ಮನವರದು ನೀಳಕಾಯ, ಹಾಲಿನ ಕೆನೆಯಂಥ ಮೈಬಣ್ಣ, ತಿದ್ದಿತೀಡಿದಂತಿದ್ದ ಕಣ್ಣು, ಮೂಗು, ಹುಬ್ಬುಗಳು

ಒಟ್ಟಾರೆ ಹೇಳಬೇಕೆಂದರೆ ಗೌರಮ್ಮನವರು ರೂಪವತಿಯಾಗಿದ್ದರು. ಮನೆ, ಸಂಸಾರ, ಸಮಾಜಸೇವೆ, ರಾಜಕೀಯ ಎಲ್ಲವನ್ನೂ ಒಂದಕ್ಕೊಂದು ಘರ್ಷಣೆಯಾಗದಂತೆ ಸಮಯ ಹೊಂದಿಸಿ ಮೇಲು, ಕೀಳು ಎನ್ನದೆ ಏಕರೀತಿಯ ಶ್ರದ್ಧೆಯಿಂದ ನಿಭಾಯಿಸಿದವರು. ನೇರ ನಡೆ-ನುಡಿಯೊಂದಿಗೆ ಸರಳ ಜೀವನವನ್ನು ರೂಢಿಸಿಕೊಂಡು ಎಲ್ಲರೊಂದಿಗೆ ಆತ್ಮೀಯವಾಗಿ ಬೆರೆಯುತಿದ್ದರು.

ಗೌರಮ್ಮನವರ ಅಭಿರುಚಿಗಳು :

ಗೌರಮ್ಮನವರಿಗೆ ಬರೆಯುವುದರೊಂದಿಗೆ ಓದುವ ಹವ್ಯಾಸವೂ ಇತ್ತು. ಹಲವು ವಿಚಾರಗಳನ್ನು ಓದಿಕೊಂಡು ಅವುಗಳನ್ನು ತಿಳಿದವರ ಬಳಿ ಚರ್ಚಿಸುತಿದ್ದರು. ಇವರಿಗೆ ಚಿಕ್ಕಂದಿನಿಂದ ಪುರಾಣದ ಕಥೆಗಳಲ್ಲಿ, ನಾಟಕ ಪ್ರದರ್ಶನಗಳಲ್ಲಿ, ತಾಳ ಮದ್ದಳೆಗಳಲ್ಲಿ ಅಭಿರುಚಿ ಇತ್ತು. ಇದರೊಂದಿಗೆ ರಾಜಕೀಯದ ಬಗ್ಗೆಯೂ ಆಸಕ್ತಿ ಇದ್ದಿತು. ಅಂತೆಯೇ ಗೌರಮ್ಮನವರ ಹವ್ಯಾಸಗಳಲ್ಲಿ ಈಜು ಮತ್ತು ಟೆನ್ನಿಸ್ ಆಟವೂ ಪ್ರಮುಖವಾದವುಗಳು. ಇವರು ಯಾವಾಗಲೂ ತಪ್ಪುಗಳನ್ನು ಸಹಿಸುತ್ತಿರಲಿಲ್ಲ. ಮಗ ವಸಂತ ಚಿಕ್ಕ ವಯಸ್ಸಿನಲ್ಲಿಯೂ ಏನೇ ತಪ್ಪು ಮಾಡಿದರೂ ಶಿಕ್ಷಿಸುತಿದ್ದರು. ಒಮ್ಮೆ ಆಟವಾಡುತ್ತಾ ವಸಂತ ಕೆಲಸದವರಿಗೆ ಕೋಲಿನಿಂದ ಹೊಡೆಯುತಿದ್ದಾಗ ಇದನ್ನು ಗಮನಿಸಿದ ಗೌರಮ್ಮನವರು ಅವನನ್ನು ಒಂದು ಕೋಣೆಯಲ್ಲಿ ಕೂಡಿಹಾಕಿದ್ದರು. ವಸಂತ ಎಷ್ಟು ಚೀರಿದರೂ ಯಾರಿಗೂ ಕೋಣೆಯ ಬಾಗಿಲು ತೆರೆಯಲು ಬಿಟ್ಟಿರಲಿಲ್ಲ.

ಕೊಡಗಿನಗೌರಮ್ಮ ಮತ್ತು ಸಾಹಿತ್ಯ :

ಕೊಡಗಿನ ಗೌರಮ್ಮನವರು ತಮ್ಮ ಸಾಹಿತ್ಯದ ಬದುಕಿನಲ್ಲಿ ಒಟ್ಟು ಇಪ್ಪತ್ತೇಳು ಕಥೆಗಳನ್ನು ಬರೆದಿದ್ದರು. ಈ ಕಥೆಗಳು ಸಾಮಾನ್ಯ ಜನರ ಜೀವನವನ್ನು, ಹೆಣ್ಣು ಮಕ್ಕಳ ಸ್ವಾತಂತ್ರ್ಯವನ್ನು ಬಿಂಬಿಸುವ, ಬದುಕಿನಲ್ಲಿ ಸೋಲದೆ ಸಾಧನೆ ಮಾಡುವ ಹೆಣ್ಣು ಮಕ್ಕಳ ಬಗ್ಗೆ ಇರುವ ಕಥೆಗಳಾಗಿದ್ದು ಅವುಗಳನ್ನು ಓದುವಾಗ ಮನಸ್ಸಿಗೆ ನಾಟುವಂತೆ ಬರವಣಿಗೆಯ ಶೈಲಿಯನ್ನು ಮೈಗೂಡಿಸಿಕೊಂಡಿದ್ದಾರೆ. ಗೌರಮ್ಮನವರ ಎಲ್ಲಾ ಕಥೆಗಳು ವಿಭಿನ್ನವಾಗಿದ್ದು, ಅವರ ರಚನೆಯ ಪಕ್ವತೆಯನ್ನು ತೋರಿಸುತ್ತಿತ್ತು. ಗೌರಮ್ಮನವರು ಮೊದಲಿಗೆ 'ಮಿಸೆಸ್ ಬಿ.ಟಿ.ಜಿ.ಕೃಷ್ಣ' ಎಂಬ ಹೆಸರಿನಿಂದ ಕಥೆಯನ್ನು ಬರೆಯುತಿದ್ದರು. ಇವರು ಬರೆದ 'ಮನುವಿನ ರಾಣಿ' ಎಂಬ ಕಥೆ ಇವರನ್ನು ಶ್ರೇಷ್ಠ ಕಥೆಗಾರ್ತಿ ಎನ್ನುವುದನ್ನು ಸಿದ್ಧಾಂತ ಮಾಡಿತು. ಬಾಳನ್ನು ನೋಡಲು ಬಲ್ಲ ಕಣ್ಣು, ಸಹಾನುಭೂತಿಯ ಮನಸ್ಸು, ಸಹಜವಾದ ಕಥನ, ಸರಳವಾದ ಭಾಷೆ, ಕಥನದಲ್ಲಿ ಕ್ರಮ, ಹಿತ-ಮಿತ ಇವರ ಬರವಣಿಗೆಯಲ್ಲಿನ ವಿಶಿಷ್ಟತೆ ಎಂದು ಗುರುತಿಸಬಹುದು. ಅವರ ಕೆಲವು ಕಥೆಗಳು ಗಂಡು ಹೆಣ್ಣಿನ ನಡುವಿನ ಸ್ನೇಹವೆಂದರೆ ಲೈಂಗಿಕ ದೃಷ್ಟಿ ಮಾತ್ರವಲ್ಲ, ಸ್ವಪ್ರಯೋಜನವಿಲ್ಲದ ಪ್ರೇಮ ಪ್ರೀತಿಯಾಗಿರಬೇಕು ಎಂಬುದನ್ನು ಪ್ರತಿಪಾದಿಸುತ್ತವೆ.

ಗೌರಮ್ಮನವರ ಕಥೆಗಳು :

ವಾಣಿಯ ಸಮಸ್ಯೆ, ಒಂದು ಪುಟ್ಟಚಿತ್ರ, ಅವಳ ಭಾಗ್ಯ, ಅಪರಾಧಿ ಯಾರು? ಹೋಗಿಯೇ ಬಿಟ್ಟಿದ್ದ, ಎರಡನೇ ಮದುವೆ, ಯಾರು, ಕಾಗದ ಮಾಲೆ, ಬಲಿ, ಪಾಪನ ಮದುವೆ, ಅದೃಷ್ಟದ ಆಟ, ನನ್ನ ಮದುವೆ, ಮರದ ಗೊಂಬೆ, ತಪ್ಪಿತಸ್ಥೆಯಾರು? ಸುಳ್ಳು ಸ್ವಪ್ನ, ನಾಲ್ಕು ಘಟನೆ, ಒಂದು ದಿನ ಮುಂದೆ, ಸನ್ಯಾಸಿ ರತ್ನ, ಕೌಶಲ್ಯ ನಂದನ, ಪ್ರಾಯಶ್ಚಿತ್ತ ಮತ್ತು ಮನುವಿನ ರಾಣಿ.

ಗೌರಮ್ಮನವರ ಕಥೆಗಳ ವಸ್ತು:

ಪತ್ರಗಳು ಮತ್ತು ಪತ್ರಿಕೆಗಳ ಸುದ್ದಿಗಳು, ಗಂಡು ಹೆಣ್ಣಿನ ಸಂಬಂಧದಲ್ಲಿ ಹುಟ್ಟಿಕೊಂಡ ಸಮಸ್ಯೆಗಳು ಇವು ಕೇವಲ ಖಾಸಗಿ ಸಮಸ್ಯೆಯಾಗಿ ಉಳಿಯದೆ ಗೌರಮ್ಮನವರ ಕಥೆಗಳಲ್ಲಿ ಸಾಮಾಜಿಕ ಆಯಾಮವನ್ನು ಪಡೆದಿದೆ. ಇವರ ಎಲ್ಲ ಕಥೆಗಳಲ್ಲಿ ಒಂದು ರೀತಿಯ ಸ್ತ್ರೀ ಪರವಾದ ವೈಚಾರಿಕ ನೆಲೆಗಟ್ಟಿದೆ.

ಕಥೆಗಾರಿಕೆಯಲ್ಲಿ ಗೌರಮ್ಮನವರಲ್ಲಿ ಕಾಣುವ ವಿಶೇಷವೆಂದರೆ ಸಮಾನತೆಯ ದೃಷ್ಟಿ. ಮಹಿಳೆಯಾಗಿ ಗೌರಮ್ಮ ತಮ್ಮ ಸಮಾಜವನ್ನು ಗ್ರಹಿಸಿದ ಪರಿ ಆಸಕ್ತಿದಾಯಕ. ಸ್ತ್ರೀ ಸಮಾಜದ ಸಂಬಂಧಗಳ ಸುಧಾರಣೆಗಾಗಿ ಹಂಬಲಿಸುವ ಅವರ ದಿಟ್ಟತನ, ಮಹಿಳೆ ಮತ್ತು ಅವಳ ಸಮಸ್ಯೆ, ಸಮಾಜ ಮತ್ತು ಕಾರ್ಯಕಾರಣ ಸಂಬಂಧ, ವರದಕ್ಷಿಣೆಯ ವಿರುದ್ಧದ ಪ್ರತಿಭಟನೆಯ ಸ್ವರೂಪ ಮತ್ತು ಸಾಮಾಜಿಕ ಕಳಕಳಿ, ವಿಧವಾ ವಿವಾಹದಲ್ಲಿನ ಸ್ತ್ರೀ ಪುರುಷ ನಿಲುವುಗಳ ಟೊಳ್ಳುತನದ ಅನಾವರಣ ಹೀಗೆ ಗೌರಮ್ಮನವರ ಕಥೆಗಳಲ್ಲಿ ಇಂತಹ ಮನೋಧರ್ಮ ಎದ್ದು ಕಾಣುತ್ತದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಮುಖ್ಯವೇ ಹೊರತು ಮದುವೆಯಲ್ಲ ಎಂದು ಪ್ರತಿಪಾದಿಸಿದ ಇವರು ಸಮಾಜವನ್ನು ಎದುರುಹಾಕಿಕೊಳ್ಳದೆ ಸಮಾಜವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಒಂದು ತರಹದ ಆಪ್ತ ಸಮಾಲೋಚನೆ ಮಾಡುವ ರೀತಿ ಬಹಳ ಸೊಗಸಾದುದು. ಹೀಗೆ ಸ್ತ್ರೀ ಸಂವೇದನೆ ಹಾಗೂ ಸ್ತ್ರೀ ಪರವಾದ ಕಾಳಜಿಯಿಂದ ಕಥೆ ಬರೆಯುತ್ತಿದ್ದ ಕೊಡಗಿನ ಗೌರಮ್ಮನವರು ವೈಚಾರಿಕ ಪ್ರಜ್ಞೆಯ ಕಥೆಗಾರ್ತಿಯಾಗಿದ್ದರು.

ಗೌರಮ್ಮನವರ ಕಥೆಗಳ ಪಾತ್ರಗಳು:

ಇವರ ಹೆಣ್ಣಿನ ಸೌಂದರ್ಯದ ಪರಿಕಲ್ಪನೆ ಕುತೂಹಲಕಾರಿಯಾದುದು ಮತ್ತು ವಿಶಿಷ್ಟವಾದುದು. ಇವರ ಕಥೆಗಳಲ್ಲಿ ಬರುವ ಬಹುಪಾಲು ಸ್ತ್ರೀ ಪಾತ್ರಗಳು ಸುಂದರಿಯರಲ್ಲ. ದೈಹಿಕ, ಸೌಂದರ್ಯಕ್ಕಿಂತ ಹೆಚ್ಚಾಗಿ ಹೃದಯ ಸಂಪನ್ನತೆಯ ಸೌಂದರ್ಯ ಹೊಂದಿದವರು. ಗೌರಮ್ಮನವರ ಮೊದಲ ಕಥೆ 'ಯಾರು' ೧೯೩೧ ರಲ್ಲಿ ಪ್ರಕಟಗೊಂಡಿತು. ಅದು ಪತಿಯಿಂದ ಪರಿತ್ಯಕ್ತೆಯಾದ ಹುಡುಗಿಯೊಬ್ಬಳು ಅಳುತ್ತಾ ಕೂರದೆ, ಕಲಾವಿದೆಯಾಗಿ ಸಿನಿಮಾ ನಟಿಯಾಗಿ ಜೀವನವನ್ನು ಆಯ್ದುಕೊಳ್ಳುವ ಕಥೆ, ಅಲ್ಲಿಂದ ಸುಮಾರು ಎಂಟು ವರ್ಷಗಳ ಕಾಲದವರೆಗೆ ಅವರು ನಿರಂತರವಾಗಿ ಕಥೆಗಳನ್ನು ಬರೆದರು.

'ಅವಳ ಭಾಗ್ಯ' ಕಥೆಯಲ್ಲಿ ಗುಮಾಸ್ತರ ಕುರೂಪಿ ಮಗಳು ಪಾರೂಗೆ ಹೆಚ್ಚು ಖರ್ಚಿಲ್ಲದೆ ಕ್ಷಯರೋಗಿ ಶ್ರೀಮಂತ ವರನೊಂದಿಗೆ ಮದುವೆಯಾಗುವುದು. ಇದು ಪಾರುವಿನ ಭಾಗ್ಯ ಎಂದುಕೊಳ್ಳುವ ಜಮೀನ್ದಾರರ ಪುತ್ರಿ. 'ಪುನರ್ವಿವಾಹ' ಕಥೆಯಲ್ಲಿ ವಿದುರನೊಬ್ಬ ಮಡದಿ ಸತ್ತು ಆರು ತಿಂಗಳಾಗಿರದಿದ್ದರೂ ತಾನು ಮೋಹಿಸಿದ ಹುಡುಗಿಯನ್ನು ಮದುವೆಯಾಗಲು ಇಚ್ಛಿಸುವುದು, ಆ ಹುಡುಗಿಯೂ ವಿಧವೆಯೆಂದು ಅರಿವಾದೊಡನೆ ಮದುವೆಯಾಗಲು ತಿರಸ್ಕರಿಸುತ್ತಾನೆ. ಪ್ರೇಮವಿಲ್ಲದ ಮದುವೆ ಮದುವೆಯೇ ಅಲ್ಲವೆಂದು ಹಲಬುವ 'ಒಂದುಚಿತ್ರ' ಕಥೆಯ ರೋಹಿಣಿ. 'ಮರದ ಬೊಂಬೆ' ಕಥೆಯಲ್ಲಿನ ಬೋರ್ಡಿಂಗ್ ಸ್ಕೂಲಿನ ಹುಡುಗಿ ಶೈಲಾ ತನ್ನ ಮೇಷ್ಟರನ್ನು ಮದುವೆಯಾಗುವುದು. ತಮ್ಮ ವಿವಾಹ ಅಸಾಧ್ಯವೆನಿಸಿದಾಗ ಪ್ರೇಮಿಯ ಕತ್ತಿಗೆ ಜೀವ ಕೊಡುವ 'ಅಪರಾಧಿಯಾರು?' ಕಥೆಯ ಲತೀಫಾ. ತಂದೆಯ ಮನಸ್ಸಿಗೆ ವಿರುದ್ಧವಾಗಿ ತಾನು ಪ್ರೇಮಿಸಿದವಳನ್ನು ಮದುವೆಯಾಗುವ 'ಪ್ರಾಯಶ್ಚಿತ್ತ' ಕಥೆಯ ಮೂರ್ತಿ. 'ಸನ್ಯಾಸಿ ರತ್ನ' ಕಥೆಯಲ್ಲಿನ ಪ್ರೀತಿಸಿ ಮದುವೆಯಾಗುವ ರತ್ನ ಮತ್ತು ವಾಣಿ. 'ಆಹುತಿ' ಕಥೆಯಲ್ಲಿ ಬಡ ತಂದೆಯ ಮಗಳಾಗಿ ವರದಕ್ಷಿಣೆ ಕೊಡಲಾಗದ್ದರಿಂದ ತನ್ನ ತಂದೆಯ ವಯಸ್ಸಿನ ಮುದುಕನ ಮೂರನೆಯ ಹೆಂಡತಿಯಾಗಲು ಒಪ್ಪದೆ ಆತ್ಮಹತ್ಯೆ ಮಾಡಿಕೊಳ್ಳುವ ಶಾಂತಿ. 'ಅಪರಾಧಿ ಯಾರು?' ಕಥೆಯಲ್ಲಿ ತಾನು ಮನೆಗೆಲಸ ಮಾಡುತಿದ್ದ ಮನೆಯ ಒಡೆಯನಿಂದಲೇ ಅತ್ಯಾಚಾರಕ್ಕೊಳಗಾಗಿ, ಅವನಿಂದಲೇ ಹೊರಗಡೆ ದಬ್ಬಲ್ಪಟ್ಟಾಗ ಬೇಸರದಿಂದ ಆತ್ಮಹತ್ಯೆಗೆ ಪ್ರಯತ್ನಿಸುವ, ಕೊನೆಗೆ ರಕ್ಷಣೆಗಾಗಿ ಮುಸ್ಲಿಂ ಧರ್ಮವನ್ನು ಸೇರುವ ಪಂಡಿತನ ಮಗಳು ಪಾರ್ವತಿ. 'ಒಂದು ಪುಟ್ಟಚಿತ್ರ' ಕಥೆಯ ಅತ್ತಿಗೆಯ ಅಣ್ಣನ ಚೆಲ್ಲಾಟದಿಂದ ಅವನ ಹುಸಿ ಆಶ್ವಾಸನೆಯನ್ನು ನಂಬಿ ಗರ್ಭಧರಿಸಿ ಅವನು ಕೈಬಿಟ್ಟಾಗ ಕೆರೆಯಲ್ಲಿ ಬಿದ್ದು ಆತ್ಮಹತ್ಯೆಗೆ ಯತ್ನಿಸುವ ಬಾಲ ವಿಧವೆ ಶಾಂತೆ. 'ಕೆಲವು ಕಾಗದಗಳು' ಕಥೆಯಲ್ಲಿ ತನ್ನ ಪ್ರಣಯಿಯ ಸಾವಿನಿಂದ ಹತಾಶಳಾಗಿ ಶಾಲೆಬಿಟ್ಟು ಯಾರಿಗೂ ಹೇಳದೆ ಹೊರಟು ಹೋಗುವ ಕಾನ್ವೆಂಟಿನಲ್ಲಿ ಓದುತ್ತಿದ್ದ ಬಾಲಕಿ ಪ್ರಭಾಕುಮಾರಿ. ಅದರಲ್ಲೂ ಇವರ 'ವಾಣಿಯ ಸಮಸ್ಯೆ' ಕಥೆ ಹೆಣ್ಣೊಬ್ಬಳ ತಳಮಳ, ನೈತಿಕತೆಯ ತರ್ಕ, ಇನ್ನೊಬ್ಬಳ ಬಾಳನ್ನು ಒಡೆಯಬಾರದೆಂಬ ವಿವೇಕದ ಒಂದು ಹೆಣ್ಣಿನ ಘನತೆಯನ್ನು ಎತ್ತಿ ಹಿಡಿಯುತ್ತದೆ. ಹೀಗೆ ಹೆಣ್ಣು ಅನುಭವಿಸುವ ವರದಕ್ಷಿಣೆಯ ಸಮಸ್ಯೆಯಿರಲಿ, ಪ್ರಣಯ ಭಂಗವಿರಲಿ, ಅತ್ಯಾಚಾರವಿರಲಿ, ವಿವಾಹೇತರ ಸಂಬಂಧದ ಪರಿಣಾಮವಿರಲಿ ಎಲ್ಲ ಸಮಸ್ಯೆಗಳಿಗೂ ಸಾಮಾಜಿಕ ಆಯಾಮಗಳಿವೆ ಎಂಬುದನ್ನು ಕೊಡಗಿನ ಗೌರಮ್ಮನವರು ಸೂಚಿಸಿದ್ದರು.

ಮಹಾತ್ಮಾ ಗಾಂಧೀಜಿ ಮತ್ತು ಕೊಡಗಿನ ಗೌರಮ್ಮ:

ಕೊಡಗಿನ ಗೌರಮ್ಮನವರು ಮಹಾತ್ಮ ಗಾಂಧೀಜಿಯವರ ಅಭಿಮಾನಿಯಾಗಿದ್ದರು. ೧೯೩೪ ರಲ್ಲಿ ಗಾಂಧೀಜಿ ಕೊಡಗಿಗೆ ಭೇಟಿ ನೀಡಿದ್ದರು. ಅವರು ಬಂದಾಗ ಕೊಡಗಿನಲ್ಲಿ ಗುಂಡುಕುಟ್ಟಿ ಮಂಜುನಾಥಯ್ಯನವರ ಮನೆಯಲ್ಲಿ ಉಳಿದುಕೊಂಡಿದ್ದರು. ಗೌರಮ್ಮನವರು

ಗಾಂಧೀಜಿಯವರನ್ನು ತಮ್ಮ ಮನೆಗೂ ಆಹ್ವಾನಿಸಿದರು. ಗಾಂಧೀಜಿಯವರು ಸಮಯ ಇಲ್ಲವೆಂದು ಗೌರಮ್ಮನವರ ಆಹ್ವಾನವನ್ನು ನಿರಾಕರಿಸಿದ್ದರು. ಆಗ ಗೌರಮ್ಮನವರು ಗಾಂಧೀಜಿ ಶ್ರೀಮಂತರ ಮನೆಗೆ ಮಾತ್ರ ಬರುತ್ತಾರೆ ಬಡವರ ಮನೆಗೆ ಬರುವುದಿಲ್ಲ ಎಂದು ಆಕ್ಷೇಪಣೆ ಮಾಡಿದ್ದಲ್ಲದೆ; ಗಾಂಧೀಜಿ ತಮ್ಮ ಮನೆಗೆ ಬರಲೇಬೇಕೆಂದು ಅಲ್ಲೇ ಉಪವಾಸ ಕುಳಿತರು. ಕೊನೆಗೂ ಗಾಂಧೀಜಿ ಗೌರಮ್ಮನವರ ಮನೆಗೆ ಬರಲು ಸಮ್ಮತಿಯಿತ್ತು, ತಾವೇ ಸ್ವತ: ಗೌರಮ್ಮನವರಿಗೆ ಕಿತ್ತಳೆ ಹಣ್ಣುಕೊಟ್ಟು ಅವರ ಉಪವಾಸ ನಿಲ್ಲಿಸಿ ಅವರ ಮನೆಗೆ ಬಂದರು. ಗಾಂಧೀಜಿಯವರು ಮನೆಗೆ ಬಂದಾಗ ಗೌರಮ್ಮನವರು ಸತ್ಕರಿಸಿ, ಒಳಗಿನಿಂದ ತಮ್ಮಲ್ಲಿದ್ದ ಎಲ್ಲಾ ಆಭರಣಗಳನ್ನು ಒಂದು ಪಾತ್ರೆಯಲ್ಲಿ ತುಂಬಿಸಿ ತಂದು ಗಾಂಧೀಜಿಯವರಿಗೆ ನೀಡಿ, ಆ ಚಿನ್ನವನ್ನು ಹರಿಜನ ಉದ್ಧಾರಕ್ಕಾಗಿ ಬಳಸಬೇಕೆಂದು ಪ್ರಾರ್ಥಿಸಿಕೊಂಡರು. ಗಾಂಧೀಜಿ ಇದಕ್ಕೆ ಅವರ ಪತಿಯ ಒಪ್ಪಿಗೆ ಇದೆಯೇ? ಎಂದು ಕೇಳಿದಾಗ, ಅಲ್ಲೇ ಇದ್ದ ಗೋಪಾಲಕೃಷ್ಣ ಅವರು ಗೌರಮ್ಮ ಇದನ್ನು ತಮ್ಮ ಸ್ವಇಚ್ಛೆಯಿಂದ ಕೊಡುತಿದ್ದಾರೆ. ಅವರು ಮತ್ತೊಮ್ಮೆ ಒಡವೆ ಮಾಡಿಸಿಕೊಡುವಂತೆ ಕೇಳದಿದ್ದರಾಯಿತು ಎಂದು ನಕ್ಕು ಹೇಳಿದರಂತೆ. ಗೌರಮ್ಮನವರು ಆ ಕ್ಷಣವೇ ಗಾಂಧೀಜಿ ಎದುರು ಇನ್ನು ಮುಂದಕ್ಕೆ ತಾನು ಸೌಭಾಗ್ಯ ಸಂಕೇತವಾದ ಕೊರಳಿನ ಕರಿಮಣಿ, ಕಿವಿ ಬೆಂಡೋಲೆ ಮತ್ತು ಮೂಗುಬಟ್ಟು ಇವುಗಳನ್ನು ಬಿಟ್ಟು ಇನ್ನು ಮುಂದಕ್ಕೆ ತಾನು ಯಾವುದೇ ಒಡವೆಗಳನ್ನು ತೊಡವುದಿಲ್ಲವೆಂದು ಪ್ರತಿಜ್ಞೆ ಮಾಡಿದರಂತೆ. ಅಂದಿನಿಂದ ಗೌರಮ್ಮನವರು ತಾವು ಬದುಕಿರುವವರೆಗೂ ತೊಟ್ಟಿದ್ದು ಕೇವಲ ಮಂಗಳಸೂತ್ರ, ಮೂಗುತಿ ಹಾಗೂ ಕಿವಿ ಓಲೆಗಳನ್ನು ಮಾತ್ರ. ಈ ಘಟನೆಯನ್ನು ಗಾಂಧೀಜಿ ೧೯೩೪ ರಲ್ಲಿ ಮಾರ್ಚ್ ೨೮ 'ಹರಿಜನ' ಪತ್ರಿಕೆಯಲ್ಲಿ ಬರೆದಿರುವರು ಎಂಬ ಮಾಹಿತಿಯಿದೆ.

ಗೌರಮ್ಮನವರ ಅಂತ್ಯ :

೧೯೩೯ ಏಪ್ರಿಲ್ ೧೨ ಗೌರಮ್ಮನವರಿಗೆ ಮಾತ್ರವಲ್ಲ; ಕನ್ನಡ ಸಾರಸ್ವತಲೋಕಕ್ಕೆ ಕೆಟ್ಟ ದಿನವಾಗಿತ್ತು. ಅಂದಿನ ದಿನ ಹರದೂರಿನಲ್ಲಿ ಹಾರಂಗಿ ಹೊಳೆಗೆ ದಿನನಿತ್ಯದಂತೆ ಆತ್ಮೀಯರೊಂದಿಗೆ ಈಜಲು ಹೋದ ಗೌರಮ್ಮನವರು ದುರಂತ ಅಂತ್ಯವನ್ನು ಕಂಡರು. ಸುಳಿಗೆ ಸಿಲುಕಿ ಕೊಚ್ಚಿ ಹೋಗುವಾಗ ದೂರದಲ್ಲಿ ತನ್ನನ್ನು ರಕ್ಷಿಸಿ ಎಂದು ಕೇಳಿಕೊಳ್ಳುವಂತೆ ಕೈ ಬೀಸುವುದನ್ನು ಅವರೊಂದಿಗೆ ಈಜಲು ಹೋದವರೆಲ್ಲರೂ ನೋಡಿದ್ದರು. ಆದರೆ ವಿಧಿ'ತನ್ನಾಟವನ್ನು ಮೆರೆದಿತ್ತು. ಹೀಗೆ ತಮ್ಮ ೨೭ರ ಹರೆಯದಲ್ಲಿ ಗೌರಮ್ಮನವರು ಎಲ್ಲರನ್ನು ತೊರೆದು ಹೊರಟರು.

ಗೌರಮ್ಮನವರ ಅಲ್ಲಿ-ಇಲ್ಲಿ ಪ್ರಕಟವಾದ ಕಥೆಗಳನ್ನು ಸೇರಿಸಿ ಒಂದು ಪುಸ್ತಕವಾಗಿ ಪ್ರಕಟಿಸಲು ಧಾರವಾಡದ ಪ್ರಕಾಶಕರಾದ ದತ್ತಾತ್ರೇಯ ಕುಲಕರ್ಣಿಯವರು ಹವಣಿಸಿದರು. ಆದರೆ ಆ ಪುಸ್ತಕ ಪ್ರಕಟಗೊಳ್ಳುವ ಮೊದಲೇ ಗೌರಮ್ಮನವರು ತೀರಿಕೊಂಡರು.

ಮೊದಲು 'ಚಿಗುರು' ಎಂಬ ಹೆಸರಿನಿಂದ ಪ್ರಕಟವಾಗಬೇಕೆಂದಿದ್ದ ಆ ಕಥಾಸಂಕಲನ ಪುಸ್ತಕವು ಅವರ ಅಗಲಿಕೆಯ ನಂತರ 'ಕಂಬನಿ' ಎಂಬ ಹೆಸರಿನಿಂದ ಪ್ರಕಟಗೊಂಡಿತು. ಅವರಿಗೆ ಕಂಬನಿ ಹೇಳುವ ಅವರ ನೆನಪಿನ ಪುಸ್ತಕಕ್ಕೆ ಮೇರು ಸಾಹಿತಿ ದ.ರಾ.ಬೇಂದ್ರೆ ಅವರು ಮುನ್ನುಡಿ ಬರೆದಿದ್ದಾರೆ. ಅದರಲ್ಲಿ ದ.ರಾ. ಬೇಂದ್ರೆಯವರು 'ತಂಗಿ ಗೌರಮ್ಮ' ಎಂಬ ಕವನ ಬರೆದಿದ್ದಾರೆ. ಅದರಲ್ಲಿ,

"ಗೌರವಸ್ತ, ಗೌರವಸ್ಮಿತ ಗೌರವದಿ ಗೌರೀ
ಮಿಂಚಿದಳೊ ಬಾನಂಚಿಗೆ ಕಾವೇರಿಯ ಕುವರಿ"

ಎಂದು ಹೊಗಳಿದ್ದಾರೆ. ಇದರಿಂದ ಕೊಡಗಿನ ಗೌರಮ್ಮನವರ ಮೇರು ವ್ಯಕ್ತಿತ್ವ, ಪ್ರತಿಭೆ ಹಾಗೂ ಪಾಂಡಿತ್ಯ ಏನು ಎಂಬುದನ್ನು ಈ ಜಗತ್ತು ಅರಿತುಕೊಳ್ಳಬೇಕು. ಒಟ್ಟಾರೆ ಕನ್ನಡ ಸಾಹಿತ್ಯಲೋಕದಲ್ಲಿ ಮಿಂಚಿ ಮರೆಯಾದ ಧೃವತಾರೆ ಕೊಡಗಿನ ಗೌರಮ್ಮನವರು ಎಂದು ಹೇಳಬಹುದು.

‘ಚಿತ್ರಗ್ರೀವ’ – ಜೀವಭಾವ ಬೆಸುಗೆಯ ಜೊತೆ ಸಾಹಸಮಯ ಚಿತ್ರಣ

– ಡಾ. ಗಿರೀಶ್ ಮೂಗ್ತಿಹಳ್ಳಿ

ಜೀವ ಪರಿಸರ ವಿಜ್ಞಾನ(ಇಕಾಲಜಿ)ದಲ್ಲಿ ಪ್ರತಿಯೊಂದು ಜೀವಿಗೂ ವಿಭಿನ್ನ ರಚನೆ ಮತ್ತು ಜೀವನಕ್ರಮವಿದೆ. ಆದರೂ ಕೂಡ ಪರಿಸರದಲ್ಲಿ ಸಮತೋಲನ ವಾತಾವರಣವಿದೆ. ‘ನೀ ಎನಗಿದ್ದರೆ ನಾ ನಿನಗೆ– (ಸಿಂಬಯೋಸಿಸ್) ಎಂಬಂತೆ ಒಂದಕ್ಕೊಂದು ಪೂರಕ ವಾತಾವರಣವಿರುವ ಕಾರಣ, ಇಲ್ಲಿ ಒಂದು ಜೀವಿಯ ಬದುಕು ಇನ್ನೊಂದು ಜೀವಿಯ ಬದುಕಿಗೆ ಆಧಾರವಾಗಿದೆ. ವೈವಿಧ್ಯತೆಯಿಂದ ಕೂಡಿದ ಸಮತೋಲನ ಬದುಕಿನಲ್ಲಿ ಪರಸ್ಪರ ಎದುರಾಗುವ ಅಥವಾ ಪರೋಕ್ಷವಾಗಿ ಒಂದಕ್ಕೊಂದು ‘ಸಂಬಂಧದ ಸರಪಳಿ – ಏರ್ಪಟ್ಟಿರುವ ಸೋಜಿಗದ ಕ್ರಿಯೆ ಪ್ರತಿಯೊಂದು ಜೀವಿಯ ಅಸ್ತಿತ್ವವನ್ನು ಹಿಡಿದಿಡುತ್ತದೆ. ಇಂಥ ಜೀವಲೋಕದಲ್ಲಿ ಮನುಷ್ಯ ಭಿನ್ನ. ಬೌದ್ಧಿಕ ಮತ್ತು ವಾಕ್ ಕಲೆಯ ವಿಶಿಷ್ಟತೆಯಿಂದಾಗಿ ಪರಿಸರವನ್ನು ತನ್ನದಾಗಿಸಿಕೊಳ್ಳಲು ಮತ್ತು ಅದನ್ನು ಭೇದಿಸಲು ತನ್ನನ್ನು ತಾನು ಅಧ್ಯಯನ ಮತ್ತು ಅಭ್ಯಾಸಕ್ಕೆ ಒಳಪಡಿಸಿಕೊಳ್ಳುತ್ತಲೇ ಇದ್ದಾನೆ. ಇಲ್ಲಿ ಮನುಷ್ಯನ ಸಾಧಕಗಳಿಗಿಂತ ಬಾಧಕಗಳೇ ಹೆಚ್ಚಾಗಿರುವ ಕಾರಣ ಪರಿಸರದ ವಿನಾಶ ಆತಂಕಕಾರಿಯಾಗಿದೆ.

ಈ ಪರಿಸರದಲ್ಲಿ ಎರಡು ರೀತಿಯಲ್ಲಿ ಮನುಷ್ಯನ ವರ್ತನೆಗಳಿವೆ. ಪರಿಸರವನ್ನು ಶಾಸ್ತ್ರೀಯ ಅಧ್ಯಯನಕ್ಕೆ ಒಳಪಡಿಸಿ ಅರಿಯುವ ಮತ್ತು ಅದನ್ನು ಉಳಿಸುವ ಕೆಲಸ ಒಂದೆಡೆಯಾದರೆ, ಪರಿಸರವನ್ನು ಅವಸಾನದತ್ತ ಕೊಂಡೊಯ್ಯುವ ಅತಿ ದುರ್ಬುದ್ಧಿ ಮನಸ್ಸು ಇನ್ನೊಂದೆಡೆ. ಇವೆರಡನ್ನು ಮೀರಿ ಪರಿಸರ ತನ್ನನ್ನು ತಾನು ಕಾಯ್ದುಕೊಳ್ಳುವ ಕ್ರಿಯೆ ಮತ್ತೊಂದೆಡೆ. ಏನೇ ಆಗಲಿ ಪರಿಸರದ ಜೊತೆ ಮನುಷ್ಯನ ಮಂದಗತಿಯ ಯುದ್ಧವು ಈ ಭೂಮಿಯ ಅಸಮತೋಲನಕ್ಕೆ ಕಾರಣವಾಗಿರುವುದಂತೂ ನಿಜ.

ಜೈವಿಕ ಪರಿಸರ ವಿಜ್ಞಾನದಲ್ಲಿ ಸೂಕ್ಷ್ಮಾಣುಜೀವಿಗಳಿಂದ ಮನುಷ್ಯನವರೆಗೂ ಅನೇಕ ಜೀವಸಂಕುಲಗಳನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾಗಿ ಸಸ್ಯ, ಪ್ರಾಣಿ, ಪಕ್ಷಿ, ಕಶೇರುಕ, ಮನುಷ್ಯ ಹೀಗೆ ಬೇರೆ ಬೇರೆ ವರ್ಗಗಳು ನಿಸರ್ಗದಲ್ಲಿವೆ. ಇಂಥ ವರ್ಗಗಳ

ಮಧ್ಯೆ ಮನುಷ್ಯನು ಬೌದ್ಧಿಕವಾಗಿ ಪ್ರಬಲವಾಗಿರುವುದರಿಂದ ಉಳಿದೆಲ್ಲ ಜೀವಸಂಕುಲಗಳ ಮೇಲೆ ತನ್ನ ಹಿಡಿತ ಸಾಧಿಸಲು ಪ್ರಯತ್ನಿಸಿದ್ದಾನೆ. ಇದರ ಫಲವೇ ವೈಜ್ಞಾನಿಕ ಅಧ್ಯಯನಗಳ ಉಗಮ. ಈ ಅಧ್ಯಯನಗಳು ಭಾವನಾತ್ಮಕ, ಪ್ರಯೋಗಾತ್ಮಕ ಮತ್ತು ಪ್ರಯೋಜನಾತ್ಮಕ ಆಯಾಮಗಳಾಗಿ ರೂಪು ಪಡೆದಿವೆ. ಈ ಮೂರು ಆಯಾಮಗಳು ಪರಸ್ಪರ ಒಂದನ್ನೊಂದು ಬಿಟ್ಟುಕೊಡದೆ ಇದ್ದರೂ ಪ್ರತ್ಯೇಕವಾಗಿ ನಿಲ್ಲುವ ಲಕ್ಷಣಗಳನ್ನು ಹೊಂದಿವೆ. ಭಾವನಾತ್ಮಕ ಆಯಾಮ ಸಂಬಂಧವನ್ನು, ಪ್ರಯೋಗಾತ್ಮಕ ಆಯಾಮ ವಿಜ್ಞಾನವನ್ನು ಮತ್ತು ಪ್ರಯೋಜನಾತ್ಮಕ ಆಯಾಮ ಲಾಭವನ್ನು ಘನೀಕರಿಸುವ ನಿಲುವನ್ನು ಹೊಂದಿವೆ. ಮೊದಲೆರಡು ಆಯಾಮಗಳು ಪ್ರಕೃತಿಯನ್ನು ತನ್ನೊಳಗೆ ಉಳಿಸಿಕೊಂಡು, ಅರಿತು ಬೆಳೆಸುವ ಸಾಮರ್ಥ್ಯ ಹೊಂದಿದ್ದರೆ, ಮೂರನೇ ಆಯಾಮ ದುರ್ಬುದ್ಧಿಯ ಮೇಲ್ಲೋಗರವನ್ನು ಸಾಬೀತುಪಡಿಸುತ್ತದೆ. ಪ್ರಯೋಗಾತ್ಮಕ ಆಯಾಮ ಪ್ರಾಣಿ, ಪಕ್ಷಿ, ಸಸ್ಯ ಯಾವುದಾದರೂ ಆಗಲಿ ಅದರ ಅಂಗಾಂಗಗಳನ್ನು ಕತ್ತರಿಸಿ ತುಂಡು ತುಂಡು ಮಾಡಿ ಅಧ್ಯಯನಕ್ಕೆ ಒಳಪಡಿಸಿ ಅದರ ಜೈವಿಕಾಂಶಗಳನ್ನು ದಾಖಲಿಸುವ ಒಂದು ಕ್ರಮವಾಗಿದೆ. ಆದರೆ ಭಾವನಾತ್ಮಕ ಆಯಾಮವು ಮನುಷ್ಯನು ತನ್ನ ಬದುಕಿನೊಂದಿಗೆ ಪ್ರಾಣಿ, ಪಕ್ಷಿ, ಮರ, ಗಿಡಗಳನ್ನು ಬಂಧುವೆಂದು ಭಾವಿಸಿ. ಅವುಗಳೊಟ್ಟಿಗೆ ಅನ್ಯೋನ್ಯತೆಯನ್ನು ಕಾಪಾಡಿಕೊಂಡು ಅವುಗಳ ಭಾವನಾತ್ಮಕ ಬದುಕನ್ನೂ ಅವಲೋಕನ ಮಾಡುತ್ತಲೇ, ಅವುಗಳ ಭಾವನೆಗಳಿಗೆ ಸ್ಪಂದಿಸಿ, ಸಾಧ್ಯವಾದರೆ ಸಾಹಿತ್ಯದ ಮೂಲಕ ಅವುಗಳ ಬದುಕಿನ ಕ್ರಮವನ್ನು ರಸಮಯವಾಗಿ ಚಿತ್ರಿಸುವುದಾಗಿದೆ.

ಜೀವ ವೈವಿಧ್ಯತೆಯಲ್ಲಿ ಪಕ್ಷಿಗಳಿಗೆ ವಿಶೇಷ ಸ್ಥಾನವಿದೆ. ಇವುಗಳ ಮೂಲಕ ಮನುಷ್ಯ ತನ್ನ ಬದುಕನ್ನು ಸುಂದರವಾಗಿಟ್ಟುಕೊಳ್ಳಲು ಇಂದಿಗೂ ಪ್ರಯತ್ನಿಸುತ್ತಲೇ ಇದ್ದಾನೆ. ಮೇಲಿನ ಮೂರು ಆಯಾಮಗಳಲ್ಲೂ ಪಕ್ಷಿ ಸಂಕುಲವನ್ನು ಕಡೆಗಣಿಸಿಲ್ಲ. ಆವಿಷ್ಕಾರ ಮತ್ತು ಅವಲೋಕನಕ್ಕೆ ಒಳಗಾಗಿರುವ ಮತ್ತು ಅವಸಾನದತ್ತ ಸಾಗಿರುವ ಪಕ್ಷಿಗಳು ನಮ್ಮ ಕಣ್ಣ ಮುಂದೆ ಇವೆ. ಜೆರ್ಡನ್ಸ್ ಕೌರ್ಸರ್, ಗ್ರೇಟ್ ಇಂಡಿಯನ್ ಬಸ್ಟರ್ಡ್, ಗ್ರೇಟ್ ಪೈಡ್ ಹಾರ್ನ್‌ಬಿಲ್ ಮುಂತಾದ ಪಕ್ಷಿಗಳು ಅವಸಾನಕ್ಕೆ ಒಳಗಾದರೆ, ಇಡೀ ಪಕ್ಷಿಸಂಕುಲವೇ ಆವಿಷ್ಕಾರಕ್ಕೆ ಒಳಗಾಗಿವೆ. ೧೮ನೇ ಶತಮಾನದಲ್ಲಿ ಸ್ವೀಡನ್ನಿನ ಪ್ರಕೃತಿಶಾಸ್ತ್ರಜ್ಞ ಲಿನ್ನಾಯಿಸ್‌ನ ವರ್ಗೀಕರಣ ಪದ್ಧತಿಯನ್ನು ಸ್ವಲ್ಪ ವ್ಯತ್ಯಾಸಗಳೊಡನೆ ಈಗಲೂ ಅನುಕರಿಸಲಾಗುತ್ತಿದೆ. ೧೯ನೇ ಶತಮಾನದ ಪ್ರಾರಂಭದಲ್ಲಿ ಆಂಗ್ಲರು ಪಕ್ಷಿಗಳನ್ನು ವರ್ಗೀಕರಿಸುವ ಮಹತ್ಕಾರ್ಯವನ್ನು ಕೈಗೊಂಡಿದ್ದಾದರೂ ೧೮೬೨ ೬೪ರಲ್ಲಿ ಡಾ.ಟಿ.ಸಿ. ಜೆರ್ಡನ್ ಅವರು ಬರೆದು ಪ್ರಕಾಶಗೊಳಿಸಿದ 'ದಿ ಬರ್ಡ್ಸ್ ಆಫ್ ಇಂಡಿಯಾ-ಪುಸ್ತಕವು ಭಾರತದ ಪಕ್ಷಿಗಳ ವ್ಯವಸ್ಥಿತ ಅಧ್ಯಯನಕ್ಕೆ ನಾಂದಿ ಹಾಡಿತು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಸ್ಥಾಪಕರಲ್ಲೊಬ್ಬರಾದ ಅಲಾನ್ ಓಕ್ಟೇವಿಯನ್ ಹ್ಯೂಮ್ ಅವರು ಪ್ರಾರಂಭಿಸಿದ್ದ 'ಸ್ಟ್ರೇ ಫೆದರ್ಸ್' ಎಂಬ ಭಾರತ ಪಕ್ಷಿಶಾಸ್ತ್ರದ ನಿಯತಕಾಲಿಕೆಯೊಂದು ೧೮೭೨ರಿಂದ ೧೮೮೮ರವರೆಗೆ ತನ್ನ ಅಸ್ತಿತ್ವ ಉಳಿಸಿಕೊಂಡಿತ್ತು.

೧೮೮೮ರಿಂದ ೧೮೯೮ರವರೆಗೆ ಇಂಡಿಯಾ ಕಾರ್ಯಾಲಯದವರ ಮೇಲ್ವಿಚಾರಣೆಯಲ್ಲಿ ಪ್ರಕಟವಾದ ಇ.ಡಬ್ಲ್ಯೂ.ಓಟ್ಸ್ ಮತ್ತು ಡಬ್ಲ್ಯೂ.ಟಿ.ಬ್ಯಾನ್‌ಫರ್ಡ್ ವಿರಚಿತ 'ಬ್ರಿಟಿಷ್ ಇಂಡಿಯಾದ ಪ್ರಾಣಿವರ್ಗ' ಎಂಬ ಪುಸ್ತಕವು ಭಾರತದ ಪಕ್ಷಿಗಳು ಮತ್ತು ಅವುಗಳ ಅಭ್ಯಾಸದ ವಿಷಯದಲ್ಲಿ ಸಾಮಾನ್ಯ ಜನತೆಯ ಕುತೂಹಲವನ್ನು ಕೆರಳಿಸುವಲ್ಲಿ ನೆರವಾದವು. ಇ.ಸಿ.ಸ್ಟೂವರ್ಟ್ ಬೇಕರ್ ವಿರಚಿತ 'ದಿ ನ್ಯೂ ಫಾನ್' (೧೯೨೧ರಿಂದ೧೯೩೦) ಭಾರತದ ಪಕ್ಷಿಗಳ ವರ್ಗೀಕರಣ, ನಾಮಧೇಯ ಮತ್ತು ಸಾಮಾನ್ಯ ವಿವರಣೆಗಳನ್ನು ಹೊಂದಿರುವ ಕೃತಿಯಾಗಿರುವುದು ವಿಶಿಷ್ಟ. ಸಲೀಂ ಆಲಿ ಅವರ 'ದಿ ಬುಕ್', 'ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್', 'ದಿ ಬರ್ಡ್ಸ್ ಆಫ್ ಕಚ್', 'ಇಂಡಿಯನ್ ಹಿಲ್ ಬರ್ಡ್ಸ್' ಪುಸ್ತಕಗಳು ಆವಿಷ್ಕಾರ ರೂಪವಾಗಿ ಪಕ್ಷಿಗಳ ಅಧ್ಯಯನಕ್ಕೆಂದೇ ಹೊರಬಂದವು.

ಪಕ್ಷಿಸಂಕುಲವು ಒಂದೆಡೆ ಆವಿಷ್ಕಾರಕ್ಕೆ ಮತ್ತು ಅವಸಾನಕ್ಕೆ ಒಳಪಟ್ಟರೆ, ಅವಲೋಕನಕ್ಕಾಗಿ ಹೊಂದಾಣಿಕೆಯಾದದ್ದು ಪ್ರಕೃತಿ ಸಹಜದ ಸೋಜಿಗ ಸಂಗತಿಯಾಗಿದೆ. ಮಾನವ ಸಹವಾಸದಿಂದ ದೂರಾಗಿ ಜೀವಿಸಲಾರದಂತಹ ಪಕ್ಷಿಗಳು ನಮ್ಮಲ್ಲಿ ಇವೆ. ಅದು ಬಂಧನವಾದರೂ ಸರಿ, ಬಯಲಾದರೂ ಸರಿ. ಭಾವನಾತ್ಮಕ ಸಂಬಂಧವನ್ನು ಹೊಂದಿರುವ ಪಕ್ಷಿಗಳು ಇವೆ. ನವಿಲು, ಗಿಳಿ, ಪಾರಿವಾಳ, ಬೆಳ್ಳಕ್ಕಿ, ಗುಬ್ಬಚ್ಚಿ, ಕಾಗೆ, ಕೋಗಿಲೆ,ಗೂಬೆ,ಬಾತುಕೋಳಿ ಮುಂತಾದ ಪಕ್ಷಿಗಳ ಜೊತೆ ಭಾವನಾತ್ಮಕ ಸಂಬಂಧ ಹೊಂದಿ, ಆ ಮೂಲಕ ಅವಲೋಕನ ಮಾಡಿ, ಅವುಗಳ ಬದುಕಿನ ಕ್ರಮವನ್ನು ಅಭಿವ್ಯಕ್ತಿಸುವ ಸಾಹಿತ್ಯದ ಕೆಲಸ ನಡೆಯುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಪಾರಿವಾಳದ ಜೀವನ ಚಹರೆಯ ಬಗ್ಗೆ ಕೇಂದ್ರ ವಿಷಯವನ್ನು ಒಳಗೊಂಡಿರುವ ಧನ್‌ಗೋಪಾಲ್ ಮುಖರ್ಜಿ ಅವರ 'ಚಿತ್ರಗ್ರೀವ' ಕೃತಿಯು ನಮಗೆ ಹತ್ತಿರವಾಗುತ್ತದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಪ್ರಾಣಿ-ಪಕ್ಷಿಗಳು ಎರಡು ರೀತಿಯಲ್ಲಿ ಸಾಹಿತ್ಯದ ವಸ್ತುಗಳಾಗಿವೆ. ಒಂದನೆಯದು ಪ್ರಾಣಿ-ಪಕ್ಷಿ ರೂಪಕಗಳ ಮೂಲಕ ಮನುಷ್ಯನ ಬದುಕನ್ನು ಉತ್ತಮವಾಗಿಸಲು ಪ್ರಯತ್ನಿಸುವ ಸಾಹಿತ್ಯ. ಉದಾಹರಣೆಗೆ ಗೋವಿನಹಾಡು, ದುರ್ಗಸಿಂಹನ ಪಂಚತಂತ್ರ ಕಥೆಗಳು, ಮಕ್ಕಳ ಸಾಹಿತ್ಯ ಇತ್ಯಾದಿ. ಎರಡನೆಯದು, ಪ್ರಾಣಿ-ಪಕ್ಷಿಗಳೇ ಸಾಹಿತ್ಯದ ವಸ್ತುಗಳಾಗಿ ಅವುಗಳ ಬದುಕನ್ನು ಸೂಕ್ಷ್ಮವಾಗಿ ಅವಲೋಕನ ಮಾಡಿ ಮನೋಜ್ಞವಾಗಿ ಚಿತ್ರಿಸುವುದು. ಉದಾಹರಣೆಗೆ ಕುವೆಂಪು ಅವರ 'ಮಲೆನಾಡಿನ ಚಿತ್ರಗಳು', ಪೂಚಂತೇ ಅವರ 'ಸುಶ್ಮಿತ ಮತ್ತು ಹಕ್ಕಿಮರಿ' ಇತ್ಯಾದಿ ಕೃತಿಗಳು ಕಂಡುಬರುತ್ತವೆ. ಮೊದಲನೇ ವರ್ಗದಲ್ಲಿ ಕಲ್ಪನೆಯ ಕತೆಗಳು ಹೆಚ್ಚಿದ್ದರೆ, ಎರಡನೇ ವರ್ಗದಲ್ಲಿ ಬರೆಹಗಾರನಿಗೆ ನೇರ ಅನುಭವ ಅಥವಾ ಪ್ರಾಣಿ-ಪಕ್ಷಿಗಳ ಜೊತೆ ಅವಿನಾಭಾವ ಸಂಬಂಧ ಏರ್ಪಟ್ಟಿರುತ್ತದೆ. ಇಂಥ ವರ್ಗಕ್ಕೆ 'ಚಿತ್ರಗ್ರೀವ' ಕೃತಿ ಸೇರುತ್ತದೆ.

೬ನೇ ಜುಲೈ, ೧೮೯೦ ರಲ್ಲಿ ಕಲ್ಕತ್ತೆಯಲ್ಲಿ ಜನಿಸಿದ ಧನ್‌ಗೋಪಾಲ್ ಮುಖರ್ಜಿ ಅವರು ಹತ್ತೊಂಬತ್ತನೇ ವಯಸ್ಸಿನಲ್ಲಿ ಅಮೆರಿಕಾಕ್ಕೆ ತೆರಳಿ ಕ್ಯಾಲಿಫೋರ್ನಿಯ ಮತ್ತು

ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡಿದರು. ಅನಂತರ ಅಮೆರಿಕಾ ಯುವತಿಯೊಡನೆ ವೈವಾಹಿಕ ಜೀವನ ಆರಂಭಿಸಿದ ಇವರು ತಮ್ಮ ಜೀವಿತಾವಧಿಯನ್ನು ಅಲ್ಲೇ ಕಳೆದರು. ೧೪ನೇ ಜುಲೈ, ೧೯೩೬ ರಲ್ಲಿ ವಿಧಿವಶರಾದರು. ಇವರು 'ಕರಿ ದಿ ಎಲಿಫೆಂಟ್'–(೧೯೨೨), 'ಕ್ಯಾಸ್ಟ್ ಅಂಡ್ ಔಟ್ ಕ್ಯಾಸ್ಟ್'(೧೯೨೩), 'ಹರಿ, ದಿ ಜಂಗಲ್ ಲ್ಯಾಡ್'(೧೯೨೪), 'ದಿ ಫೇಸ್ ಆಫ್ ಸೈಲೆನ್ಸ್'(೧೯೨೬) 'ಘೋಂಡ್ ದಿ ಹಂಟರ್'(೧೯೨೮), 'ಎ ಸನ್ ಆಫ್ ಮದರ್ ಇಂಡಿಯಾ ಆನರ್ಸ್'(೧೯೨೮) ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ. ಇವರು ಮಕ್ಕಳ ಸಾಹಿತ್ಯಕ್ಕೆ ನೀಡಿದ ಅನುಪಮ ಕೊಡುಗೆಗಾಗಿ 'ಗೇ–ನೆಕ್' ಎಂಬ ಹೆಸರಿನ ಇಂಗ್ಲಿಷ್ ಕೃತಿಗೆ ೧೯೨೮ರಲ್ಲಿ ಅಮೆರಿಕಾದ 'ಜಾನ್ ನ್ಯೂಬೆರಿ ಮೆಡಲ್' ಪ್ರಶಸ್ತಿ ದೊರಕಿದೆ. ಈ ಗೌರವ ಪಡೆದ ಏಕಮಾತ್ರ ಭಾರತೀಯ ಲೇಖಕರಿವರು. ಈ ಪುಸ್ತಕವನ್ನು ಇ.ಪಿ.ದತ್ತನ್ ಅ್ಯಂಡ್ ಕೋ.ಇಂಕ್, ಯು.ಎಸ್.ಎ ಇವರು ೧೯೨೭ರಲ್ಲಿ ಮೊದಲು ಪ್ರಕಟಿಸುತ್ತಾರೆ. ಇದನ್ನು ಸಂಧ್ಯಾ ಎಸ್. ಅವರು 'ಚಿತ್ರಗ್ರೀವ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ್ದು ೨೦೦೪ರಲ್ಲಿ ಎನ್.ಬಿ.ಟಿ.ಇಂಡಿಯಾ ಪ್ರಕಟಿಸಿದೆ.

'ಚಿತ್ರಗ್ರೀವ' ಮಕ್ಕಳ ಸಾಹಿತ್ಯಕ್ಕೆ ಕೊಟ್ಟಿರುವ ವಿಶೇಷ ಕೊಡುಗೆ. ಮಕ್ಕಳ ಸಾಂಪ್ರದಾಯಿಕ ಕಲಿಕೆಯ ಮಾರ್ಗವನ್ನು ಕಡಿತಗೊಳಿಸಿ, ವಿಭಿನ್ನವಾದ ಪ್ರಯೋಗಾತ್ಮಕ ಕಲಿಕೆಯ ಮಾದರಿಯೊಂದನ್ನು ಕುತೂಹಲದ ಲೇಪನದೊಂದಿಗೆ ಪರಿಚಯಿಸುತ್ತದೆ. ಈ ಮಾರ್ಗ ಕೇವಲ ಮಕ್ಕಳಿಗೆ ಮಾತ್ರ ಸಲ್ಲದು. ತಂದೆ ತಾಯಿಯಿಂದ ಜಗತ್ತನ್ನು ಆವರಿಸುವ ವ್ಯಾಪ್ತಿಯ ತನಕ ಅನ್ವಯವಾಗುತ್ತದೆ. ಶಾಲಾ ಶಿಕ್ಷಣವನ್ನು ಅಧ್ಯಹಾರ ಮಾಡಿ, ಪಕ್ಷಿಪ್ರೀತಿ, ನಿಸರ್ಗಪ್ರೇಮವನ್ನು ಉಂಟುಮಾಡಿ, ಬೌದ್ಧಿಕ ಮಟ್ಟವನ್ನು ಉನ್ನತೀಕರಿಸುತ್ತದೆ. ಹಕ್ಕಿಗಳನ್ನು ಗುರುತಿಸುವ ಕಲೆಗಿಂತ ಹಕ್ಕಿಯ ಪ್ರತಿಭೆಯನ್ನು ಅನಾವರಣ ಮಾಡುವ ಕೆಲಸವನ್ನು ಈ ಕೃತಿ ಮಾಡುತ್ತದೆ. ಪಾರಿವಾಳದ ಕೆಲವು ಅತಿಸೂಕ್ಷ್ಮ ವಿವರಗಳ ಜೊತೆಗೆ ಹಿಮಾಲಯದ ಕಾಡುಮೇಡುಗಳ ವರ್ಣನೆ, ಜಾಗತಿಕ ಮಹಾಯುದ್ಧದ ಸಂದರ್ಭ ಪಾರಿವಾಳದ ಸಂದೇಶ ರವಾನೆಯ ಸಾಹಸ ವಿಚಾರಗಳು, ಹದ್ದು, ಕೆಂಬೂತ, ಗಿಡುಗನಂತಹ ಪಕ್ಷಿಗಳು, ಹುಲಿ, ಕಾಟಿಯಂತಹ ಕಾಡುಪ್ರಾಣಿಗಳ ಸೂಕ್ಷ್ಮ ವಿಚಾರಗಳು ಚಿತ್ರಿತವಾಗಿವೆ.

ಭಾರತದಲ್ಲಿ ಪ್ರಾಣಿಗಳ ಸಾಕಾಣಿಕೆಯ ಕಲೆ ಸಾವಿರ ವರ್ಷಗಳಷ್ಟು ಹಳೆಯದ್ದು. ಬೀಸಣಿಗೆ ಬಾಲ ಮತ್ತು ಉದ್ದ ಮೂತಿ ಎಂಬ ಎರಡು ಜಾತಿಗಳ ಪಾರಿವಾಳಗಳು ಹಕ್ಕಿಪ್ರಿಯರಿಗೆ ಭಾರತಮಾತೆಯೇ ನೀಡಿರುವ ಬಳುವಳಿಯಾಗಿವೆ. ರಾಜ ಮಹಾರಾಜರು, ರಾಣಿ ಮಹಾರಾಣಿ ಎಲ್ಲರೂ ತಮ್ಮ ಅಮೃತಶಿಲೆಯ ಮಹಲುಗಳಲ್ಲಿ ಶತಮಾನಗಳಿಂದಲೂ ಪಾರಿವಾಳಗಳನ್ನು ಪೋಷಿಸುತ್ತಾ ಬಂದಿದ್ದಾರೆ. ಅದೇ ರೀತಿ ಹಳ್ಳಿ ಜನರು ಕೂಡ ತಮ್ಮ ಅಕ್ಕರೆಯಿಂದ ಪಾರಿವಾಳಗಳನ್ನು ಸಾಕಿದ್ದಾರೆ. ಅಲ್ಲದೆ

ಎಲ್ಲೆಂದರಲ್ಲಿ ಪಾರಿವಾಳಗಳು ಕಂಡುಬರುತ್ತಿವೆ. ಇಂಥ ಚಾರಿತ್ರಿಕ ಹಿನ್ನೆಲೆ ಇರುವ ಪಾರಿವಾಳಗಳ ಸಂತತಿಯ ಅತಿ ವಿಶೇಷವಾದ ಪಾರಿವಾಳ ಈ 'ಚಿತ್ರಗ್ರೀವ'.

'ಚಿತ್ರಗ್ರೀವ' – ನೆಚ್ಚಿನ ಬಾಲಕ ಮತ್ತು ಪಾರಿವಾಳ ಇವರಿಬ್ಬರ ನಡುವೆ ಅನ್ಯೋನ್ಯ ಸಂಬಂಧದ ಮನಮುಟ್ಟುವ ಕಥೆ ಇಲ್ಲಿದೆ. ಇಲ್ಲಿ ಪಾರಿವಾಳವೇ ಕೇಂದ್ರಬಿಂದು. ಇಡೀ ಕಾದಂಬರಿಯನ್ನು ಆವರಿಸಿಕೊಳ್ಳುವ ಚಿತ್ರಗ್ರೀವ ಹುಟ್ಟಿನಿಂದ ಸಾಹಸ ಮೆರೆಯುವ ತನಕ ಓದುಗರಿಗೆ ಹತ್ತಿರವಾಗುತ್ತಾನೆ. ಮನುಷ್ಯನ ಭಾವನಾತ್ಮಕ ಬದುಕಿನೊಂದಿಗೆ ಇವನ ಜೀವನಚರಿತ್ರೆ ವಿಭಿನ್ನ ಮಾದರಿಯ ಮನಮೋಹಕ ದೃಶ್ಯಕಾವ್ಯವಾಗಿದೆ. 'ಚಿತ್ರಗ್ರೀವ' ಈ ಹೆಸರೇ ವಿಶಿಷ್ಟ. ಪಾರಿವಾಳದ ರೂಪಕ್ಕೆ ಹೊಂದಿಕೆಯಾದ ಹೆಸರು. 'ಚಿತ್ರ' ಎಂದರೆ ಬಣ್ಣಗಳಿಂದ ಕೂಡಿದ್ದು; 'ಗ್ರೀವ' ಎಂದರೆ ಕೊರಳು. ಬಣ್ಣಗಳಿಂದ ಕೂಡಿದ ಕೊರಳು ಚಿತ್ರಗ್ರೀವ. ಹೀಗೆ ಇವನು ಮಿರಮಿರ ಮಿಂಚುತ್ತಿದ್ದವನು. ಇಂಗ್ಲಿಷ್‌ನಲ್ಲಿ ಇದರ ಅನ್ವರ್ಥನಾಮ 'ಗೇ–ನೆಕ್'. ಕೆಲವು ಸಲ ಚಿತ್ರಗ್ರೀವನನ್ನು 'ಹೊಳೆವ ಕೊರಳವನು' ಎಂದು ಕರೆದದ್ದುಂಟು! ಹೀಗೆ ಭಿನ್ನವಾಗಿ ಕಾಣಿಸಿಕೊಳ್ಳುವ ಚಿತ್ರಗ್ರೀವನ ತಂದೆ 'ಪಲ್ಪಿ ಪ್ರವೀಣ'. ತಾಯಿ ದೂತ ಪರಂಪರೆಗೆ ಸೇರಿದ ಅತಿಸುಂದರಿ. ತಾಯಿಯಿಂದ ಚಾತುರ್ಯತೆಯನ್ನು, ತಂದೆಯಿಂದ ಚಾಕಚಕ್ಯತೆ ಮತ್ತು ಶೌರ್ಯವನ್ನು ಪರಂಪರಾನುಗತವಾಗಿ ಪಡೆದಿದ್ದ ಚಿತ್ರಗ್ರೀವನಿಗೆ ಹುಟ್ಟಿನಿಂದಲೇ ಒಳ್ಳೆಯ ಶಿಕ್ಷಣ ದೊರೆತಿದ್ದು ವಿಶೇಷ.

'ಚಿತ್ರಗ್ರೀವ' ಕೃತಿ ಮುಖ್ಯವಾಗಿ ಎರಡು ಭಾಗಗಳಾಗಿ ಕಂಡುಬರುತ್ತದೆ. ಮೊದಲನೇ ಭಾಗದಲ್ಲಿ ಚಿತ್ರಗ್ರೀವನ ಹುಟ್ಟು, ಬೆಳೆವಣಿಗೆ, ಹಾರಾಟದ ತರಬೇತಿ, ಆಕಾಶದ ಜೊತೆಗೆ ಅನ್ಯೋನ್ಯ ಸಂಬಂಧಗಳನ್ನು ಒಳಗೊಂಡಿದ್ದರೆ, ಎರಡನೇ ಭಾಗದಲ್ಲಿ ಚಿತ್ರಗ್ರೀವನು ಮೊದಲನೇ ಮಹಾಯುದ್ಧದಲ್ಲಿ ದೂತನಾಗಿ ತಾನು ಮಾಡಿದ ಸಾಹಸ ಸನ್ನಿವೇಶಗಳು ಇವೆ. ಜೊತೆಗೆ ಬೇಟೆಗಾರರಲ್ಲಿ ಅತ್ಯುತ್ತಮನಾಗಿದ್ದ ಘೋಂಡ್‌ನ ವ್ಯಕ್ತಿತ್ವದ ಅನಾವರಣ ಮತ್ತು ಸಾಹಸಮಯ ಸನ್ನಿವೇಶಗಳು ಕಾಡಿನ ಕಾಳಜಿಯೊಂದಿಗೆ ಕಂಡುಬರುತ್ತವೆ.

'ಹುಟ್ಟು' ಪ್ರತಿ ಜೀವಿಯ ವಿಶೇಷ ಸಂದರ್ಭ. ತಾಯಿಯ ಮಹತ್ವ ಹೆಚ್ಚಿರುವ ಇಂಥ ಘಳಿಗೆಯಲ್ಲಿ ಮಕ್ಕಳ ಸಂರಕ್ಷಣೆ ಮುಖ್ಯವಾಗುತ್ತದೆ. ಇದು ಪ್ರತಿ ತಾಯಂದಿರ ನಿಸರ್ಗದತ್ತ ಜವಾಬ್ದಾರಿ ಕೂಡ. ಜೀವಿತಾವಧಿಯ ಇಂಥ ಘಟನೆಗಳನ್ನು ಮನುಷ್ಯ ಸೇರಿದಂತೆ ಉಳಿದ ಜೀವಸಂಕುಲಗಳು ಕೂಡ ಅನುಭವಿಸುತ್ತವೆ. ಇದಕ್ಕೆ ಚಿತ್ರಗ್ರೀವನ ಹುಟ್ಟು ಹೊರತಾದುದಲ್ಲ. ಪಾರಿವಾಳಗಳಲ್ಲಿ ಮೊಟ್ಟೆಗೆ ಕಾವು ಕೊಡುವುದು ತಂದೆಯೇ ಆದರೂ ಮಗುವಿನ ಹುಟ್ಟಿನ ಸಮಯ ತಾಯಿಗೆ ಮಾತ್ರ ಗೊತ್ತಿರುತ್ತದೆ. ತಾನಿಟ್ಟ ಮೊಟ್ಟೆಯ ಒಳಗೆ ಎರಡು ಭಾಗಗಳು ಒಂದಾಗಿ ಬೆರೆತು ಪುಟ್ಟ ಮರಿಯಾಗಿದೆ ಎಂಬ ಸುದ್ದಿ ತಾಯಿಗೆ ಗೊತ್ತಾಗುವುದು ಮನುಷ್ಯನ ಅರಿವಿಗೆ ಮೀರಿದ್ದು. ಮೊಟ್ಟೆಯ ಮೇಲ್ಮೈಯ ಯಾವ ನಿರ್ದಿಷ್ಟ ಜಾಗವನ್ನು ಕುಕ್ಕಿದರೆ ಒಳಗಿರುವ ಮರಿಗೆ ಒಂದಿಷ್ಟೂ ನೋವಾಗದಂತೆ ಮೊಟ್ಟೆ ಒಡೆಯುವ ಕ್ರಿಯೆ ಒಂದು ಪವಾಡವೇ ಸರಿ.

ಈ ಜಗತ್ತು ಕಂಡ ಚಿತ್ರಗ್ರೀವನಿಗೆ ತನ್ನ ತಂದೆ ತಾಯಿಯ ಅನ್ಯೋನ್ಯತೆ ಬಹಳಷ್ಟು ಲಭಿಸಿತು. ಹುಟ್ಟಿದ ಎರಡನೇ ದಿನದಿಂದಲೇ ತಾನೇ ತಾನಾಗಿ ಕೊಕ್ಕನ್ನು ಬಿರಿಸಿದ್ದ; ತಂದೆ ತಾಯಿ ಬಂದರೆ ಹಸಿಮೈಯನ್ನು ಬಲೂನಿನಂತೆ ಉಬ್ಬಿಸುತ್ತಿದ್ದ. ಅವರು ಕೊಡುತ್ತಿದ್ದ ಆಹಾರ ತುಂಬಾ ಮೃದುವಾಗಿತ್ತು. ಯಾವುದೇ ಪಾರಿವಾಳವು ತನ್ನ ಮರಿಗೆ ಒಂದು ತಿಂಗಳು ವಯಸ್ಸಾದರೂ ಸಹ ಕಾಳನ್ನು ಬಾಯೊಳಗೆ ಇಟ್ಟುಕೊಂಡು ಮೃದು ಮಾಡದೇ ಮರಿಯ ಎಳೆ ಬಾಯಿಗೆ ಉಣಿಸುವದಿಲ್ಲ ಎಂಬ ಸೂಕ್ಷ್ಮ ಸಂಗತಿ ಇಲ್ಲಿದೆ.

ಚಿತ್ರಗ್ರೀವ ಕೇವಲ ಬದುಕಿಗಾಗಿ ಬದುಕಲಿಲ್ಲ. ಅವನಲ್ಲಿಯೂ ಸುಂದರ ಭಾವನೆಗಳಿದ್ದವು. ತಂದೆ-ತಾಯಿಯನ್ನು ಆಪ್ತವಾಗಿ ಪ್ರೀತಿಸುವ ಅವನಿಗೆ ಬೇರೇನೂ ಬೇಕಾಗಿರಲಿಲ್ಲ. ಒಮ್ಮೆ ಗಂಗಾ ನದಿಯ ತಟದಲ್ಲಿ ತರಬೇತಿಗೆಂದು ಹೋದಾಗ, ಅದು ಜೂನ್ ಮಾಸವಾದ್ದರಿಂದ ಮಾನ್ಸೂನಿನ ವಿಕೃತಿಗಳು ಆಗಾಗ್ಗೆ ಸಂಭವಿಸುತ್ತಿದ್ದವು. ಇವನ ತಂದೆ ಬಿರುಗಾಳಿಗೆ ತುತ್ತಾಗಿದ್ದ. ಕೆಲ ದಿನಗಳು ಇಡೀ ಮನೆಯು ದುಃಖದಲ್ಲಿ ಮುಳುಗಿತ್ತು. ಮಳೆ ಒಂದಿಷ್ಟು ಕಡಿಮೆಯಾಯಿತು ಅನ್ನಿಸಿದಾಗಲೆಲ್ಲ ಚಿತ್ರಗ್ರೀವ ಮನೆಯ ತಾರಸಿ ಮೇಲೆ ಹೋಗಿ ಆಕಾಶದಲ್ಲೆಲ್ಲ ತಂದೆಗಾಗಿ ಹುಡುಕುತ್ತಿದ್ದನು! ಆಕಾಶದಲ್ಲೆ ಎರಗಿದ ಗಿಡುಗನ ರೆಕ್ಕೆಗಳೋ ಕಟುಕನ ಕತ್ತಿಯಂತಿದ್ದವು. ಇವುಗಳಿಂದ ತನ್ನ ಮಗನನ್ನು ಪಾರುಮಾಡಲು ಚಿತ್ರಗ್ರೀವನ ತಾಯಿ ಇದ್ದಕ್ಕಿದ್ದಂತೆ ಹಾರಾಟ ನಿಲ್ಲಿಸಿ ತಾನೇ ಗಿಡುಗಗಳ ದಿಕ್ಕಿನಲ್ಲಿ ಹಾರಿದಳು. ಜೀವ ಕಳೆದುಕೊಂಡಳು. ಆದರೆ ಚಿತ್ರಗ್ರೀವ ಅನಾಥನಾಗಲಿಲ್ಲ. ಇವನಿಗೆ ಆಶ್ರಯ ನೀಡಿದ್ದು ನೆಚ್ಚಿನ ಬಾಲಕ(ಲೇಖಕ) ಮತ್ತು ಘೋಂಡ್. ಇವರಿಬ್ಬರ ಸಹವಾಸ ಚಿತ್ರಗ್ರೀವನ ಬದುಕು ಸಾಹಸಮಯವಾಗುವಂತೆ ಮಾಡಿತು.

ಕೃತಿಯ ಎರಡನೇ ಭಾಗದಲ್ಲಿ ಚಿತ್ರಗ್ರೀವ ಮತ್ತು ಘೋಂಡ್‌ನ ಸಾಹಸಮಯ ಸನ್ನಿವೇಶಗಳ ಹೂರಣವಿದೆ. ಮಿತ್ರ ರಾಡ್ಜಾ ಮತ್ತು ಕಾಡಿನ ಗುರು ಹಿರಿಯ ಘೋಂಡ್ ಇಬ್ಬರೂ ಲೇಖಕನ ಮನೆಗೆ ಬಂದಾಗಲೇ ಚಿತ್ರಗ್ರೀವನ ಬದುಕು ಬದಲಾಯಿತು. ಮೊದಲನೇ ಮಹಾಯುದ್ಧದ ಸಂದರ್ಭದಲ್ಲಿ ಬೇಕಾಗಿದ್ದ ಸಂದೇಶ ರವಾನೆಗಾಗಿ ಚಿತ್ರಗ್ರೀವ ಮತ್ತು ಕಾಡಿನ ದೇಸೀತಜ್ಞ ಘೋಂಡ್ ಈ ದೇಶ ಸೇವೆಗೆ ಆವಶ್ಯಕವೆನಿಸಿದ್ದರಿಂದ ಇವರ ಮುಂದಿನ ಬದುಕು ಕಠಿಣವಾಗಿತ್ತು. ದುರ್ಗಮ ಕಾಡನ್ನು ಭೇದಿಸುವ ಘೋಂಡ್ ಮತ್ತು ಆಕಾಶದಲ್ಲಿ ಕೃತಕ ಪಕ್ಷಿಗಳನ್ನು, ಯುದ್ಧ ವಿಮಾನಗಳನ್ನು ಎದುರಿಸಿ ಯಶಸ್ವಿಯಾಗುವ ಚಿತ್ರಗ್ರೀವ ಮೊದಲನೇ ಮಹಾಯುದ್ಧದಲ್ಲಿ ದೇಶಕ್ಕೋಸ್ಕರ ಸೇವೆಸಲ್ಲಿಸಿ, ಬಹುದೊಡ್ಡ ಕಾಣಿಕೆಯಾಗಿ ಹೊರಹೊಮ್ಮುತ್ತಾರೆ.

ಚಿತ್ರಗ್ರೀವನ ಸಾಹಸಗಳು

ಚಿತ್ರಗ್ರೀವನ ಸಾಹಸಗಳು ಭೂಮಿಯಿಂದ ಅಂತರವನ್ನು ಕಾಪಾಡಿಕೊಂಡಿವೆ. ಆದರೆ ಇಂಥ ಸಾಹಸದ ಹಿಂದಿರುವ ಧೈರ್ಯ ಪ್ರತಿಯೊಬ್ಬರಿಗೂ ಬೇಕು. ತಂದೆಯಿಂದ ಚಾಕಚಕ್ಯತೆ ಮತ್ತು ಶೌರ್ಯವನ್ನು, ತಾಯಿಯಿಂದ ಚಾತುರ್ಯತೆಯನ್ನು ಹುಟ್ಟಿನಿಂದಲೇ

ಪಡೆದುಕೊಂಡು ಬಂದ ಚಿತ್ರಗ್ರೀವನಿಗೆ ಸೋಲೆಂಬುದೇ ಇಲ್ಲ. ತನ್ನ ಆಶ್ರಯದಾತನ ನಿಖರ ತರಬೇತಿಯು ಇವನ ಸಾಹಸಮಯ ದಿನಗಳನ್ನು ಯಶಸ್ವಿಗೊಳಿಸಿದೆ. ಇವನು ತರಬೇತಿ ಸಮಯದಲ್ಲಿ ಎದುರಿಸಿದ ಕಷ್ಟದ ಕ್ಷಣಗಳು, ಮುಂದೆ ಯುದ್ಧದ ಸಂದರ್ಭದಲ್ಲಿ ಪಕ್ವತೆಯನ್ನು ಬೆಳೆಸಿಕೊಳ್ಳಲು ಸಹಾಯವಾಯಿತು. ಆಕಾಶದಲ್ಲಿ ಎದುರಾದ ಎಷ್ಟೋ ಹದ್ದುಗಳನ್ನು ಕಣ್ತಪ್ಪಿಸಿ ತಾನು ಪಾರಾದ ಸಂದರ್ಭಗಳಿವೆ. ತಾನು ದೂತನಾಗುವ ಪೂರ್ವದಲ್ಲಿ ಯುದ್ಧಕ್ಕೆಂದು ತರಬೇತಿಯಲ್ಲಿದ್ದಾಗ ತನ್ನನ್ನು ನೆಪೋಲಿಯನ್ ಎಂದುಕೊಂಡಿದ್ದ! ಇವನ ಸಾಮರ್ಥ್ಯಕ್ಕೆ ಸಾಕ್ಷಿ ಯಾವುದೆಂದರೆ, ಇವನ ದಿಟ್ಟತನದ ಚಾಕಚಕ್ಯತೆಯಿಂದ ದೊಡ್ಡ ಪಕ್ಷಿಸೇನೆಯ ನಾಯಕತ್ವವನ್ನು ವಹಿಸಿಕೊಂಡು ನಿಭಾಯಿಸಿದ ರೀತಿಯು 'ತ್ಯಾಗಕ್ಕೆ ಇನ್ನೊಂದು ಹೆಸರೇ ನಾಯಕತ್ವ' – ಎಂಬ ತಾತ್ತ್ವಿಕ ಹಿನ್ನೆಲೆಯಿಂದ ಕೂಡಿತ್ತು ಎಂಬುದೇ ವಿಶೇಷ.

ಯುದ್ಧಭೂಮಿಗೆ ಘೋಂಡ್ ಜೊತೆ ತೆರಳಿದ ಚಿತ್ರಗ್ರೀವ ದೂತನಾಗಿ ಯಶಸ್ವಿಯಾದ ಪರಿ ಮೈನವಿರೇಳಿಸುವಂತಹುದು. ಯಾವ ಗುಂಡಿನ ಶಬ್ದವಾಗಲಿ, ಫಿರಂಗಿಯ ಸ್ಫೋಟವಾಗಲಿ ಇವನು ಮನೆಗೆ ಹಿಂತಿರುಗಿ ಬರುವುದನ್ನು ತಡೆಯಲು ಸಮರ್ಥವಾಗಿರಲಿಲ್ಲ. ಮುಖ್ಯ ಕಛೇರಿ ಮತ್ತು ಯುದ್ಧಭೂಮಿ ನಡುವೆ ಅನೇಕ ಸಲ ಸಂದೇಶಗಳನ್ನು ಚಿತ್ರಗ್ರೀವ ಒಯ್ದಿದ್ದನು. ಮುಖ್ಯ ಸೇನಾಪತಿಯ ಜೊತೆಗೆ ಚೆನ್ನಾಗಿ ಹೊಂದಿಕೊಂಡಿದ್ದನು. ಯುದ್ಧದ ಸಂದರ್ಭದಲ್ಲಿ ಕಲ್ಕತ್ತಾದ ಎಷ್ಟೋ ಜನ ಸೈನಿಕರ ಜವಾಬ್ದಾರಿ ಹೊತ್ತಿದ್ದ ರಾಸೆಲ್ದಾರ್‌ನು ಚಿತ್ರಗ್ರೀವನ ಜವಾಬ್ದಾರಿಯನ್ನು ಹೊತ್ತಿದ್ದನು. ರಾಸೆಲ್ದಾರ್ ಜೊತೆಗೆ ರಾತ್ರಿಯಿಡೀ ಪ್ರಯಾಣ ಮಾಡಿದ ಚಿತ್ರಗ್ರೀವನಿಗೆ ಪಂಜರದಿಂದ ಹೊರ ಬಂದಾಗ ವಿಧವಿಧವಾದ ಸ್ಫೋಟಗಳ ಶಬ್ದಗಳು. ಯಾಂತ್ರಿಕ ಹದ್ದುಗಳ ಘೀಳಾಟ, ಲೋಹ ನಾಯಿಗಳ ಬೆಂಕಿ, ಕತ್ತೆಕಿರುಬನ ಕಿರುಚಾಟ ಇಂತಹವುಗಳ ಮಧ್ಯೆ ಗಾಯಗೊಂಡ ರಾಸೆಲ್ದಾರ್ ಒಂದು ಚೀಟಿಯನ್ನು ಕಾಲಿಗೆ ಕಟ್ಟಿ ಹಾರಿಬಿಟ್ಟಾಗ, ರೆಕ್ಕೆ ಮರುಗಟ್ಟಿದರೂ ಚಿತ್ರಗ್ರೀವ ಹಾರುವುದನ್ನು ಬಿಡಲಿಲ್ಲ. ಬೆಂಕಿಯ ಪದರ, ಸುಂಟರಗಾಳಿ, ಹದ್ದುಗಳ ಕಾದಾಟದಿಂದ ಜಾಸ್ತಿಯಾಗುತ್ತಿದ್ದ ಬೆಂಕಿ ಮಳೆ ಇವುಗಳನ್ನೆಲ್ಲಾ ಎದುರಿಸಿ, ಆನೆಗೆ ಹೆದರಿ ಕಾಡಿನಲ್ಲಿ ಓಡುವ ಮನುಷ್ಯರ ಹಾಗೆ ಅತ್ತಿಂದಿತ್ತ ಇತ್ತಿಂದತ್ತ ಹಾರಾಡಿ ಘೋಂಡ್‌ನನ್ನು ತಲುಪಿ ಸಾಹಸ ಮೆರೆದ.

ರಾಸೆಲ್ದಾರ್ ಗುಣಮುಖ ಆದಮೇಲೆ ಮತ್ತೆ ಸಂದೇಶ ರವಾನೆಗಾಗಿ ಚಿತ್ರಗ್ರೀವನನ್ನು ಸಿದ್ಧಪಡಿಸಿದನು. ಎಲ್ಲರೂ ಸುರಕ್ಷತೆಯ ತಾಣ ತಲುಪಿದರು. ಅದು ಹಳ್ಳಿಯಾಗಿತ್ತು. ಅಲ್ಲಿ ಸಾವಿನ ಕೆಂಪುನಾಲಗೆ ಆ ಊರಿನ ಪ್ರತಿಯೊಂದು ತಾರಸಿ, ಗೋಡೆ, ಮರಗಳನ್ನು ನೆಕ್ಕುತ್ತಿತ್ತು. ಆದರೂ ಚಿತ್ರಗ್ರೀವ ಧೈರ್ಯ ಮಾಡಿದ. ಈ ಬಾರಿ ಸಂದೇಶ ಹೊತ್ತ ಚಿತ್ರಗ್ರೀವನಿಗೆ ಮೇಲೆ ಹಾರುತ್ತಿರುವಾಗ ಕಣ್ಣು ಹಾಳುಮಾಡುವ ಹೊಗೆಯಲ್ಲಿ ಸಿಲುಕಿದರೂ ಧೈರ್ಯ ಮಾಡಿದ. ಕಣ್ಣಿನ ಪದರವು ಕಣ್ಣನ್ನು ಕಾಪಾಡುತ್ತಿತ್ತು. ವಿಷಪೂರಿತ ಹೊಗೆಯಿಂದ ಮೇಲೇರಿದ. ಅಷ್ಟರಲ್ಲಿ ಒಂದು ಲೋಹದ ಹದ್ದು ಎದುರಾಯಿತು. ಅದು ಉಗುಳುವ

ಬೆಂಕಿಯನ್ನು ಎದುರಿಸಿ ಪಾರಾದನು. ತಲುಪಬೇಕಾದ ಸಂದೇಶ ಸೇನಾಪತಿಗೆ ತಲುಪಿತು.

ಅದು ಚಳಿಗಾಲದ ಸಂದರ್ಭ. ಚಿತ್ರಗ್ರೀವ ಗಾಳಿಯಲ್ಲಿ ಸುತ್ತುಹಾಕಿ ಮೇಲೇರಿದಾಗ ಜರ್ಮನಿಯ ಸೈನಿಕರು ಇವನ ಬಗ್ಗೆ ಅನುಮಾನದಿಂದ ನೋಡಲಾರಂಭಿಸಿದರು. ಇವನು ಪಶ್ಚಿಮ ದಿಕ್ಕಿನಲ್ಲಿ ಹೊರಟ ಕ್ಷಣ, ಅವರಿಗೆ ಇವನು ನಮ್ಮ ದೂತನಲ್ಲ ಎಂದು ತಿಳಿದು ಹೊಡೆದುರುಳಿಸಲು ಗುಂಡು ಹಾರಿಸಿದರು. ಗುಂಡುಗಳ ಗೋಡೆಯೇ ಇವನ ಮುಂದೆ ನಿಂತಿತು. ಇದನ್ನು ಭೇದಿಸಿಕೊಂಡು ಹೋಗುವುದೊಂದೇ ಪರಿಹಾರ. ಇಲ್ಲವೆಂದರೆ ಬರುತ್ತಿರುವ ವಿಮಾನಗಳಿಂದ ಸಾವನ್ನಪ್ಪಬೇಕು. ಜೊತೆಗೆ ಕಂದಕಗಳಲ್ಲಿ, ಮರಗಳಲ್ಲಿ ಅಡಗಿದ್ದು ಸೈನಿಕರೆಲ್ಲ ಗುರಿ ಇಟ್ಟು ಗುಂಡು ಹಾರಿಸುತ್ತಿದ್ದರು. ಇಂಥ ಸನ್ನಿವೇಶಗಳಿಂದ ತಪ್ಪಿಸಿಕೊಳ್ಳಲು ನೇರವಾಗಿ ಹಾರದೆ ಅತ್ತಿತ್ತ ಹಾರಾಡಿದ, ಸುತ್ತಿದ, ಪಲ್ಟಿ ಹೊಡೆದ. ಬಿರುಸಾಗಿ ಬಿರುಗಾಳಿಯಂತೆ ಹಾರಿದ. ಆದರೂ ಒಂದು ಗುಂಡು ತಾಗಿಯೇ ಬಿಟ್ಟಿತು. ತೊಡೆಗೆ, ಬಲರೆಕ್ಕೆಗೆ ಪೆಟ್ಟಾದರೂ ಸ್ವಸ್ಥಾನಕ್ಕೆ ಮರಳಿ ಯಶಸ್ವಿಯಾದ. ಇಡೀ ಭಾರತೀಯ ಸೇನೆ ಮತ್ತು ಪಾರಿವಾಳಗಳ ವಂಶವೇ ಹೆಮ್ಮೆಪಡುವಂತಹ ಚಿತ್ರಗ್ರೀವನಾದ.

ಘೋಂಡ್ ಎಂಬ ಕಾಡಿನ ಜ್ಞಾನಿಯೂ ಸಾಹಸಿಯೂ

ಚಿತ್ರಗ್ರೀವನಷ್ಟೇ ಕುತೂಹಲ ಕೆರಳಿಸಿ ಆಸಕ್ತಿ ಉಳಿಸುವ ಇನ್ನೊಂದು ಪಾತ್ರ ಘೋಂಡ್. ಕಾಡಿನ ಬಗ್ಗೆ, ಕಾಡುಪ್ರಾಣಿಗಳ ಬಗ್ಗೆ ಜ್ಞಾನವಿರುವ ಜ್ಞಾನಿ. ಬೇಟೆಗಾರರಲ್ಲೇ ಅತ್ಯುತ್ತಮನೆನಿಸಿದವನು. ನಗರದಿಂದ ವಿಮುಖನಾಗುವ ಇವನಿಗೆ ಹುಲಿಯನ್ನು ಕಂಡರೆ ಭಯವಾಗದು. ಆದರೆ, ನಗರದ ಧೂಳು ಅಂಟಿದ ಕಾಲನ್ನು ತೊಳೆದುಕೊಳ್ಳದಿದ್ದರೆ ನಾನೊಬ್ಬ ಹೇಡಿಯಾಗಿ ಬಿಡುತ್ತೇನೆ ಎಂಬ ಭಾವ ಇವನದ್ದು. ನಿಶ್ಯಬ್ದತೆ ಎಂಬ ಉಡುಗೆ ತೊಡುವ ಕಾಡಿಗೆ ಹೋಗಲು ಇಷ್ಟಪಡುವ ಇವನಿಗೆ, ಆಕಾಶವು ಕರೆಂಟು ಕಂಬ ಮತ್ತು ವೈಯರ್‌ಗಳಿಂದ ಹರಿದು ಛಿದ್ರ ಛಿದ್ರವಾಗಿದೆ ಎಂಬಂತೆ ಕಾಣುತ್ತದೆ. ಫ್ಯಾಕ್ಟರಿಯ ಸೈರನ್ನಿನ ಬದಲಿಗೆ ಹಕ್ಕಿಗಳ ಹಾಡನ್ನು ಕೇಳಲು, ಕಳ್ಳಕಾಕರನ್ನು ಹಿಡಿದ ಪೇದೆಗಳ ಬದಲಿಗೆ ಮುಗ್ಧ ಹುಲಿ ಚಿರತೆಗಳನ್ನು ಎದುರಿಸಲು ಇಷ್ಟಪಡುವ ವ್ಯಕ್ತಿ ಇವನು. ಫ್ರೆಂಚ್ ಆಗಲಿ, ಜರ್ಮನ್ ಆಗಲಿ ಅರಿಯದ ಘೋಂಡ್‌ನಿಗೆ 'ಎಸ್', 'ನೋ', 'ವೆರಿವೆಲ್' ಎಂಬ ಮೂರು ಪದಗಳ ಇಂಗ್ಲಿಷ್ ಮಾತ್ರ ಬಲ್ಲ.

ಹೆಜ್‌ಬ್ರೌಕ್‌ನ ಕಾಡಿನಲ್ಲಿ ಘೋಂಡ್ ಮತ್ತು ಚಿತ್ರಗ್ರೀವನ ಕೆಲಸ ಬಹಳ ಕಷ್ಟಕರವಾಗಿತ್ತು. ಇವರದ್ದು ಭೂಗತವಾದ ಹಾಗೂ ಬೃಹತ್ತಾದ ಶಸ್ತ್ರಾಗಾರವನ್ನು ಪತ್ತೆಹಚ್ಚುವುದಾಗಿತ್ತು. ಸಾವಿನಷ್ಟೂ ತಣ್ಣಗಿರುವ ಗಾಢರಾತ್ರಿಯಲ್ಲೂ ಘೋಂಡ್ ಯಾವುದೇ ಮನುಷ್ಯನಿಗಿಂತ ಚೆನ್ನಾಗಿ ಕತ್ತಲನ್ನೂ ನೋಡಬಲ್ಲವನಾಗಿದ್ದು, ಯಾವುದೇ ಪ್ರಾಣಿಗಳಿಗಿಂತ ಚುರುಕಾಗಿ ವಾಸನೆ ಕಂಡುಹಿಡಿಯಬಲ್ಲವನಾಗಿದ್ದ. ಮರಗಳ, ಕಾಂಡಗಳ ನಡುವೆ ಹಾದಿ ಮಾಡಿಕೊಂಡು ಹೋಗುತ್ತಿದ್ದ ಜರ್ಮನ್ನರ ಒಂದು ಗುಂಪು ಇತ್ತಕಡೆ

ಬರುತ್ತಿದೆ ಎಂದು ಕೆಲ ನಿಮಿಷಗಳ ಮುಂಚೆಯೆ ಅವನ ಮೂಗಿಗೆ ತಿಳಿಯಿತು. ಇಂಥ ಆಘ್ರಾಣ ಶಕ್ತಿ ಹೊಂದಿರುವ ಫೋಂಡ್‌ನಿಗೆ ಅಪರಿಚಿತ ನಾಯಿಯೊಂದು ಗೆಳೆತನ ಬೆಳೆಸಿದ್ದು ಸೋಜಿಗ ತರುವ ಸಂಗತಿ. 'ಫೋಂಡ್ ತನ್ನೆದುರಿನ ಗಾಳಿಯನ್ನು ಮೂಸಿದ. ಆ ನಾಯಿಯು ಸುತ್ತ ಯಾವುದೇ ಮನುಷ್ಯನ ಸ್ಪರ್ಶದ ವಾಸನೆ ಇಲ್ಲ ಎಂದು ಅವನಿಗೆ ತಿಳಿಯಿತು. (ಪು. ೧೦೭) ನಾಯಿ ಅವನ ಕೈ ನೆಕ್ಕತೊಡಗಿತು. ಖುಷಿಯಿಂದ ಕುಂಯ್ ಕುಂಯ್ ಅನ್ನತೊಡಗಿತು. ಫೋಂಡ್ ತನಗೆ ತಾನೆ ಹೇಳಿಕೊಂಡ; ಅಂದರೆ ಆ ಬೇಟೆ ನಾಯಿಗೆ ಯಾರೂ ಒಡೆಯರಿಲ್ಲ. ಬಹುಶಃ ಒಡೆಯ ಸತ್ತು ಹೋಗಿದ್ದಾನೆ. ಪಾಪ, ಪ್ರಾಣಿ ತೋಳದಷ್ಟು ಕಾಡುಪ್ರಾಣಿಯಾಗಿ ಬಿಟ್ಟಿದೆ. ಜರ್ಮನ್ ಸೇನೆಯವರು ಬಿಸಾಡುವ ಊಟ ತಿಂದುಕೊಂಡಿದೆ. ನನ್ನ ಕೈ ಕಚ್ಚಲಿಲ್ಲ ಅಂದ ಮೇಲೆ ಇದು ಮನುಷ್ಯರ ಮಾಂಸವನ್ನು ಎಂದೂ ತಿಂದಿಲ್ಲ. ಒಳ್ಳೆಯದೇ ಆಯಿತು. (ಪು.೧೦೮)–ಇಂಥ ಸನ್ನಿವೇಶಗಳು ಒಬ್ಬ ಕಾಡುಜ್ಞಾನಿಯ ಧೈರ್ಯದ ಕ್ಷಣಗಳನ್ನು ಪರಿಚಯಿಸುತ್ತದೆ. ಫೋಂಡ್ ಕಾಡಿನ ಜ್ಞಾನದ ಜೊತೆಗೆ, ನಕ್ಷತ್ರಗಳ ಸ್ಥಾನಕಂಡು ಈಗ ತಾನೆಲ್ಲಿರುವೆನು ಎಂದು ಅವನು ಹೇಳಬಲ್ಲವನಾಗಿದ್ದ!

ಜಿಂಕೆಯಂತೆ ಜಿಗಿಯುವ, ಇಣಚಿಯಂತೆ ಮರ ಏರುವ, ಅರ್ಧಗಂಟೆಗೊಮ್ಮೆ ವಿಚಿತ್ರ ನಾಯಿಗಳ ಮಿತ್ರತ್ವ ಮಾಡಿಕೊಳ್ಳುವ ಫೋಂಡ್‌ನಿಗೆ ನಾನೀಗ ಭಯ ಮತ್ತು ದ್ವೇಷಗಳಿಂದ ಮುಕ್ತನಾಗಬೇಕೆಂದೆ ಎನಿಸಿದ್ದು ನಿಜ. ಮನುಷ್ಯರೇ ಮನುಷ್ಯರನ್ನು ಕೊಲ್ಲುವ ಬರ್ಬರತೆಯನ್ನು ತುಂಬಾ ನೋಡಿದೆ. ಭಯವೆಂಬ ರೋಗಕ್ಕೆ ತುತ್ತಾದೆ ಎಂಬ ಕಾರಣದಿಂದ ನಾನೀಗ ಒಬ್ಬನೇ ಪ್ರಕೃತಿ ಮಡಿಲಿಗೆ ಹೋಗಿ ರೋಗ ವಿಮುಕ್ತನಾಗಬೇಕು (ಪು.೧೧೭) ಎಂಬ ದಿಟ್ಟ ನಿರ್ಧಾರದೊಂದಿಗೆ ಪುನಃ ಕಾಡಿಗೆ ಮರಳುತ್ತಾನೆ. ಧ್ಯಾನ ಮಾಡಿ ಹೆದರಿಕೆಯನ್ನು ನಿವಾರಿಸಿಕೊಂಡ ಫೋಂಡ್‌ನು ಊರಿಗೆ ಉಪಟಳವಾಗಿದ್ದ ಕಾಡುಕೋಣವನ್ನು ಸೆರೆ ಹಿಡಿದಿದ್ದು ಬಲು ಸಾಹಸಮಯ ಕೆಲಸವಾಗಿತ್ತು. ಇಂಥ ಯಶಸ್ಸಿನ ಹಿಂದೆ ಇವನ ಶಕ್ತಿಯೊಂದೇ ಕೆಲಸ ಮಾಡಲಿಲ್ಲ. ಇಲ್ಲಿ 'ಯುಕ್ತಿ' ಪ್ರಧಾನವಾಯಿತು. ಕಾಡುಕೋಣದ ಚಲನವಲನ ಗಮನಿಸಿದ ಫೋಂಡ್ ಹೀಗೆ ಹೇಳುತ್ತಾನೆ; ಅವನಿಗೆ ಪ್ರಾಣಭಯ ಉಂಟಾಗಿರಬೇಕು. ನೋಡು, ಎಷ್ಟು ಭಾರವಾಗಿ ಹೆಜ್ಜೆ ಊರಿದ್ದಾನೆ. ಪ್ರಾಣಿಗಳು ತಮ್ಮ ಸಾಮಾನ್ಯ ಸ್ಥಿತಿಯಲ್ಲಿ, ಯಾವುದೇ ಹೆದರಿಕೆಗೆ ಒಳಗಾಗಿಲ್ಲದಾಗ ನಡೆದರೆ ಹೆಜ್ಜೆ ಗುರುತೇ ಬೀಳುವುದಿಲ್ಲ. ಆದರೆ ಹೆದರಿದಾಗ, ಆ ಭಯದ ಭಾರಕ್ಕೆ ಅವರ ಶರೀರಗಳೇ ಜಗ್ಗಿ ಹೋಗುತ್ತವೆ. ಇವನ ಗೊರಸುಗಳು ನೋಡು, ಹೋದಲ್ಲೆಲ್ಲಾ ಭಾರೀ ಗುರುತುಗಳನ್ನೇ ಮಾಡಿಬಿಟ್ಟಿದೆ. ಅಂದರೆ ಅದೆಷ್ಟು ಹೆದರಿದ್ದಾನು! (ಪು.೧೨೮)– ಹೀಗೆ ಅಪಾರ ಜ್ಞಾನಶಕ್ತಿ ಹೊಂದಿರುವ ಫೋಂಡ್ ತನ್ನ ಮೈವಾಸನೆ ಕಾಡುಕೋಣನಿಗೆ ಸಿಗದಷ್ಟು ದೂರ ಸಾಗಿದ್ದ. ಆದರೆ ಕಾಡುಕೋಣ ಎಲ್ಲಿದೆ ಎಂದು ವಾಸನೆ ಮಾತ್ರದಿಂದ ಅವನಿಗೆ ಗೊತ್ತಾಗುತ್ತಿತ್ತು. ಇಂಥ ಉಪಾಯದ

ಹಿನ್ನೆಲೆಯಲ್ಲಿ ಕಾಡುಕೋಣವನ್ನು ಹಿಡಿದಿದ್ದು ಘೋಂಡ್‌ನ ಸಾಹಸಮಯ ವ್ಯಕ್ತಿತ್ವವನ್ನು ಅನಾವರಣ ಮಾಡಿದೆ.

ಬದುಕಿನ ಭಾವನೆ ಬದಲಾಗಲು...

'ಚಿತ್ರಗ್ರೀವ' ಕೃತಿಯಲ್ಲಿ ಕೇವಲ ಸಾಹಸಮಯ ಸನ್ನಿವೇಶಗಳು ಸೃಷ್ಟಿಯಾಗಿಲ್ಲ. ಬದುಕಿನ ಭಾವನೆಗಳಿಗೆ ಬೇಕಾಗಿರುವ ಅಂಶಗಳನ್ನೂ ಒಳಗೊಂಡಿದೆ. ಹೊಸ ತರಹದ ಅನುಭವಗಳ ಅವಕಾಶಗಳು ಓದಿನಿಂದ ಲಭ್ಯವಾಗುವುದಾದರೆ, ಈ ಕೃತಿ ಅದಕ್ಕೆ ನ್ಯಾಯವನ್ನು ಒದಗಿಸುತ್ತದೆ. ಪಾರಿವಾಳಗಳ ಮೂಲಕ ಹೇಳಲು ಹೊರಟಿರುವ ಬದುಕಿನ ಸೂತ್ರಗಳು ಸಂದರ್ಭಕ್ಕೆ ತಕ್ಕಂತೆ ಇವೆ ಎಂಬುದರ ಔಚಿತ್ಯವನ್ನು ಈ ಕೃತಿಯಲ್ಲಿ ಗುರುತಿಸಬಹುದು. ತಂದೆ-ತಾಯಿಯ ಗುಟುಕು ಒಂದು ಪುಟ್ಟ ಮರಿಯ ಬದುಕನ್ನು ಭಾವನಾತ್ಮಕವಾಗಿ ಪರಿಚಯಿಸುವುದಾದರೆ, ಅದು ಮನುಷ್ಯ ಲೋಕಕ್ಕೆ ಹಿರಿದಾಗುತ್ತದೆ. ಭಾವನೆಯ ಬದುಕೆಂದರೆ ಅದು ಕಪ್ಪು-ಬಿಳುಪಿನ ಛಾಯೆ ಮಾತ್ರ ಅಲ್ಲ, ಅಲ್ಲಿ ಹಲವು ಬಣ್ಣಗಳ ಕಾಕತಾಳೀಯ ಅಂಶಗಳು ಗೋಚರಿಸಿದಾಗಲೇ ಕಷ್ಟಸುಖಗಳ ತುಲನಾತ್ಮಕ ಅಭಿಪ್ರಾಯಗಳು ಬದುಕಿನ ಸುತ್ತ ಆವರಿಸಿಕೊಂಡು ಬಿಡುತ್ತವೆ. ಈ ಹಿನ್ನೆಲೆಯಲ್ಲಿ ಈ ಜಗದ ಯಾರ ಬದುಕು ಕೂಡ ಸುಖವಾಗಿ ಅಂತ್ಯವಾಗುವುದಿಲ್ಲ. ಬದುಕಿದ್ದ ಸಮಾಜದಲ್ಲಿ ಯಾವೆಲ್ಲ ಅವತಾರಗಳನ್ನು ತಾಳುತ್ತೇವೆಯೋ ಅಂತಹ ಅವತಾರಗಳು ಆಯಾ ಸನ್ನಿವೇಶಕ್ಕಷ್ಟೇ ಸೀಮಿತ. ಅದರಾಚೆ ನಮ್ಮ ನಿಜವಾದ ಮುಖ ಗೊತ್ತಾಗಲೇಬೇಕು.

ಈ ಕೃತಿಯಲ್ಲಿ ಬುದ್ಧನ ತತ್ತ್ವಗಳು ವ್ಯಕ್ತವಾಗಿರುವುದು ವಿಶೇಷ. ಲಾಮಾಗಳು ಬದುಕಿನ ಅಂತರಂಗಕ್ಕೊಂದು ಸಾಂತ್ವನ ಹೇಳುವಾಗ, ಮನಸ್ಸಿನ ಅಂತರ್ಗತ ಭಾವಕೋಶವೊಂದು 'ಹೌದು' ಎನ್ನುವಷ್ಟು ಬೆಳೆದಿರುತ್ತದೆ. 'ನಿನ್ನ ಮನಸ್ಸು ಶಾಂತವಾದರೆ ಆ ಶಾಂತವಾದ ಆಲೋಚನೆಗಳು ನಿನಗೆ ಸಹಾಯ ಮಾಡುತ್ತವೆ. ನೀನು ಶಾಂತನಾದರೆ ಆ ಶಾಂತಿ ಅವನನ್ನು ಶಾಂತನನ್ನಾಗಿಸುತ್ತದೆ. ಅವನು ಶಾಂತನಾದರೆ ಅವನ ಮನಸ್ಸು ಸರಿಯಾಗಿ ಕೆಲಸ ಮಾಡುವಂತಾಗುತ್ತದೆ.' (ಪು. ೭೦) ಈ ಮಾತುಗಳು ಪ್ರತಿಯೊಬ್ಬ ಮನುಷ್ಯನ ಅಂತರಂಗದ ಜೀವನಸ್ಪರ್ಶ ವರ್ತನೆಯ ಸ್ವರೂಪದಂತೆ ಕಂಡುಬರುತ್ತವೆ. ಹೊಸತನದ ತುಡಿತವಿರುವ, ಬದುಕಿನ ಜಂಜಾಟದ ಯಕ್ಷಪ್ರಶ್ನೆಗೆ 'ಶಾಂತ ಸ್ವಭಾವ' ಉತ್ತಮ ಪ್ರತಿಕ್ರಿಯೆ ಎಂಬ ಅಭಿಪ್ರಾಯ ಇಲ್ಲಿದೆ.

ಶಾಂತ ಸ್ವಭಾವವು ಮನುಷ್ಯನ ಮನಸ್ಸನ್ನು ಉನ್ನತೀಕರಿಸಿದರೆ, ಭಯ ಅವನನ್ನು ನಾಶ ಮಾಡುತ್ತದೆ. ಆದ್ದರಿಂದಲೇ ಭಯಕ್ಕೆ ಒಳಗಾಗದೆ ಧೈರ್ಯದಿಂದ ಮುಂದುವರಿಯಬೇಕು. ಇದಕ್ಕೆ ಸಂಬಂಧಿಸಿದಂತೆ, ಕಾಡುಪ್ರಾಣಿಗಳ ತತ್ತ್ವವೊಂದು ಈ ಕೃತಿಯಲ್ಲಿ ಪ್ರತಿಪಾದಿತವಾಗಿದೆ: 'ಯಾವ ಕ್ರೂರ ಮೃಗವೂ ತನ್ನ ಬೇಟೆಯನ್ನು ಭಯಕ್ಕೆ ಒಳಪಡಿಸದೆ ಕೊಲ್ಲಲಾಗದು. ಯಾವ ಪ್ರಾಣಿಯೂ ತನ್ನ ಆಕ್ರಮಣಕಾರನ

ಹೆದರಿಕೆಗೆ ಒಳಗಾಗದ ಹೊರತು ತಾನು ಪ್ರಾಣ ನೀಗುವುದಿಲ್ಲ. ಚೊಕ್ಕದಾಗಿ ಹೇಳಬೇಕೆಂದರೆ, ಶತ್ರುವಿಗಿಂತ ಮುಂಚೆ ಬೇಟೆಯನ್ನು ಭಯವೇ ನಾಶ ಮಾಡಿರುತ್ತದೆ.' (ಪು.೯೧) ಘೋಂಡ್‌ನ ಪತ್ರವೊಂದು ಮೇಲಿನ ಅಂಶವನ್ನು ಮೀರಿದ ಬೆಳೆವಣಿಗೆಯಾಗಿದೆ. ಇದು ಜೀವಸಂಕುಲಕ್ಕೊಂದು ಉತ್ತಮ ಮಾರ್ಗದರ್ಶಿಯಾಗಿದೆ. ಅದೇನೆಂದರೆ; 'ನಿನ್ನ ಚಿತ್ರಗ್ರೀವ ಈಗಲೆ ಗೂಡು ಕಟ್ಟಬಾರದು. ಈಗಾಗಲೇ ಮೊಟ್ಟೆ ಇಟ್ಟುಬಿಟ್ಟದ್ದರೆ ಆ ಮೊಟ್ಟೆಗಳನ್ನು ನಾಶಮಾಡು. ಯಾವುದೇ ಸಂದರ್ಭದಲ್ಲೂ ಆ ಮೊಟ್ಟೆಗಳು ಮರಿಯಾಗದಂತೆ ನೋಡಿಕೊ. ಭಯವೆಂಬ ರೋಗಕ್ಕೆ ತುತ್ತಾಗಿರುವ ಚಿತ್ರಗ್ರೀವನಂಥ ತಂದೆ ತನ್ನಂತಹ ರೋಗಗ್ರಸ್ತ ಮಕ್ಕಳನ್ನೇ ಪ್ರಪಂಚಕ್ಕೆ ಕೊಡುತ್ತಾನೆ.' (ಪು.೧೧೮) – ಹೀಗೆ ಸ್ಪಷ್ಟವಾಗಿ ನಮೂದಾಗುವ ವಿಚಾರಗಳು ಮನುಷ್ಯನ ಅಂತರಂಗದ ಸ್ಥೈರ್ಯಕ್ಕೆ ಧೈರ್ಯ ತುಂಬುವ ಕೆಲಸ ಮಾಡಿವೆ.

ಇವತ್ತಿನ ತಂತ್ರಜ್ಞಾನವು ಜೀವಸಂಕುಲದ ದೇಹರಚನೆ ಮತ್ತು ಬದುಕಿನ ಕ್ರಮದ ಸೂಕ್ಷ್ಮತೆಯನ್ನು ಅನಾವರಣ ಮಾಡುತ್ತದೆಯೇ ಹೊರತು ಪ್ರತಿಜೀವಿಯ ಭಾವನಾತ್ಮಕ ಬದುಕನ್ನು ಪದಗಳಲ್ಲಿ ಕಟ್ಟಿ ಕೊಡಲಾರದು. ಇಂತಹ ಕೊರತೆಯ ನಡುವೆ ನಮಗೆ 'ಚಿತ್ರಗ್ರೀವ' ಕಾಡು ಮತ್ತು ಅಲ್ಲಿನ ಪಕ್ಷಿ ಸಂಕುಲದ ಬಗ್ಗೆ ಭಾವನಾತ್ಮಕ ಒಲವನ್ನು ಮೂಡುವಂತೆ ಮಾಡುತ್ತದೆ. ಕನ್ನಡ ಸಾಹಿತ್ಯದಲ್ಲಿ ಪಕ್ಷಿಗಳ ಕುರಿತು ಅನೇಕ ಕೃತಿಗಳು ಬಂದಿವೆ. ಅವುಗಳ ವರ್ಣನಾತ್ಮಕ ಭಾವಚಿತ್ರಗಳು ಪುಸ್ತಕ ರೂಪದಲ್ಲಿ ಸೌಂದರ್ಯದ ಚೌಕಟ್ಟನ್ನು ನಿರ್ಮಿಸಿವೆ. ಆದರೆ ಅವುಗಳ ಜೊತೆ ಭಾವನಾತ್ಮಕ ಸಂಬಂಧದ ಬದುಕಿನ ಬಗೆಯನ್ನು ಯಾವ ಕೃತಿಗಳೂ ಮಾಡದಿರುವುದು ಕನ್ನಡ ಸಾಹಿತ್ಯವಲಯದ ಮಿತಿಯೂ ಕೂಡ ಹೌದು. ಈ ಮಿತಿಯನ್ನು ಚಿತ್ರಗ್ರೀವ ಸ್ವಲ್ಪಮಟ್ಟಿಗೆ ಕಡಿಮೆ ಮಾಡಿದೆ ಎಂಬುದು ಸತ್ಯ.

ಹೀಗೆ ಈ ಕೃತಿಯು ಕಲ್ಪನೆಯ ವ್ಯಾಕರಣವನ್ನು ಕಲಾತ್ಮಕತೆಯ ಪದಭಂಡಾರವನ್ನು ಬಳಸಿಕೊಂಡು ಶ್ರೀಮಂತ ಅಭಿವ್ಯಕ್ತಿಯೊಂದಿಗೆ ಜೀವ ಭಾವದ ಬೆಸುಗೆಯ ಜೊತೆ ಪಾರಿವಾಳದ ಸಾಹಸಮಯ ಬದುಕನ್ನು ಚಿತ್ರಿಸುತ್ತದೆ. ಮಕ್ಕಳ ಕಲಿಕೆಗೆ ಬೇಕಾಗಿರುವ ಹೊರಾಂಗಣದ ಅನುಭವಗಳ ಅನಿವಾರ್ಯತೆಯನ್ನು, ಜೀವ ಜೀವನದ ಲಯಗಳನ್ನು ಪರಿಚಯಿಸುತ್ತದೆ. ಮಾತ್ರವಲ್ಲದೆ ಪ್ರತಿಯೊಬ್ಬರ ಬದುಕಿಗೂ ಬೇಕಾಗಿರುವ ನಿಸರ್ಗತನದ ಕಾಳಜಿಯನ್ನು, ಬದುಕಿನ ಒಲವನ್ನು, ಜೀವಸಂಕುಲದ ಸೂಕ್ಷ್ಮತೆಯ ಗ್ರಹಿಕೆಯ ಕ್ರಮವನ್ನು ಹೇಳುತ್ತಲೆ ಎಲ್ಲರ ಬದುಕಿಗೆ ಸ್ಫೂರ್ತಿ ತುಂಬುತ್ತದೆ.

ಆಕರ ಗ್ರಂಥಗಳು

* ಧನ್‌ಗೋಪಾಲ್ ಮುಖರ್ಜಿ : ಚಿತ್ರಗ್ರೀವ (ಅನು. ಸಂಧ್ಯಾ ಎಸ್.) ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೨೦೦೪

ಪರಾಮರ್ಶನ ಗ್ರಂಥಗಳು

* ನಾಯರ್ ಎಸ್.ಎಂ. : ಅಳಿವಿನಂಚಿನಲ್ಲಿರುವ ಭಾರತೀಯ ಪ್ರಾಣಿಗಳು ಮತ್ತು ಅವುಗಳ ಸಂರಕ್ಷಣೆ (ಅನು. ನಾಗೇಶ ಹೆಗಡೆ), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೨೦೧೩
* ಲಯೀಕ್ ಫತೇ ಅಲಿ : ನಮ್ಮ ಪರಿಸರ (ಅನು. ಬಾ.ವೈ.ಶ್ರೀಧರ), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೨೦೧೩
* ಸಲೀಂ ಆಲಿ : ನೆಲ ಕಚ್ಚಿದ ಗುಬ್ಬಚ್ಚಿ (ಅನು. ಎಸ್.ಪಿ.ಶಂಕರನಾರಾಯಣ ರಾವ್), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೨೦೧೭
* ಸಲೀಂ ಆಲಿ ಮತ್ತು ಲಯೀಕ್ ಫತೇ ಅಲಿ : ಸಾಮಾನ್ಯ ಪಕ್ಷಿಗಳು (ಅನು. ಜಿ.ವಿ.ಬಿ.ನಾಯ್ಡು), ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಹೊಸ ದೆಹಲಿ, ೨೦೧೫

ಕನ್ನಕ್ಕಿಯು ಉದಿಸಿದೊಂದು ಮಾಧುರ್ಯದ ಮಹಾಯಾನ

– ಡಾ. ಸತ್ಯಮಂಗಲ ಮಹಾದೇವ

"ನಿಮ್ಮ ನೆನಹಿದಾಗಳೆ ಉದಯ, ಮರೆದಾಗಳೆ ಅಸ್ತಮಾನ" : ಅಲ್ಲಮಪ್ರಭು

ಮನುಷ್ಯ ಆಲೋಚನೆಗಳಿಂದ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುತ್ತಾನೆ. ವ್ಯಕ್ತಿತ್ವವು ಅವನ ಆಲೋಚನೆಗಳ ರೀತಿ ಮತ್ತು ನೀತಿಗಳನ್ನು ಅವಲಂಬಿತವಾಗಿರುತ್ತದೆ. ವ್ಯಕ್ತಿತ್ವವು ರೂಪು ಪಡೆಯುವುದು ಆತನ ಸಾಧನೆಯ ಯಾನದಲ್ಲಿ. ಯಾನವು ಭೌತ ವಸ್ತುಗಳಿಂದ ಸಾಧ್ಯವಾಗುವುದಾದರೂ ಮನೋಸಾಮರ್ಥ್ಯದ ಸಮರ್ಥ ನಾಯಕನಿರದೆ ಅದು ಸಾಧ್ಯವಾಗುವುದಿಲ್ಲ. ದೇಹ ಮತ್ತು ಮನಸ್ಸಿನ ಪರಸ್ಪರ ಜೀವಕ್ರಿಯೆಯೊಂದು ಇಲ್ಲಿ ಸಂಭವಿಸಬೇಕಾಗುತ್ತದೆ. ಜೀವವೊಂದು ತನ್ನ ದೇಹವನ್ನು ಸಾಧನಮಾಡಿಕೊಂಡು ಮನಸ್ಸನ್ನು ಕಟ್ಟಿ ನಿಲ್ಲಿಸಿ ಒಂದು ಅಂತರಂಗದ ಯಾನಕ್ಕೆ ಹೊರಡಬೇಕಾಗುತ್ತದೆ. ಒಂದೆಡೆ ನೆಲೆನಿಂತ ಮನಸ್ಸು ಪೂರ್ವರಂಗದ ಕೆಸರನ್ನು ಕೊಡವಿಕೊಂಡು ಕಾಳರಾತ್ರಿಯ ಭ್ರಮೆಯನ್ನು ಬಿಡಿಸಿಕೊಂಡು ಬೆಳಗಿನ ಮಹಾಯಾನಕ್ಕೆ ಸಜ್ಜಾದಾಗ ಆತ್ಮ ಸಂಶೋಧನೆಗೆ ಒಂದು ಬಾಗಿಲು ತೆರೆದುಕೊಳ್ಳುತ್ತದೆ. ಇಂತಹ ಒಂದು ಮಹಾಯಾನಕ್ಕೆ ಸಾಮಾನ್ಯನೂ ಕೂಡ ಸಾಧಕನಾಗಿ ತನ್ನನ್ನು ತಾನೇ ರೂಪಿಸಿಕೊಳ್ಳಬೇಕಾಗುತ್ತದೆ. ಹೀಗೆ ಒಂದು ಅನೂಹ್ಯ ಸತ್ಯವನ್ನು ಹುಡುಕಿ ಹೊರಟು ತನ್ನ ಈ ಆತ್ಮಶೋಧದ ಹಾದಿಯಲ್ಲಿ ತನಗೆ ಆದ ಅನುಭವಗಳನ್ನು ಸ್ವಾನುಭಾವವನ್ನು ಸ್ವಭಾವೋಕ್ತಿಮಾಡಿ ಕಾವ್ಯರೂಪದಲ್ಲಿ ಹೇಳುತ್ತಾ, ಕಾವ್ಯದ ಲಯವನ್ನು ಮತ್ತೆ ಗದ್ಯದಲ್ಲಿ ವಿವರಿಸುತ್ತಾ ತನ್ನ ಸಾಧನೆಯ ಅಭಿವ್ಯಕ್ತಿಗೆ ಕಾವ್ಯವನ್ನು ಮಾಧ್ಯಮವನ್ನಾಗಿಸಿ ಕನ್ನಡ ಕಾವ್ಯವನ್ನು ಭಾವಪುಷ್ಪಗಳ ಹೂತೋಟವನ್ನಾಗಿಸಿದ ಸಮರ್ಥ ಸಾಧಕ, ಸಂಶೋಧಕ ಹಲಸಂಗಿ ಚನ್ನಮಲ್ಲಪ್ಪ ಗಲಗಲಿ ಅವರು. ಬಾಲಕ ಚೆನ್ನಮಲ್ಲಪ್ಪನವರಲ್ಲಿ 'ನಮ್ಮ ಕಥಾನಾಯಕನಾದ ಜ್ಞಾನ ಭಿಕ್ಷುವಿನ ವಂಶಾನುಕ್ರಮದ ಗಂಡುವಳಿಯಲ್ಲಿ ಧಾರ್ಮಿಕತನವೂ ದೊಡ್ಡಸ್ತನವೂ ಹರಿಗಡಿಯಾಗಿ ಬಂದರೆ, ಹೆಣ್ಣುವಳಿಯಲ್ಲಿ ಉಗ್ರಸಂಶಯವೃತ್ತಿಯೂ, ಇಂದ್ರಿಯಾಧೀನತೆಯೂ ಅತಿಶಯವಾಗಿ ಬೆಳೆದುಬಂದಿದ್ದವು. ಹೆಣ್ಣುವಳಿಯ ಅನಿಗ್ರಹವೃತ್ತಿ ಇವೆರಡೂ ಈತನಲ್ಲಿ ಬೀಜರೂಪವಾಗಿ ಬೇರೂರಿ–

ಕೊಂಡಿರುವುದರಿಂದಲೇ ಕ್ಷುಲ್ಲಕತರವಾದ ಬಾಲ್ಯದೊಳಗಿಂದ ಆಕಸ್ಮಿಕವಾಗಿ ಕೌತುಕಕರವಾದ ಕಿಶೋರಾವಸ್ಥೆಯು ಮೈದೋರಿತು'೧

ವಯೋಸಹಜವಾದ ಕೌತುಕ, ತನ್ನ ವಂಶಾನುಗತಿಯಲ್ಲಿ ಬಂದ ಧಾರ್ಮಿತನ ಇವುಗಳು ಅವರ ಅನುಭಾವದ ಅನುಭವಕ್ಕೆ ಏರಲು ಸಾಧ್ಯವಾಯಿತು. ಹೀಗೆ ತಮ್ಮ ಸಹಜ ಬದುಕಿನ ಸಹಜ ಅನುಭವಗಳನ್ನೇ ಬದುಕಿನ ಸೂತ್ರವಾಗಿ ಮಾರ್ಪಡಿಸಿಕೊಂಡರು.

'ಕಾವ್ಯದ ಉಗಮವು ಕವಿ ಜೀವನದಲ್ಲಿ. ಪೂರ್ವರಂಗದಲ್ಲಿ ಕವನವಿದ್ದರೆ, ಕವಿಯ ಕರ್ಮವಾದ ಸಾಹಿತ್ಯವು 'ನನ್ನ ನಲ್ಲ' ವೆಂದು ಅಂಕಿತವಾದ ಕವನ ಸಂಗ್ರಹದಲ್ಲಿದೆ'೨ ಎಂಬ ಬೇಂದ್ರೆಯವರ ಮಾತು ಚನ್ನಮಲ್ಲಪ್ಪನವರು ಧ್ಯಾನಿಸಿದ ಬದುಕನ್ನು ಸೂತ್ರರೂಪವಾಗಿ ಕಟ್ಟಿಕೊಡುತ್ತದೆ. ಚೆನ್ನಮಲ್ಲಪ್ಪನವರಿಗೆ ತಮ್ಮ ಸಾಧನಾ ಇತಿವೃತ್ತವನ್ನೇ ಅಧ್ಯಾತ್ಮಿಕ ಕತೆಯಾಗಿ ಬರೆಯುವುದನ್ನು ಸತ್ಯದ ದಾರಿ ಎಂದು ನಂಬಿದ್ದರು. ಸ್ವಾನುಭಾವವನ್ನು ಸ್ವಭಾವೋಕ್ತಿಯಾಗಿ ರೂಪಿಸುವ ಮಾಂತ್ರಿಕ ಶಕ್ತಿಯನ್ನು ತಮ್ಮ ತನ್ಮಯತೆ ಮತ್ತು ವಿನಯದಿಂದ ಸಂಪಾದಿಸಿಕೊಂಡಿದ್ದರು. ಅವರ ವಿನಯವಂತಿಕೆಗೆ ಒಂದು ಶ್ರೇಷ್ಠ ಉದಾಹರಣೆಯೆಂದರೆ ತಮ್ಮ ಬರಹಗಳಾದ ಪೂರ್ವರಂಗ, ಕಾಳರಾತ್ರಿ, ಬೆಳಗು, ಆತ್ಮಸಂಶೋಧನೆ ಎಂಬ ಈ ಆಧ್ಯಾತ್ಮಿಕ ಸಾಧನಾ ಪಥದಲ್ಲಿ ಎಲ್ಲಿಯೂ ನಾನು ಚೆನ್ನಮಲ್ಲಪ್ಪ. ಮಧುರಚೆನ್ನ ಎಂಬ ಹೆಸರಿನ ಪಟ್ಟವನ್ನು ಬಳಸಲೇಯಿಲ್ಲ, ಬದಲಾಗಿ 'ಜ್ಞಾನ ಭಿಕ್ಷು' ಎಂಬ ಅಹಂ ನಿರಾಕರಣೆಯ ಮಾತನ್ನೆ ಸದಾ ಬಳಸಿದ್ದಾರೆ. ಇವರ ಈ ಆಧ್ಯಾತ್ಮಿಕ ಸಾಧನಾ ಪಥದಲ್ಲಿ ಕಾವ್ಯವನ್ನು ವಧುವಿನ ವಚನದಂತೆ 'ನನ್ನನಲ್ಲ' ಎಂದು ಬರೆದಿದ್ದಾರೆ. ಕಾರಣ 'ಶರಣ ಸತಿ ಲಿಂಗಪತಿ' ಎನ್ನುವ ವಚನಕಾರರ ಆಧ್ಯಾತ್ಮಿಕ ಮೌಲ್ಯವನ್ನು ತಮ್ಮೊಳಗೆ ಆಲದಂತೆ ಬೆಳೆಸಿಕೊಂಡವರು.

ಶ್ರೀ ಅರವಿಂದ ಹಾಗೂ ಶ್ರೀಮಾತೆಯವರ ಮಾತಿನಲ್ಲಿ ಶ್ರದ್ಧೆಯನ್ನುಇಟ್ಟುಕೊಂಡವರು. ಶ್ರದ್ಧೆ ಎಂದರೆ ಅದು ಅಚಲವಾದ ಶ್ರದ್ಧೆ. ಶಾಸ್ತ್ರ ಜಾಲವನ್ನು ಅಭ್ಯಾಸ ಮಾಡುವುದು, ಅಭ್ಯಾಸ ಮಾಡಿದ ವಿಚಾರಗಳನ್ನು ಸಮನ್ವಯಿಸುವುದು, ತಮ್ಮೊಳಗೆ ಉಂಟಾದ ಭ್ರಮೆಗಳನ್ನು ಶೋಧಿಸುವುದು, ಹೀಗೆ ಶೋಧನೆಯಾದ ಮೇಲೆ ಪರಿಷ್ಕರಣೆಗೊಂಡ ನಿಲುವನ್ನು ಶ್ರೀ ಅರವಿಂದರ ಅರ್ಥಕ್ಕೆ ಹೋಲಿಸಿ ಪ್ರಮಾಣೀಕರಿಸಿ-ಕೊಳ್ಳುವುದು. ಡಾಂಟೆಯ ಡಿವೈನ್‌ಕಾಮಿಡಿ (ದಿವ್ಯದೃಶ್ಯ). ಸ್ಪೆನ್‌ಸರ್‌ನ ಅಜ್ಞೇಯ ಮೀಮಾಂಸೆ. ಪ್ಲಿಂಟ್‌ನ ಥೀಯಿಜಂ (ಆಸ್ತಿಕ್ಯವಾದ). ವಾಲೆಸ್‌ನ ಲೈಫ್‌ವರ್ಡ್ (ಜೀವನಜಗತ್ತು). ರಿಚರ್ಡ್‌ಬಕಿ ಬರೆದ ವಿಶ್ವಅಂತರ್ಯಾಮಿತತ್ವ, ಅಂಡರ್‌ಹಿಲ್ಲರ್ ಬರೆದ ಮಿಸ್ಟಿಸಿಸಂ. ಸೈಂಟ್ ಆಗಸ್ಟೈನ್‌ನ ಆತ್ಮನಿವೇದನೆ. ಥಾಮಸ್‌ಕೆಂಪೀಸ್ ಬರೆದ ಇಮಿಟೇಷನ್ ಆಫ್‌ಕ್ರೈಸ್ಟ್. ಇವರೆಲ್ಲರ ಚಿಂತನೆಗಳನ್ನು ಉಪನಿಷತ್ತುಗಳಲ್ಲಿನ ವಾಕ್ಯಗಳೊಡನೆ. ಬಸವಣ್ಣನವರ. ಅಲ್ಲಮಪ್ರಭುದೇವರ ವಚನಗಳೊಡನೆ. ಭರ್ತೃಹರಿಯ ವಾಕ್ಯಗಳೊಡನೆ.

ಮಹಾರಾಷ್ಟ್ರದ ಸಂತರಾಮದಾಸರ ಚಿಂತನೆಗಳೊಡನೆ, ಲಕ್ಷ್ಮೀಶಕವಿಯ ಭರತೇಶವೈಭವದ ವಾಕ್ಯಗಳೊಡನೆ ಹೋಲಿಸುವುದು, ಸಮನ್ವಯಿಸುವುದು ಶೋಧಿಸುವುದು, ಪ್ರಮಾಣೀಕರಿಸುವುದು ಚೆನ್ನಮಲ್ಲಪ್ಪನವರ ಆತ್ಮಶೋಧನೆಯ ಮಾರ್ಗವಾಗಿತ್ತು. ಶಾಸ್ತ್ರಾಧ್ಯಯನದ ಮೂಲಕ ಮನೋರಾಜ್ಯದ ಭ್ರಮೆಗಳನ್ನು ನಿವಾರಿಸಿಕೊಳ್ಳುತ್ತಲೇ, ಪತ್ನಿ ಬಸಮ್ಮನವರ ಅಪ್ಪಣೆ ಪಡೆದು ಬ್ರಹ್ಮಚರ್ಯ ಪಾಲನೆಮಾಡಿ, ಯೋಗ ಮತ್ತು ಧ್ಯಾನ ನಿರತರಾಗುತ್ತಾರೆ. ಆತ್ಮಶೋಧನೆಯ ದಾರಿಯಲ್ಲಿ ಸಾಗುತ್ತಲೇ ಆಧ್ಯಾತ್ಮವನ್ನು ಸಾಧಿಸುವುದು ಸಾಧಿಸಿಕೊಂಡದ್ದನ್ನು ಬರೆಯುವುದು ಮಾತ್ರ ಇವರ ಕೆಲಸವಾಗಿರಲಿಲ್ಲ.

ಬದುಕಿನಲ್ಲಿ ಚೆನ್ನಮಲ್ಲಪ್ಪನವರು ಮಧುರಚೆನ್ನ ಎಂದು ತಮ್ಮ ಆಧ್ಯಾತ್ಮಿಕ ನಾಮವನ್ನು ಪಡೆದುಕೊಂಡ ಘಟನೆಯೇ ಬಲು ವಿಶಿಷ್ಟವಾದದ್ದು. ಚೆನ್ನಮಲ್ಲಪ್ಪನವರ ಅತ್ಯಾಪ್ತ ಸ್ನೇಹಿತ ಆತ್ಮಬಂಧು ಓಲೇಕಾರ ಮಾದಣ್ಣ, ಮಾದಣ್ಣ ಈ ಲೋಕದ ಜನರು ಮಾಡಿಕೊಂಡ ಕಟ್ಟುಪಾಡುಗಳಲ್ಲಿ ಅಸ್ಪೃಶ್ಯ, ಚೆನ್ನಮಲ್ಲಪ್ಪನವರು ಲಿಂಗಾಯತ ಮತಸ್ಥರು. ಈ ಇಬ್ಬರ ಕುರಿತು ಈ ಜನರ ಮಾತುಗಳ ಕಂದು ಮಾದಣ್ಣ ನೊಂದುಕೊಂಡು ನುಡಿದಾಗ

ಜನರಾಡಿಕೊಳ್ಳಬಹುದು ನನಗೂ ನಿನಗೂ ಕೂಡೆ
ಅವರಿಗೇನುಗೊತ್ತು ಒಳನಿಧಾನ
ನನಗೆ ನೀ ಅತಿ ಮಧುರ ನಿನಗೆ ನಾನು ಬಲು ಚೆನ್ನ
ಆದ್ದರಿಂದಲೇ ನಾವು ಮಧುರಚೆನ್ನ

– ನನ್ನನಲ್ಲ

ಹೀಗೆ ಆತ್ಮಸಂವಿಧಾನದ ಜೀವಕ್ರಿಯೆಗೆ ಲೌಖಿಕ ಬದುಕನ್ನು ತೆರೆದಿಟ್ಟುಲೋಕದ ಬಗ್ಗಡಗಳಿಗೆ ಆಧ್ಯಾತ್ಮಿಕ ಸಾಧನೆಯ ಮೂಲಕ ಹೊನ್ನೀರ ತಂದವರು ಚೆನ್ನಮಲ್ಲಪ್ಪನವರು.

ಏಳು ಕಮಲವೆ, ನಿನ್ನ
ಯಾವಕರ್ಮದಿ ಬಂದು
ಇಂಥ ಕೆಸರಲ್ಲಿ ಬಿದ್ದೇ?
ಹೇಳು ಕಮಲವೆ, ನಿನ್ನ
ಯಾವ ಪುಣ್ಯದಿ ಮತ್ತೆ
ಮೊಗವೆತ್ತಿಮೇಳಕ್ಕೆದ್ದೇ

– ಕೆಸರೊಳಗಿನ ಕಮಲ; ಆತ್ಮಶೋಧ

ಭವ ಎನ್ನುವ ಮಾತಿಗೆ ಮಧುರಚೆನ್ನರು ಬಳಸಿದ ಪದಕೆಸರು. ಈ ಕೆಸರು ಸಂಸಾರದ ಜಂಜಾಟಗಳಿಂದ ಜರ್ಜರಿತವಾಗುವ ಕಾರ್ಯಕ್ಷೇತ್ರ. ಕಮಲ ಆತ್ಮ – ಕರ್ಮ ಎಂಬುದು ಆತ್ಮದ ಅರಿವು. ಪುಣ್ಯ ಮತ್ತು ಪಾಪ ತನ್ನ ಜೀವನದಲ್ಲಿ ನಡೆಯುವ ಮಾನಸಿಕ ಸ್ಥಿತಿ ಮೇಲೆ ಅವಲಂಬಿಸುವ ಒಳಿತು–ಕೆಡುಕು ಎಂಬುದನ್ನು ತಮ್ಮ ಕಾವ್ಯದಲ್ಲಿ ಬದುಕಿದ್ದಾರೆ.

ಹನ್ನೆರಡು ತುಂಬಿಲ್ಲ ಕನ್ನಕ್ಕಿ ನಾನಂದು
ನನ್ನ ನಲ್ಲನಕತೆಗೆ ಮರುಳುಗೊಂಡೆ
ಇನ್ನೇನು ಹೇಳುವೆನು ಇಂದಿಗಿಪ್ಪತ್ತಾರು
ಈಸೋಂದು ದಿನ ಕೊರಗಿಗೊತ್ತುಗೊಂಡೆ

– ನನ್ನನಲ್ಲ; ಆತ್ಮಶೋಧ

ಇನ್ನು ಮದುವೆಯಾಗಿರದ ಪ್ರಾಯಕ್ಕೆ ಬಂದ ಮಕ್ಕಳನ್ನು ಕನ್ನಕ್ಕಿ ಎಂದು ಕರೆಯುವುದು ಬಿಜಾಪುರದ ಕಡೆ ವಾಡಿಕೆ. ವಚನಕಾರರು ಭಕ್ತಿಯ ನೆಲೆಯನ್ನು ಮೀರಿ ಅರಿವಿನಿಂದ ಕಂಡ ತಾತ್ವಿಕತೆಯೇ ಭಾವಕ್ಕೆ ಒಲಿದ ಮಹಾದೇವನ ಚಿತ್ರ. ಅದನ್ನು ತನ್ನ ಬಾಳಿನಲ್ಲಿ ಅಳವಡಿಸಿಕೊಂಡಿದ್ದು 'ನನ್ನ ನಲ್ಲ'ನಾಗಿದ್ದು ಮಧುರಚೆನ್ನರು ಮುಗ್ಧಭಕ್ತಿಯಿಂದ ಏನೂ ಸಾಧ್ಯವಿಲ್ಲ ಎಂದು ಗೊತ್ತಾಗಿದ್ದು ತಮ್ಮ ಇಪ್ಪತ್ತಾರನೆಯ ವಯಸ್ಸಿನಲ್ಲಿ. ಬಾಲಭಕ್ತಿಗೆ ಶಿವನೊಲಿಯುವನೆಂಬ ಪುರಾಣಗಳ ಮಾತನ್ನು ಪರೀಕ್ಷಿಸಿದಾಗ ಸಿಕ್ಕ ಉತ್ತರ ಭಕ್ತಿಯಿಂದ ಆಚೆ – ಯೋಗಮಾರ್ಗದ ಸಾಧನೆಯಲ್ಲಿ ಪರಮಾತ್ಮನ ನೆಲೆ ಕಾಣಬಹುದು ಎಂಬುದು ಗೊತ್ತಾಗಿತ್ತು. ತಮ್ಮ ೧೨ನೆಯ ವಯಸ್ಸಿನಲ್ಲಿ 'ಶ್ರೀಶಿವಲೀಲಾಮೃತ' ಓದಿದಾಗಿನಿಂದ ೨೬ನೆಯ ವಯಸ್ಸಿನವರೆಗೆ ದೇವನನ್ನು ಕಾಣುವ ಹಂಬಲದಿಂದ ಕೊರಗಿದ ದಿನಗಳನ್ನು, ಅರಿವು ಮೂಡಿಸಿಕೊಂಡ ಪರಿಯನ್ನು ವಿವರಿಸಿದ್ದಾರೆ.

ಅಧ್ಯಾತ್ಮ ಸಾಧಕನಿಗೆ ಅನುಭಾವದ ದಾರಿ ಬಲು ಕಠಿಣವಾದದ್ದು, ಭಕ್ತಿ, ಪೂಜೆ, ಧಾರ್ಮಿಕ ಆಚರಣೆಗಳು ಕೇವಲ ಮೊದಲ ಮೆಟ್ಟಿಲುಗಳು ಅಷ್ಟೆ ಮನೋರಾಜ್ಯದ ಬುದ್ಧಿಯು ಪ್ರಬಲವಾಗುವುದು ಆತ್ಮಶೋಧನೆಯಿಂದ ಹೀಗೆ ಆತ್ಮವನ್ನು ಶೋಧಿಸಿಕೊಂಡವನಿಗೆ ವಿಶ್ವಚಾಲಕ ಶಕ್ತಿಯ ಅರಿವು ಉಂಟಾಗುತ್ತದೆ.

ದೇವನಿರುವ ಪರಿ

ದೇಹದಲ್ಲಿ ಜೀವವಿರುವ ರೀತಿಯಲ್ಲಿ ಜಗದಲ್ಲಿ ದೇವನಿರಬಹುದು. ದೇಹವನ್ನು ಎಷ್ಟೇ ಹಿಂಡಿ ನೋಡಿದರೂ ಯಾವ ಸೂಕ್ಷ್ಮ ಯಂತ್ರಕ್ಕೂ ಕೂಡ ಜೀವವು ಕಾಣುವಂತಿಲ್ಲ, ಸಿಕ್ಕುವಂತಿಲ್ಲ. ಆದರೂ ಅದು ಇದ್ದದ್ದು ಸತ್ಯ. ಹಾಗೆಯೇ ಈ ಅನಂತವಿಶ್ವದಲ್ಲಿ ನಾವು ವಸುದಿನ ರೆಕ್ಕೆಕಟ್ಟಿಕೊಂಡು ಹಾರಿದರೂ ಅಪಾರವಾದ ಪೊಳ್ಳು ಮುಗಿಲಲ್ಲಿ ಅಸಂಖ್ಯ ಗ್ರಹನಕ್ಷತ್ರಾದಿಗಳನ್ನು ಬಿಟ್ಟು ಇನ್ನೇನೂ ನೋಡುವುದಕ್ಕೆ ಸಾಧ್ಯವಿಲ್ಲವಾದರೂ ಜಡ(ಸಚೇತನ) ವಿಶ್ವದಜೀವವೊಂದು ಇಲ್ಲದಿರಲಿಕ್ಕಿಲ್ಲ. ನಮ್ಮ ದೇಹದಲ್ಲಿ ಇದ್ದೇ ಇರುವ ಜೀವ(ಆತ್ಮ)ವನ್ನು ನೋಡುವುದಕ್ಕೆ ಸಮರ್ಥವಾದ ಕಣ್ಣಿಗೆ ವಿಶ್ವಾಂತರ್ಯಾಮಿಯನ್ನು ನೋಡುವ ಸಾಮರ್ಥ್ಯವೂ ಇಲ್ಲದಿರಲಿಕ್ಕಿಲ್ಲ.

– ಮಧುರಚೆನ್ನ (೦೩.೧೨.೧೯೨೯)

ಮಧುರಚೆನ್ನರ ಜೀವಿತವು ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ವಿಸ್ತರಿಸಿದ ಕನ್ನಡ ಪ್ರಜ್ಞೆ ಬದುಕುವ ಸಹಜತೆಯು ಲೌಖಿಕ ಆಚರಣೆಗಳ ಆಚೆಗೆ ಅನುಭಾವದ ನೆಲೆಯನ್ನು

ಲೌಕಿಕದಲ್ಲಿ ಬದುಕಿರುವಾಗಲೇ ಕಂಡುಕೊಳ್ಳಬಹುದು ಎಂಬುದನ್ನು ಮಧುರಚೆನ್ನರು ಬದುಕಿ ತೋರಿಸಿಕೊಟ್ಟಿದ್ದಾರೆ. ಇಂತಹ ಅನುಭಾವಿಗಳ ಮಾರ್ಗದಲ್ಲಿ ನಾವು ಸಾಗಬೇಕಿದೆ.

ಅಡಿ ಟಿಪ್ಪಣಿಗಳು:

೧. ಮಧುರಚೆನ್ನ : ೨೦೧೫, ಆತ್ಮಶೋಧ, ಪೂರ್ವರಂಗ, ಕನ್ನಡಸಾಹಿತ್ಯ ಪರಿಷತ್ತು, ಬೆಂಗಳೂರು ಪುಟ:೧೪೯.

೨. ಮಧುರಚೆನ್ನ : ೨೦೧೫, ಆತ್ಮಶೋಧ, ಪೂರ್ವರಂಗಕ್ಕೆ ಬರೆದ ಬೇಂದ್ರೆಯವರ ಮುನ್ನುಡಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪುಟ:೧೪೯

ಜಗನ್ನಾಥದಾಸರ ಸಾಮಾಜಿಕ ಮತ್ತು ಅನುಭಾವಿಕ ನೆಲೆಗಳು

- ಚಿದಾನಂದ ಸಾಲಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೂರು ಪ್ರಮುಖ ಧಾರೆಗಳನ್ನು ಗಮನಿಸದೆ ಮುಂದೆ ಹೋಗಲಿಕ್ಕಾಗದು. ಹನ್ನೆರಡನೇ ಶತಮಾನದ ಬಸವಾದಿ ಶರಣರ ವಚನ ಸಾಹಿತ್ಯ ಚಳುವಳಿ, ನಂತರದಲ್ಲಿ ಮೂಡಿ ಬಂದ ದಾಸಸಾಹಿತ್ಯದ ಭಕ್ತಿಪಥ ಹಾಗೂ ತತ್ವಪದ ಸಾಹಿತ್ಯ ಮಾರ್ಗ. ತಮಿಳುನಾಡಿನ ಆಳ್ವಾರ್‌ರ ಭಕ್ತಿ ಚಳುವಳಿಯಿಂದ ಪ್ರೇರಿತರಾಗಿ ಈ ದಾಸಸಾಹಿತ್ಯ ಪ್ರಾರಂಭವಾಯಿತೆಂದು ಹೇಳಲಾಗುತ್ತದೆ. ದಾಸಸಾಹಿತ್ಯದ ಮೊದಲ ಘಟ್ಟದಲ್ಲಿ ಶ್ರೀಪಾದರಾಜರು, ವ್ಯಾಸರಾಯರು, ಕನಕ-ಪುರಂದರರು ಮುಖ್ಯವಾಗಿ ಕಂಡು ಬರುವಂಥವರು. ಅದರಲ್ಲಿ ಕೇವಲ ಸಂಸ್ಕೃತದಲ್ಲಿ ಮಾತ್ರ ರಚಿಸಿದ ಶ್ರೀಪಾದರಾಜರು, ಸಂಸ್ಕೃತ-ಕನ್ನಡ ಎರಡರಲ್ಲೂ ರಚಿಸಿದ ನರಹರಿತೀರ್ಥರು, ರಾಘವೇಂದ್ರಸ್ವಾಮಿಗಳು, ಜಗನ್ನಾಥದಾಸರು ಹಾಗೂ ಕೇವಲ ಕನ್ನಡದಲ್ಲಿ ಮಾತ್ರ ತಮ್ಮ ರಚನೆಗಳನ್ನು ರಚಿಸಿದ ವಿಜಯದಾಸರಾದಿಯಾದ ಹಲವಾರು ದಾಸರು ಇದ್ದಾರೆ. ಇದರಲ್ಲಿ ಸನ್ಯಾಸಾಶ್ರಮದಲ್ಲಿದ್ದ ಯತಿಗಳಾದ ಶ್ರೀಪಾದರಾಜರು, ವ್ಯಾಸರಾಯರು, ರಾಘವೇಂದ್ರಸ್ವಾಮಿಗಳು ಇರುವಂತೆಯೇ; ಗೃಹಸ್ಥಾಶ್ರಮ ಪಾಲಿಸಿದ ನೂರಾರು ದಾಸರೂ ಇದ್ದಾರೆ.

೧೫೬೫ರ ಪತನಾನಂತರ ವಿಜಯನಗರೋತ್ತರ ಕಾಲಘಟ್ಟದಲ್ಲಿ ದಾಸಸಾಹಿತ್ಯದ ಎರಡನೇ ಘಟ್ಟವನ್ನು ಗುರುತಿಸಲಾಗಿದೆ. ಮೊದಲ ಹಂತದಲ್ಲಿನ ಯತಿಗಳಿಗೆ ರಾಜಾಶ್ರಯ ದೊರೆತಂತೆ, ಎರಡನೇ ಘಟ್ಟದ ದಾಸಸಾಹಿತ್ಯಕ್ಕೆ ಯಾವುದೇ ರಾಜಾಶ್ರಯ ದೊರೆತಂತೆ ಕಾಣುವುದಿಲ್ಲ. ಇದಕ್ಕೆ ರಾಜಪ್ರಭುತ್ವವು ಹಿನ್ನೆಲೆಗೆ ಸರಿದುದು ಒಂದು ಕಾರಣವಾದರೆ: ಹರಿದಾಸರು ಒಂದೆಡೆ ನೆಲೆ ನಿಲ್ಲದೆ ಸದಾ ಸಂಚಾರಕ್ರಮದಲ್ಲಿರುತ್ತಿದ್ದುದು ಮತ್ತೊಂದು ಕಾರಣವಾಗಿರಬಹುದು. ಚೀಕಲಪರ್ವಿ ವಿಜಯದಾಸರ ಕೀರ್ತನೆಯೊಂದರಲ್ಲಿ ಅವರು ಅನುಭವಿಸಿದ ಪ್ರಕಾಂಡ ಬಡತನದ ಉಲ್ಲೇಖ ಸಿಗುತ್ತದೆ. ಅಜ್ಞಾನಿ ಜನರಿಂದ ಅಪಮಾನ, ನಿಂದನೆ, ನಿಕೃಷ್ಟ ಭಾವಗಳನ್ನು ಸಾಕಷ್ಟು ಅನುಭವಿಸಿದ ಅವರು ಒಂದೆಡೆ 'ಸಂಜೀತನಕ ಕಾದು/ ಸಣ್ಣ ಚಮಚೆಯಲಿ/ ಗಂಜಿ ಕಾಣದೆ ಬಳಲಿದೆ' ಎಂದು ದಾಖಲಿಸಿದ್ದಾರೆ.

ರಾಘವೇಂದ್ರಸ್ವಾಮಿಗಳಿಂದ ಪ್ರೇರಿತವಾದ ಈ ಎರಡನೇ ಹಂತದ ದಾಸಸಾಹಿತ್ಯದಲ್ಲಿ ಮುಖ್ಯರಾಗಿ ಕಂಡುಬರುವವರು ಚೀಕಲಪರ್ವಿ ವಿಜಯದಾಸರು, ಕಲ್ಲೂರು ಸುಬ್ಬಣ್ಣದಾಸರು, ಆದವಾನಿ ಪಂಗನಾಮದ ತಿಮ್ಮಣ್ಣದಾಸರು, ಉತ್ತನೂರು ಗೋಪಾಲದಾಸರು, ವೇಣಿಸೋಮಪುರದ ವ್ಯಾಸತತ್ವಜ್ಞರು, ಮಾನವಿಯ ಜಗನ್ನಾಥದಾಸರು, ಅಸ್ಕಿಹಾಳ ಗೋವಿಂದದಾಸರು, ಗೋನವಾರದ ರಾಮದಾಸರು ಮುಂತಾದವರು. ಇವರೆಲ್ಲರ ಪೈಕಿ ಭಕ್ತಜನಮಾನಸದಲ್ಲಿ ವಿಶಿಷ್ಟವಾದ ಸ್ಥಾನ ಸಂಪಾದಿಸಿಕೊಂಡಿರುವವರು ಹರಿಕಥಾಮೃತಸಾರದ ಕರ್ತೃಗಳಾದ ಮಾನವಿಯ ಜಗನ್ನಾಥದಾಸರು.

ರಾಯಚೂರು ಜಿಲ್ಲೆ ಮಾನವಿ ತಾಲೂಕಿನ ಬ್ಯಾಗವಾಟ ಗ್ರಾಮದಲ್ಲಿ ೧೭೨೮ರಲ್ಲಿ ಜನಿಸಿದ ಜಗನ್ನಾಥದಾಸರ ಮೊದಲ ಹೆಸರು ಶ್ರೀನಿವಾಸ. ಮಂತ್ರಾಲಯದಲ್ಲಿ ಸಂಸ್ಕೃತದಲ್ಲಿ ವ್ಯಾಸಂಗ ಮಾಡಿ ತತ್ವಪ್ರಕಾಶಿಕಾ, ವ್ಯಾಸತ್ರಯ ಹಾಗೂ ನ್ಯಾಯಸುಧಾ ಪಂಡಿತರಾಗಿ ಮರಳಿ ಮಾನವಿಗೆ ಬಂದು ಕಡದಿನ್ನಿ ದೇಸಾಯಿಯವರ ಮನೆಯಲ್ಲಿ ಅಧ್ಯಾಪನವನ್ನು ಆರಂಭಿಸುವ ಮೂಲಕ ಶ್ರೀನಿವಾಸಾಚಾರ್ಯರಾಗಿ ಮನೆಮಾತಾಗುತ್ತಾರೆ. ಅದೇ ಕಾಲಕ್ಕೆ ಮಾನವಿಗೆ ಆಗಮಿಸಿದ ಚೀಕಲಪರ್ವಿ ವಿಜಯದಾಸರು ಒಂದು ದಿನ ಶ್ರೀನಿವಾಸಾಚಾರ್ಯರನ್ನು ಕಂಡು ಅಂದು ಮಧ್ಯಾಹ್ನದ ಭೋಜನಕ್ಕೆ ಆಮಂತ್ರಣ ನೀಡಿ ಹೋದವರು, ಎಷ್ಟು ಹೊತ್ತಾದರೂ ಬರದೇ ಇದ್ದಾಗ ತಮ್ಮ ಶಿಷ್ಯರೊಬ್ಬರನ್ನು ಆಚಾರ್ಯರಲ್ಲಿಗೆ ಕಳಿಸ್ತಾರೆ. ತಾವೊಬ್ಬ ದೊಡ್ಡ ಸಂಸ್ಕೃತ ಪಂಡಿತರೆಂಬ ಜ್ಞಾನಮದದಿಂದ ಬೀಗುತ್ತಿದ್ದ ಆಚಾರ್ಯರು ಆ ಶಿಷ್ಯನಿಗೆ 'ಆಚಾರ್ಯರಿಗೆ ಊಟ ಹೊತ್ತಾದರೆ ಉದರಶೂಲೆ ಬರುತ್ತದೆ, ಹಾಗಾಗಿ ಈಗಾಗಲೇ ಅವರ ಭೋಜನ ಮುಗಿದಿದೆ ಎಂದು ತಿಳಿಸು' ಅಂತ ಹೇಳಿ ಕಳಿಸ್ತಾರೆ. ಇದನ್ನು ಕೇಳಿದ ವಿಜಯದಾಸರು ಸುಮ್ಮನಾದರೂ, ಉತ್ತನೂರು ಗೋಪಾಲದಾಸರು ಮಾತ್ರ ಸುಮ್ಮನಾಗದೆ 'ಹಾಗೇ ಆಗಲಿ' ಅನ್ನುತ್ತಾರೆ. ಅಷ್ಟೇ ಆಚಾರ್ಯರಿಗೆ ಅಲ್ಲಿಂದ ಶುರುವಾದ ಉದರಶೂಲೆ ಎಲ್ಲಿಗೆ ಹೋದರೂ ಕಮ್ಮಿಯಾಗದೆ, ಏನು ಮಾಡಿದರೂ ಕಮ್ಮಿಯಾಗದೆ ಬಿಡದೆ ಕಾಡಿ ಹಿಂಡುವುದು. ಮಂತ್ರಾಲಯದಲ್ಲಿ ಅವರಿಗೆ 'ಒಡವೆ ಎಲ್ಲಿ ಕಳೆದಿದೆಯೋ ಅಲ್ಲೇ ಹುಡುಕಿದರೆ ಅನುಗ್ರಹವಾಗುತ್ತೆ' ಎಂದು ಸ್ವಪ್ನಶಕುನವಾದಾಗ, ಅಲ್ಲಿಂದ ಅವರು ನೇರ ಚೀಕಲಪರ್ವಿ ವಿಜಯದಾಸರಲ್ಲಿಗೆ ಬರುತ್ತಾರೆ. ಆದರೆ ವಿಜಯದಾಸರು ಉತ್ತನೂರಿಗೆ ಹೋಗಿ ಗೋಪಾಲದಾಸರನ್ನು ಕಾಣಲು ತಿಳಿಸುತ್ತಾರೆ. ಭಕ್ಕರಿ ತಿನ್ನಿಸಿ ಉದರಶೂಲೆ ಶಮನ ಮಾಡುವ ಗೋಪಾಲದಾಸರು, ಅಂಕಿತ ನೀಡಿ ದಾಸರಾಗಿಸಿಕೊಳ್ಳಿ ಎಂದು ಕೇಳಿದ ಶ್ರೀನಿವಾಸಾಚಾರ್ಯರನ್ನು ಅಲ್ಲಿಂದ ಪಂಢರಾಪುರಕ್ಕೆ ಹೋಗಲು ತಿಳಿಸುತ್ತಾರೆ. ಅಲ್ಲಿ ನದಿಯಲ್ಲಿ ಸ್ನಾನ ಮಾಡುವಾಗ ಶ್ರೀಜಗನ್ನಾಥವಿಠಲ ಎಂಬ ಶಿಲಾಫಲಕ ಸೋಕಿದ ಪರಿಣಾಮವಾದಿ ಅದೇ ಅವರ ಅಂಕಿತನಾಮವಾಗುತ್ತದೆ. ಅಲ್ಲಿಂದ ಮರಳಿ ನೇರವಾಗಿ ವೇಣಿಸೋಮಪುರದಲ್ಲಿದ್ದ ಗುರುಗಳಾದ ಉತ್ತನೂರು

ಗೋಪಾಲದಾಸರನ್ನು ಕಂಡು ಅಂಕಿತ ದೊರೆತ ಬಗ್ಗೆ ಹೇಳಿದ ಮೇಲೆ, ಗುರುಗಳು ಅವರನ್ನು ತಿರುಪತಿಗೆ ಕರೆದೊಯ್ಯುತ್ತಾರೆ. ಅಲ್ಲಿ ಆಯಾಸದಿಂದ ಬಳಲುತ್ತಿದ್ದ ಶಿಷ್ಯ ಜಗನ್ನಾಥದಾಸರನ್ನು ಮಂಟಪದಲ್ಲಿ ಕೂರಿಸಿ ಅವರಿಗಾಗಿ ಆಹಾರ ತರಲೆಂದು ಗುರುಗಳಾದ ಗೋಪಾಲದಾಸರು ಹೋದಾಗ, ಸ್ವತಃ ತಿರುಪತಿ ತಿಮ್ಮಪ್ಪನೇ ಗೋಪಾಲದಾಸರ ವೇಷದಲ್ಲಿ ಬಂದು ಹಸಿವು-ದಣಿವು ನೀಗಿಸಿ ಹೋಗಿರುವುದು ನಂತರ ತಡವಾಗಿ ಬರುವ ಗುರುಗಳಿಗೆ ತಿಳಿಯುತ್ತದೆ.

ಹೀಗೆ ದಾಸತ್ವ ಸ್ವೀಕರಿಸಿ, ಭಗವಂತನ ನೇರ ಕೃಪೆಗೂ ಪಾತ್ರರಾದ ಮೇಲೆ ಜಗನ್ನಾಥದಾಸರು ಊರೂರು ಅಲೆದು ಹರಿಕಥೆ ಮಾಡುತ್ತಲೇ ೨೫೦ಕ್ಕೂ ಮಿಕ್ಕಿ ಕೀರ್ತನೆಗಳನ್ನು, ೧೩ ತತ್ವಸುವ್ವಾಲಿಗಳನ್ನು, ೩ ಸುಳಾದಿ-೨ ಉಗಾಭೋಗಗಳನ್ನು ರಚಿಸುವರಲ್ಲದೆ; ೩೨ ಸಂಧಿಗಳಲ್ಲಿ ವ್ಯಾಪಿಸಿಕೊಂಡಿರುವ, ಭಾಮಿನೀ ಷಟ್ಪದಿಯ ಛಂದಸ್ಸಿನಲ್ಲಿ ನಿರೂಪಿತವಾಗಿರುವ ತಮ್ಮ ಮೇರು ಕೃತಿ ಹರಿಕಥಾಮೃತಸಾರವನ್ನು ಭಕ್ತಿಸಾಹಿತ್ಯಕ್ಕೆ ಕೊಡುಗೆಯಾಗಿ ನೀಡುತ್ತಾರೆ. ಸಂಸ್ಕೃತದಲ್ಲಿಯೂ ಕೂಡ ಶ್ರೀಸತ್ಯಬೋಧ ಪಂಚರತ್ನ ಹಾಗೂ ಶ್ರೀವರದೇಂದ್ರ ಪಂಚರತ್ನ ಎಂಬೆರಡು ಕೃತಿಗಳನ್ನು ಪ್ರಕಟಿಸಿ ೧೮೮೯ರಲ್ಲಿ ದೇಹತ್ಯಾಗ ಮಾಡುತ್ತಾರೆ. ಜಗನ್ನಾಥದಾಸರಿಗೆ ಲಿಂಗಸೂಗೂರಿನ ಪ್ರಾಣೇಶದಾಸರು, ಕರ್ಜಗಿಯ ದಾಸಪ್ಪದಾಸರು, ಹುಂಡೇಕಾರ ದಾಸಪ್ಪ, ಪ್ರೇಮದಾಸರು, ಕಂಪಲಿದಾಸರು, ಕುಂಟೋಜಿದಾಸರು ಮುಂತಾದ ೨೧ ಜನ ಶಿಷ್ಯರಿದ್ದು, ಅವರೂ ಕೂಡ ದಾಸಸಾಹಿತ್ಯಕ್ಕೆ ತಮ್ಮ ರಚನೆಗಳ ಕೊಡುಗೆಗಳನ್ನು ನೀಡಿದ್ದಾರೆ. ಮುಖ್ಯವಾಗಿ ಜಗನ್ನಾಥದಾಸರ ಒಟ್ಟು ಭಕ್ತಿಸಾಹಿತ್ಯದ ಸ್ಥಾಯೀಭಾವವೆಂದರೆ ಸಂಪೂರ್ಣ ಸಮರ್ಪಣೆಯ ಆರಾಧಕ ಭಾವದ ಹರಿಭಕ್ತಿ. ಹರಿಯೇ ಶ್ರೇಷ್ಠ, ಹರಿ ಸರ್ವೋತ್ತಮವೆಂಬ ತತ್ವಪ್ರಣಾಲಿಯ ಪ್ರಚಾರೋದ್ದೇಶದ ಸಾಹಿತ್ಯ. ಮಧ್ವಸಿದ್ಧಾಂತದೆಡೆಗಿನ ಪ್ರಶ್ನಾತೀತ ಅಭಿಮಾನವೇ ಅವರ ಸಾಹಿತ್ಯದ ಮಿತಿ.

'ಮಧ್ವರಾಯರ ಪಾದ ನಂಬೋ/ಸಿದ್ಧಾಂತ ಸಾರವ ಹೃದಯದಿ ತುಂಬೋ /ಪ/
ಶತಕೋಟಿ ಜನ್ಮ ಸುಕೃತದಿ/ ಅತುಳ ವೈಷ್ಣವ ಜನ್ಮ ದೊರಕಿತು ನಿಜದಿ/
ಎಂಬ ಸಾಲಿನಲ್ಲಿನ ಹಾಗೂ-
ವಾದಿಗಳ ಮತ ಜರಿದು ಮಧ್ವಸಿದ್ಧಾಂತದ ಹಾದಿಗೆ ಹೋಗಲಿಲ್ಲ/
ಶೋಧಿಸಿದ ಚಿನ್ನಕ್ಕೆ ಸಮನಾದ ವೈಷ್ಣವರ ಪಾದಕ್ಕೆ ಬೀಳಲಿಲ್ಲ

ಎಂಬ ಸಾಲುಗಳಲ್ಲಿನ ಮೇಲರಿಮೆಯ ಭಾವವನ್ನು ಗಮನಿಸಬೇಕು. ಅದೇ ರೀತಿಯಾಗಿ 'ಯಾವ ಕುಲದವನಾದರೇನ್ ಕೋವಿದರಿಗುಂಟೇನೋ ಭವದುಃಖಾದಿದೋಷಗಳು ಎನ್ನುವ ಜಗನ್ನಾಥ ದಾಸರೇ 'ಹೀನ ಜನರ ಕೈಲಿ ನಾನಾ ವಿಧಾನ್ನ ತಿಂದೆ' ಎಂದು ದ್ವಂದ್ವಕ್ಕೆ ಸಿಲುಕಿಸುತ್ತಾರೆ. ಇನ್ನು 'ಯಮರಾಯ ಪೇಳ್ದ ದೂತರಿಗೆ' ಎಂಬ ರಚನೆಯಲ್ಲಿ-

ತಿರಿಪುಂಡ್ರವನಿಟ್ಟು ಭಸ್ಮದೇಹಕೆ ಪಟ್ಟೆ/ ಕೊರಳಿಗೆ ರುದ್ರಾಕ್ಷಿ ಸರವ ಕಟ್ಟೆ/
ಕುರಿಗಳ ಕೊಯ್ದು ಯಜ್ಞ ಮಾಳ್ಪೆವೆನುತಲಿಹರಿಹರರೊಂದೆಂಬರನೆಳೆತನ್ನಿರೆಂದು

ಎನ್ನುತ್ತ ಮುಂದುವರಿದು ಅದೇ ರಚನೆಯಲ್ಲಿ-

ಶಿವನೆ ತಾನೆಂದು ಜಾಹ್ನವಿ ತೀರದಲಿ/ ಪಾರ್ಥಿವ ಲಿಂಗವ ಪೂಜಿಪ ಅವಿವೇಕರಾ/
ಶಿವರಾತ್ರಿಗಳಲಿ ಆಹಾರ ಬಿಡುವವರ/ ಪಿಡಿದೆಳೆದು ತನ್ನಿರೋ ಎಂದು/

ಹರಿಹರರು ಒಂದೆಂಬುದನು ಸಾರಾಸಗಟಾಗಿ ನಿರಾಕರಿಸುವುದಲ್ಲದೆ, ಏಕಾದಶಿ ಆಚರಿಸುವವನು ಮತ್ತು ಶಿವರಾತ್ರಿಯುಪವಾಸದವನ ನಡುವೆ ಬೇಧವೆಣಿಸುತ್ತಾರೆ. ಸಾರಿದ ಡಂಗುರ ಯಮನು ಪದ್ಯದಲ್ಲಂತೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದೊಂದು ಪುರುಷಪ್ರಧಾನ ಮತ್ತು ಪಕ್ಕಾ ಸನಾತನ ನೀತಿಸಂಹಿತೆಯನ್ನೇ ನೀಡಿದ್ದಾರೆ-

ಹೊತ್ತಾರೆ ಎದ್ದು ಪತಿಗೆ ಎರಗದವಳ/ ಮೃತ್ತಿಕೆ ಶೌಚ ಮಾಡದೆ ಇಪ್ಪಳ/
ಬೆತ್ತಲೆ ಕುಳಿತು ಮೈದೊಳೆವಳ/ ನಾದಿನಿ ಅತ್ತೆ ಮಾವನ ಬೈವವಳ/
ತಿಲಕಾಯುಧ ಬಿಟ್ಟು ಕುಂಕುಮವಿಡುವವಳ/ ಗಂಡ ನಿರ್ಧನಿಕನೆಂದಪಮಾನ ಮಾಳ್ಪಳ
ಪತಿಗೆ ಬೇಕಾದವರ ಅಪಮಾನ ಮಾಳ್ಪಳ/ ಜಲ ಜಕ್ಕಿ ಸಾಳಿ ಕಂಬಳಿ ಬೋಳಿ ಬಕ್ಕಿ
ಗೊಂಡಳಿ ಮೊದಲಾದವು ದೈವವೆಂದು ತಿಳಿದು ಪಿಶಾಚಿ ಎಂಜಲ ಉಂಡು
ಹಿಗ್ಗುವ ಲಲನೆಯರನೆಳೆತಂದು ನರಕದಲಿಡಿರೆಂದು/ ಸಾರಿದ ಡಂಗುರ ಯಮನು.

ಇದೇ ಪದ್ಯದಲ್ಲಿ ಸಾಲೆಡೆಯಲಿ ಭೇದಮಾಡಿ ಬಡಿಸುವವಳ ಎಳೆದುತನ್ನಿ ಎನ್ನುವವರು ಪರಂಪರಾಗತವಾಗಿ ಪಂಕ್ತಿಬೇಧ ಪಾಲಿಸುತ್ತ ಬಂದಿರುವ ಮಂತ್ರಾಲಯ ಮುಂತಾದ ಮಠಗಳ ಬಗ್ಗೆ ಅಭಿಮಾನದಿಂದ ಸ್ತುತಿಸಿ ಬರೆಯುತ್ತ 'ಕರುಣಿಗಳೊಳಗೆಣೆಗಾಣೆ ನಾ ನಿನಗೆ ಸದ್ಗುರುವರ ರಾಘವೇಂದ್ರ' ಎನ್ನುತ್ತಾರೆ. ಭಕ್ತಿ ಸಾಹಿತ್ಯದಲ್ಲೂ ಅವರ ಆರಾಧ್ಯ ದೈವವನ್ನು ವಿಮರ್ಶಿಸುವ, ಟೀಕಿಸುವ, ಪ್ರಶ್ನಿಸುವ, ದೂರುವ, ಸಾಧಾರ ತಕರಾರು ಮಾಡುವ ಮಾದರಿಗಳಿವೆ. ಆದರೆ ಜಗನ್ನಾಥದಾಸರ ಮಾದರಿ ಸಂಪೂರ್ಣಶರಣಾಗತಿಭಾವದ್ದು. ಆರಾಧಕ ಮನಃಸ್ಥಿತಿಯದ್ದು ಎಂಬುದಕ್ಕೆ ಅವರ ಕೀರ್ತನೆಗಳಲ್ಲಿ ಮೇಲಿಂದ ಮೇಲೆ ಪುನರಾವರ್ತನೆಯಾಗುವ ಲಾಲಿಸು, ಕರುಣಿಸು, ಕಾಯೋ, ಕೈ ಹಿಡಿಯೋ, ದಯಪಾಲಿಸು, ಸ್ಮರಿಸುವೆ, ನಮಿಸುವೆ, ನಂಬಿದೆ, ಕೃತಕೃತ್ಯನಾದೆ, ಧನ್ಯನಾದೆ, ನೀನಲ್ಲದೆ ಕಾಯ್ವರುಂಟೆ, ನಿನ್ನ ಸಂಕಲ್ಪಾನುಸಾರ ಮಾಡೋ ಮುಂತಾದ ಪದಪುಂಜಗಳೇ ಸಾಕ್ಷಿಯಾಗಿವೆ. ಕೇವಲ ಎರಡು ರಚನೆಗಳಲ್ಲಿ ಮಾತ್ರ ಅವರು ಕ್ಷೀಣದನಿಯಲ್ಲಿ ಯಾಕೆ ಮೂಕನಾದ್ಯೋ ಎಂದೂ; ಇದು ನಿನಗೆ ಧರ್ಮವೇ ಇಂದಿರೇಶ? ಎಂದೂ ಪ್ರಶ್ನಿಸಿದ್ದನ್ನು ಬಿಟ್ಟರೆ ಅವರದ್ದು ಮೂಲತಃ ಆರಾಧಕ ಭಾವ, ಅಭಿಮಾನದ ನಿಲುವು ಮತ್ತು ಸಂಪೂರ್ಣ ಶರಣಾಗತ ಸ್ಥಿತಿ. ಏನನ್ನು ಹೇಳಿದರೂ ಮಧ್ವಸಿದ್ಧಾಂತದ ಚೌಕಟ್ಟಿನೊಳಗೆ ಹೇಳುತ್ತ, ವೈದಿಕ ಸಂಪ್ರದಾಯದ ಔನ್ನತಿಕೆಯ ಮರುಸ್ಥಾಪನೆಯ ನೆಲೆಯಲ್ಲೇ ಅವರ ಕೃತಿಗಳು ವ್ಯವಹರಿಸುತ್ತವೆ. ಸ್ವಾತಂತ್ರ್ಯದ ಅಭೀಪ್ಸೆ, ಪರಕೀಯರ ಆಡಳಿತದ ವಿರುದ್ಧದ ಇಡೀ ಭಾರತೀಯ ಮನಃಸ್ಥಿತಿ ಏಕತ್ರಗೊಂಡಂಥ ಇದೇ ಕಾಲಘಟ್ಟದಲ್ಲಿ ತತ್ವಸಾಹಿತ್ಯ ರಚಿಸಿದ ಷರೀಫರು ಸೂಜಿಯ ರೂಪಕದ ಮೂಲಕ ಕಂಪನಿ ಸರ್ಕಾರದ ವಿರುದ್ಧದ ತಮ್ಮ ಪ್ರತಿಭಟನೆಯನ್ನು ಸೂಚ್ಯವಾಗಿಯಾದರೂ ದಾಖಲಿಸುತ್ತಾರೆ. ಆ ಕಾಲದ ಸಮಾಜೋ-ರಾಜಕೀಯ-ಸಾಂಸ್ಕೃತಿಕ ವಿದ್ಯಮಾನಗಳ ಉಲ್ಲೇಖ ಕೂಡ ಜಗನ್ನಾಥದಾಸರ ರಚನೆಗಳಲ್ಲಿ ಸಿಗುವುದಿಲ್ಲ. ಬದಲಿಗೆ ತಮ್ಮ

ಸೀಮಿತ ವ್ಯಾಪ್ತಿಯ ವಲಯದೊಳಗೆ ಸಂಪರ್ಕಕ್ಕೆ ಬಂದ, ಪ್ರಭಾವಿಸಿದ ಧಾರ್ಮಿಕ-ಆಧ್ಯಾತ್ಮಿಕ ವ್ಯಕ್ತಿಗಳೆಲ್ಲರ ಬಗ್ಗೆ ಸ್ತುತಿ ಪದ್ಯಗಳನ್ನು ರಚಿಸಿರುವುದು ಕಂಡುಬರುತ್ತದೆ. ಸೋಂದೆ ವಾದಿರಾಜರು, ಚೀಕಲಪರ್ವಿ ವಿಜಯದಾಸರು, ಮಂತ್ರಾಲಯದ ರಾಘವೇಂದ್ರಸ್ವಾಮಿಗಳು, ಉತ್ತನೂರು ಗೋಪಾಲದಾಸರು, ಜಯತೀರ್ಥರು, ಕೃಷ್ಣದ್ವೈಪಾಯನರು, ಸತ್ಯಬೋಧರು, ವರದೇಂದ್ರರು, ವ್ಯಾಸತತ್ವಜ್ಞರು, ಪುರಂದರ ದಾಸರು, ಐಜಿ ಆಚಾರ್ಯರು ಮುಂತಾಗಿ ಒಟ್ಟು ೪೦ಕ್ಕೂ ಮಿಕ್ಕಿ ಸ್ತುತಿ ಪದ್ಯಗಳೇ ತುಂಬಿಕೊಂಡಿವೆ. ಅದರಲ್ಲೂ ಎಂಟು ಪದ್ಯಗಳು ರಾಘವೇಂದ್ರಸ್ವಾಮಿಗಳನ್ನೇ ಕುರಿತಾಗಿವೆ. ತತ್ವಸುವ್ವಾಲಿಗಳಂತೂ ಎಲ್ಲವೂ ದೇವರ ಸ್ತೋತ್ರಗಳಾಗಿವೆ. ಗಮನಿಸಬೇಕಾದ ಅಂಶವೆಂದರೆ ವಚನಕಾರರಿಗಿರುವಂತೆ ಶ್ರದ್ಧೆಯ ಒಂದು ಮನೋರೂಪಕ ಕೇಂದ್ರವಿರದೆ ಅವರ ಭಕ್ತಿಯು ರಾಮ, ಹನುಮ, ಭೀಮ, ವ್ಯಾಸ, ಕೃಷ್ಣ, ರಾಘವೇಂದ್ರ, ವೆಂಕಟೇಶ, ನಾರಸಿಂಹ, ಪಂಡರಿನಾಥ ಮುಂತಾದ ಹಲವು ರೂಪಗಳಲ್ಲಿ ಹಂಚಿಹೋಗಿದೆ. ಹಾಗೆಂದು ಅವರಿಗೆ ತಮ್ಮ ಭಕ್ತಿಕೇಂದ್ರದ ಬಗ್ಗೆ ಸ್ಪಷ್ಟ ನಿಲುವಿಲ್ಲ ಎಂಬ ನಿಲುವಿಗೆ ಬರಲಾಗದು. ಏಕೆಂದರೆ ಇಷ್ಟೆಲ್ಲ ನಾಮ-ರೂಪಗಳನ್ನೂ ಅವರು ಪರಿಭಾವಿಸುವುದು ಮಧ್ವಾಂತರ್ಗತ ಎಂಬ ದೃಷ್ಟಿಕೋನದಿಂದಲೇ ಎಂಬುದನ್ನು ಗಮನಿಸಬೇಕು. ಶೂದ್ರನಾದ ವೇದವ್ಯಾಸನೂ ಕೂಡ ಮಧ್ವಾಂತರ್ಗತ ವೇದವ್ಯಾಸನಾಗಿ ರೂಪಾಂತರಗೊಂಡು ಈ ಒಳಗೊಳ್ಳುವ ನೀತಿಗೆ ಪಕ್ಕಾಗಿದ್ದಾನೆ. ಹಾಗಾಗಿ ಎಷ್ಟೇ ಹರಿ ಸರ್ವೋತ್ತಮನೆಂದರೂ, ಭಕ್ತಿ ಮತ್ತು ಆಧ್ಯಾತ್ಮಗಳನ್ನು ಸಾಧನಗಳಾಗಿ ಬಳಸಿಕೊಂಡು ವೈದಿಕ ಮತದ ಪುನರುಜ್ಜೀವನ ಮತ್ತು ಪುನರ್‌ಸ್ಥಾಪನೆಗಾಗಿ ಶ್ರಮಿಸಿದರೂ ರಾಮ, ಕೃಷ್ಣ, ವ್ಯಾಸ ಮೊದಲಾದ ಅವೈದಿಕ ಪ್ರತಿಭೆಗಳನ್ನೂ ಒಳಗೊಳ್ಳಬೇಕು. ಶ್ರೇಷ್ಠವಾದುದು ಎಲ್ಲೇ ಇರಲಿ ಅದು ಮಧ್ವಾಂತರ್ಗತವಾಗಿ ಒಳಬಂದು ಬಿಡಬೇಕು.

ಐದನೇ ಶತಮಾನದಲ್ಲೇ ಪ್ರತ್ಯಕ್ಷ, ಅನುಮಾನ ಮತ್ತು ಶಬ್ದವೆಂಬ ಪ್ರಮಾಣಗಳನ್ನು, ಅವತಾರಗಳನ್ನು, ಕರ್ಮಫಲ ಸಿದ್ಧಾಂತವನ್ನು ನಿರಾಕರಿಸಿದ ಬುದ್ಧ ಹಾಗೂ ಹನ್ನೆರಡನೇ ಶತಮಾನದಲ್ಲಿ ಅದರ ಮುಂದುವರಿಕೆಯಂತೆ ಸಮಾಜೋ-ಸಾಹಿತ್ಯಿಕ ಚಳುವಳಿ ರೂಪಿಸಿದ ವಚನಕಾರರ ನಂತರ ಬಂದ ಈ ಸಾಹಿತ್ಯ ಪಂಥ ಅವೆರಡರ ಮಿತಿಗಳನ್ನು ನಿವಾರಿಸಿಕೊಂಡು ಮತ್ತಷ್ಟು ಜನಪರವಾಗುವ ಎಲ್ಲ ಅವಕಾಶವನ್ನು ಬದಿಗೆ ಸರಿಸಿ ಹಿನ್ನಡೆಯ ಪಯಣ ಆರಂಭಿಸಿದಂತಿದೆ. ಪುನಃ ಸ್ಮೃತಿಗಳೇ ಪ್ರಮಾಣವೆಂಬುದರ ಸ್ಥಾಪನೆಯ ಹಂಬಲ, ಕರ್ಮಫಲ ಸಿದ್ಧಾಂತದ ಬೋಧೆ ಹಾಗೂ ಅವತಾರಗಳನ್ನು ಮುನ್ನೆಲೆಗೆ ತಂದುದರ ಹಿನ್ನೆಲೆಯನ್ನು ಗಮನಿಸಿದಾಗ ಈ ಮಾತು ಮತ್ತಷ್ಟು ಸ್ಪಷ್ಟವಾಗುತ್ತದೆ. ಜಗನ್ನಾಥದಾಸರು ತಮ್ಮ ಒಂದು ತತ್ವಸುವ್ವಾಲಿಯಲ್ಲಿ 'ವಿಸ್ಮೃತಿಯೇ ನರಕ; ಸ್ಮೃತಿಯೇ ಸ್ವರ್ಗ. ಸ್ಮೃತಿ ಸ್ವರ್ಗವಿರೆ ಬಾಹ್ಯನರಕಕ್ಕೆ ಅಂಜೆನೆಂದೆಂದು' ಅನ್ನುತ್ತಾರೆ. ಇನ್ನು ಅವತಾರಗಳ ಕುರಿತಂತೆ ದಶಾವತಾರ ಸ್ತೋತ್ರವನ್ನೇ ಬರೆದಿದ್ದಾರೆ. ಅವರ

ಗುರುಗಳಾದ ಗೋಪಾಲದಾಸರು ಕೆಸರಿಂದ ಕೆಸರು ತೊಳೆದಂತೆ ಕರ್ಮದ ಪಥವು ಎನ್ನುತ್ತಾರೆ.

ಹರಿಕಥಾಮೃತಸಾರ:

'ವಿಷಯ, ರೂಪ, ಭಾಷೆಗಳಲ್ಲಿ ವಿಶಿಷ್ಟ ಕಾಂತಿ ಹೊಂದಿರುವ ಹರಿಕಥಾಮೃತಸಾರವು ಭಕ್ತಿಸಾಹಿತ್ಯ ಜಗತ್ತಿನ ಅನರ್ಘ್ಯ ರತ್ನವಾಗಿದೆ' ಎಂದು ರಂ.ಶ್ರೀ.ಮುಗಳಿಯವರು ಅಭಿಪ್ರಾಯಪಟ್ಟಿರುವ ಈ ಕೃತಿಯು ೧೪೦ ಪುಟಗಳಷ್ಟು ವಿಸ್ತಾರದಲ್ಲಿ ಹರಡಿಕೊಂಡಿದ್ದು, ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದೆ. ಜ್ಞಾನ-ಭಕ್ತಿ-ವೈರಾಗ್ಯ ವಿಷಯಗಳಿಂದ ಸಂಪುಷ್ಟವಾಗಿರುವ ಈ ಕೃತಿಯು ದಾಸಸಾಹಿತ್ಯದ ಮೇರು ಕೃತಿ ಎಂದು ಪರಿಗಣಿತವಾಗಿದೆ. ಈ ಕೃತಿಯಲ್ಲಿ ಒಟ್ಟು ೩೨ ಸಂಧಿಗಳಿದ್ದು ಕೇವಲ ಐದು ಪದ್ಯಗಳಿರುವ ಅನುಕ್ರಮಣಿಕಾ ತಾರತಮ್ಯ ಸಂಧಿಯು ಅತಿ ಚಿಕ್ಕ ಸಂಧಿಯಾಗಿದ್ದರೆ; ೬೩ ಪದ್ಯಗಳಿರುವ ಕಲ್ಪಸಾಧನ ಸಂಧಿಯು ಅತಿ ದೊಡ್ಡ ಸಂಧಿಯಾಗಿದೆ. ತೆಲುಗು, ತಮಿಳು ಮತ್ತು ಮರಾಠಿ ಭಾಷೆಗಳಿಗೆ ಅನುವಾದವಾಗಿರುವ ಈ ಕೃತಿಗೆ ಕನ್ನಡದಲ್ಲಿ ಆರು ವ್ಯಾಖ್ಯಾನ ಗ್ರಂಥಗಳು ರಚಿತವಾಗಿದ್ದರೆ ಸಂಸ್ಕೃತ ಭಾಷೆಯಲ್ಲಿ ಎರಡು ವ್ಯಾಖ್ಯಾನ ಗ್ರಂಥಗಳು ಪ್ರಕಟವಾಗಿವೆ.

ಕನ್ನಡದ ಕೃತಿಯೊಂದಕ್ಕೆ ಸಂಸ್ಕೃತ ಭಾಷೆಯಲ್ಲಿ ವ್ಯಾಖ್ಯಾನಗಳು ಪ್ರಕಟವಾಗಿರುವುದು ಒಂದು ಅಪರೂಪದ ವಿದ್ಯಮಾನವಾಗಿದೆ ಎಂದು ಕೆಲವರು ಅಭಿಮಾನಪಡುವರಾದರೂ ಜಗನ್ನಾಥದಾಸರ ಭಾಷೆಯೇ ಬಹುಪಾಲು ಸಂಸ್ಕೃತಭೂಯಿಷ್ಟವಾಗಿದೆ. ಕೆಲವೆಡೆಗಳಲ್ಲಂತೂ ಇದು ಕನ್ನಡ ಲಿಪಿಯಲ್ಲಿ ಬರೆದಿರುವ ಸಂಸ್ಕೃತ ಕಾವ್ಯವೆಂಬ ಭಾವನೆಯನ್ನು ಬಲಗೊಳಿಸುವಂತೆ ಅವರ ಭಾಷೆ ಸಂಸ್ಕೃತಭೂಯಿಷ್ಟವಾಗಿದೆ. ಫಲವಿದು ಬಾಳ್ವುದಕೆ ಎಂಬ ಪದ್ಯದ-

ಫಲವಿದು ಬಾಳ್ದುದಕೆ/ ಸಿರಿನಿಲಯನ ಗುಣಗಳ ತಿಳಿದು ಭಜಿಸುವುದೇ
ಸ್ವೋಚಿತ ಕರ್ಮಗಳಾಚರಿಸುತ ಬಹು/ ನೀಚರಲ್ಲಿಗೆ ಪೋಗಿ ಯೋಚಿಸದೆ/
ಖೇಚರ ವಾಹ ಚರಾಚರ ಬಂಧಕ/ ಮೋಚಕನೆಂದ್ಯೋಚಿಸುತಿಪ್ಪುದೆ/

ಸಾಲುಗಳನ್ನು ಉದಾಹರಣೆಗೆ ಗಮನಿಸಬಹುದು. ಹಲವಾರು ಅಚ್ಚಕನ್ನಡದ ರಚನೆಗಳು ಇವೆಯಾದರೂ ಒಟ್ಟಾರೆಯಾಗಿ ಅವರ ಭಾಷೆಯ ಮೇಲೆ ಸಂಸ್ಕೃತದ ದಟ್ಟ ಪ್ರಭಾವವಿರುವುದನ್ನು ಗುರುತಿಸಬಹುದಾಗಿದೆ. ಬಹುಶಃ ಅವರ ಕಾವ್ಯದ ತುಂಬ ಧಾರ್ಮಿಕ-ಆಧ್ಯಾತ್ಮಿಕ ಪಾರಿಭಾಷಿಕ ಪದಗಳು ತುಂಬಿರುವುದು ಹಾಗೂ ಅವರ ಪೂರ್ವಾಶ್ರಮದ ಬಹುಭಾಗ ಆಯುಷ್ಯವನ್ನು ಸಂಸ್ಕೃತ ಅಧ್ಯಯನ ಮತ್ತು ಅಧ್ಯಾಪನಗಳಲ್ಲೇ ಕಳೆದಿರುವಂಥ ಪಂಡಿತರಾಗಿರುವುದು ಇದಕ್ಕೆ ಕಾರಣವಾಗಿರಬಹುದೆನಿಸುತ್ತದೆ. ಲೀಲಾಜಾಲವಾಗಿ ಹರಿವ ನದಿಯಂತೆ ಆದಿಪ್ರಾಸ, ಮಧ್ಯಪ್ರಾಸ, ಅನುಪ್ರಾಸಗಳ ಮೂಲಕ ಸಾಗುವ ಈ ಕಾವ್ಯವು ಹಲವಾರು ಕಡೆಗಳಲ್ಲಿ ತನ್ನ ಉಪಮಾಪ್ರತಿಭೆಯ ಮಿಂಚನ್ನು ಹರಿಸಿ ಕಾವ್ಯಾಸಕ್ತರ ಮನಸ್ಸನ್ನು ಹಿಡಿದು

ನಿಲ್ಲಿಸುವಂಥ ಚಮತ್ಕೃತಿಗಳನ್ನು ರಚಿಸಿದೆ. ಶ್ವಾಸಗಳೇ ಚಾಮರ, ಮಣಿಗಳೊಳಗಿಹ ಸೂತ್ರದಂದದಿ, ಸೂಜಿ ಕರದಲಿ ಪಿಡಿದು ಸಮರವ ಜಯಿಸುವೆನೆಂಬ ಜ್ಞಾನಿಗಳು, ಜಲ್ಲಡಿಯ ನೆಳಲಂತೆ ಭವದ ಸೌಖ್ಯ ಇಂಥವು ಹಿಡಿದು ನಿಲ್ಲಿಸಿ ಮೆಲುಕು ಹಾಕುವಂತಿವೆ. ಆದರೆ ಮದ್ದಾನೆಯ ರೂಪಕವನ್ನವರು ಎರಡು ಕಡೆಗಳಲ್ಲಿ ವಿರುದ್ಧಾರ್ಥಗಳಲ್ಲಿ ಬಳಸಿರುವುದು ಗಮನಾರ್ಹವಾಗಿದೆ. ನಾಡೀಪ್ರಕರಣ ಸಂಧಿಯಲ್ಲಿ 'ಮದ್ದಾನೆಯಂದದಿ ಚರಿಸು ಜಗದೊಳಗೆ' ಎನ್ನುತ್ತ ಮದ್ದಾನೆಯ ರೂಪಕವನ್ನು ಇತ್ಯಾತ್ಮಕ ದನಿಯಲ್ಲಿ ಬಿಂಬಿಸುವ ದಾಸರೇ ಮುಂದೆ ಸರ್ವಪ್ರತೀಕ ಸಂಧಿಯಲ್ಲಿ 'ಮದ್ದಾನೆ ಪಕ್ವ ಕಪಿತ್ಥ ಫಲ ಭಕ್ಷಿಸಿದವೋಲಹುದು' ಎಂದು ಅದೇ ರೂಪಕವನ್ನು ನೇತ್ಯಾತ್ಮಕ ದನಿಯಲ್ಲಿ ಬಿಂಬಿಸುತ್ತಾರೆ. ಭಾಷಿಕವಾಗಿ ಹಲವೆಡೆ ಇವರ ಮೇಲೆ ವಚನಕಾರರ ಪ್ರಭಾವವಿರುವುದಂತೆ ಕಾಣಿಸುವುದಾದರೂ ತಾತ್ವಿಕವಾಗಿ ಅದರ ಸಂಪೂರ್ಣ ನಿರಾಕರಣೆಯಾಗಿದೆ.

ಜಾತಿ, ವರ್ಣಾಶ್ರಮ ವ್ಯವಸ್ಥೆ, ಜನವಿರೋಧಿ ಪ್ರಭುತ್ವ, ಸಾಮಾಜಿಕ ಅನಿಷ್ಟಗಳನ್ನು ವಚನ ಚಳುವಳಿಯು ನಿರಾಕರಿಸಿದಂತೆ ಜಗನ್ನಾಥದಾಸರ ನಂತರ ಬಂದ ಕನ್ನಡದ ಮಹತ್ವದ ಅನುಭಾವಿ ಕವಿ ಮಧುರಚೆನ್ನರೂ ನಿರಾಕರಿಸುತ್ತಾರೆ. ಆದರೆ ದಾಸಸಾಹಿತ್ಯದ ಎರಡನೇ ಘಟ್ಟವು ಅವುಗಳನ್ನು ಎತ್ತಿಹಿಡಿಯುತ್ತದೆ. ಪಂಕ್ತಿಭೇದವನ್ನು ನಿರಾಕರಿಸಿ 'ಸಾಲೆಡೆಯಲಿ ಭೇದ ಮಾಡಿ ಬಡಿಸುವವಳ ಎಳೆದುತನ್ನಿರೋ' ಎನ್ನುವ ಇವರೇ, ಪರಂಪರಾಗತವಾಗಿ ಪಂಕ್ತಿಭೇದವನ್ನು ಪಾಲಿಸುತ್ತ ಬಂದಿರುವ ವೈದಿಕ ಧರ್ಮ ಹಾಗೂ ಮಂತ್ರಾಲಯ ಮಠಗಳ ಬಗ್ಗೆ ಪ್ರಜ್ಞಾಪೂರ್ವಕ ಉಪೇಕ್ಷೆ ತೋರುತ್ತ ಜಾಣಪಕ್ಷಪಾತ ತೋರುವುದು ಅವರ ದ್ವಂದ್ವ ನಿಲುವಿಗೆ ಕನ್ನಡಿ ಹಿಡಿದಂತಿದೆ.

ಮಧ್ಯಕಾಲೀನ ದಕ್ಷಿಣ ಭಾರತದ ಪ್ರಮುಖ ಭಕ್ತಿಕವಿಗಳಾದ ಕಬೀರ್‌ದಾಸ, ತುಳಸಿದಾಸ, ಮೀರಾ, ರಹೀಮ್, ಹರಿಹರ ಮುಂತಾದವರಿಗೆ ಹೋಲಿಸಿದರೆ ಜಗನ್ನಾಥದಾಸರಲ್ಲಿ ಕಾಣಸಿಗುವ ಸಾಮಾಜಿಕ ವಿನ್ಯಾಸದ ಚಿತ್ರಣವು ಅತ್ಯಂತ ತೆಳುವಾದುದೇ ಆಗಿದೆ. ಗಿರಿಜಾ ಕಲ್ಯಾಣ ಹೊರತುಪಡಿಸಿ ತನ್ನ ಎಲ್ಲ ಕಾವ್ಯಗಳಲ್ಲಿ ತಳವರ್ಗದವರನ್ನು ನಾಯಕರಾಗಿ ಚಿತ್ರಿಸುವ ಹರಿಹರನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ತನ್ನ ಮಲ್ಹಣನ ರಗಳೆ ಎಂಬ ಕಾವ್ಯದಲ್ಲಿ ವೇಶ್ಯೆಗೆ ಶಿವಗಣ ಪದವಿ ಕೊಡಿಸುತ್ತಾನೆ. ವಚನಕಾರರಂತೂ ಸೂಳೆ ಸಂಕವ್ವೆಯನ್ನು ಕೂಡ ಸಮಭಾವದಲ್ಲಿ ತಮ್ಮ ಚಳುವಳಿಯ ಭಾಗವಾಗಿ ಪ್ರಾಂಜಲ ಮನಸ್ಸಿನಿಂದ ಸ್ವೀಕರಿಸುತ್ತಾರೆ. ಅಂಥ ಕಾಲದಲ್ಲಿಯೇ ಸ್ತ್ರೀವಿರೋಧಿ ನೀತಿಸಂಹಿತೆಯನ್ನು ಪ್ರತಿಪಾದಿಸುತ್ತ ಅದನ್ನು ಪಾಲಿಸಬೇಕೆಂದು ಪರೋಕ್ಷ ಒತ್ತಡದ ವಾತಾವರಣ ನಿರ್ಮಿಸುವ ರಚನೆಗಳಿಂದಾಗಿ ಒಂದರ್ಥದಲ್ಲಿ ಜಾತಿಮುಕ್ತ ಹಾಗೂ ಲಿಂಗತಾರತಮ್ಯ ಮುಕ್ತ ನಾಡಿನ ಕನಸನ್ನು ಮತ್ತೆ ಹಿನ್ನಡೆಗೆ ಒಯ್ದಂತೆ ಈ ಕಾಲದ ಸಾಹಿತ್ಯವನ್ನು ನೋಡಬಹುದಾಗಿದೆ. ಕನಕದಾಸರು, ಪುರಂದರದಾಸರು, ಗೋನವಾರದ ರಾಮದಾಸರು ಮುಂತಾದ

ಅವೈದಿಕರು ಹರಿಶ್ರೇಷ್ಠತೆಯನ್ನು ಒಪ್ಪಿಕೊಂಡ ಮೇಲೇ ಅವರನ್ನು ಒಳಗೆ ಬಿಟ್ಟುಕೊಳ್ಳಲಾಯಿತು.

ಕನ್ನಡ ವಿಮರ್ಶೆಯು ಬಹುಪಾಲು ರೂಪುಗೊಂಡುದು ಇಂಗ್ಲೀಷಿನ ವಿಮರ್ಶೆಯ ಪ್ರಭಾವದಲ್ಲಿ. ಅಲ್ಲಿನ ಸಾಮಾಜಿಕ-ಸಾಂಸ್ಕೃತಿಕ ಸನ್ನಿವೇಶಗಳು ಹಾಗೂ ಸಾಹಿತ್ಯಿಕ ಪ್ರಸ್ಥಾನಗಳ ವಿಶ್ಲೇಷಣೆಗಳಿಗೆ ಅನುಗುಣವಾದ ವಿಮರ್ಶಾಪರಿಕರಗಳು ಅಲ್ಲಿ ರೂಪುಗೊಂಡವು. ಅವನ್ನೇ ನಾವು ಎರವಲು ಪಡೆದೆವು. ಆದರೆ ಸಂಪೂರ್ಣ ಭಾರತೀಯ ಮನೋಭೂಮಿಕೆಯಲ್ಲಿ ರೂಪುಗೊಂಡಿರುವ, ಇಂಥ ಪ್ರದೇಶ ವಿಶಿಷ್ಟ ಆಧ್ಯಾತ್ಮಿಕ-ಅನುಭಾವಿಕ ಕಾವ್ಯಗಳ ವಿಮರ್ಶೆಗೆ ಬೇರೆಯದೇ ಬಗೆಯ ವಿಮರ್ಶಾಪರಿಕರಗಳ ಅಗತ್ಯವಿದೆ ಎನಿಸುತ್ತಿದೆ. ಅದೇ ಕಾರಣಕ್ಕೇ ನಾವು ವಚನಕಾರರು, ಕೀರ್ತನಕಾರರು, ತತ್ವಪದಕಾರರು ಹಾಗೂ ಮಧುರಚೆನ್ನರಂಥ ಅನುಭಾವೀ ಕವಿಗಳನ್ನು ಭಾಷೆ, ಶೈಲಿ, ಸಂಸ್ಕೃತಿಗಳ ನೆಲೆಯಿಂದಲೇ ಪ್ರವೇಶಿಸಲು ಹೊರಟು ಸೋಲುವಡೆಯುತ್ತೇವೆ. ಪ್ರಾಯಶಃ ಅದೇ ಕಾರಣಕ್ಕೆ

'ಬುದ್ಧಿವಿದ್ಯಾಬಲದಿ ಪೇಳಿದ ಶುದ್ಧಕಾವ್ಯವಿದಲ್ಲ/ ಮಧ್ವವಲ್ಲಭ ತಾನೇ
ಹೃದಯದೊಳಿದ್ದು ನುಡಿದಂದದಲಿ ನುಡಿದೆನು'

ಎನ್ನುವುದರ ಜೊತೆಗೆ

'ಭಕುತಿಯ ಬಗೆಯನರಿಯದ ಮಾನವರಿಗಿದು/ ಒಗಟಿನಂದದಿ ತೋರುತಿಪ್ಪುದು
ಎಲ್ಲ ಕಾಲದಲಿ'

ಎನ್ನುತ್ತಾರೆ. ಈ ಸಮಸ್ತ ಪ್ರಾಣಿಗಳಲಿ ರಮೇಶನಿಹನು, ಸರ್ವಜೀವರು ದಾನಪಾತ್ರರು ಮೂರು ಲೋಕದಲಿ ಎಂಬ ಸಾಲುಗಳನ್ನು ಬರೆದಾದ ಮೇಲೆ ಕರ್ಮವಿಮೋಚನ ಸಂಧಿಯ ೩೦ನೇ ಪದ್ಯದಲ್ಲಿ-

ಬಲ್ಲರೆಂಬುವರಿಲ್ಲನೀತನ ಒಲ್ಲೆನೆಂಬುವರಿಲ್ಲ/
ಲೋಕದೊಳೀತನಿಲ್ಲದಿಹ ಸ್ಥಳವಿಲ್ಲವಲ್ಯೆ ಜ್ಞಾತ ಜನರಿಲ್ಲ
ಬೆಲ್ಲದಚ್ಚಿನ ಬೊಂಬೆಯಂದದಿ ಎಲ್ಲರೊಳಗಿರುತಿಪ್ಪ/
ಶ್ರೀ ಭೂನಲ್ಲ ಇವಗೆಣೆಯಿಲ್ಲ ಅಪ್ರತಿಮಲ್ಲ ಜಗಕೆಲ್ಲ

ಅಂತ ಬರೀತಾರೆ. ಮಧುರಚೆನ್ನರು ಕೂಡ-

'ಬುದ್ಧಿಭಾವದ ಸೀಮೆ ಇಲ್ಲಿಗಾಯಿತ್ತಯ್ಯ
ಮುಂದೆ ದೇವನ ದಿವ್ಯ ರಾಜ್ಯವಯ್ಯ'

ನಮ್ಮ ಅರಿವಿನಾಚೆಗಿರುವ ದೇವನ ದಿವ್ಯ ರಾಜ್ಯದ ಬಗ್ಗೆ ಬರೆಯುತ್ತ ನಾವು ಪುನಃ ನಮ್ಮ ಸೀಮಿತ ಪದಪುಂಜದ, ಅರಿವಿನ ಮಿತಿಯೊಳಗಡೆಯೇ ಸುಳಿದಿರುಗುತ್ತಿರುವ ಸವಕಲು ಪದಗಳ ಮೊರೆ ಹೋಗುತ್ತಿದ್ದೇವೆಯೇ ಎನಿಸುತ್ತಿದೆ. ಸ್ವತಃ ಹೊಗೆಯಾಗದೆ ಹೊಗೆಯ ಹೊಳೆಯನ್ನು ಈಸಲು ಸಾಧ್ಯವಿಲ್ಲವೇನೋ.

ಪೂರಕ ಟಿಪ್ಪಣಿಗಳು

ಹರಿಕಥಾಮೃತಸಾರದ ವಿವಿಧ ಸಂಧಿಗಳಲ್ಲಿ ಬರುವ ಕೆಲವು ರೂಪಕಾತ್ಮಕ ಸಾಲುಗಳು

ಭೋಜನ ಸಂಧಿ–

ಅಗಣಿತಾತ್ಮ ಸುಭೋಜನ ಪದಾರ್ಥಗಳ ಒಳಗೆ/
ಅಖಂಡವಾದೊಂದಗುಳು ಅನಂತಾಂಶದಿಂದಲಿ ಖಂಡನೆಂದೆನಿಸಿ

ವಿಭೂತಿ ಸಂಧಿ–

ತೃಷಾರ್ಥನು ಜಲವ ಕೊಂಬಂತೆ
ಹೃದಯವೆ ಮಂಟಪ
ಮರಳಿ ಬೀಸುವ ಶ್ವಾಸಗಳೇ ಚಾಮರ
ಸರ್ವಪದಾರ್ಥರೊಳು ತುದಿಮೊದಲು ತುಂಬಿಹನೆಂದು ಚಿಂತಿಸು
ಬಿಂಬರೂಪದಲಿ
ಭಗವದ್ದತ್ತಕರ್ಮಗಳುದಧಿಶಯನನಿಗರ್ಪಿತ
ಸಸ್ಮರಿಸುವರು ಸಂತಯಿಪನೆಂದುರುಪರಾಕ್ರಮನುಚಿತ ಸಾಧನ
ಯೋಗ್ಯತೆಯನರಿತು

ಪಂಚಪಹಾಯಜ್ಞಸಂಧಿ–

ಸಾಗರದೊಳಿಹ ಜಲಭೇದಾಗಸದೊಳಿಪ್ಪಬ್ದ ಬಲ್ಲವು/
ಕಾಗೆಗುಬ್ಬಿಗಳರಿಯಬಲ್ಲವೆ/ ಅಜ್ಞಾನಿಗಳವಡದು

ಪಂಚತನ್ಮಾತ್ರಾ ಸಂಧಿ–

ಕಲುಷವಿಲ್ಲದ ದರ್ಪಣದಿ ಸರ್ವಪದಾರ್ಥಗಳು ಕಂಗೊಳಿಸುವಂದದಿ
ಪೊಳೆವ ಬಹುರೂಪದಲಿ ಸಜ್ಜನರ ಮನದರ್ಪಣದಿ

ಪ್ರಳಯ ಜಲಧಿಯೊಳುಳ್ಳ ನಾವೆಯು/ ಹೊಲಬುಗಾಣದೆ ಸುತ್ತುವಂದದಿ
ಜಲರುಹೇಕ್ಷಣನಮಲಗುಣರೂಪಗಳ ಚಿಂತಿಸುತ/ ನೆಲೆಯಗಾಣದೆ
ಮಹಾಲಕ್ಷ್ಮಿ ಚಂಚಲವನ್ನೈದಿಹಳ
ಅಲ್ಪಜೀವರಿಗಳವಡುವುದೇನಿನ ಮಹಿಮೆಗಳೀ ಜಗತ್ತ್ರಯದಿ

ಮಾತೃಕಾ ಸಂಧಿ–

ಮೌಳಿಯೊಳಿಹ ವಾಸುದೇವನು/ ಏಳದಿಕ ನವಜಾದಿರೂಪವ/ ತಾಳಿ
ಮುಖದೊಳು ನಯನಶ್ರವಣಾದಿ ಅವಯವಗಳಲಿ/ ಆಳರಸು ತಾನಾಗಿ
ಸಂತತ ಸುಲೀಲೆಗೈಯುತಲಿಪ್ಪ/ಸುಖಮಯ ಕೇಳಿ ಕೇಳಿಸಿ, ನೋಡಿ
ನೋಡಿಸಿ ನುಡಿದು ನುಡಿಸುವನು/೧೭/
ಲೋಕಾದಧಿಪನು ಭಕ್ಷುಕನ ಮನೆಯೌತಣವ ಕೊಂಬಂತೆ/೨೪/

ಉದಾತ್ತಾನುದಾತ್ತ ಸಂಧಿ–

ಈ ಸಮಸ್ತಪ್ರಾಣಿಗಳಲಿ ರಮೇಶನಿಹನೆಂದರಿತು/ ಅವರಭಿಲಾಶೆಗಳ ಪೂರೈಸುವುದೆ ಮಹಾಯಜ್ಞ ಹರಿಪೂಜೆ /೨/

ಕುದುರೆಬಾಲದ ಕೊನೆಯ ಕೂದಲ/ಲದಿ ವಿಭಾಗದವ ಮಾಡಿ ಶತವಿಧ/ ವಿಧಿಭವಾದಿ ಸಮಸ್ತದಿವಿಜರ ಮೊದಲು ಮಾಡಿ/ ತೃಣಾಂತ ಜೀವರೊಳು/ ಅಧಿಕ ನ್ಯೂನ್ಯತೆ ಜೀವಯಿಲ್ಲವೆಂದಿಗು ಜೀವ ಪರಮಾಣು /೭/

ಸರ್ವಪ್ರತೀಕಸಂಧಿ–

ಸರ್ವದೇಶವು ಪುಣ್ಯದೇಶವು ಸರ್ವಕಾಲವು ಪುಣ್ಯಕಾಲವು/ಸರ್ವಜೀವರು ದಾನಪಾತ್ರರು ಮೂರು ಲೋಕದೊಳು/ ಸರ್ವಮತಗಳೆಲ್ಲ ಮಂತ್ರವು/ ಸರ್ವಕೆಲಸಗಳೆಲ್ಲ ಪೂಜೆಯು/ ಶರ್ವವಂದ್ಯನ ವಿಮಲಮೂರ್ತಿ ಧ್ಯಾನವುಳ್ಳವಗೆ/ ೪/ (ಉದಾತ್ತ ಚರಿತಾನಾಂ ವಸುದೈವ ಕುಟುಂಬಕಂ– ಉಪನಿಷತ್) (ಮಾನವ ಜನ್ಮ ತಾನೊಂದೇ ವಲಂ– ಪಂಪ)

ಬುದ್ಧಿ ವಿದ್ಯಾಬಲದಿ ಪೇಳಿದ ಶುದ್ಧಕಾವ್ಯವಿದಲ್ಲ/ ಮಧ್ವವಲ್ಲಭ ತಾನೆ ಹೃದಯದೊಳಿದ್ದು ನುಡಿದಂದದಲಿ ನುಡಿಹೆನು/ ೧೮/

ಭಕುತಿಯ ಬಗೆಯನರಿಯದ ಮಾನವರಿಗಿದು/ ಒಗಟಿನಂದದಿ ತೋರುತಿಪ್ಪುದು ಎಲ್ಲ ಕಾಲದಲಿ/೨೦/

ನಾಡೀಪ್ರಕರಣ ಸಂಧಿ–

ಮಣಿಗಳೊಳಗಿಹ ಸೂತ್ರದಿಂದದಿ/ ಪ್ರಣವಪಾದ್ಯನುಸರ್ವಚೇತನ/ ಗಣದೊಳಿದ್ದನವರತ ಸಂತೈಸುವನು ತನ್ನವರ/೭/

ಲವಣಮಿಶ್ರಿತ ಜಲವು ತೋರ್ಪುದು ಲವಣದೋಪಾದಿಯಲಿ ಜಿಹ್ವೆಗೆ/ ವಿವರಗೈಸಲು ಶಕ್ಯವಾಗುವುದೇನೋ ನೋಳ್ಪರಿಗೆ/ ೨೬/

ಪಿತೃಗಣ ಸಂಧಿ–

ಸೂಜಿಕರದಲಿ ಪಿಡಿದು ಪಿಡಿದು ಸಮರವ ನಾ ಜಯಿಸುವೆನು ಎಂಬ ಜ್ಞಾನಿಗಳು/೧೬/

ಶ್ವಾಸಸಂಧಿ–

ಬೆಳಗಿದ್ದೂಜಿಯು ನೋಳಪ್ರಿಗೆ ಥಳಥಳಿಸುತಲಿ ಕಂಗೊಳಿಸುವಂದದಿ/ ತೊಳೆದು ದೇಹವ/ನಾಮಮುದ್ರೆಗಳಿಂದಲಂಕರಿಸಿ

ಲೇಖಕರ ವಿಳಾಸ

೧. **ಡಾ. ವಿಠಲರಾವ್ ಟಿ. ಗಾಯಕ್ವಾಡ್**
ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ.

೨. **ಡಾ. ಎ. ರಘುರಾಂ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು
ನಿರ್ವಹಣಾ ಕಾಲೇಜು, ಬೆಂಗಳೂರು.

೩. **ಡಾ.ಸಿ.ಬಿ. ಚಿಲ್ಕರಾಗಿ**
ಪ್ರಾಂಶುಪಾಲರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕೊಪ್ಪಳ.

೪. **ಎನ್.ಎಸ್. ಗುಂಡೂರ**
ಇಂಗ್ಲೀಷ್ ಅಧ್ಯಯನ ವಿಭಾಗ,
ದಾವಣಗೆರೆ ವಿಶ್ವವಿದ್ಯಾನಿಲಯ,
ದಾವಣಗೆರೆ.

೫. **ಡಾ.ಆರ್.ಮಹೇಶ್**
ಪ್ರಾಂಶುಪಾಲರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಭರಮಸಾಗರ

೬. **ಡಾ. ರವಿಶಂಕರ ಎ.ಕೆ**
ಸಹಾಯಕ ಪ್ರಾಧ್ಯಾಪಕ, ಕನ್ನಡ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು,
ಬೆಂಗಳೂರು.

೭. **ಡಾ.ಚೈತಾಲಿ ಕೆ. ಎಸ್.**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ),
ಗುಬ್ಬಿ, ತುಮಕೂರು ಜಿಲ್ಲೆ.

೮. **ಡಾ. ಟಿ.ಎಲ್. ಜಗದೀಶ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಮಹಾರಾಣಿ ಮಹಿಳಾ ಕಲಾ ಕಾಲೇಜು,
ಮೈಸೂರು.

೯. **ಡಾ. ಬಾಳಪ್ಪ .ಎ.ಬಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಮಧುಗಿರಿ.

೧೦. **ಡಾ. ಚಿತ್ತಯ್ಯ .ಕೆ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಎಚ್.ಪಿ.ಪಿ.ಸಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.

೧೧. **ಡಾ.ಎಸ್. ಶಿವಣ್ಣ ಬೆಳವಾಡಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ವಿಶ್ವವಿದ್ಯಾನಿಲಯ ಕಲಾ ಕಾಲೇಜು,
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

೧೨. **ಶ್ರೀ ಯರಿಯಪ್ಪ ಬೆಳಗುರ್ಕಿ**
ಉಪನ್ಯಾಸಕರು, ಕನ್ನಡ ವಿಭಾಗ,
ಸರ್ಕಾರಿ ಮಹಾವಿದ್ಯಾಲಯ,
ಸಿಂಧನೂರು.

೧೩. ಡಾ. ಶಿವಕುಮಾರ್ ಕಂಪ್ಲಿ
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ದಾವಣಗೆರೆ.

೧೪. ಡಾ.ಮಂಜಣ್ಣ .ಎಂ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.

೧೫. ಡಾ. ಮಂಜುನಾಥ ಪಾಳ್ಯ
ಮುಖ್ಯಸ್ಥರು, ಕನ್ನಡ ವಿಭಾಗ,
ಜೈನ್ ಡೀಮ್ಡ್ ಟು ಬಿ ಯೂನಿರ್ವಸಿಟಿ,
ಜೆ.ಸಿ.ರಸ್ತೆ, ಬೆಂಗಳೂರು.

೧೬. ಡಾ. ಲಾವಣ್ಯ .ಸಿ.ಪಿ
ಸಹ ಪ್ರಾಧ್ಯಾಪಕರು
ಶೇಷಾದ್ರಿಪುರಂ ಪದವಿ ಕಾಲೇಜು,
ಮೈಸೂರು

೧೭. ಡಾ. ಗಿರೀಶ್ ಮೂಗ್ತಿಹಳ್ಳಿ
ಅಮೃತೇಶ್ವರ ದೇವಾಲಯ ಸಮೀಪ,
ಮೂಗ್ತಿಹಳ್ಳಿ, ಚಿಕ್ಕಮಗಳೂರು.

೧೮. ಡಾ. ಸತ್ಯಮಂಗಲ ಮಹಾದೇವ
ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು,
ಯಲಹಂಕ, ಬೆಂಗಳೂರು-೫೬೦ ೦೬೪

೧೯. ಚಿದಾನಂದ ಸಾಲಿ
೭-೫-೧೪೮/೪, ಜವಾಹರ್ ನಗರ,
ರಾಯಚೂರು - ೫೮೪ ೧೦೩

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨



ಅನಿಕೇತನ

Registration No. 45656/88 -
Price : 50/-